ಮಂಗಳವಾರ, ಸೆಪ್ಟೆಂಬರ್ 3, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 246 | ಪುಟ 14
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
'ದಂಡನೆ'ಯೋ 'ರಾಜಕೀಯ ದಂಡ'ವೋ?
ಮಂಡ್ಯ: ಅಕ್ರಮ ತಡೆಗೆ 'ಪ್ರಿಸನ್ ಕಾಲ್ ಸಿಸ್ಟಂ' 6
ಬುಚ್ ವಿರುದ್ಧ 'ಹಿತಾಸಕ್ತಿ ಸಂಘರ್ಷ' ಆರೋಪ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
82,559	25,278	₹73,700 (ಬೆಂಗಳೂರು)	₹85,000 (ಬೆಂಗಳೂರು)	83.91

'ಆರೋಪಿ ಮನೆ ಧ್ವಂಸ ಎಷ್ಟು ಸರಿ?'

'ಬುಲ್ಡೋಜರ್ ನ್ಯಾಯ': ಮಹತ್ವದ ಪ್ರಶ್ನೆ ಎತ್ತಿದ ಸುಪ್ರೀಂ ಕೋರ್ಟ್: ಮಾರ್ಗಸೂಚಿಗೆ ಒಲವು

ನವದೆಹಲಿ (ಪಿಟಿಐ): 'ವ್ಯಕ್ತಿಯೊಬ್ಬ ಆರೋಪಿ ಎಂಬ ಕಾರಣಕ್ಕೇ ಆತನ ಮನೆಯನ್ನು ಧ್ವಂಸಗೊಳಿಸುವುದು ಎಷ್ಟು ಸರಿ' ಎಂದು ಸುಪ್ರೀಂ ಕೋರ್ಟ್ ಸೋಮವಾರ ಪ್ರಶ್ನಿಸಿದೆ.

ಅಪರಾಧ ಕೃತ್ಯದಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವವರ ಮನೆಗಳನ್ನು ಕೆಲವು ರಾಜ್ಯಗಳಲ್ಲಿ ಬುಲ್ಡೋಜರ್ ಬಳಸಿ ನೆಲಸಮ ಮಾಡುತ್ತಿರುವ ಸಂದರ್ಭದಲ್ಲಿ ಮಹತ್ವದ ಪ್ರಶ್ನೆಯನ್ನು ಸುಪ್ರೀಂ ಕೋರ್ಟ್ ಕೇಳಿದೆ.

ಆರೋಪಿಯ ಮನೆ ಧ್ವಂಸಕ್ಕೆ ಸಂಬಂಧಿಸಿದಂತೆ, ದೇಶದಾದ್ಯಂತ ಅನ್ವಯವಾಗುವ ಮಾರ್ಗಸೂಚಿಯೊಂದನ್ನು ಹೊರಡಿಸುವುದಾಗಿಯೂ ಕೋರ್ಟ್ ಹೇಳಿದೆ. ಆದರೆ, ಅಕ್ರಮ, ಅನಧಿಕೃತ ಕಟ್ಟಡಗಳನ್ನು ಅಥವಾ ಸಾರ್ವಜನಿಕ ರಸ್ತೆಯ ಅತಿಕ್ರಮಣವನ್ನು, ಸಾರ್ವಜನಿಕ ರಸ್ತೆಗಳಲ್ಲಿನ ದೇವಸ್ಥಾನಗಳನ್ನು ರಕ್ಷಿಸುವ ಕೆಲಸವನ್ನು ತಾನು ಮಾಡುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಿದೆ.

ವ್ಯಕ್ತಿಯೊಬ್ಬ ಅಪರಾಧಿ ಎಂದು ಸಾಬೀತಾಗಿದ್ದರೂ ಆ ವ್ಯಕ್ತಿಗೆ ಸೇರಿದ ಕಟ್ಟಡಗಳನ್ನು ಕಾನೂನಿನ ಪ್ರಕ್ರಿಯೆಗಳನ್ನು ಪಾಲಿಸದೆ ಧ್ವಂಸಗೊಳಿಸಲು ಅವಕಾಶ ಇಲ್ಲ ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಕೆ.ವಿ. ವಿಶ್ವನಾಥನ್ ಅವರು ಇದ್ದ ವಿಭಾಗೀಯ ಪೀಠವು ಹೇಳಿದೆ.

> ಕಾನೂನಿನ ಲೋಪಗಳನ್ನು ನೆಚ್ಚಿಕೊಳ್ಳಲು ಅಧಿಕಾರಿಗಳಿಗೆ ಸಾಧ್ಯವಾಗದಂತೆ ಕ್ರಮ ಕೈಗೊಳ್ಳುವ ಅಗತ್ಯ ಇದೆ
> **ಸುಪ್ರೀಂ ಕೋರ್ಟ್**

ಉತ್ತರ ಪ್ರದೇಶ ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ಈ ವಿಚಾರವಾಗಿ ರಾಜ್ಯ ಸರ್ಕಾರವು ಈ ಹಿಂದೆಯೇ ಸಲ್ಲಿಸಿರುವ ಪ್ರಮಾಣಪತ್ರವೊಂದರ ಬಗ್ಗೆ ಪ್ರಸ್ತಾಪಿಸಿದರು. ಕೆಲವು ಅಪರಾಧ ಪ್ರಕರಣಗಳಲ್ಲಿ ವ್ಯಕ್ತಿಯೊಬ್ಬ ಭಾಗಿಯಾಗಿದ್ದಾನೆ ಎಂಬ ಆರೋಪವು ಆತನ ಸ್ಥಿರಾಸ್ತಿಗಳನ್ನು ಧ್ವಂಸಗೊಳಿಸುವುದಕ್ಕೆ ಎಂದಿಗೂ ಆಧಾರವಾಗುವುದಿಲ್ಲ ಎಂಬುದನ್ನು ಆ ಪ್ರಮಾಣಪತ್ರ ಹೇಳುತ್ತದೆ ಎಂದು ಮೆಹ್ತಾ ತಿಳಿಸಿದರು.

ಸ್ಥಿರಾಸ್ತಿಗಳನ್ನು ಧ್ವಂಸಗೊಳಿಸುವ ಕೆಲಸವನ್ನು 'ಆ ಸ್ಥಳಕ್ಕೆ ಅನ್ವಯವಾಗುವ ಪೌರಾಡಳಿತ ಕಾನೂನಿನ ಅಡಿಯಲ್ಲಿ ಅಥವಾ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕಾನೂನಿನ ಅಡಿಯಲ್ಲಿ ವಿವರಿಸಿರುವ ಪ್ರಕ್ರಿಯೆಗೆ ಅನುಗುಣವಾಗಿ ಮಾತ್ರ ಮಾಡಬಹುದು' ಎಂಬುದನ್ನು ಉತ್ತರ ಪ್ರದೇಶ ಸರ್ಕಾರವು ಹೇಳಿದೆ ಎಂದು ಮೆಹ್ತಾ ವಿವರಿಸಿದರು.

ಅಂತಹ ಆಸ್ತಿಯ ಮಾಲೀಕ ಅಥವಾ ಆಸ್ತಿಯನ್ನು ಅನುಭವಿಸುತ್ತ ಇರುವ ವ್ಯಕ್ತಿಯು ಕ್ರಿಮಿನಲ್ ಅಪರಾಧವೊಂದರಲ್ಲಿ ಭಾಗಿಯಾಗಿದ್ದಾನೆ ಎಂಬ ಒಂದೇ ಕಾರಣಕ್ಕೆ ಯಾವ ಸ್ಥಿರಾಸ್ತಿಯನ್ನೂ ಧ್ವಂಸಗೊಳಿಸುವುದಕ್ಕೆ ಅವಕಾಶ ಇಲ್ಲ ಎಂದು ಮೆಹ್ತಾ ಸ್ಪಷ್ಟಪಡಿಸಿದರು.

7ನೇ ಪುಟ ನೋಡಿ

'ಬುಲ್ಡೋಜರ್ ನ್ಯಾಯ ಬೇಡ ಹೇಳಿಕೆ ದಾಖಲಾಗಲಿ'

ಅರ್ಜಿದಾರರೊಬ್ಬರ ಪರವಾಗಿ ಹಾಜರಿದ್ದ ಹಿರಿಯ ವಕೀಲ ದುಶ್ಯಂತ ದವೆ ಅವರು, 'ದೇಶದಾದ್ಯಂತ ಬುಲ್ಡೋಜರ್ ನ್ಯಾಯವನ್ನು ಪಾಲಿಸುವ ಕೆಲಸ ನಡೆಯುವುದಿಲ್ಲ ಎಂಬ ಹೇಳಿಕೆಯನ್ನು ದಾಖಲು ಮಾಡಿಕೊಳ್ಳುವ ಕೆಲಸ ಆಗಲಿ' ಎಂದು ಒತ್ತಾಯಿಸಿದರು.

ಬಹುತೇಕ ಎಲ್ಲ ರಾಜ್ಯಗಳೂ ಈಗ ಈ ನ್ಯಾಯದ ಮೊರೆ ಹೋಗಿವೆ, ಅವು ಆಸ್ತಿಗಳನ್ನು ಧ್ವಂಸಗೊಳಿಸುತ್ತಿವೆ ಎಂದು ಪೀಠಕ್ಕೆ ವಿವರಿಸಿದರು. ಕೆಲವು ರಾಜ್ಯಗಳಲ್ಲಿ ಆಸ್ತಿಗಳನ್ನು ಧ್ವಂಸಗೊಳಿಸಿದ ಪ್ರಕರಣಗಳನ್ನು ಹಿರಿಯ ವಕೀಲ ಸಿ.ಯು. ಸಿಂಗ್ ಉಲ್ಲೇಖಿಸಿದರು.

ದೇಶದ ಉದ್ದಗಲಕ್ಕೂ ಅನ್ವಯವಾಗುವ ಮಾರ್ಗಸೂಚಿ ಸಿದ್ಧಪಡಿಸಲು ಕೋರ್ಟ್‌ಗೆ ಸಾಧ್ಯವಾಗುವ ರೀತಿಯಲ್ಲಿ, ಪ್ರಕರಣದಲ್ಲಿ ಭಾಗಿಯಾದವರ ಪರ ವಕೀಲರು ತಮ್ಮ ಸಲಹೆಗಳನ್ನು ನೀಡಲಿ ಎಂದು ಪೀಠ ತಿಳಿಸಿತು. ವಿಚಾರಣೆಯನ್ನು ಸೆಪ್ಟೆಂಬರ್ 17ಕ್ಕೆ ಮುಂದೂಡಲಾಗಿದೆ.

ಅರ್ಜಿದಾರರ ಮುಖ್ಯ ಕೋರಿಕೆ ಏನು?

ಹಿಂಸಾಚಾರ, ಗಲಭೆ ಪ್ರಕರಣಗಳ ಆರೋಪಿಗಳಿಗೆ ಸೇರಿದ ಆಸ್ತಿಗಳನ್ನು ಧ್ವಂಸಗೊಳಿಸುವ ಕೆಲಸವು ಇನ್ನು ಮುಂದೆಯೂ ನಡೆಯುವುದನ್ನು ತಡೆಯಲು ಬೇರೆ ಬೇರೆ ರಾಜ್ಯ ಸರ್ಕಾರಗಳಿಗೆ ಅಗತ್ಯ ಸೂಚನೆ ನೀಡಬೇಕು ಎಂದು ಜಮೀಯತ್ ಉಲೇಮಾ ಎ ಹಿಂದ್ ಹಾಗೂ ಇತರರು ಸಲ್ಲಿಸಿರುವ ಅರ್ಜಿಗಳಲ್ಲಿ ಕೋರಲಾಗಿದೆ.

ರಾಷ್ಟ್ರ ರಾಜಧಾನಿಯ ಜಹಾಂಗೀರಪುರಿ ಪ್ರದೇಶದಲ್ಲಿ ಕೆಲವು ಕಟ್ಟಡಗಳನ್ನು ಧ್ವಂಸಗೊಳಿಸಿದ ವಿಚಾರವಾಗಿಯೂ ಜಮೀಯತ್ ಉಲೇಮಾ ಎ ಹಿಂದ್ ಸಂಘಟನೆಯು ಸುಪ್ರೀಂ ಕೋರ್ಟ್‌ನಲ್ಲಿ ಈ ಹಿಂದೆ ಅರ್ಜಿ ಸಲ್ಲಿಸಿತ್ತು. ಪೂರ್ವಭಾವಿಯಾಗಿ ನೋಟಿಸ್ ನೀಡದೆ, ಕಾನೂನಿನ ಪ್ರಕ್ರಿಯೆಗಳನ್ನು ಸರಿಯಾಗಿ ಪಾಲಿಸದೆ ಕಟ್ಟಡ ಧ್ವಂಸಗೊಳಿಸುವ ಕೆಲಸ ಮಾಡಬಾರದು ಎಂದು ಕೂಡ ಅದು ಅರ್ಜಿಯಲ್ಲಿ ಹೇಳಿತ್ತು.

ಅನುವಾದ ಎಡವಟ್ಟು • ಅಧ್ಯಕ್ಷ, ಕಾರ್ಯದರ್ಶಿಗೆ ತರಾಟೆ

ಮರು ಪರೀಕ್ಷೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ನೇಮಕಾತಿಗೆ ಎರಡು ತಿಂಗಳ ಒಳಗೆ ಮರು ಪರೀಕ್ಷೆ ನಡೆಸುವಂತೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಈ ಹುದ್ದೆಗಳ ನೇಮಕಾತಿಗೆ ಆಗಸ್ಟ್ 27ರಂದು ಕೆಪಿಎಸ್‌ಸಿ ಪೂರ್ವಭಾವಿ ಪರೀಕ್ಷೆ ನಡೆಸಿತ್ತು. ಆದರೆ, ಪ್ರಶ್ನೆ ಪತ್ರಿಕೆ 1 ಮತ್ತು 2ರಲ್ಲಿನ ಪ್ರಶ್ನೆಗಳನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡುವಾಗ ಹಲವು ತಪ್ಪುಗಳು ನುಸುಳಿದ್ದವು. ಕೆಲವು ಪ್ರಶ್ನೆಗಳು ಮತ್ತು ಉತ್ತರದ ಆಯ್ಕೆಗಳು ಇಂಗ್ಲಿಷ್ ಮತ್ತು ಕನ್ನಡದಲ್ಲಿ ತದ್ವಿರುದ್ಧವಾಗಿದ್ದವು. ಇನ್ನೂ ಕೆಲವು ಪ್ರಶ್ನೆಗಳು, ಉತ್ತರದ ಆಯ್ಕೆಗಳು ಅರ್ಥವೇ ಆಗದಂತಿದ್ದವು.

ಪರೀಕ್ಷೆ ಬರೆದಿರುವ ಅಭ್ಯರ್ಥಿಗಳು ಪ್ರಶ್ನೆಪತ್ರಿಕೆಗಳಲ್ಲಿನ ತಪ್ಪುಗಳನ್ನು ಉಲ್ಲೇಖಿಸಿ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ, ಜಾಲತಾಣಗಳಲ್ಲಿ ಪೋಸ್ಟ್‌ಗಳನ್ನು ಮಾಡಿ, ಕನ್ನಡ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದರು. ಅದಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ರಕ್ಷಣಾ ವೇದಿಕೆಯೂ ಸೇರಿದಂತೆ ವಿವಿಧ ಕನ್ನಡಪರ ಸಂಘಟನೆಗಳು, ಸಾಹಿತಿಗಳು ಧ್ವನಿಗೂಡಿಸಿದ್ದರು.

ಈ ಬೆಳವಣಿಗೆ ಬೆನ್ನಲ್ಲೇ, ಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ ಮತ್ತು ಕಾರ್ಯದರ್ಶಿ ಕೆ. ರಾಕೇಶ್ ಕುಮಾರ್ ಅವರನ್ನು ಸೋಮವಾರ ಕರೆಯಿಸಿಕೊಂಡ ಮುಖ್ಯಮಂತ್ರಿ, ಪ್ರಶ್ನೆ ಪತ್ರಿಕೆಯಲ್ಲಿ ಆಗಿರುವ ಗೊಂದಲ, ಎಡವಟ್ಟುಗಳಿಗೆ ಸಂಬಂಧಿಸಿದಂತೆ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ. ಈ ಅವಾಂತರಕ್ಕೆ ಕಾರಣರಾದವರ ಮೇಲೆ ಕ್ರಮ ತೆಗೆದುಕೊಳ್ಳುವ ಎಚ್ಚರಿಕೆಯನ್ನೂ ನೀಡಿದ್ದಾರೆ.

6ನೇ ಪುಟ ನೋಡಿ

ಪರೀಕ್ಷೆಗೆ ₹4 ಕೋಟಿಗೂ ಹೆಚ್ಚು ವೆಚ್ಚ

ಕೆಪಿಎಸ್‌ಸಿ

ಕೆಪಿಎಸ್‌ಸಿ ನಡೆಸಿದ ಪರೀಕ್ಷೆಗೆ ₹4 ಕೋಟಿಯಿಂದ ₹5 ಕೋಟಿಯಷ್ಟು ವೆಚ್ಚವಾಗಿದೆ ಎಂದು ಅಂದಾಜಿಸಲಾಗಿದೆ.

ಗ್ರೂಪ್ 'ಎ' ವೃಂದದ 159 ಮತ್ತು ಗ್ರೂಪ್ 'ಬಿ' ವೃಂದದ 225 ಸೇರಿ 384 ಹುದ್ದೆಗಳಿಗೆ ಒಟ್ಟು 2,10,916 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಆ.27ರಂದು ನಡೆದ ಪರೀಕ್ಷೆಗೆ 1,31,885 (ಶೇ 62.52) ಮಂದಿ ಹಾಜರಾಗಿದ್ದಾರೆ. ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿನ ಒಟ್ಟು 564 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿತ್ತು. ಹಿಂದೆ ನಡೆದ ಪರೀಕ್ಷೆಗೆ ಹಾಜರಾದವರಿಗೆ ಮಾತ್ರ ಮರು ಪರೀಕ್ಷೆ ನಡೆಯುವ ಸಾಧ್ಯತೆಯಿದೆ ಎಂದು ಗೊತ್ತಾಗಿದೆ.

ಪ್ರಶ್ನೆಪತ್ರಿಕೆಯಲ್ಲಿ ತಪ್ಪುಗಳಿದ್ದ ಕುರಿತು 'ಪ್ರಜಾವಾಣಿ'ಯ ಆ.28ರ ಸಂಚಿಕೆಯ ವರದಿ

ಖರ್ಗೆ ಕುಟುಂಬದ ಟ್ರಸ್ಟ್‌ಗೆ ಸಿಎ ನಿವೇಶನ: ಸಿಎಸ್‌ಗೆ ರಾಜ್ಯಪಾಲರ ಪತ್ರ

'ಟ್ರಸ್ಟ್‌ಗೆ ಭೂಮಿ: ವಿವರಣೆ ಕೊಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಎ ನಿವೇಶನ ಹಂಚಿಕೆಗೆ ಸಂಬಂಧಿಸಿ ರಾಜ್ಯಪಾಲ ಮತ್ತು ರಾಜ್ಯ ಸರ್ಕಾರದ ನಡುವೆ ಸಂಘರ್ಷ ಹೆಚ್ಚುವ ಸಾಧ್ಯತೆ ಕಾಣಿಸಿದೆ.

ಥಾವರಚಂದ್ ಗೆಹಲೋತ್

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕುಟುಂಬಕ್ಕೆ ಸೇರಿದ ಸಿದ್ಧಾರ್ಥ ವಿಹಾರ ಟ್ರಸ್ಟ್‌ಗೆ ಕೆಐಎಡಿಬಿ (ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ) ನಿಯಮ ಉಲ್ಲಂಘಿಸಿ ನಾಗರಿಕ ಸೌಲಭ್ಯದ (ಸಿ.ಎ) ನಿವೇಶನ ಹಂಚಿರುವ ಆರೋಪದ ಕುರಿತು ಸ್ಪಷ್ಟನೆ ನೀಡುವಂತೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿದ್ದಾರೆ.

'ಮಲ್ಲಿಕಾರ್ಜುನ ಖರ್ಗೆಯವರ ಪುತ್ರ ರಾಹುಲ್ ಖರ್ಗೆ ನೇತೃತ್ವದ ಸಿದ್ಧಾರ್ಥ ವಿಹಾರ ಟ್ರಸ್ಟ್‌ಗೆ ಬೆಂಗಳೂರಿನ ಏರೋಸ್ಪೇಸ್ ಪಾರ್ಕ್‌ನಲ್ಲಿ ರಾಜ್ಯ ಸರ್ಕಾರ ತರಾತುರಿಯಲ್ಲಿ ಮತ್ತು ನಿಯಮಗಳನ್ನು ಉಲ್ಲಂಘಿಸಿ ಐದು ಎಕರೆ ನಾಗರಿಕ ಸೌಲಭ್ಯದ ನಿವೇಶನವನ್ನು ಮಂಜೂರು ಮಾಡಿದೆ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದ್ದಾರೆ.

6ನೇ ಪುಟ ನೋಡಿ

'ರಾಜ್ಯಪಾಲರಿಗೆ ಎರಡು ಸಂವಿಧಾನ'

'ಬಿಜೆಪಿ- ಜೆಡಿಎಸ್ ನಾಯಕರಿಗೆ ಸಂಬಂಧಿಸಿದ ದೂರುಗಳು ರಾಜ್ಯಪಾಲರ ಬಳಿ ಕೊಳೆಯುತ್ತಿವೆ. ಆ ದೂರುಗಳಿಗೆ ಸಂಬಂಧಿಸಿ ರಾಜ್ಯಪಾಲರು ವಿವರಣೆ ಕೇಳಿಲ್ಲ. ಕೆಲವು ಸ್ಪಷ್ಟನೆ ಕೋರಿ ಎನ್‌ಡಿಎ ನಾಯಕರ ವಿರುದ್ಧದ ಪ್ರಕರಣಗಳನ್ನು ವಾಪಸ್ ಕಳುಹಿಸಿದ್ದಾರೆ. ಬಿಜೆಪಿ ನಾಯಕರ ಪ್ರಕರಣಕ್ಕೆ ಸಂಬಂಧಿಸಿ ಕಡತಗಳು ನನ್ನ ಬಳಿ ಇಲ್ಲ ಎಂದು ರಾಜ್ಯಪಾಲರು ತಪ್ಪು ಮಾಹಿತಿ ಕೊಡುತ್ತಿದ್ದಾರೆ' ಎಂದು ಪ್ರಿಯಾಂಕ್ ಖರ್ಗೆ ಆರೋಪಿಸಿದರು.

> ಕಾಂಗ್ರೆಸ್ ಅಂದಾಕ್ಷಣ ಬೆಳಕಿನ ವೇಗದಲ್ಲಿ ರಾಜ್ಯಪಾಲರು ಕ್ರಮ ಕೈಗೊಳ್ಳುತ್ತಿದ್ದಾರೆ. ಬಿಜೆಪಿ- ಜೆಡಿಎಸ್ ನಾಯಕರಿಗೆ ಸಂಬಂಧಿಸಿದ ದೂರುಗಳು ಅವರ ಬಳಿ ಕೊಳೆಯುತ್ತಿವೆ
> **ಪ್ರಿಯಾಂಕ್ ಖರ್ಗೆ,** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ

'ರಾಜ್ಯಪಾಲರಿಗೆ ಎರಡು ಸಂವಿಧಾನ ಇದೆ. ಬಿಜೆಪಿ, ಜೆಡಿಎಸ್‌ಗೆ ಒಂದು ಸಂವಿಧಾನ. ಕಾಂಗ್ರೆಸ್‌ಗೊಂದು ಸಂವಿಧಾನ' ಎಂದು ವಾಗ್ದಾಳಿ ನಡೆಸಿದರು.

'ಛಲವಾದಿ ನಾರಾಯಣಸ್ವಾಮಿ ಬಿಟ್ಟು ಬೇರೆ ಯಾರೂ ಏಕೆ ಸಿ.ಎ ನಿವೇಶನ ವಿಚಾರ ಮಾತನಾಡುತ್ತಿಲ್ಲ' ಎಂದು ಪ್ರಶ್ನಿಸಿದ ಪ್ರಿಯಾಂಕ್, 'ಬಿ.ವೈ. ವಿಜಯೇಂದ್ರ, ಆರ್. ಅಶೋಕ ಅವರು ನನ್ನ ವಿಚಾರದಲ್ಲಿ ಯಾಕೆ ಮಾತನಾಡುತ್ತಿಲ್ಲ. ನಾನು ಕೆಳಮನೆ ಸದಸ್ಯ ಅಲ್ಲವೇ? ದಲಿತರು ಬಡಿದಾಡುವಂತೆ ಮಾಡುವುದು, ಕೋಮುವಾದ ಸೃಷ್ಟಿಸುವುದು ಆರ್‌ಎಸ್‌ಎಸ್, ಬಿಜೆಪಿ ಸಂಚು' ಎಂದೂ ಆರೋಪಿಸಿದರು.

ಮುಡಾ: 9ರವರೆಗೆ ಸಿ.ಎಂ ನಿರಾಳ

'ಮುಡಾ ನಿವೇಶನ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ವಿಚಾರಣೆಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮುಂದೂಡಬೇಕು' ಎಂಬ ಈ ಹಿಂದಿನ ಆದೇಶವನ್ನು ಹೈಕೋರ್ಟ್, ಇದೇ 9ರವರೆಗೆ ಪುನಃ ವಿಸ್ತರಿಸಿದೆ.

ಸಿದ್ದರಾಮಯ್ಯ ಸಲ್ಲಿಸಿರುವ ರಿಟ್ ಅರ್ಜಿಯ ವಿಚಾರಣೆಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಸೋಮವಾರ ಮುಂದುವರಿಸಿದರು.

6ನೇ ಪುಟ ನೋಡಿ

ಸಂದೀಪ್ ಘೋಷ್ ಬಂಧನ

ಕೋಲ್ಕತ್ತ ವೈದ್ಯ ವಿದ್ಯಾರ್ಥಿನಿ ಅತ್ಯಾಚಾರ, ಹತ್ಯೆ ಪ್ರಕರಣ

ಕೋಲ್ಕತ್ತ (ಪಿಟಿಐ): ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಮಾಜಿ ಪ್ರಾಂಶುಪಾಲ ಡಾ. ಸಂದೀಪ್ ಘೋಷ್ ಅವರನ್ನು ಸಿಬಿಐ ಅಧಿಕಾರಿಗಳು ಸೋಮವಾರ ಬಂಧಿಸಿದ್ದಾರೆ. ಸಂಸ್ಥೆಯಲ್ಲಿ ನಡೆದಿದೆ ಎನ್ನಲಾದ ಹಣಕಾಸಿನ ಅಕ್ರಮಗಳಿಗೆ ಸಂಬಂಧಿಸಿದಂತೆ ಅವರ ಬಂಧನ ಆಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂದೀಪ್ ಘೋಷ್

ಈ ಆಸ್ಪತ್ರೆಯಲ್ಲಿ ನಡೆದ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಹಾಗೂ ಆಕೆಯ ಹತ್ಯೆಗೆ ಸಂಬಂಧಿಸಿದಂತೆ ಸಿಬಿಐ ಅಧಿಕಾರಿಗಳು ಘೋಷ್ ಅವರನ್ನು 15ನೆಯ ದಿನವೂ ವಿಚಾರಣೆಗೆ ಗುರಿಪಡಿಸಿದರು. ನಂತರ ಅವರನ್ನು ಬಂಧಿಸಲಾಯಿತು.

ವೈದ್ಯೆಯ ಹತ್ಯೆ ನಂತರದಲ್ಲಿ ಆಗಿರುವ ಎರಡನೆಯ ಬಂಧನ ಇದು. ಅತ್ಯಾಚಾರ ಹಾಗೂ ಹತ್ಯೆ ಪ್ರಕರಣ ಬಯಲಾದ ನಂತರ ಘೋಷ್ ಅವರಿಗೆ ರಜೆ ಮೇಲೆ ತೆರಳುವಂತೆ ಪಶ್ಚಿಮ ಬಂಗಾಳ ಸರ್ಕಾರ ಸೂಚಿಸಿತ್ತು. ಮಮತಾ ಬ್ಯಾನರ್ಜಿ ನೇತೃತ್ವದ ಸರ್ಕಾರವು ಘೋಷ್ ಅವರನ್ನು ಪ್ರಾಂಶುಪಾಲ ಹುದ್ದೆಯಿಂದ ಅಮಾನತು ಮಾಡದೆ, ಅವರನ್ನು ರಕ್ಷಿಸಲು ಯತ್ನಿಸುತ್ತಿದೆ ಎಂಬ ಆರೋಪವನ್ನು ರಾಜ್ಯದ ಹಲವು ಸಂಘಟನೆಗಳು ಮಾಡಿದ್ದವು.

ಘೋಷ್ ಅವರನ್ನು ಬಂಧಿಸಿದ ಕೆಲವೇ ಗಂಟೆಗಳಲ್ಲಿ ಸಿಬಿಐ ಅಧಿಕಾರಿಗಳು, ಘೋಷ್ ಅವರ ಭದ್ರತಾ ಸಿಬ್ಬಂದಿ ಮತ್ತು ಆಸ್ಪತ್ರೆಗೆ ಕೆಲವು ಪರಿಕರಗಳನ್ನು ಪೂರೈಸುತ್ತಿದ್ದ ಇಬ್ಬರು ವರ್ತಕರನ್ನು ಬಂಧಿಸಿದ್ದಾರೆ.

ಒಳಪುಟಗಳಲ್ಲಿ



ಎಸ್.ನಿಜಲಿಂಗಪ್ಪ ಮನೆ ಖರೀದಿಗೆ ಕೆಪಿಸಿಸಿ ನಿರ್ಧಾರ 6
ಬಜಾಜ್ ಆಟೊ ಮಾರಾಟ ಹೆಚ್ಚಳ 10

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಮಹದಾಯಿ: ಅನುಮೋದನೆಗೆ ವನ್ಯಜೀವಿ ಮಂಡಳಿ ನಕಾರ

ರಾಜ್ಯಕ್ಕೆ ಕಹಿ– ಗೋವಾಕ್ಕೆ ಸಿಹಿ

• ಮಂಜುನಾಥ ಹೆಬ್ಬಾರ್

ನವದೆಹಲಿ: ಮಹದಾಯಿ ಯೋಜನೆಗೆ ತಕರಾರು ಎತ್ತಿ ಗೋವಾ ಸರ್ಕಾರ ಸುಪ್ರೀಂ ಕೋರ್ಟ್ ಮೊರೆಹೋಗಿರುವ ಕಾರಣ ಮುಂದಿಟ್ಟುಕೊಂಡು ಕಳಸಾ ನಾಲಾ ತಿರುವು ಯೋಜನೆಗೆ ವನ್ಯಜೀವಿ ಅನುಮೋದನೆ ನೀಡಲು ರಾಷ್ಟ್ರೀಯ ವನ್ಯಜೀವಿ ಮಂಡಳಿ ನಿರಾಕರಿಸಿದೆ. ಕರ್ನಾಟಕದ 435 ಎಕರೆ ಅರಣ್ಯ ಬಳಕೆಯಾಗುವ ಗೋವಾ– ತಮ್ನಾರ್ 400 ಕೆ.ವಿ. ವಿದ್ಯುತ್ ಮಾರ್ಗಕ್ಕೆ ಮಂಡಳಿಯು ಷರತ್ತುಬದ್ಧ ಒಪ್ಪಿಗೆ ನೀಡಿದೆ. ಗೋವಾದ ಹೆಚ್ಚುವರಿ ವಿದ್ಯುತ್ ಮಾರ್ಗ ಯೋಜನೆಗೆ ರಾಜ್ಯದ ಕಾಡು ಒದಗಿಸುವ ಯೋಜನೆಗೆ ವಿರೋಧ ಇದೆ. ವನ್ಯಜೀವಿ ಮಂಡಳಿಯ ತೀರ್ಮಾನವು ರಾಜ್ಯಕ್ಕೆ ಕಹಿಯಾಗಿದ್ದರೆ, ಗೋವಾಕ್ಕೆ ಸಿಹಿ.

ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವ ಭೂಪೇಂದರ್ ಯಾದವ್ ಅಧ್ಯಕ್ಷತೆಯಲ್ಲಿ ನಡೆದ ಮಂಡಳಿಯ ಸ್ಥಾಯಿ ಸಮಿತಿಯ 79ನೇ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಯಿತು.

ಕಳಸಾ ತಿರುವು: ಮತ್ತೆ ಅಡ್ಡಿ

ನ್ಯಾಯಿಕ ಪ್ರಕ್ರಿಯೆಯಲ್ಲಿನ ಮಧ್ಯಪ್ರವೇಶ (ಸಬ್ ಜುಡೀಸ್) ಆಗುತ್ತದೆ ಎಂಬ ಕಾರಣ ನೀಡಿ ಮಹದಾಯಿಯ ಕಳಸಾ ನಾಲಾ ತಿರುವು ಯೋಜನೆಗೆ ವನ್ಯಜೀವಿ ಅನುಮೋದನೆ ನೀಡಲು ರಾಷ್ಟ್ರೀಯ ವನ್ಯಜೀವಿ ಮಂಡಳಿ ಮತ್ತೆ ನಿರಾಕರಿಸಿದೆ.

ಹುಬ್ಬಳ್ಳಿ-ಧಾರವಾಡ, ಸುತ್ತಮುತ್ತಲಿನ ಪಟ್ಟಣಗಳು, ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಗುರಿ ಹೊಂದಿರುವ ಈ ಯೋಜನೆಗೆ ಮಹದಾಯಿ ನದಿ ನೀರು ವಿವಾದ ನ್ಯಾಯಮಂಡಳಿಯು 2018ರ ಆಗಸ್ಟ್ 14ರಂದು 3.90 ಟಿಎಂಸಿ ಅಡಿ ನೀರಿನ ಹಂಚಿಕೆ ಮಾಡಿತ್ತು.

6ನೇ ಪುಟ ನೋಡಿ

ಭಾರತದ ಕ್ರೀಡಾಪಟುಗಳಿಗೆ

ಎಂಟು ಪದಕಗಳ ಸಂಭ್ರಮ...

ಪ್ಯಾರಿಸ್: ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತದ ಕ್ರೀಡಾಪಟುಗಳು ಸೋಮವಾರ ಅಮೋಘ ಸಾಧನೆ ಪ್ರದರ್ಶಿಸಿ ಎರಡು ಚಿನ್ನ, ನಾಲ್ಕು ಬೆಳ್ಳಿ ಮತ್ತು ಎರಡು ಕಂಚಿನ ಪದಕ ಗೆದ್ದುಕೊಂಡು ಸಂಭ್ರಮಿಸಿದರು. ಜಾವೆಲಿನ್ ಥ್ರೋ ತಾರೆ ಸುಮಿತ್ ಅಂಟಿಲ್ ಪ್ಯಾರಾಲಿಂಪಿಕ್ಸ್ ದಾಖಲೆಯೊಂದಿಗೆ 'ಚಾಂಪಿಯನ್ ಪಟ್ಟ' ಉಳಿಸಿಕೊಂಡರು. ಕನ್ನಡಿಗ ಸುಹಾಸ್ ಯತಿರಾಜ್, ಯೋಗೇಶ್ ಕಥುನಿಯಾ ಮತ್ತು ನಿಷಾದ್ ಕುಮಾರ್ ಅವರಿಗೆ ಇದು ಸತತ ಎರಡನೇ ಬೆಳ್ಳಿ.

ನಿತೇಶ್ ಕುಮಾರ್ – ಪುರುಷರ ಬ್ಯಾಡ್ಮಿಂಟನ್ ಸಿಂಗಲ್ಸ್ (ಎಸ್‌ಎಲ್‌3)

ಸುಮಿತ್ ಅಂಟಿಲ್ – ಪುರುಷರ ಜಾವೆಲಿನ್ ಥ್ರೋ (ಎಫ್64) 70.59 ಮೀಟರ್ (ಪ್ಯಾರಾಲಿಂಪಿಕ್ಸ್ ದಾಖಲೆ)

ಸುಹಾಸ್ ಯತಿರಾಜ್ – ಪುರುಷರ ಬ್ಯಾಡ್ಮಿಂಟನ್ ಸಿಂಗಲ್ಸ್ (ಎಸ್‌ಎಲ್4)

ತುಳಸಿಮತಿ ಮುರುಗೇಶನ್ – ಮಹಿಳೆಯರ ಬ್ಯಾಡ್ಮಿಂಟನ್ ಸಿಂಗಲ್ಸ್ (ಎಸ್‌ಯು5)

ನಿಷಾದ್ ಕುಮಾರ್ – ಪುರುಷರ ಹೈಜಂಪ್ (ಟಿ47) ಎತ್ತರ: 2.04 ಮೀ.

ಯೋಗೇಶ್ ಕಥುನಿಯಾ – ಪುರುಷರ ಡಿಸ್ಕಸ್ ಥ್ರೋ (ಎಫ್56) 42.22 ಮೀ. ದೂರ

ಮತ್ತಷ್ಟು ಸುದ್ದಿ – ಪುಟ 11

‘ನಮ್ಮ ಮೆಟ್ರೊ ರೈಲು ಹೆಚ್ಚಿಸಿ’

ಮೆಟ್ರೊ ನೇರಳೆ ಮಾರ್ಗದಲ್ಲಿ ಕೆ.ಆರ್‌ಪುರದಿಂದ ಮೆಜೆಸ್ಟಿಕ್‌ವರೆಗೆ ಸಂಸದ ಪಿ.ಸಿ. ಮೋಹನ್ ಪ್ರಯಾಣಿಸಿ, ಜನರೊಂದಿಗೆ ಸಂವಾದ ನಡೆಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊದಲ್ಲಿ ಜನದಟ್ಟಣೆ ನಿವಾರಿಸಲು ರೈಲು ಟ್ರಿಪ್‌ಗಳನ್ನು ಹೆಚ್ಚಿಸಬೇಕು. ಅದಕ್ಕಾಗಿ ಕೋಚ್‌ಗಳ ಖರೀದಿಯನ್ನು ತ್ವರಿತಗೊಳಿಸಬೇಕು’ ಎಂದು ಬೆಂಗಳೂರು ಕೇಂದ್ರ ಸಂಸದ ಪಿ.ಸಿ. ಮೋಹನ್ ಬಿಎಂಆರ್‌ಸಿಎಲ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸೋಮವಾರ ಸಂಜೆ ಅವರು ಮೆಟ್ರೊ ನೇರಳೆ ಮಾರ್ಗದಲ್ಲಿ ಕೆ.ಆರ್.ಪುರದಿಂದ ಮೆಜೆಸ್ಟಿಕ್‌ವರೆಗೆ ಪ್ರಯಾಣಿಸಿ, ಪ್ರಯಾಣಿಕರೊಂದಿಗೆ ಸಂವಹನ ನಡೆಸಿದ ಬಳಿಕ ಮಾತನಾಡಿದರು.

ಜನಸಂದಣಿಯನ್ನು ನಿರ್ವಹಿಸಲು, ಬೋರ್ಡಿಂಗ್ ಖಚಿತಪಡಿಸಿಕೊಳ್ಳಲು ಮತ್ತು ಪ್ರಯಾಣಿಕರ ಸುರಕ್ಷತೆ ಹೆಚ್ಚಿಸಲು ಜನದಟ್ಟಣೆ ಸಮಯದಲ್ಲಿ ಪ್ಲಾಟ್‌ಫಾರ್ಮ್‌ಗಳಲ್ಲಿ ಹೆಚ್ಚಿನ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಬೇಕು. ಹಿರಿಯರು, ಅಂಗವಿಕಲರು ಸೇರಿ ಎಲ್ಲ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಪ್ಲಾಟ್‌ಫಾರ್ಮ್‌ನ ಉದ್ದಕ್ಕೂ ಆಸನಗಳನ್ನು ಅಳವಡಿಸಬೇಕು ಎಂದು ಸಲಹೆ ನೀಡಿದರು.

ಫೀಡರ್ ಬಸ್‌ಗಳನ್ನು ಹೆಚ್ಚಿಸಬೇಕು. ಕೊನೆಯ ಮೈಲಿ ಸಂಪರ್ಕಕ್ಕಾಗಿ ಮೀಟರ್ ಇರುವ ಆಟೊಗಳಿಗೆ ಅನುಮತಿ ನೀಡಬೇಕು. ಬಿಎಂಟಿಸಿಯಂತೆ ಮಾಸಿಕ ಪಾಸ್‌ಗಳನ್ನು, ರಿಯಾಯಿತಿ ಪಾಸ್‌ಗಳನ್ನು ಪರಿಚಯಿಸಬೇಕು. ಚಿಲ್ಲರೆ ವ್ಯಾಪಾರಿಗಳಿಗೆ ಸ್ಮಾರ್ಟ್ ಕಾರ್ಡ್, ಟಾಪ್ ಅಪ್ ಸೌಲಭ್ಯ ವಿಸ್ತರಿಸಬೇಕು. ಮೆಟ್ರೊದಲ್ಲಿ ಸೈಕಲ್ ಒಯ್ಯಲು ಅವಕಾಶ ನೀಡಬೇಕು ಎಂದು ಹೇಳಿದರು.

ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಉಪಸ್ಥಿತರಿದ್ದರು.

ಬಿಬಿಎಂಪಿ: ತೆರಿಗೆ ಪಾವತಿಸದ 4,600 ವಾಣಿಜ್ಯ ಕಟ್ಟಡಗಳಿಗೆ ಬೀಗಮುದ್ರೆ

₹474.77 ಕೋಟಿ ಆಸ್ತಿ ತೆರಿಗೆ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಸುಸ್ತಿದಾರರಿಂದ ₹474.77 ಕೋಟಿ ಇನ್ನೂ ಬಾಕಿ ಉಳಿದಿದೆ.

ಹಲವು ವರ್ಷಗಳಿಂದ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವವರಿಗಾಗಿ ಸರ್ಕಾರ ಒಂದು ಬಾರಿ ಪರಿಹಾರ (ಒಟಿಎಸ್) ಯೋಜನೆಯನ್ನು ಸೆಪ್ಟೆಂಬರ್ 31ರವರೆಗೆ ವಿಸ್ತರಿಸಿದೆ. ಆದರೂ, 2.64 ಲಕ್ಷ ಆಸ್ತಿಗಳ ಮಾಲೀಕರು ಸುಸ್ತಿದಾರರಾಗಿದ್ದು, ಸೆ.1ರಂತೆ ₹474.77 ಕೋಟಿ ಪಾವತಿಸಬೇಕಿದೆ. ಕಳೆದ ಒಂದು ವಾರದಲ್ಲಿ 26,862 ಆಸ್ತಿ ಮಾಲೀಕರು ₹26.94 ಕೋಟಿ ತೆರಿಗೆ ಪಾವತಿಸಿದ್ದಾರೆ.

2024ರ ಏಪ್ರಿಲ್ 1ರಂತೆ 3.95 ಲಕ್ಷ ಸುಸ್ತಿದಾರರು ₹738 ಕೋಟಿ ಆಸ್ತಿ ತೆರಿಗೆ ಪಾವತಿಸಬೇಕಾಗಿತ್ತು. ಈ ಆರ್ಥಿಕ ವರ್ಷದಲ್ಲಿ 1.31 ಲಕ್ಷ ಸುಸ್ತಿದಾರರು ₹273 ಕೋಟಿಯನ್ನು ಪಾವತಿಸಿದ್ದಾರೆ.

ಆಸ್ತಿ ತೆರಿಗೆ ಸಂಗ್ರಹ ಅಂಕಿ–ಅಂಶ

ವಲಯ	2024-25ರ ಗುರಿ	ಸೆ.1ರವರೆಗಿನ ಸಂಗ್ರಹ	ಶೇಕಡ
ಮಹದೇವಪುರ	₹1,414.16 ಕೋಟಿ	₹848.19 ಕೋಟಿ	59.98
ದಾಸರಹಳ್ಳಿ	₹187.34 ಕೋಟಿ	₹100.67 ಕೋಟಿ	53.74
ಪಶ್ಚಿಮ	₹563.15 ಕೋಟಿ	₹355 ಕೋಟಿ	63.04
ಆರ್‌.ಆರ್‌. ನಗರ	₹394.09 ಕೋಟಿ	₹222.54 ಕೋಟಿ	56.47
ದಕ್ಷಿಣ	₹716.22 ಕೋಟಿ	₹475.92 ಕೋಟಿ	66.45
ಬೊಮ್ಮನಹಳ್ಳಿ	₹572.29 ಕೋಟಿ	₹331.24 ಕೋಟಿ	57.88
ಪೂರ್ವ	₹872.71 ಕೋಟಿ	₹566.78 ಕೋಟಿ	64.94
ಯಲಹಂಕ	₹490.04 ಕೋಟಿ	₹308.25 ಕೋಟಿ	62.90
ಒಟ್ಟು	₹5,210 ಕೋಟಿ	₹3,208.59 ಕೋಟಿ	60.67

50 ಸಾವಿರ ಆಸ್ತಿ ಮುಟ್ಟುಗೋಲು: ಆಸ್ತಿ ತೆರಿಗೆ ಸುಸ್ತಿದಾರರಿಗೆ ಹಲವು ರೀತಿಯ ನೋಟಿಸ್ ಜಾರಿ ಮಾಡಲಾಗಿದ್ದರೂ, ತೆರಿಗೆ ಪಾವತಿಸಿಲ್ಲ. ಹೀಗಾಗಿ ಕಳೆದ ಒಂದು ವಾರದಲ್ಲಿ 14,906 ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಪ್ರಕ್ರಿಯೆ ಆರಂಭಿಸಲಾಗಿದೆ.

ಪ್ರಸ್ತುತ ಆರ್ಥಿಕ ವರ್ಷದಲ್ಲಿ ಈವರೆಗೆ 49,499 ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಯಾವುದೇ ರೀತಿಯ ವ್ಯವಹಾರವನ್ನೂ ಈ ಆಸ್ತಿಗಳ ಮಾಲೀಕರು ನಡೆಸಲು ಸಾಧ್ಯವಿಲ್ಲ ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಮಾಹಿತಿ ನೀಡಿದರು.

ಆಸ್ತಿ ತೆರಿಗೆ ಪಾವತಿಸದ 4,600 ವಾಣಿಜ್ಯ ಕಟ್ಟಡಗಳಿಗೆ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಬೀಗಮುದ್ರೆ ಹಾಕಲಾಗಿದೆ. ಕಳೆದ ಒಂದು ವಾರದಲ್ಲಿ 269 ಕಟ್ಟಡಗಳಿಗೆ ಬೀಗ ಹಾಕಲಾಗಿದೆ ಎಂದು ತಿಳಿಸಿದರು.

ವಿವಾದಾತ್ಮಕ ಪೋಸ್ಟ್: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಅವರ ತಾಯಿ ಸೋನಿಯಾ ಗಾಂಧಿ ಅವರ ಬಗ್ಗೆ ಸುಳ್ಳು ಸುದ್ದಿಗಳನ್ನು ಹರಡಿದ ಆರೋಪದ ಅಡಿ ಬಾಂಗ್ಲಾದೇಶದ ಪತ್ರಕರ್ತ ಸಲಾವುದ್ದೀನ್ ಶೋಯೆಬ್ ಚೌಧರಿ ಮತ್ತು ಅದಿತಿ ಘೋಷ್ ಅವರ ವಿರುದ್ಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಆಸ್ತಿ ತೆರಿಗೆ ಬಾಕಿ ವಸೂಲಿಗೆ ಎಎಪಿ ಆಗ್ರಹ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ₹900 ಕೋಟಿ ಆಸ್ತಿ ತೆರಿಗೆ ಬಾಕಿ ಇದೆ. ತೆರಿಗೆ ಬಾಕಿ ಉಳಿಸಿಕೊಂಡವರಿಗೆ ಬಿಬಿಎಂಪಿ ನೋಟಿಸ್ ನೀಡಿ ತೆರಿಗೆ ವಸೂಲಿ ಮಾಡಬೇಕು ಎಂದು ಆಮ್ ಅದ್ಮಿ ಪಕ್ಷ (ಎಎಪಿ) ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿ ಸಂಘಟನಾ ಕಾರ್ಯದರ್ಶಿ ಮೋಹನ್ ದಾಸರಿ, ‘ತೆರಿಗೆ ಬಾಕಿ ಉಳಿಸಿಕೊಂಡವರಲ್ಲಿ ಪ್ರತಿಷ್ಠಿತ ವ್ಯಕ್ತಿಗಳ ಸಂಖ್ಯೆ ಹೆಚ್ಚಿದೆ. ತೆರಿಗೆ ಪಾವತಿಸದೆ ಬಿಬಿಎಂಪಿಗೆ ಯಾಮಾರಿಸುವ ಕೆಲಸ ನಡೆಯುತ್ತಿದೆ. ಈ ಹಿಂದೆ ಬಿಬಿಎಂಪಿಯು ತೆರಿಗೆ ಕಟ್ಟದೇ ಇದ್ದರೆ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುತ್ತಿತ್ತು. ಇದೀಗ ಶಾಸಕರು, ಅಧಿಕಾರಿಗಳು, ಪ್ರಭಾವಿ ರಾಜಕಾರಣಿಗಳು ಶಾಮೀಲಾಗಿ ತೆರಿಗೆ ಕಟ್ಟದವರನ್ನು ರಕ್ಷಣೆ ಮಾಡುತ್ತಿದ್ದಾರೆ’ ಎಂದು ದೂರಿದರು.

‘ತೆರಿಗೆ ಪಾವತಿಸದವರ ಆಸ್ತಿಗಳನ್ನು ಬಿಬಿಎಂಪಿ ಮುಟ್ಟುಗೋಲು ಹಾಕಿಕೊಳ್ಳಬೇಕು. ವಿಜಯ್ ಮಲ್ಯ ಅವರ ಯುನೈಟೆಡ್ ಬ್ರಿವರೀಸ್, ಎಂಬೆಸಿ ಗ್ರೂಪ್ ಸೇರಿದಂತೆ ಹಲವು ಪ್ರತಿಷ್ಠಿತ ಸಂಸ್ಥೆಗಳು ಕೋಟ್ಯಾಂತರ ರೂಪಾಯಿ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿವೆ.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ಬಗ್ಗೆ ಮೊದಲು ಗಮನ ಹರಿಸಿ, ಸರ್ಕಾರಕ್ಕೆ ಮೋಸ ಮಾಡುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು’ ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಎಎಪಿ ಬೆಂಗಳೂರು ನಗರ ಘಟಕದ ಅಧ್ಯಕ್ಷ ಸತೀಶ್ ಕುಮಾರ್, ಸಂಘಟನಾ ಕಾರ್ಯದರ್ಶಿ ಜಗದೀಶ್ ಬಾಬು, ಅನಿಲ್ ನಾಚಪ್ಪ, ಅಂಜನಾ ಗೌಡ ಭಾಗವಹಿಸಿದ್ದರು.

ಸುದ್ದಿ 2 ನಿಮಿಷ

ಶ್ರೀಕೃಷ್ಣ ಭಟ್‌ಗೆ ವಿದ್ವತ್ ದತ್ತಿ ಪ್ರಶಸ್ತಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ‘ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿ ವಿದ್ವತ್ ದತ್ತಿ’ ಪ್ರಶಸ್ತಿಗಾಗಿ ಸಂಶೋಧಕ, ಕಾಸರಗೋಡಿನ ಪಿ. ಶ್ರೀಕೃಷ್ಣ ಭಟ್ ಅವರನ್ನು ಆಯ್ಕೆ ಮಾಡಲಾಗಿದೆ.

ಹಳಗನ್ನಡ ಸಾಹಿತ್ಯ, ಛಂದಸ್ಸು, ನಿಘಂಟು ರಚನೆ, ಗ್ರಂಥ ಸಂಪಾದನೆ, ಅನುವಾದ, ಭಾಷಾಶಾಸ್ತ್ರ ಮೊದಲಾದ ಶಾಸ್ತ್ರ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ಈ ಪುರಸ್ಕಾರವನ್ನು ನೀಡಲಾಗುತ್ತದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.



ಶ್ರೀಕೃಷ್ಣ ಭಟ್ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಥಮ ಶ್ರೇಣಿ ಮತ್ತು ಚಿನ್ನದ ಪದಕದೊಂದಿಗೆ ಕನ್ನಡದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ‘ಕನ್ನಡ ವ್ಯಾಕರಣ ಪರಂಪರೆಯ ಮೇಲೆ ಸಂಸ್ಕೃತದ ಪ್ರಭಾವ’ ಎನ್ನುವ ವಿಷಯದಲ್ಲಿ ಸಂಶೋಧನೆ ನಡೆಸಿ ಡಾಕ್ಟರೇಟ್ ಪಡೆದಿದ್ದರು.

ಸುರತ್ಕಲ್‌ನಲ್ಲಿ ವೃತ್ತಿ ಜೀವನ ಆರಂಭಿಸಿದ್ದ ಭಟ್, ಮುಂದೆ ಕಾಸರಗೋಡಿನ ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ಕನ್ನಡ ಪ್ರಾಧ್ಯಾಪಕ ಮತ್ತು ವಿಭಾಗದ ಮುಖ್ಯಸ್ಥರಾಗಿದ್ದರು. ಕಣ್ಣೂರು ವಿಶ್ವವಿದ್ಯಾಲಯದ ಭಾರತೀಯ ಭಾಷಾ ಅಧ್ಯಯನಾಂಗದಲ್ಲಿಯೂ ಕರ್ತವ್ಯ ನಿರ್ವಹಿಸಿದ್ದರು. ಕಾಸರಗೋಡು ಸರ್ಕಾರಿ ಕಾಲೇಜು, ಕಲ್ಲಿಕೋಟೆ, ಕಣ್ಣೂರು ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಸಂಶೋಧನೆ ಮತ್ತು ಅಧ್ಯಯನ ನಡೆಯುವಲ್ಲಿ ಮುಖ್ಯಪಾತ್ರ ವಹಿಸಿದ್ದರು. ಅವರ ಕೊಡುಗೆಯನ್ನು ಗಮನಿಸಿ ಈ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ ಎಂದು ಜೋಶಿ ತಿಳಿಸಿದ್ದಾರೆ.

ಶಾಸಕ ರಂಗನಾಥ್‌ಗೆ ನೋಟಿಸ್

ನವದೆಹಲಿ: ಚುನಾವಣಾ ಅಕ್ರಮದ ಆರೋಪದ ಹಿನ್ನೆಲೆಯಲ್ಲಿ ಕುಣಿಗಲ್ ಶಾಸಕ ಎಚ್‌.ಡಿ. ರಂಗನಾಥ್ ಅವರಿಗೆ ಸುಪ್ರೀಂ ಕೋರ್ಟ್ ಸೋಮವಾರ ನೋಟಿಸ್ ನೀಡಿದೆ.

ಚುನಾವಣಾ ಅಕ್ರಮ ಎಸಗಿ ಆಯ್ಕೆಯಾದ ರಂಗನಾಥ್ ಅವರ ಶಾಸಕ ಸ್ಥಾನವನ್ನು ರದ್ದುಗೊಳಿಸುವಂತೆ ಕೋರಿ ಪರಾಜಿತ ಅಭ್ಯರ್ಥಿ ಡಿ.ಕೃಷ್ಣಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಜೂನ್‌ನಲ್ಲಿ ವಜಾಗೊಳಿಸಿತ್ತು. ಅರ್ಜಿಯಲ್ಲಿರುವ ಆರೋಪಗಳು ಊಹೆ ಹಾಗೂ ಕಲ್ಪನೆಯ ಆಧಾರದಲ್ಲಿವೆ ಎಂದು ಪೀಠ ಅಭಿಪ್ರಾಯಪಟ್ಟಿತ್ತು.

ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಕೃಷ್ಣಕುಮಾರ್ ಅವರು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಪೀಠ, ಎರಡು ವಾರಗಳಲ್ಲಿ ಪ್ರತಿಕ್ರಿಯೆ ನೀಡುವಂತೆ ರಂಗನಾಥ್ ಅವರಿಗೆ ಸೂಚಿಸಿದೆ.

ಚರಕ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸೌಲಭ್ಯಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವೀಕ್ಷಿಸಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಶಾಸಕ ರಿಜ್ವಾನ್ ಅರ್ಷದ್, ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್ ಉಪಸ್ಥಿತರಿದ್ದರು

‘ಜಿಲ್ಲೆಗೊಂದು ಮೆಡಿಕಲ್ ಕಾಲೇಜು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡವರು, ಕೆಳ ಮಧ್ಯಮ ವರ್ಗದ ಜನರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ಅತ್ಯುನ್ನತ ಆರೋಗ್ಯ ಸೌಲಭ್ಯಗಳನ್ನು ಉಚಿತವಾಗಿ ಕಲ್ಪಿಸಲು ಜಿಲ್ಲೆಗೊಂದು ವೈದ್ಯಕೀಯ ಕಾಲೇಜು ತೆರೆಯಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಶಿವಾಜಿನಗರದ ಬ್ರಾಡ್‌ವೇ ರಸ್ತೆಯಲ್ಲಿ ಚರಕ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು.

‘ಜಿಲ್ಲೆಗೊಂದು ವೈದ್ಯಕೀಯ ಕಾಲೇಜು ಆರಂಭಿಸುವುದರಿಂದ ಅತ್ಯುತ್ತಮ ಆಸ್ಪತ್ರೆಯೂ ಜನರಿಗೆ ಸಿಗಲಿದೆ. ಸೂಪರ್ ಸ್ಪೆಷಾಲಿಟಿ ಸೌಲಭ್ಯ ಗಳನ್ನೂ ಒದಗಿಸಲಾಗುತ್ತದೆ. ಈ ಯೋಜನೆಯನ್ನು ಹಿಂದೆ ನಮ್ಮ ಸರ್ಕಾರ ಇದ್ದಾಗ ಜಾರಿಗೆ ತಂದಿತ್ತು. ಬಿಜೆಪಿಯವರು ಅಧಿಕಾರಕ್ಕೆ ಬಂದಾಗ ನಿಲ್ಲಿಸಿದ್ದರು. ನಾವು ಇದೀಗ ಮುಂದುವರಿಸಿದ್ದೇವೆ’ ಎಂದು ಹೇಳಿದರು. ‘ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ನಿರ್ಮಿಸುವುದು ದೊಡ್ಡದಲ್ಲ. ಅಲ್ಲಿ ಶುಚಿತ್ವವನ್ನು ಕಾಪಾಡಿಕೊಳ್ಳಬೇಕು. ಹಲವು ಸರ್ಕಾರಿ ಆಸ್ಪತ್ರೆಗಳಲ್ಲಿ ಉಪಕರಣಗಳು, ಯಂತ್ರಗಳು ಉಪಯೋಗಕ್ಕೆ ಬಾರದಂತಾಗಿವೆ. ಈ ರೀತಿ ಆಗಬಾರದು. ಜನರಿಗೆ ಶುಚಿತ್ವದೊಂದಿಗೆ ಉತ್ತಮ ಆರೋಗ್ಯ ಸೇವೆ ನೀಡಬೇಕು’ ಎಂದು ಸಿದ್ದರಾಮಯ್ಯ ತಾಕೀತು ಮಾಡಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ‘ಇನ್ಫೊಸಿಸ್‌ನ ಸುಧಾಮೂರ್ತಿ ಅವರು ₹10 ಕೋಟಿ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಅನುದಾನವನ್ನು ಚರಕ ಆಸ್ಪತ್ರೆಗೆ ನೀಡಿದ್ದಾರೆ. ನಾನು ಪ್ರತಿನಿಧಿಸುವ ಕನಕಪುರ ಕ್ಷೇತ್ರದಲ್ಲಿಯೂ ತಾಯಿ, ಮಗು ಆಸ್ಪತ್ರೆಯನ್ನು ಕಟ್ಟಿಸಿ ಕೊಟ್ಟಿದ್ದಾರೆ. ಆರೋಗ್ಯ ಕ್ಷೇತ್ರ ಮಾತ್ರವಲ್ಲ ಶಿಕ್ಷಣ ಕ್ಷೇತ್ರದಲ್ಲೂ ಸಿಎಸ್‌ಆರ್ ಅನುದಾನಗಳನ್ನು ಬಳಸಿಕೊಂಡು ಈ ವರ್ಷ 500 ಶಾಲೆಗಳನ್ನು ಪಂಚಾಯಿತಿ ಮಟ್ಟದಲ್ಲಿ ಉನ್ನತೀಕರಿಸಲಾಗುವುದು. ಒಟ್ಟು 2000 ಶಾಲೆಗಳನ್ನು ಮೇಲ್ದರ್ಜೆಗೇರಿಸುವುದು ನಮ್ಮ ಗುರಿ’ ಎಂದರು.

ನಗರದಲ್ಲಿ ಇಂದು

‘ವಿಜಯ ವಾರಿಧಿ’ ಅಂತರ ಶಾಲಾ ಸ್ಪರ್ಧೆ: ಉದ್ಘಾಟನೆ: ಡಾ.ಸಿ.ಎನ್. ಮಂಜುನಾಥ್, ಅತಿಥಿ: ಸುರೇಶ್ ಹೆಬ್ಳೀಕರ್, ಅಧ್ಯಕ್ಷತೆ: ಕೆ.ಸಿ. ರಘುನಂದನ್, ಆಯೋಜನೆ: ವಿಜಯ ಎಜುಕೇಶನ್ ಇನ್‌ಸ್ಟಿಟ್ಯೂಟ್ ಟ್ರಸ್ಟ್, ಸ್ಥಳ: ವಿಜಯ ಕಾಂಪೋಸಿಟ್ ಪಿಯು ಕಾಲೇಜು, ಸೌತ್‌ಎಂಡ್ ವೃತ್ತ, ಜಯನಗರ ಮೂರನೇ ಬ್ಲಾಕ್, ಬೆಳಿಗ್ಗೆ 10

‘ಸುಳ್ಳುಸುದ್ದಿ ಸಾಮಾಜಿಕ ನ್ಯಾಯದ ಮೇಲೆ ಪರಿಣಾಮ’ ಕುರಿತು ವಿಚಾರಸಂಕಿರಣ: ಬೆಳಿಗ್ಗೆ 11ಕ್ಕೆ ಅಧ್ಯಕ್ಷತೆ: ಆಯೇಶಾ ಖಾನಂ, ಪ್ರಧಾನ ಭಾಷಣ: ಶ್ರೀನಿವಾಸನ್ ಜೈನ್, ಉಪಸ್ಥಿತಿ: ಕೆ.ವಿ. ಪ್ರಭಾಕರ್, ನಾಗಮಣಿ ಎಸ್. ರಾವ್, ಬಿ.ಕೆ. ರವಿ, ಕೆ.ವಿ. ತ್ರಿಲೋಕಚಂದ್ರ, ಹೇಮಂತ್ ಎಂ. ನಿಂಬಾಳ್ಕರ್, ವಿಚಾರಸಂಕಿರಣ: ಉಪಸ್ಥಿತಿ: ದಿನೇಶ್ ಅಮೀನ್‌ಮಟ್ಟು, ಎಂ. ಸಿದ್ದರಾಜು, ಆಶಾ ಕೃಷ್ಣಸ್ವಾಮಿ, ಸುಭಾಷ್ ಹೂಗಾರ್, ಮಧ್ಯಾಹ್ನ 3ಕ್ಕೆ ಸಿದ್ದರಾಮಯ್ಯ ಭಾಗಿ, ಆಯೋಜನೆ: ಕರ್ನಾಟಕ ಮಾಧ್ಯಮ ಅಕಾಡೆಮಿ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ

‘ಪ್ರದರ್ಶನ ಕಲೆಗಳಲ್ಲಿ ಬಂಜಾರ ಸಂಸ್ಕೃತಿ’ ರಾಜ್ಯಮಟ್ಟದ ವಿಚಾರಸಂಕಿರಣ: ಉದ್ಘಾಟನೆ: ಜಯಕರ್ ಎಸ್.ಎಂ., ಅಧ್ಯಕ್ಷತೆ: ಎ.ಆರ್. ಗೋವಿಂದಸ್ವಾಮಿ, ಅತಿಥಿಗಳು: ಹಂಸಿನಿ ನಾಗೇಂದ್ರ, ಎಸ್. ಶಿವಣ್ಣ, ವಿಚಾರಸಂಕಿರಣ: ಹಿ.ಚಿ. ಬೋರಲಿಂಗಯ್ಯ, ‘ಕೆ. ವೆಂಕಟಲಕ್ಷ್ಮಮ್ಮ ಅವರ ನೃತ್ಯ ಶೈಲಿ ಮತ್ತು ಸಾಧನೆ’ ವಿಷಯ ಮಂಡನೆ: ಲಲಿತಾ ಶ್ರೀನಿವಾಸನ್, ಆಯೋಜನೆ: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಡಾ.ಕೆ. ವೆಂಕಟಗಿರಿಗೌಡ ಸಭಾಂಗಣ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ. nagaradalli_indu@prajavani.co.in

‘ಪ್ರಚಂಡ ರಾವಣ’ ನಾಟಕ ಪ್ರದರ್ಶನ: ರಚನೆ: ಕಣಗಾಲ್ ಪ್ರಭಾಕರ್ ಶಾಸ್ತ್ರಿ, ನಿರ್ದೇಶನ: ಕಲ್ಲೂರು ಶ್ರೀನಿವಾಸ್, ಉದ್ಘಾಟನೆ: ನರೇಂದ್ರಬಾಬು, ಅತಿಥಿಗಳು: ಡಿ. ಯಲ್ಲಪ್ಪ, ಪಿನ್ನಯ್ಯ, ಮೂರ್ತಿ, ಡಿ. ದಿವಾಕರ್, ಅಶ್ವತ್ಥ, ಅಧ್ಯಕ್ಷತೆ: ಎ.ಆರ್. ಗೋವಿಂದಸ್ವಾಮಿ, ಆಯೋಜನೆ: ಪಾಪು ಕಲಾವಿದರ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6.30

‘ರಕ್ತ–ಧ್ವಜ’ ನಾಟಕ ಪ್ರದರ್ಶನ: ನಿರ್ದೇಶನ: ದಾಕ್ಷಾಯಿಣಿ ಭಟ್ ಎ., ಅಭಿನಂದಿತರು: ಕೆ.ವಿ. ನಾಗರಾಜಮೂರ್ತಿ, ಜಗದೀಶ್ ಜಾಲ, ಮಮತಾ ಅರಸೀಕೆರೆ, ಮುರುಡಯ್ಯ, ಉಪಸ್ಥಿತಿ: ವಿಜಯಾ, ಆಯೋಜನೆ: ದೃಶ್ಯ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

‘ಪ್ರೋಷ್ಠಪದೀ ಭಾಗವತ’ ಧಾರ್ಮಿಕ ಪ್ರವಚನ: ಕೃಷ್ಣಚಾರ್ ಕೆಂಪದಾಳಿಹಳ್ಳಿ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸೇವಾ ಸಮಿತಿ, ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಸಂಜೆ 7

SANSERA ideas@work

ಸನ್ಸೆರಾ ಇಂಜಿನಿಯರಿಂಗ್ ಲಿಮಿಟೆಡ್

(CIN: L34103KA1981PLC004542)

ನೋಂದಾಯಿತ ವಿಳಾಸ: ಘಟಕ–7, ಸಂ. 143/ಎ, ಜಿಗಣಿ ಲಿಂಕ್ ರಸ್ತೆ, ಬೊಮ್ಮಸಂದ್ರ ಔದ್ಯಮಿಕ ಪ್ರದೇಶ, ಆನೇಕಲ್ ತಾಲೂಕು, ಬೆಂಗಳೂರು - 560105, ಭಾರತ
ಫೋನ್ ನಂ: +91 80-27839081/82/83; **ಫ್ಯಾಕ್ಸ್ ಸಂ.:** +91 80 27839309
ಇಮೇಲ್: rajesh.modi@sansera.in; **ವೆಬ್‌ಸೈಟ್:** www.sansera.in

42 ನೇ ವಾರ್ಷಿಕ ಪ್ರಧಾನ ಸಭೆ, ಖಾತೆ ಮುಕ್ತಾಯ ಮತ್ತು ರಿಮೋಟ್ ಇ–ಮತದಾನ ಮಾಹಿತಿಯ ನೋಟಿಸ್

(ಎ) ವಾರ್ಷಿಕ ಪ್ರಧಾನ ಸಭೆ ಮತ್ತು ಖಾತೆ ಮುಕ್ತಾಯ:

ಈ ಮೂಲಕ ನೋಟಿಸ್ ನೀಡಿರುವುದೇನೆಂದರೆ, 2024 ಆಗಸ್ಟ್ 20 ರಂದು ನೀಡಿದ ಎಜಿಎಂ ನೋಟಿಸ್‌ನಲ್ಲಿ ನಿಗದಿಸಿದ ವಹಿವಾಟುಗಳನ್ನು ನಡೆಸಲು ವೀಡಿಯೋ ಕಾನ್ಫರೆನ್ಸಿಂಗ್ (“ವಿಸಿ”)/ ಇತರ ಧ್ವನಿ–ದೃಶ್ಯ ವಿಧಾನಗಳ (“ಒಎವಿಎಂ”) ಮೂಲಕ ಮಾತ್ರ 2024 ಸೆಪ್ಟೆಂಬರ್ 26 ರಂದು ಗುರುವಾರ ಮಧ್ಯಾಹ್ನ 3.00 ಗಂಟೆಗೆ (ಭಾರತೀಯ ಕಾಲಮಾನ) ನಡೆಸಲು ಸನ್ಸೆರಾ ಇಂಜಿನಿಯರಿಂಗ್ ಲಿಮಿಟೆಡ್ (“ಕಂಪನಿ”) ಸದಸ್ಯರ 42ನೇ ವಾರ್ಷಿಕ ಪ್ರಧಾನ ಸಭೆ (ಎಜಿಎಂ) ಅನ್ನು ನಡೆಸಲಾಗುತ್ತಿದ್ದು, ವಿಸಿ/ಒಎವಿಎಂ ಮೂಲಕ ಕಂಪನಿಗಳು ಎಜಿಎಂ ಅನ್ನು ನಡೆಸಲು ಅನುವು ಮಾಡುವುದಕ್ಕೆ ಸಂಬಂಧಿಸಿದಂತೆ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಮತ್ತು ಭಾರತೀಯ ಷೇರು ವಿನಿಮಯ ಮಂಡಳಿ ಪ್ರಕಟಿಸಿದ ಸುತ್ತೋಲೆಗಳಿಗೆ ಅನುಗುಣವಾಗಿ ವಿಸಿ/ಒಎವಿಎಂ ಮೂಲಕ ಕಂಪನಿಯ ಎಜಿಎಂ ಅನ್ನು ನಡೆಸಲಾಗುತ್ತದೆ.

ಈ ಮೇಲಿನ ಸುತ್ತೋಲೆಗಳ ನಿಯಮಗಳಿಗೆ ಅನುಗುಣವಾಗಿ, 2024 ಮಾರ್ಚ್ 31 ರಂತೆ ಆಡಿಟ್ ಮಾಡಿದ ಬ್ಯಾಲೆನ್ಸ್ ಶೀಟ್, ಲಾಭ ಮತ್ತು ನಷ್ಟದ ಆಡಿಟ್ ಮಾಡಿದ ಹೇಳಿಕೆ, 2024 ಮಾರ್ಚ್ 31 ಕ್ಕೆ ಕೊನೆಗೊಂಡ ನಗದು ಹರಿವು ಹೇಳಿಕೆ ಹಾಗೂ ನಿರ್ದೇಶಕರು ಮತ್ತು ಆಡಿಟರ್‌ಗಳ ವರದಿಗಳ ಜೊತೆಗೆ ಎಜಿಎಂ ನೋಟಿಸ್ ಅನ್ನು ಕಂಪನಿ/ಡೆಪಾಸಿಟರಿ ಪಾರ್ಟಿಸಿಪಂಟ್(ಗಳು)/ಲಿಂಕ್ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (“ಲಿಂಕ್ ಇನ್‌ಟೈಮ್”), ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರಲ್ಲಿ ತಮ್ಮ ಇಮೇಲ್ ಐಡಿಗಳನ್ನು 2024 ಆಗಸ್ಟ್ 30, ಶುಕ್ರವಾರದವರೆಗೆ ನೋಂದಣಿ ಮಾಡಿಕೊಂಡಿರುವ ಸದಸ್ಯರಿಗೆ ಮಾತ್ರ ಕಳುಹಿಸಲಾಗುತ್ತದೆ. ಎಂಸಿಎ ಸುತ್ತೋಲೆಗಳು ಮತ್ತು ಸೆಬಿ ಸುತ್ತೋಲೆಗಳಿಗೆ ಅನುಗುಣವಾಗಿ ಎಜಿಎಂ ನೋಟಿಸ್‌ನ ಭೌತಿಕ ಪ್ರತಿಗಳನ್ನು ಕಳುಹಿಸುವ ಅಗತ್ಯವನ್ನು ನಿವಾರಿಸಲಾಗಿದೆ.

2023–24 ಹಣಕಾಸು ವರ್ಷದ ಕಂಪನಿಯ ವಾರ್ಷಿಕ ವರದಿ ಮತ್ತು ಎಜಿಎಂ ನೋಟಿಸ್ ಕಂಪನಿ ವೆಬ್‌ಸೈಟ್ www.sansera.in ನಲ್ಲಿ ಮತ್ತು ಕಂಪನಿಯ ಷೇರುಗಳನ್ನು ಲಿಸ್ಟ್ ಮಾಡಲಾಗಿರುವ ಷೇರು ವಿನಿಮಯ ಮಂಡಳಿಗಳ ವೆಬ್‌ಸೈಟ್‌ಗಳಾದ www.bseindia.com ಮತ್ತು www.nseindia.com ಮತ್ತು ಲಿಂಕ್ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (https://instavote.linkintime.co.in/) ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ಕಂಪನಿ/ಡೆಪಾಸಿಟರಿ ಪಾರ್ಟಿಸಿಪಂಟ್(ಗಳಲ್ಲಿ) ತಮ್ಮ ಇಮೇಲ್ ವಿಳಾಸಗಳನ್ನು ನೋಂದಣಿ ಮಾಡಿದ ಸದಸ್ಯರೂ ಸೇರಿದಂತೆ ಎಲ್ಲ ಸದಸ್ಯರು ಎಜಿಎಂ ನೋಟಿಸ್ ಮತ್ತು ವಾರ್ಷಿಕ ವರದಿಯನ್ನು ಈ ಮೇಲೆ ಹೇಳಿದ ಯಾವುದೇ ವೆಬ್‌ಸೈಟ್‌ಗಳಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಲಿಂಕ್ ಇನ್‌ಟೈಮ್/ ಡೆಪಾಸಿಟರಿ ಪಾರ್ಟಿಸಿಪಂಟ್ (ಗಳಲ್ಲಿ) ತಮ್ಮ ಇಮೇಲ್ ವಿಳಾಸಗಳನ್ನು ನೋಂದಣಿ ಮಾಡಿಕೊಳ್ಳದ ಸದಸ್ಯರು ಇಮೇಲ್ ವಿಳಾಸವನ್ನು ನೋಂದಣಿ ಮಾಡಲು ಮತ್ತು ಎಜಿಎಂ ನೋಟಿಸ್, ವಾರ್ಷಿಕ ವರದಿ ಮತ್ತು ಇ–ಮತದಾನದ ಬಳಕೆದಾರರ ಐಡಿ ಮತ್ತು ಪಾಸ್‌ವರ್ಡ್ ಅನ್ನು ಇಮೇಲ್ ಮೂಲಕ ಸ್ವೀಕರಿಸಲು https://linkintime.co.in/emailreg/email_register.html ಲಿಂಕ್‌ಗೆ ಭೇಟಿ ನೀಡಬೇಕು. ಇಮೇಲ್ ವಿಳಾಸವನ್ನು ನೋಂದಣಿ ಮಾಡಿಕೊಳ್ಳಲು ಮತ್ತು ಇ–ಮತದಾನದ ಬಳಕೆದಾರರ ಐಡಿ ಮತ್ತು ಪಾಸ್‌ವರ್ಡ್ ಅನ್ನು ಪಡೆಯಲು ಮತ್ತು ಎಜಿಎಂ ಸಮಯದಲ್ಲಿ ಇ–ಮತದಾನ ಮಾಡಲು ಮತ್ತು ರಿಮೋಟ್ ಆಗಿ ಮತದಾನ ಮಾಡುವ ವಿಧಾನದ ವಿವರವಾದ ಕ್ರಮವನ್ನು ಈ ಮೇಲೆ ಹೇಳಿದ ವೆಬ್‌ಸೈಟ್‌ಗಳಲ್ಲಿ ಲಭ್ಯವಾಗಿಸಲಾಗುತ್ತದೆ.

ವಿಸಿ/ಒಎವಿಎಂ ಮೂಲಕ ಎಜಿಎಂಗೆ ಹಾಜರಾಗಲು ಮತ್ತು ಎಜಿಎಂ ವೆಬ್‌ಕಾಸ್ಟ್ ಅನ್ನು ವೀಕ್ಷಿಸಲು ಸೂಚನೆಗಳಿಗಾಗಿ ಎಜಿಎಂ ನೋಟಿಸ್ ಅನ್ನು ನೋಡುವಂತೆ ಸದಸ್ಯರಿಗೆ ವಿನಂತಿಸಲಾಗಿದೆ.

ಅಂಚೆ ವರ್ಗಾವಣೆಯಲ್ಲಿ ಯಾವುದೇ ನಷ್ಟ/ಮಧ್ಯಪ್ರವೇಶವನ್ನು ತಡೆಯುವುದಕ್ಕಾಗಿ ಮತ್ತು ನ್ಯಾಷನಲ್ ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಸರ್ವೀಸ್ (ಎನ್‌ಇಸಿಎಸ್) / ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಸರ್ವೀಸ್ (ಇಸಿಎಸ್) ಮೂಲಕ ಡಿವಿಡೆಂಡ್ ಕ್ರೆಡಿಟ್ ಅನ್ನು ಪಡೆಯಲು ತಮ್ಮ ಎನ್‌ಇಸಿಎಸ್ / ಇಸಿಎಸ್ ವಿವರಗಳನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರಿಗೆ rnt.helpdesk@linkintime.co.in ಇಮೇಲ್ ಐಡಿಗೆ ಸಲ್ಲಿಸಬೇಕು.

ಎಜಿಎಂ ದಿನಾಂಕದವರೆಗೆ ಕಂಪನಿಯ ಯಾವುದೇ ಕೆಲಸದ ದಿನದಲ್ಲಿ ಕಚೇರಿ ಅವಧಿಯಲ್ಲಿ ಕಂಪನಿಯ ಸದಸ್ಯರ ಎಲೆಕ್ಟ್ರಾನಿಕ್ ತಪಾಸಣೆಗೆ ಈ ಮೇಲಿನ ದಾಖಲೆಗಳು ಲಭ್ಯವಿವೆ.

ಖಾತೆ ಮುಕ್ತಾಯ:

ಸದಸ್ಯರ ನೋಂದಣಿ ಮತ್ತು ಕಂಪನಿಯ ಷೇರು ವರ್ಗಾವಣೆ ದಾಖಲೆಗಳು ಎಜಿಎಂ ಮತ್ತು 2024 ಮಾರ್ಚ್ 31 ಕ್ಕೆ ಕೊನೆಗೊಂಡ ಹಣಕಾಸು ವರ್ಷದ ಡಿವಿಡೆಂಡ್ ಪಾವತಿ ಉದ್ದೇಶಕ್ಕೆ 2024 ಸೆಪ್ಟೆಂಬರ್ 20 ರಿಂದ 2024 ಸೆಪ್ಟೆಂಬರ್ 26 (ಎರಡೂ ದಿನಗಳನ್ನು ಒಳಗೊಂಡು) ಮುಚ್ಚಿರುತ್ತದೆ. ಸದಸ್ಯರು ಘೋಷಿಸಿದರೆ ಡಿವಿಡೆಂಡ್ ಅನ್ನು ಅನ್ವಯಿಕ ತೆರಿಗೆಗೆ ಒಳಪಟ್ಟು ಷೇರುದಾರರಿಂದ ಘೋಷಣೆ ದಿನಾಂಕದಿಂದ 30 ದಿನಗಳಂದು ಅಥವಾ ಮೊದಲು ಪಾವತಿ ಮಾಡಲಾಗುತ್ತದೆ.

(ಬಿ) ರಿಮೋಟ್ ಇ–ಮತದಾನ

ಕಂಪನಿಗಳ ಕಾಯ್ದೆ 2013 ರ ವಿಭಾಗ 108 ಮತ್ತು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು 2014 ರ ನಿಯಮ 20 ಹಾಗೂ ಅದಕ್ಕೆ ಕಾಲಕಾಲಕ್ಕೆ ಮಾಡಿದ ತಿದ್ದುಪಡಿಗಳು ಮತ್ತು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಗೊಳಿಸುವಿಕೆ ಅಗತ್ಯಗಳು) ನಿಯಮಾವಳಿ 2015 (ಲಿಸ್ಟಿಂಗ್ ನಿಯಮಾವಳಿಗಳು) ರ ಅನುಬಂಧಗಳು ಮತ್ತು ಭಾರತೀಯ ಕಂಪನಿ ಸೆಕ್ರೆಟರಿಗಳ ಸಂಸ್ಥೆ ಪ್ರಕಟಿಸಿದ ಪ್ರಧಾನ ಸಭೆಗಳ ಕಾರ್ಯದರ್ಶೀಯ ಮಾನದಂಡ (ಎಸ್‌ಎಸ್–2) ಕ್ಕೆ ಅನುಗುಣವಾಗಿ ಎಜಿಎಂನಲ್ಲಿ ನಡೆಸಲಾಗುವ ವಹಿವಾಟುಗಳಿಗೆ ಸಂಬಂಧಿಸಿದಂತೆ ಎಜಿಎಂಗೂ ಮೊದಲು/ನಂತರ ರಿಮೋಟ್ ಇ–ಮತದಾನದ ಸೌಲಭ್ಯವನ್ನು ಕಂಪನಿಯು ತನ್ನ ಸದಸ್ಯರಿಗೆ ನೀಡುತ್ತಿದೆ ಮತ್ತು ಈ ಉದ್ದೇಶಕ್ಕೆ ಕಂಪನಿಯು ಎಲೆಕ್ಟ್ರಾನಿಕ್ ರೂಪದಲ್ಲಿ ಮತದಾನ ಸೌಲಭ್ಯ ಕಲ್ಪಿಸುವುದಕ್ಕಾಗಿ **ಲಿಂಕ್ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್** ಅನ್ನು ಕಂಪನಿಯು ನೇಮಿಸಿದೆ.

ರಿಮೋಟ್ ಇ–ಮತದಾನದ ವಿವರವಾದ ಸೂಚನೆಗಳನ್ನು 42ನೇ ಎಜಿಎಂ ನೋಟಿಸ್‌ನಲ್ಲಿ ನೀಡಲಾಗಿದೆ. ಈ ಮುಂದಿನವುಗಳನ್ನು ಗಮನಿಸುವಂತೆ ಸದಸ್ಯರಿಗೆ ವಿನಂತಿಸಲಾಗಿದೆ.

ಎ) ಈ ಮುಂದಿನ ಅವಧಿಯಲ್ಲಿ ರಿಮೋಟ್ ಇ–ಮತದಾನದ ಸೌಲಭ್ಯವು ಲಭ್ಯವಿದೆ:

ಅ.ಸಂ	ವಿವರಗಳು / ಚಟುವಟಿಕೆ	ವಿವರಗಳು
1.	ರಿಮೋಟ್ ಇ–ಮತದಾನದ ಆರಂಭ ಮತ್ತು ಮುಕ್ತಾಯದ ದಿನಾಂಕ ಮತ್ತು ಸಮಯ	**ಆರಂಭ:** ಸೋಮವಾರ, ಸೆಪ್ಟೆಂಬರ್ 23, 2024 ಬೆಳಗ್ಗೆ 9:00 ಗಂಟೆ (ಭಾರತೀಯ ಕಾಲಮಾನ) **ಮುಕ್ತಾಯ:** ಬುಧವಾರ, ಸೆಪ್ಟೆಂಬರ್ 25, 2024 ಸಂಜೆ 5:00 ಗಂಟೆ (ಭಾರತೀಯ ಕಾಲಮಾನ)
2.	ಕಟ್ ಆಫ್ ದಿನಾಂಕ	ಗುರುವಾರ, ಸೆಪ್ಟೆಂಬರ್ 19, 2024

ರಿಮೋಟ್ ಇ–ಮತದಾನ ಮಾಡ್ಯೂಲ್ ಅನ್ನು ಬುಧವಾರ, ಸೆಪ್ಟೆಂಬರ್ 25, 2024 ರಂದು ಸಂಜೆ 5.00 ಗಂಟೆಗೆ ನಿಷ್ಕ್ರಿಯಗೊಳಿಸಲಾಗುತ್ತದೆ.

ಬಿ) ಕಟ್ ಆಫ್ ದಿನಾಂಕದಂದು ಸದಸ್ಯರ ರಿಜಿಸ್ಟರ್‌ನಲ್ಲಿ ಅಥವಾ ಡೆಪಾಸಿಟರಿಗಳು ನಿರ್ವಹಿಸಿರುವ ಫಲಾನುಭವಿ ಮಾಲೀಕರ ನೋಂದಣಿಯಲ್ಲಿ ಹೆಸರು ದಾಖಲಾಗಿರುವ ಸದಸ್ಯರು ಮಾತ್ರ ಎಜಿಎಂ ವೇಳೆ ರಿಮೋಟ್ ಇ–ಮತದಾನ / ಇ–ಮತದಾನದ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುತ್ತಾರೆ. ಸದಸ್ಯರು ನಿಲುವಳಿಯ ಮೇಲೆ ಮತವನ್ನು ಹಾಕಿದ ನಂತರ, ಅದನ್ನು ಬದಲಾವಣೆ ಮಾಡಲು ಅವರಿಗೆ ಅನುಮತಿ ನೀಡಲಾಗುವುದಿಲ್ಲ. ಎಲೆಕ್ಟ್ರಾನಿಕ್ ರೂಪದಲ್ಲಿ ತಮ್ಮ ಮತವನ್ನು ಹಾಕದ ಸದಸ್ಯರು ಮತ್ತು ಮತ ಹಾಕುವುದರಿಂದ ನಿಷೇಧಿಸಲ್ಪಟ್ಟವರು ತಮ್ಮ ಮತದಾನದ ಹಕ್ಕನ್ನು ಎಜಿಎಂ ಅವಧಿಯಲ್ಲಿ ಇ–ಮತದಾನ ವ್ಯವಸ್ಥೆಯ ಮೂಲಕ ಮತ ಹಾಕಬಹುದು. ಎಜಿಎಂ ಸಮಯದಲ್ಲಿ ಇ–ಮತದಾನಕ್ಕೆ ಸೂಕ್ತ ವ್ಯವಸ್ಥೆಯನ್ನು ಕಂಪನಿ ಮಾಡುತ್ತದೆ. ಸಭೆಗೂ ಮುನ್ನ ರಿಮೋಟ್ ಇ–ಮತದಾನದ ಮೂಲಕ ತಮ್ಮ ಮತಗಳನ್ನು ಹಾಕಿದ ಸದಸ್ಯರು ಎಜಿಎಂಗೆ ಹಾಜರಾಗಬಹುದು. ಆದರೆ, ಎಜಿಎಂ ಅವಧಿಯಲ್ಲಿ ಪುನಃ ಮತ ಹಾಕಲು ಅವರು ಅರ್ಹರಾಗಿರುವುದಿಲ್ಲ.

ಸಿ) ಸಭೆಯಲ್ಲಿ ಮಾತನಾಡುವವರಾಗಿ ತಮ್ಮ ಅಭಿಪ್ರಾಯಗಳನ್ನು ಪ್ರಸ್ತುತಪಡಿಸಲು/ ಪ್ರಶ್ನೆಗಳನ್ನು ಕೇಳಲು ಬಯಸುವ ಸದಸ್ಯರು ತಮ್ಮ ಹೆಸರು, ಡಿಪಿ ಐಡಿ ಮತ್ತು ಕ್ಲೈಂಟ್ ಐಡಿ / ಫಾಲಿಯೋ ಸಂಖ್ಯೆ, ಪ್ಯಾನ್ ಮತ್ತು ಮೊಬೈಲ್ ನಂಬರ್ ಅನ್ನು ಕಂಪನಿಯ ಇಮೇಲ್ ಐಡಿ rajesh.modi@sansera.in ಗೆ 2024 ಸೆಪ್ಟೆಂಬರ್ 16 ಸೋಮವಾರದಂದು (ಸಂಜೆ 5.00 ಗಂಟೆವರೆಗೆ) ಅಥವಾ ಅದಕ್ಕೂ ಮೊದಲು ವಿನಂತಿಯನ್ನು ಕಳುಹಿಸುವ ಮೂಲಕ ಮೊದಲೇ ನೋಂದಣಿ ಮಾಡಿಕೊಳ್ಳಬೇಕು. ಮಾತನಾಡುವವರಾಗಿ ಮೊದಲೇ ನೋಂದಣಿ ಮಾಡಿಕೊಂಡ ಸದಸ್ಯರಿಗೆ ಮಾತ್ರ ಎಜಿಎಂ ವೇಳೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು/ಪ್ರಶ್ನೆಗಳನ್ನು ಕೇಳಲು ಅನುಮತಿಸಲಾಗುತ್ತದೆ. ಎಜಿಎಂಗೆ ಲಭ್ಯವಿರುವ ಸಮಯವನ್ನು ಆಧರಿಸಿ ಮಾತನಾಡುವವರ ಸಂಖ್ಯೆಯನ್ನು ನಿರ್ಬಂಧಿಸುವ ಹಕ್ಕನ್ನು ಕಂಪನಿ ಹೊಂದಿದೆ.

ಡಿ) ವಿಸಿ / ಒಎವಿಎಂ ಮೂಲಕ ಎಜಿಎಂಗೆ ಹಾಜರಾಗಲು ಮತ್ತು ಇ–ಮತದಾನದ ವಿಧಾನದ ಸೂಚನೆಗಳನ್ನು ತಮ್ಮ ಇಮೇಲ್ ವಿಳಾಸಗಳನ್ನು ನೋಂದಣಿ ಮಾಡಿಕೊಂಡಿರುವ ಮತ್ತು ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಅಥವಾ ತಮ್ಮ ಇಮೇಲ್ ವಿಳಾಸಗಳನ್ನು ನೋಂದಣಿ ಮಾಡಿಕೊಂಡಿಲ್ಲದ ಸದಸ್ಯರಿಗಾಗಿ ಎಜಿಎಂ ನೋಟಿಸ್‌ನಲ್ಲಿ ನೀಡಲಾಗಿದೆ.

ಬೆಂಗಳೂರಿನ, ಪ್ರಾಕ್ಟೀಸ್ ಮಾಡುತ್ತಿರುವ ಕಂಪನಿ ಸೆಕ್ರೆಟರಿ ಸಂಸ್ಥೆ ಮೆಸರ್ಸ್ ಬಿಎಂಪಿ & ಕೋ. ಎಲ್‌ಎಲ್‌ಪಿ ಯ ಸಿಎಸ್ ಪ್ರಮೋದ್, ಎಸ್ ಎಂ ಅಥವಾ ಅವರನ್ನು ಹೊರತುಪಡಿಸಿ ಸಿಎಸ್ ಬಿಸ್ವಜಿತ್ ಘೋಷ್ ಅವರನ್ನು ಪಾರದರ್ಶಕ ಮತ್ತು ನ್ಯಾಯೋಚಿತ ವಿಧಾನದಲ್ಲಿ ಎಜಿಎಂ ವೇಳೆ/ಮೊದಲು ರಿಮೋಟ್ ಇ–ಮತದಾನದ ಪ್ರಕ್ರಿಯೆಯನ್ನು ಪರಿಶೀಲಿಸಲು ತಪಾಸಕರನ್ನಾಗಿ ನೇಮಿಸಲಾಗಿದೆ.

ವೆಬ್‌ಕಾಸ್ಟ್ ಸೌಲಭ್ಯ:

ಎಜಿಎಂ ವಿವರಗಳ ವೆಬ್‌ಕಾಸ್ಟ್ ಸೌಲಭ್ಯವನ್ನು ಕಂಪನಿಯು ಒದಗಿಸುತ್ತದೆ ಎಂಬುದನ್ನು ಸದಸ್ಯರು ಗಮನಿಸಬಹುದು. ಎಜಿಎಂನಲ್ಲಿ ಭಾಗವಹಿಸಲು ಅರ್ಹರಾಗಿರುವ ಸದಸ್ಯರು ಲಿಂಕ್ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ವೆಬ್‌ಸೈಟ್ https://instameet.linkintime.co.in ನಲ್ಲಿ ತಮ್ಮ ಇ–ಮತದಾನದ ಲಾಗಿನ್ ವಿವರಗಳನ್ನು ಬಳಸಿಕೊಂಡು ವೀಕ್ಷಿಸಬಹುದು.

ವಿಸಿ ಸಭೆ, ರಿಮೋಟ್ ಇ–ಮತದಾನಕ್ಕೆ ಸಂಬಂಧಿಸಿದಂತೆ ಯಾವುದೇ ವಿಚಾರಣೆ / ಸ್ಪಷ್ಟನೆಗೆ / ದೂರು ಇದ್ದಲ್ಲಿ ಮತ್ತು ಎಜಿಎಂ ನೋಟಿಸ್ ಅನ್ನು ವಿಲೇವಾರಿ ಮಾಡಿದ ದಿನಾಂಕದ ನಂತರ ಕಂಪನಿ ಷೇರುಗಳನ್ನು ಖರೀದಿಸಿದ ಮತ್ತು ಕಟ್ ಆಫ್ ದಿನಾಂಕದಂದು ಷೇರುಗಳನ್ನು ಹೊಂದಿದ ಸದಸ್ಯರು ಈ ಮೇಲೆ ನಮೂದಿಸಿದ ಹಂತಗಳನ್ನು ಅನುಸರಿಸುವ ಮೂಲಕ ಬಳಕೆದಾರರ ಐಡಿ ಮತ್ತು ಪಾಸ್‌ವರ್ಡ್ ಪಡೆದುಕೊಳ್ಳಬಹುದು ಅಥವಾ rajesh.modi@sansera.in ಗೆ ಅಥವಾ enotices@linkintime.co.in ಗೆ ಇಮೇಲ್ ಕಳುಹಿಸಬಹುದು ಅಥವಾ 022 - 4918 6000 ಮತ್ತು 1800 22 44 30 ಗೆ ಸಂಪರ್ಕಿಸಬಹುದು.

ಮಂಡಳಿ ನಿರ್ದೇಶಕರ ಆದೇಶದ ಮೇರೆಗೆ
ಸನ್ಸೆರಾ ಇಂಜಿನಿಯರಿಂಗ್ ಲಿಮಿಟೆಡ್ ಪರವಾಗಿ
ಸಹಿ/–
ರಾಜೇಶ್ ಕುಮಾರ್ ಮೋದಿ
ಕಂಪನಿ ಕಾರ್ಯದರ್ಶಿ
ಸದಸ್ಯತ್ವ ಸಂ. ಎಫ್5176

ಸ್ಥಳ: ಬೆಂಗಳೂರು
ದಿನಾಂಕ: ಸೆಪ್ಟೆಂಬರ್ 02, 2024

Dr.AMBEDKAR INSTITUTE OF TECHNOLOGY
BDA Outer Ring Road, Mallathahally, Bengaluru – 560 056
Tel – 080- 23211232 & Mob No -9986003865

AIT/SS/886/2024-25 Date: 02.09.2024

SHORT- TERM TENDER NOTIFICATION

Sealed quotations are invited from Reputed/Authorized firms for supply & Installation of Firewall UTM appliance to support **1500 concurrent** users license for 1 year, 2 year and 3 years term to Dr. AIT Campus. Details and specification of requirements can be downloaded from college website **www.drait.edu.in.** The sealed quotation shall be attached with a DD of **Rs.500/-** and submit the sealed quotations on or before **20.09.2024 by 1.00 PM.** Quotations will be opened on the same day i.e. **20.09.2024 at 4.00 PM.**

Sd/- Principal Sd/- Secretary, PVPWT

ನೈರುತ್ಯ ರೈಲ್ವೆ

ಮುಕ್ತ ಟೆಂಡರ್ ನೋಟಿಸ್ ಸಂಖ್ಯೆ 20/ಎಸ್‌ಬಿಸಿ/24
ದಿನಾಂಕ: 27.08.2024 ಇ–ಟೆಂಡರಿಂಗ್ ಮೂಲಕ
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ವಿವರಣೆ	ಅಂದಾಜು ಮೌಲ್ಯ
ಎಸ್‌ಆರ್. ಡಿಇಎನ್/ ನಾರ್ಥ್/ಎಸ್‌ಬಿಸಿ ಸೆಕ್ಷನ್: ನಿಡವಂದ (ಎನ್‌ಡಿವಿ): ನಿಡವಂದ ಗೂಡ್ಸ್ ಶೆಡ್‌ನಲ್ಲಿ ಪ್ರಸ್ತಾವಿತ ಮೂಲಭೂತ ಸೌಕರ್ಯಗಳ ಪ್ರಮುಖ ಉನ್ನತೀಕರಣ/ಆಧುನೀಕರಣ ಕಾರ್ಯ. ನಿರ್ವಹಣೆ ಅವಧಿ 6 ತಿಂಗಳು.	ರೂ. 12,48,15,676

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 19.09.2024 ರಂದು 15.00 ಗಂಟೆಗಳವರೆಗೆ
ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ
ಹಿರಿಯ ವಿಭಾಗೀಯ ಇಂಜಿನಿಯರ್/ಕೋಆರ್ಡಿನೇಷನ್/ ಪಿಯುಬಿ/384/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂಆರ್/2024-25 ಬೆಂಗಳೂರು
South Western Railway - SWR SWRRLY SWRRLY

ನೈರುತ್ಯ ರೈಲ್ವೆ

ಮುಕ್ತ ಟೆಂಡರ್ ನೋಟಿಸ್ ಸಂಖ್ಯೆ: 19/ಎಸ್‌ಬಿಸಿ/24
ದಿನಾಂಕ: 23.08.2024 ಇ–ಟೆಂಡರ್ ಮೂಲಕ
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ವಿವರಣೆ	ಅಂದಾಜು ಮೌಲ್ಯ
ಎಸ್‌ಆರ್. ಡಿಇಎನ್/ನಾರ್ಥ್ /ಎಸ್‌ಬಿಸಿ ಸೆಕ್ಷನ್: ಸಬ್ ವರ್ಕ್ I: ಯಶವಂತಪುರ ಸಂಪಿಗೆ ರಸ್ತೆ ವಿಭಾಗ: ಹಳೆಯ ಎಲ್‌ಸಿ 43 (ಎಲ್‌ಎಚ್‌ಎಸ್ ಸಂಖ್ಯೆ 297/ಬಿ) ಕಿ ಮೀ 73/000–100 ರ ಭೀಮಸಂದ್ರದಲ್ಲಿ ಪ್ರಸ್ತಾಪಿತ ನಿಗದಿತ ಎತ್ತರದ ಸುರಂಗಮಾರ್ಗ. ಎಡಿಇಎನ್/ಯಶವಂತಪುರ ಉಪ ವಿಭಾಗದಲ್ಲಿ 1x5x2.25 ಗಾತ್ರದ ರೋಲಿಂಗ್/ ಲಾಂಚಿಂಗ್ ವಿಧಾನದಲ್ಲಿ ಆರ್‌ಸಿಸಿ ಬಾಕ್ಸ್. ಸಬ್ ವರ್ಕ್ II: ಯಶವಂತಪುರ ಸಂಪಿಗೆ ರಸ್ತೆ ವಿಭಾಗ: ಹಳೇ ಶೆಟ್ಟಿಹಳ್ಳಿಯಲ್ಲಿ ಪ್ರಸ್ತಾಪಿತ ಪಾದಚಾರಿ ಸುರಂಗ ಮಾರ್ಗ. ಎಡಿಇಎನ್/ ಯಶವಂತಪುರ ಉಪ ವಿಭಾಗದಲ್ಲಿ ಆರ್‌ಸಿಸಿ ಬಾಕ್ಸ್ ಗಾತ್ರ 1x4x2.25 ರೋಲಿಂಗ್/ ಲಾಂಚಿಂಗ್ ವಿಧಾನ. ನಿರ್ವಹಣೆ ಅವಧಿ ಆರು ತಿಂಗಳು ಅಥವಾ ಒಂದು ಮುಂಗಾರು ಅವಧಿ. ಇದರಲ್ಲಿ ಯಾವುದು ನಂತರವೋ ಅದು.	ರೂ.3,61,19,165

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 17.09.2024 ರಂದು 15.00 ಗಂಟೆಗಳವರೆಗೆ
ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ
ಹಿರಿಯ ವಿಭಾಗೀಯ ಇಂಜಿನಿಯರ್/ಕೋ ಆರ್ಡಿನೇಷನ್/ ಪಿಯುಬಿ/383/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂಆರ್/2024-25 ಬೆಂಗಳೂರು
South Western Railway - SWR SWRRLY SWRRLY

ಶ್ರೀರಾಮ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ.146, ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ರಸ್ತೆ, 7ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.
ಕೇಂದ್ರ ಕಛೇರಿ: 080–23364609, 23464713 ಶಾಖೆ: 080–23481556

ವಾರ್ಷಿಕ ಮಹಾಸಭೆಯ ನೋಟೀಸ್

ಮೇಲ್ಕಂಡ ಬ್ಯಾಂಕಿನ 2023–24ನೇ ಸಾಲಿನ ವಾರ್ಷಿಕ ಮಹಾಸಭೆಯು ದಿನಾಂಕ 22–09–2024ನೇ ಭಾನುವಾರ ಬೆಳಗ್ಗೆ 9.30 ಗಂಟೆಗೆ ಬ್ಯಾಂಕಿನ ಕೇಂದ್ರ ಕಛೇರಿಯ ಮುಂಭಾಗದಲ್ಲಿರುವ ಶ್ರೀರಾಮ ಮಂದಿರ ಟ್ರಸ್ಟ್‌ನ ಕಾಲೇಜಿನ ಸಭಾಂಗಣದಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸದಸ್ಯರಿಗೆ ಸಭೆಯ ನೋಟೀಸನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ನೋಟೀಸ್ ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಅಧಿಕೃತ ನೋಟೀಸ್ ಎಂದು ತಿಳಿದು ಮಾನ್ಯ ರೆಗ್ಯೂಲರ್ ಸದಸ್ಯರು ಕಡ್ಡಾಯವಾಗಿ ಬ್ಯಾಂಕಿನಿಂದ ನೀಡಿರುವ ಗುರುತಿನ ಚೀಟಿಯೊಂದಿಗೆ ಸಭೆಗೆ ಆಗಮಿಸಬೇಕಾಗಿ ವಿನಂತಿಸಲಾಗಿದೆ. 2024ರ ಅವಧಿಯಲ್ಲಿ ಕರ್ನಾಟಕ ಸ್ಟೇಟ್ ಬೋರ್ಡ್‌ನ SSLC/ II PUC ಪರೀಕ್ಷೆಯಲ್ಲಿ ಶೇ. 85 ಕ್ಕೂ ಹೆಚ್ಚು ಹಾಗೂ CBSE/ICSE ಯಲ್ಲಿ SSLC/ II PUC ಪರೀಕ್ಷೆಯಲ್ಲಿ ಶೇ. 80 ಕ್ಕೂ ಹೆಚ್ಚು ಅಂಕ ಗಳಿಸಿರುವ ಸದಸ್ಯರ/ಸಹ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರದ ಅರ್ಜಿಯನ್ನು ಬ್ಯಾಂಕಿನಲ್ಲಿ ವಿತರಿಸಲಾಗುತ್ತಿದೆ. ಭರ್ತಿ ಮಾಡಿದ ಅರ್ಜಿಯನ್ನು ಸ್ವೀಕರಿಸಲು ಅಂತಿಮ ದಿನಾಂಕ 12–09–2024ರ ಸಂಜೆ 6.00 ಗಂಟೆ ಆಗಿರುತ್ತದೆ.

ದಿನಾಂಕ: 03–09–2024 ಬೆಂಗಳೂರು.
ಶ್ರೀ. ಎಸ್.ಕೆ. ಕರಿಯಪ್ಪಗೌಡ ಅಧ್ಯಕ್ಷರು
ಶ್ರೀ. ಟಿ.ಎಸ್. ಗಂಗನರಸಿಂಹಯ್ಯ ಉಪಾಧ್ಯಕ್ಷರು
ಶ್ರೀ. ಜಿ. ಶ್ರೀನಿವಾಸ್ ಜನರಲ್ ಮ್ಯಾನೇಜರ್.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.

ಸಂ: ಬೆಂಅಪ್ರಾ/ನಯೋಸ/CLU-78/1246/2024–25 ದಿನಾಂಕ: 31.08.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ಕೈಗಾರಿಕೆ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ. ನಂ	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಹೆಚ್ ಯಶವಂತ ಶೈಣೈ ನಂ. 35, 3ನೇ ಮುಖ್ಯ ರಸ್ತೆ, ಅಶ್ವಿನಿ ಲೇಔಟ್, ಈಜಿಪುರ, ವಿವೇಕನಗರ, ಬೆಂಗಳೂರು–560046.	ಯಲಹಂಕ	ಯಲಹಂಕ	ಬ್ಯಾಟರಾಯನಪುರ	77/1	1ಎ–01ಗುಂ	ಕೈಗಾರಿಕೆ ವಲಯ	ವಸತಿ ಉಪಯೋಗ
					78/1	1ಎ–27ಗುಂ		
					78/2ಪಿ	1ಎ–25ಗುಂ		
					ಒಟ್ಟು	4ಎ–13ಗುಂ		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ಕೈಗಾರಿಕೆ ಉಪಯೋಗಕ್ಕೆ ಬಳಸಲು ಸಾಧ್ಯವಾಗುವುದಿಲ್ಲ. ಸದರಿ ಜಮೀನಿನ ಸುತ್ತಮುತ್ತ ವಾಸದ ಉದ್ದೇಶಕ್ಕಾಗಿ ಬೇಡಿಕೆ ಇದ್ದು, ಯೋಜಿತ ಬೆಳವಣಿಗೆಯ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಉದ್ಯೋಗವಕಾಶ ಕಲ್ಪಿಸಿದಂತಾಗುತ್ತದೆ. ವಸತಿ ಉದ್ದೇಶಕ್ಕೆ ಸಕ್ರಮ ಪ್ರಾಧೀಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ, ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **‘ಕೈಗಾರಿಕೆ’** ವಲಯದಿಂದ **‘ವಾಣಿಜ್ಯ’** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ – ಎಐಸಿಟಿಇ
(ಭಾರತ ಸರ್ಕಾರದ ಶಾಸನಬದ್ಧ ಅಂಗಸಂಸ್ಥೆ)
ನೆಲ್ಸನ್ ಮಂಡೇಲ ಮಾರ್ಗ, ವಸಂತಕುಂಜ್, ನವದೆಹಲಿ–110070
ವೆಬ್‌ಸೈಟ್: www.aicte-india.org ಫೋನ್: 011–29581000

ಎಐಸಿಟಿಇ ಪಿಜಿ (ಜಿಎಟಿಇ/ಸಿಇಇಡಿ) ಸ್ಕಾಲರ್‌ಶಿಪ್

2024-25

ಎಐಸಿಟಿಇ ಅನುಮೋದಿತ ಸಂಸ್ಥೆ/ಕಾರ್ಯಕ್ರಮಗಳಲ್ಲಿ ಪ್ರವೇಶ ಪಡೆದಿರುವ ಮತ್ತು ಎಂ.ಇ./ಎಂ.ಟೆಕ್./ಎಂ.ಡಿಸೈ ವಿಭಾಗಗಳಲ್ಲಿ **ಅನುಮೋದಿತ ಸಂಖ್ಯೆಯೊಳಗಿನ,** 2024–25ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿರುವ ಹಾಗೂ ಅಧಿಕೃತ ಜಿಎಟಿಇ/ಸಿಇಇಡಿ ಅಂಕಗಳೊಂದಿಗೆ ಅರ್ಹತೆ ಪಡೆದಿರುವ ವಿದ್ಯಾರ್ಥಿಗಳಿಗೆ ಡಿಬಿಟಿ ಮುಖಾಂತರ ಪೋಸ್ಟ್ ಗ್ರಾಜುಯೇಟ್ ಸ್ಕಾಲರ್‌ಶಿಪ್‌ಗಾಗಿ ಎಐಸಿಟಿಇ ಅನುಮೋದಿತ ಸಂಸ್ಥೆಗಳಿಂದ ಆನ್‌ಲೈನ್ ಪ್ರಸ್ತಾವಣೆಗಳನ್ನು ಆಹ್ವಾನಿಸಲಾಗಿದೆ.

ಮಾರ್ಗಸೂಚಿಗಳು/ಸೂಚನೆಗಳು/ಪದೇ ಪದೇ ಕೇಳಲಾಗುವ ಪ್ರಶ್ನೆಗಳು ಮತ್ತು ಆನ್‌ಲೈನ್ ನೋಂದಣಿ ಪ್ರಕ್ರಿಯೆ ಹಾಗೂ ವಿದ್ಯಾರ್ಥಿಯ ಅರ್ಹತಾ ಮಾನದಂಡಗಳು ಸೇರಿದಂತೆ ವಿವರವಾದ ಜಾಹೀರಾತು ಈ ಲಿಂಕ್‌ನಲ್ಲಿ ಲಭ್ಯವಿರುತ್ತದೆ:
https://www.pgscholarship.aicte-india.org

ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ ತಿಳಿಸುವುದು ಏನೆಂದರೆ, ಎಐಸಿಟಿಇ ಪಿಜಿ ಸ್ಕಾಲರ್‌ಶಿಪ್ ಪೋರ್ಟಲ್ **2ನೇ ಸೆಪ್ಟಂಬರ್ 2024ರಂದು** ಪ್ರಾರಂಭವಾಗುತ್ತದೆ ಮತ್ತು ವಿದ್ಯಾರ್ಥಿಗಳು **30ನೇ ನವಂಬರ್ 2024ರೊಳಗೆ** ಎಐಸಿಟಿಇ ಪಿಜಿ ಪೋರ್ಟಲ್‌ನಲ್ಲಿ ತಮ್ಮ ಮಾಹಿತಿಯನ್ನು ಅಪ್‌ಲೋಡ್ ಮಾಡಬಹುದು. ಅಲ್ಲದೆ, ಸಂಸ್ಥೆಗಳು **15ನೇ ಡಿಸೆಂಬರ್, 2024ರೊಳಗೆ** ಎಐಸಿಟಿಇ ಪಿಜಿ ಸ್ಕಾಲರ್‌ಶಿಪ್ ಪೋರ್ಟಲ್‌ನಲ್ಲಿ ವಿದ್ಯಾರ್ಥಿಗಳ ದಾಖಲಾತಿ ಪರಿಶೀಲನಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕೆಂದು ಕೋರಲಾಗಿದೆ.

cbc21300/12/0009/2425 ಸದಸ್ಯ ಕಾರ್ಯದರ್ಶಿ

ಬಾಗಲೂರು: ಅಭಿವೃದ್ಧಿಯ ಆಲಿಂಗಿಸಿದ 'ನವ್ಯ ಲೋಕ'

ಎಲ್ಲೆಲ್ಲೂ ಎದ್ದುಕಾಣುವ 'ಈ ಪ್ರದೇಶ ಬಾಡಿಗೆಗೆ ಇದೆ' ಎಂಬ ಫಲಕ



ಬಳ್ಳಾರಿ ರಸ್ತೆಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆ ಜೊತೆಗೆ ಹೆಣ್ಣೂರು ಮುಖ್ಯರಸ್ತೆಯ ಮೂಲಕ ನಿರ್ಮಾಣವಾಗುತ್ತಿರುವ 'ಹೊಸ ವಿಮಾನ ನಿಲ್ದಾಣ ರಸ್ತೆ'ಯಿಂದಲೂ ಸಂಪರ್ಕ ಹಾದಿಯನ್ನು ಹೊಂದಿರುವ ಬಾಗಲೂರು, ಬೆಂಗಳೂರಿನ ಕೇಂದ್ರ ಪ್ರದೇಶಗಳಿಗೂ ಪೈಪೋಟಿ ನೀಡುವಂತೆ ಅಭಿವೃದ್ಧಿಯ ಹಾದಿಯಲ್ಲಿದೆ. ಶಿಕ್ಷಣ, ಆರೋಗ್ಯ, ಕೈಗಾರಿಕೆ ವಸತಿ ಸೇರಿದಂತೆ ಎಲ್ಲ ರೀತಿಯ ಮೂಲಸೌಕರ್ಯಗಳನ್ನೂ ಒಳಗೊಂಡು 'ನಾಗರಿಕ ಹಬ್' ರೀತಿಯಲ್ಲಿ ಬೃಹತ್ ವಿಸ್ತೀರ್ಣದಲ್ಲಿ ಅಭಿವೃದ್ಧಿಯಾಗುತ್ತಿದೆ...

• ಆರ್. ಮಂಜುನಾಥ್

ಬೆಂಗಳೂರು: ಅಭಿವೃದ್ಧಿ ಪಥವನ್ನು ಆಲಿಂಗಿಸಿಕೊಂಡರೆ ನಗರದ ಅಂಚಿನಲ್ಲೂ 'ಹೊಸ ಲೋಕ'ವನ್ನೇ ಸೃಷ್ಟಿಸಿಕೊಳ್ಳಬಹುದು ಎಂಬುದಕ್ಕೆ ಬಾಗಲೂರು ಸ್ಪಷ್ಟ ಉದಾಹರಣೆಯಾಗಿ ಗೋಚರಿಸುತ್ತಿದೆ. ತನ್ನದೇ ಬ್ರ್ಯಾಂಡ್ ಸೃಷ್ಟಿಯಲ್ಲೂ ದಾಪುಗಾಲು ಹಾಕಿದೆ. ಬಾಗಲೂರಿನ ಅಭಿವೃದ್ಧಿಯ ವೇಗ ರಾಷ್ಟ್ರಮಟ್ಟದಲ್ಲಿ ಈಗ ಸದ್ದು ಮಾಡುತ್ತಿದೆ.

'ಐದಾರು ವರ್ಷಗಳ ಹಿಂದೆ ಈ ಪ್ರದೇಶದಲ್ಲಿ ಹಗಲು ವೇಳೆ ಕೂಡ ಓಡಾಡಲು ಒಂದು ರೀತಿಯಲ್ಲಿ ಭಯವೇ ಆಗುತ್ತಿತ್ತು. ಈಗ 24 ಗಂಟೆಗಳೂ ವಾಹನಗಳದ್ದೇ ಸಂಚಾರ. ಜನರ ಓಡಾಡದ ಜೊತೆಗೆ ವಾಹನ ದಟ್ಟಣೆಯೂ ಉಂಟಾಗುತ್ತಿದೆ. ಇಲ್ಲಿಯ ಅಭಿವೃದ್ಧಿಯನ್ನು ನೋಡಿದರೆ, ಹುಟ್ಟಿದಾಗಿನಿಂದ ನಾವಿದ್ದ ಸ್ಥಳವೇ ಇದು ಎಂದು ಪ್ರಶ್ನಿಸಿಕೊಳ್ಳುವಷ್ಟು ಹೆಮ್ಮೆ, ಸಂತೋಷ ಎರಡೂ ಆಗುತ್ತದೆ' ಎಂದು ಸ್ಥಳೀಯ ನಿವಾಸಿಗಳು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಬೆಂಗಳೂರು ನಗರ ಜಿಲ್ಲೆಯ ಗಡಿ ಭಾಗದಲ್ಲಿರುವ ಬಾಗಲೂರು ಪ್ರದೇಶ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಅಭಿವೃದ್ಧಿಪಡಿಸಿರುವ ಹಾರ್ಡ್‌ವೇರ್- ಸಾಫ್ಟ್‌ವೇರ್ ಪಾರ್ಕ್‌ಗೆ ಹೊಂದಿಕೊಂಡಂತಿದೆ. ಹೆಣ್ಣೂರು ಮಾರ್ಗವಾಗಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಿರ್ಮಿಸಲಾಗುತ್ತಿರುವ 'ಹೊಸ ವಿಮಾನ ನಿಲ್ದಾಣ' ರಸ್ತೆಯೂ ಬಾಗಲೂರು ಮೂಲಕವೇ ಹಾದುಹೋಗುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಹೊರ ಭಾಗದಲ್ಲಿರುವ ಬಾಗಲೂರು ಪ್ರದೇಶದಲ್ಲಿ ಇಂತಹ ಚಟುವಟಿಕೆಗಳು ಇಲ್ಲ ಎಂಬುದೇ ಇಲ್ಲ. ಅಭಿವೃದ್ಧಿ ಚಟುವಟಿಕೆಗಳು ಬಾಗಲೂರು ಮೂಲ ಗ್ರಾಮದ ಗಡಿಯನ್ನು ದಾಟಿ ಸುತ್ತಮುತ್ತಲಿನ ಪ್ರದೇಶಗಳಲ್ಲೂ ಗರಿಗೆದರಿವೆ.

ಬಾಗಲೂರು ಗ್ರಾಮದಲ್ಲಿ 'ಹೊಸ ವಿಮಾನ ನಿಲ್ದಾಣ ರಸ್ತೆ'ಯ ಅಭಿವೃದ್ಧಿ ಕಾಮಗಾರಿ ಮತ್ತೆ ಆರಂಭವಾಗಿರುವುದು ಇಡೀ ಪ್ರದೇಶದ ಚಿತ್ರಣವನ್ನೇ ಬದಲಿಸಿದೆ. ಹತ್ತು ವರ್ಷಗಳಿಂದ ಕೈಗಾರಿಕಾ ಪ್ರದೇಶಕ್ಕೆ ಸಂಪರ್ಕ ಕಲ್ಪಿಸಲು 50–60 ಅಡಿ ಅಗಲದ ರಸ್ತೆಯಿದ್ದ ಜಾಗದಲ್ಲಿ ಇದೀಗ 150 ಅಡಿಯ ವಿಶಾಲ ರಸ್ತೆ ನಿರ್ಮಾಣವಾಗುತ್ತಿದೆ. ಈ ರಸ್ತೆಯ ಅಕ್ಕಪಕ್ಕದ ಪ್ರದೇಶಗಳಲ್ಲಿ ಅಭಿವೃದ್ಧಿ ಹಾಗೂ ನಿರ್ಮಾಣ ಚಟುವಟಿಕೆಗಳು ಚುರುಕುಗೊಂಡಿವೆ. ಹಲವು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಖಾಸಗಿ ವಿಶ್ವವಿದ್ಯಾಲಯಗಳು ತಮ್ಮ ಪ್ರಮುಖ ಕಟ್ಟಡ ಹಾಗೂ ಕಚೇರಿಗಳನ್ನೂ ಈ ಭಾಗದಲ್ಲಿ ನಿರ್ಮಿಸಿವೆ.

ನಗರದ ಕೇಂದ್ರ ಭಾಗದಲ್ಲಿರುವ ಪ್ರತಿಷ್ಠಿತ ಖಾಸಗಿ ನಿರ್ಮಾಣ ಸಂಸ್ಥೆಗಳಲ್ಲದೆ ಅಂತರರಾಷ್ಟ್ರೀಯ ಖ್ಯಾತಿಯ ರಿಯಲ್ ಎಸ್ಟೇಟ್ ಕಂಪನಿಗಳೂ ಈ ಭಾಗದಲ್ಲಿ ಗಗನಚುಂಬಿ ಅಪಾರ್ಟ್‌ಮೆಂಟ್‌ಗಳನ್ನು ಸಾವಿರಾರು ಸಂಖ್ಯೆಯಲ್ಲಿ ನಿರ್ಮಿಸುತ್ತಿವೆ. 2ಬಿಎಚ್‌ಕೆ ಫ್ಲ್ಯಾಟ್‌ಗೆ ಕನಿಷ್ಠ ₹1 ಕೋಟಿ ದರವಿದೆ. ಕೆಲವು ವರ್ಷಗಳ ಹಿಂದೆ ಫ್ಲ್ಯಾಟ್‌ಗಳನ್ನು ವೀಕ್ಷಿಸಲು ಜನರಿಗಾಗಿ ಸಂಸ್ಥೆಗಳು ಕಾಯುತ್ತಿದ್ದವು. ಆದರೆ ಇತ್ತೀಚಿನ ದಿನಗಳಲ್ಲಿ ಬೃಹತ್ ಅಪಾರ್ಟ್‌ಮೆಂಟ್‌ಗಳ ವೀಕ್ಷಣೆಗಾಗಿ ನಾಗರಿಕರು ಕಾಯಬೇಕಾದ ಸ್ಥಿತಿ ಇದೆ. ಅಷ್ಟೊಂದು ಸಂಖ್ಯೆಯಲ್ಲಿ ಜನರು ಖರೀದಿಯ ಹುಮ್ಮಸ್ಸು ಹೊಂದಿದ್ದಾರೆ. ವಾರಾಂತ್ಯದಲ್ಲಿ ನಿರ್ಮಾಣ ಹಂತದಲ್ಲಿರುವ ಅಪಾರ್ಟ್‌ಮೆಂಟ್‌ಗಳಲ್ಲಿ ನೂರಾರು ಸಂಖ್ಯೆಯಲ್ಲಿ ಜನರಿರುತ್ತಾರೆ ಎಂದು ಬಾಗಲೂರು ನಿವಾಸಿ ರಾಮಚಂದ್ರ ಮಾಹಿತಿ ನೀಡಿದರು.

ಬಾಡಿಗೆಯ ಫಲಕ: ಬಾಗಲೂರು ಸುತ್ತಮುತ್ತಲಿನ ಪ್ರದೇಶದಲ್ಲಿ ಕಾಂಪೌಂಡ್ ಹಾಕಿರುವ ಸಾಕಷ್ಟು ಸ್ಥಳಗಳು ಕಾಣಸಿಗುತ್ತವೆ. ಇಂತಹ ಬಹುತೇಕ ಸ್ಥಳಗಳಲ್ಲಿ 'ಈ ಪ್ರದೇಶ ಬಾಡಿಗೆಗೆ ಲಭ್ಯವಿದೆ' ಎಂಬ ಫಲಕವನ್ನೂ ಕಾಣಬಹುದಾಗಿದೆ. ಮೂಲ ಮಾಲೀಕರು ಅಥವಾ ಒಂದಷ್ಟು ವರ್ಷಗಳ ಹಿಂದೆ ಖರೀದಿ ಮಾಡಿರುವವರು ಈಗ ಮಾರಾಟ ಮಾಡಲು ಬಯಸುತ್ತಿಲ್ಲ. ಬದಲಿಗೆ ಅದರಿಂದ ಒಂದಷ್ಟು ಹಣ ಗಳಿಸಿಕೊಂಡು, ಮುಂದೆ ಹಲವು ಪಟ್ಟು ಲಾಭ ಮಾಡಿಕೊಳ್ಳಲು ಇಚ್ಛಿಸಿದ್ದಾರೆ ಎಂಬ ವಿಷಯ ಅಲ್ಲಿನ ಕೆಲವರೊಂದಿಗೆ ಮಾತುಕತೆಯಿಂದ ತಿಳಿದುಬಂದಿತು.

'ವಿಮಾನ ನಿಲ್ದಾಣ ರಸ್ತೆಯಿಂದ ಅಭಿವೃದ್ಧಿ ಚುರುಕು'

'2010ರಲ್ಲಿ ಕೆಐಎಡಿಬಿಯವರು ಕೈಗಾರಿಕಾ ಪ್ರದೇಶಕ್ಕಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ನಂತರ ಬಾಗಲೂರು– ಬಂಡಿಕೊಡಿಗೇಹಳ್ಳಿಯಲ್ಲಿ ಅಭಿವೃದ್ಧಿ ಚಟುವಟಿಕೆಗಳು ಆರಂಭವಾದವು. ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಾಗಲೂರು ಮಾರ್ಗವಾಗಿ ಹೊಸ ರಸ್ತೆ ನಿರ್ಮಾಣ ಕಾಮಗಾರಿ ಆರಂಭವಾದ ಸಮಯದಿಂದ ಈ ಭಾಗದಲ್ಲಿ ರಿಯಲ್ ಎಸ್ಟೇಟ್ ಚಟುವಟಿಕೆಗಳು ಹೆಚ್ಚಾದವು. ಕಳೆದ ನಾಲ್ಕೈದು ವರ್ಷದಿಂದ ಈ ಪ್ರದೇಶದಲ್ಲಿ ಬೃಹತ್ ಕಟ್ಟಡಗಳು ಬಂದವು. ಬೃಹತ್ ವಸತಿ ಸಮುಚ್ಚಯಗಳೂ ನಿರ್ಮಾಣವಾಗಿವೆ, ಇನ್ನೂ ಹಲವು ನಿರ್ಮಾಣ ಹಂತದಲ್ಲಿವೆ. ಹಳ್ಳಿಯಂತಿದ್ದ ಬಾಗಲೂರು, ಬೆಂಗಳೂರಿನ ಕೇಂದ್ರ ಭಾಗದಲ್ಲಿರುವ ಯಾವ ಪ್ರದೇಶಕ್ಕೂ ಕಡಿಮೆ ಇಲ್ಲದಂತೆ ಅಭಿವೃದ್ಧಿ ಕಾಣುತ್ತಿದೆ' ಎಂದು ಸ್ಥಳೀಯ ನಿವಾಸಿ ಬಿ.ಎನ್. ಚಂದ್ರಶೇಖರ್ ಅವರು ಅಭಿಪ್ರಾಯಪಟ್ಟರು.

ವಾಣಿಜ್ಯ -, ವಸತಿ ಬಾಡಿಗೆ ಹೆಚ್ಚಳ

'ಬಾಗಲೂರು ಪ್ರದೇಶದಲ್ಲಿ ವಾಣಿಜ್ಯ ಮಳಿಗೆಗಳು ಹಾಗೂ ಮನೆಗಳ ಬಾಡಿಗೆ ಹೆಚ್ಚಾಗುತ್ತಿದೆ. ಕೈಗಾರಿಕಾ ಪ್ರದೇಶಗಳಲ್ಲಿ ಕಾರ್ಖಾನೆಗಳು ಹೆಚ್ಚಾಗುತ್ತಿರುವುದರಿಂದ ಜನವಸತಿಯೂ ವೃದ್ಧಿಯಾಗುತ್ತಿದೆ. ಹಲವು ರೀತಿಯ ಅಭಿವೃದ್ಧಿಗಳನ್ನು ಕಾಣುತ್ತಿದ್ದರೂ, ಕೆಲವು ಮೂಲಸೌಕರ್ಯದ ಕೊರತೆ ಇದ್ದೇ ಇದೆ. ಗ್ರಾಮ ಪಂಚಾಯಿತಿಯವರು ಮೂಲಸೌಕರ್ಯ ಅಭಿವೃದ್ಧಿಗೆ ಪ್ರಯತ್ನಿಸುತ್ತಿದ್ದರೂ ಅದು ನಿರೀಕ್ಷಿತ ಮಟ್ಟದಲ್ಲಿ ಇಲ್ಲ' ಎಂದು ಮೌಸಿನಾ ಹೇಳಿದರು.

ಬಾಗಲೂರು ಮುಖ್ಯ ವೃತ್ತ ಪ್ರಜಾವಾಣಿ ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

ಬಾಗಲೂರು ಪ್ರದೇಶಾಭಿವೃದ್ಧಿ ಉತ್ತೇಜನಕ್ಕೆ ಅಂಶಗಳು

- ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಎರಡು ರಸ್ತೆಗಳಿಂದಲೂ ಬಾಗಲೂರಿಗೆ ಹಾದಿ
- ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ 12 ಕಿ.ಮೀ. ದೂರ
- ಕೆಐಎಡಿಬಿಯ ಕೈಗಾರಿಕೆ ಪ್ರದೇಶಕ್ಕೆ ಹೊಂದಿಕೊಂಡಿರುವ ಪ್ರದೇಶ
- ಮೂಲಗ್ರಾಮದ ಅಭಿವೃದ್ಧಿ ಜೊತೆಗೆ ಪ್ರಮುಖ ರಸ್ತೆಗಳ ಅಭಿವೃದ್ಧಿ
- ಹೊಸ ವಿಮಾನ ರಸ್ತೆಯ ಇಕ್ಕೆಲಗಳಲ್ಲಿ ಎಲ್ಲ ರೀತಿಯ ವಾಣಿಜ್ಯ ಚಟುವಟಿಕೆ
- ವಸತಿಗಾಗಿ ಕೈಗಾರಿಕೋದ್ಯಮಿಗಳು, ಉದ್ಯೋಗಿಗಳಿಂದ ಹೆಚ್ಚಾದ ಬೇಡಿಕೆ

ಅರಣ್ಯ ಒತ್ತುವರಿ ತೆರವು ಮಾಹಿತಿ ನೀಡಲು ಖಂಡ್ರೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪಶ್ಚಿಮಘಟ್ಟ ಮತ್ತು ಇತರ ಘಟ್ಟ ಪ್ರದೇಶಗಳಲ್ಲಿ ಅರಣ್ಯ ಒತ್ತುವರಿ ತೆರವು ಕಾರ್ಯಪಡೆ ಕಳೆದ ಒಂದು ತಿಂಗಳಲ್ಲಿ ಒತ್ತುವರಿ ತೆರವು ಮಾಡಿರುವ ವಲಯವಾರು ವಿವರಗಳನ್ನು ಚಿತ್ರಸಹಿತ ಸಲ್ಲಿಸಲು ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚಿಸಿದ್ದಾರೆ.

2015ರ ನಂತರದ ಅರಣ್ಯ ಒತ್ತುವರಿ ತೆರವುಗೊಳಿಸಲು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಅರಣ್ಯ ಕಾರ್ಯಪಡೆ ಮುಖ್ಯಸ್ಥರ ನೇತೃತ್ವದಲ್ಲಿ ಕಾರ್ಯಪಡೆ ರಚಿಸಲಾಗಿತ್ತು.

ಅರಣ್ಯವಾಸಿ ಅನುಸೂಚಿತ ಬುಡಕಟ್ಟಿನ ವ್ಯಕ್ತಿ ಅಥವಾ ಇತರೆ ಪಾರಂಪರಿಕ ಅರಣ್ಯವಾಸಿಗಳು ಅರ್ಜಿ ಹಾಕಿದ್ದಲ್ಲಿ ಅದು ಸುಪ್ರೀಂ ಕೋರ್ಟ್ ಆದೇಶದ ಅನ್ವಯ ಪುನರ್ ಪರಿಶೀಲನೆಗೆ ಬಾಕಿ ಇಲ್ಲದ ಪ್ರಕರಣಗಳನ್ನು ಖಾತ್ರಿ ಪಡಿಸಿಕೊಂಡು ಅರಣ್ಯ ಒತ್ತುವರಿಯನ್ನು ಈ ಕೆಳಕಂಡ ಆದ್ಯತೆಯಲ್ಲಿ ತೆರವು ಮಾಡಬೇಕು ಎಂದೂ ಖಂಡ್ರೆ ನಿರ್ದೇಶನ ನೀಡಿದ್ದಾರೆ.

ಅಲ್ಲದೇ, 64ಎ ಪ್ರಕ್ರಿಯೆ ಬಾಕಿ ಅಥವಾ ನ್ಯಾಯಾಲಯಗಳಲ್ಲಿ ಪ್ರಕರಣ ಬಾಕಿ ಇದ್ದಲ್ಲಿ ಅವುಗಳ ತ್ವರಿತ ವಿಲೇವಾರಿಗೆ ಕ್ರಮ ಕೈಗೊಂಡು ಒತ್ತುವರಿ ತೆರವು ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಕುನ್ಹಾ ಸಮಿತಿಗೆ 8 ತಿಂಗಳು ಹೆಚ್ಚು ಸಮಯ: ಸಚಿವ

ಪ್ರಜಾವಾಣಿ ವಾರ್ತೆ

ತುಮಕೂರು: ಕೋವಿಡ್ ಸಮಯದಲ್ಲಿ ನಡೆದಿರುವ ಹಗರಣ ಸಂಬಂಧ ತನಿಖೆಗೆ ನೇಮಿಸಿರುವ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಡಿ ಕುನ್ಹಾ ಸಮಿತಿಯ ಕಾಲಾವಧಿಯನ್ನು ಇನ್ನೂ ಎಂಟು ತಿಂಗಳು ವಿಸ್ತರಿಸಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಮಿತಿ ಮಧ್ಯಂತರ ವರದಿ ನೀಡಿದ್ದು, ಅಂತಿಮ ವರದಿ ಸಲ್ಲಿಸಲು ಸಮಯಾವಕಾಶ ಬೇಕಾಗಿದೆ. ಹಾಗಾಗಿ ಮತ್ತಷ್ಟು ಕಾಲಾವಕಾಶ ನೀಡಲಾಗಿದೆ' ಎಂದರು.

'ಬಿಜೆಪಿಯವರು ಮುಡಾ ವಿಚಾರ ಮುಂದಿಟ್ಟುಕೊಂಡು ಹೋರಾಟ ಆರಂಭಿಸಿದ ನಂತರ ಹಿಂದಿನ ಸರ್ಕಾರದ ಹಗರಣಗಳ ಬಗ್ಗೆ ತನಿಖೆ ನಡೆಸಲು ಮುಂದಾಗಿಲ್ಲ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಸಮಯದಲ್ಲೇ ಬಿಜೆಪಿ ಸರ್ಕಾರದ ಅವಧಿಯ ಹಗರಣಗಳ ತನಿಖೆ ನಡೆಸಲಾಗುವುದು ಎಂದು ಹೇಳಿದ್ದೇವೆ. ಕುನ್ಹಾ ಸಮಿತಿಯನ್ನು ನಿನ್ನೆ, ಮೊನ್ನೆ ನೇಮಿಸಿದ್ದಲ್ಲ. ಸಾಕಷ್ಟು ಹಿಂದೆಯೇ ನೇಮಕ ಮಾಡಿದ್ದು, ಈಗ ಮಧ್ಯಂತರದ ವರದಿ ನೀಡಿದೆ' ಎಂದು ಹೇಳಿದರು.

ಜಿ.ಪರಮೇಶ್ವರ

'ಸಚಿವ ಸತೀಶ್ ಜಾರಕಿಹೊಳಿ ಜತೆ ಒಟ್ಟಿಗೆ ಊಟ ಮಾಡಿ ರಾಜಕೀಯ ವಿಚಾರ ಚರ್ಚಿಸಿದ್ದೇನೆ. ಈಗ ಆ ವಿವರಗಳನ್ನು ಬಹಿರಂಗ ಪಡಿಸಲು ಸಾಧ್ಯವಿಲ್ಲ. ಮುಖ್ಯಮಂತ್ರಿ ಬದಲಾವಣೆ ಮಾಡಬೇಕಾದ ಸಮಯ ಬಂದಾಗ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುತ್ತದೆ. ಸದ್ಯಕ್ಕೆ ಅಂತಹ ಪರಿಸ್ಥಿತಿ ನಿರ್ಮಾಣವಾಗಿಲ್ಲ. ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ' ಎಂದು ಸ್ಪಷ್ಟಪಡಿಸಿದರು.

ಗುತ್ತಿಗೆದಾರ ಸಂಘದವರು ಮಾಡಿರುವ ಶೇ 40ರಷ್ಟು ಕಮಿಷನ್ ಆರೋಪಕ್ಕೆ ಪ್ರತಿಕ್ರಿಯಿಸಿ, 'ಹಿಂದೆಯೂ ಇಂತಹ ಟೀಕೆ, ಆರೋಪಗಳು ಬಂದಿದ್ದವು. ಈಗಲೂ ಮಾಡುತ್ತಿದ್ದಾರೆ. ಅವರ ಆರೋಪಕ್ಕೆ ಸಮರ್ಪಕ ದಾಖಲೆಗಳಿದ್ದರೆ ಸಂಬಂಧಪಟ್ಟವರ ಬಳಿ ದೂರು ನೀಡಲಿ' ಎಂದು ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾಮಗಾರಿ ಸ್ಥಗಿತ; ಬುಧವಾರ ಉಪವಾಸ ಸತ್ಯಾಗ್ರಹ

ಗುತ್ತಿಗೆದಾರರ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಕಿ ಉಳಿದಿರುವ ಶೇಕಡ 25ರಷ್ಟು ಬಿಲ್ ಪಾವತಿ ಮಾಡಬೇಕೆಂದು ಆಗ್ರಹಿಸಿ ಬಿಬಿಎಂಪಿ ಗುತ್ತಿಗೆದಾರರ ಸಂಘದ ಸದಸ್ಯರು ಎಲ್ಲ ರೀತಿಯ ಕಾಮಗಾರಿಗಳನ್ನು ಸ್ಥಗಿತಗೊಳಿಸಿ ಸೋಮವಾರ ಪ್ರತಿಭಟಿಸಿದರು.

ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಸೇರಿದ್ದ ನೂರಾರು ಗುತ್ತಿಗೆದಾರರು, ಬಾಕಿ ಪಾವತಿಸುವಂತೆ ಪ್ರತಿಭಟನೆ ನಡೆಸಿದರು.

'ರಾಜ್ಯ ಸರ್ಕಾರ ಹಾಗೂ ಬಿಬಿಎಂಪಿ ಅನುದಾನದಲ್ಲಿ ಪೂರ್ಣಗೊಳಿಸಿರುವ ಕಾಮಗಾರಿಗಳಿಗೆ 2021ರಿಂದ ಗುತ್ತಿಗೆದಾರಿಗೆ ಬಿಲ್‌ಗಳನ್ನು ಪಾವತಿಸಲಾಗುತ್ತಿದೆ. ಆದರೆ ಇದರಲ್ಲಿ ಶೇ 25ರಷ್ಟನ್ನು ಹಿಡಿದಿಟ್ಟುಕೊಳ್ಳಲಾಗಿದೆ. ಪಾವತಿಸಿರುವ ಹಣದಲ್ಲೇ ಜಿಎಸ್‌ಟಿ ಸೇರಿದಂತೆ ಎಲ್ಲ ರೀತಿಯ ಕಟಾವುಗಳನ್ನೂ ಮಾಡಲಾಗಿದೆ. ಹೀಗಾಗಿ ಹಲವು ತೊಂದರೆ ಉಂಟಾಗುತ್ತಿದೆ' ಎಂದು ಗುತ್ತಿಗೆದಾರರು ಹೇಳಿದರು.

'ಬಾಕಿ ಉಳಿದಿರುವ ಮೊತ್ತವನ್ನು ಪಾವತಿಸುವಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಹಲವು ಬಾರಿ ಮನವಿ ಸಲ್ಲಿಸಲಾಗಿದೆ. ಇಂದೂ ಅವರಿಗೆ ಮನವಿ ನೀಡಿದ್ದೇವೆ. ಆದರೆ, ಈವರೆಗೂ ಅದು ಈಡೇರಿಲ್ಲ' ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಿ.ಎಂ. ನಂದಕುಮಾರ್ ತಿಳಿಸಿದರು.

ಬಾಕಿ ಬಿಲ್ ಪಾವತಿಸುವಂತೆ ಆಗ್ರಹಿಸಿ ಬಿಬಿಎಂಪಿ ಗುತ್ತಿಗೆದಾರರು ಸೋಮವಾರ ಪ್ರತಿಭಟನೆ ನಡೆಸಿದರು

'ಬಿಲ್ ಪಾವತಿ ವಿಳಂಬದಿಂದ ಬ್ಯಾಂಕ್ ಸೇರಿದಂತೆ ವಿವಿಧೆಡೆಯಿಂದ ಹಣ ತಂದಿರುವ ಗುತ್ತಿಗೆದಾರರು ಬಡ್ಡಿ ಪಾವತಿಸುತ್ತಿದ್ದಾರೆ. ಇದು ಹೆಚ್ಚಾಗುತ್ತಿರುವುದರಿಂದ ಆರ್ಥಿಕ ಸಂಕಷ್ಟದಲ್ಲಿದ್ದಾರೆ' ಎಂದರು.

ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಟಿ. ಮಂಜುನಾಥ್ ನೇತೃತ್ವದಲ್ಲಿ ಸದಸ್ಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

'ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಪ್ರತಿಭಟನೆ ನಡೆಸುವಂತಿಲ್ಲ. ಸ್ವಾತಂತ್ರ್ಯ ಉದ್ಯಾನದಲ್ಲಿ ಅನುಮತಿ ಪಡೆದು ಪ್ರತಿಭಟಿಸಬಹುದು' ಎಂದು ಹೇಳಿದ ಪೊಲೀಸರು, ನೂರಾರು ಗುತ್ತಿಗೆದಾರರನ್ನು ವಶಕ್ಕೆ ಪಡೆದು, ಬಸ್‌ಗಳಲ್ಲಿ ಚಾಮರಾಜಪೇಟೆ ಮೈದಾನಕ್ಕೆ ಕೊಂಡೊಯ್ದರು. ಮಧ್ಯಾಹ್ನದ ನಂತರ ಅವರನ್ನು ಬಿಡುಗಡೆ ಮಾಡಿದರು.

ರಾಜ್ಯ ಸಂಘದಿಂದ ಬೆಂಬಲ

ಬಿಲ್ ಪಾವತಿಸುವಂತೆ ಒತ್ತಾಯಿಸಿ ಬಿಬಿಎಂಪಿ ಗುತ್ತಿಗೆದಾರರು ಸಂಘ ನಡೆಸುತ್ತಿರುವ ಪ್ರತಿಭಟನೆಗೆ ರಾಜ್ಯ ಗುತ್ತಿಗೆದಾರರ ಸಂಘವೂ ಬೆಂಬಲ ಸೂಚಿಸಿದೆ.'ಗುತ್ತಿಗೆದಾರರ ಸಂಕಷ್ಟವನ್ನು ಪರಿಗಣಿಸಿ ಸರ್ಕಾರ ಕೂಡಲೇ ಬಾಕಿ ಬಿಲ್ ಪಾವತಿಸಬೇಕು' ಎಂದು ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಹಾಗೂ ಪ್ರಧಾನ ಕಾರ್ಯದರ್ಶಿ ಎಂ. ರವೀಂದ್ರ ಆಗ್ರಹಿಸಿದ್ದಾರೆ.

'ಬಾಕಿ ಬಿಲ್ ಪಾವತಿಸುವಂತೆ ಆಗ್ರಹಿಸಿ, ರಸ್ತೆ ಗುಂಡಿ ಮುಚ್ಚುವುದು ಸೇರಿದಂತೆ ಎಲ್ಲ ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗಿದೆ. ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರದಿಂದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹವನ್ನೂ ಆರಂಭಿಸಲಿದ್ದೇವೆ. ರಾಜ್ಯದ ಎಲ್ಲ ಗುತ್ತಿಗೆದಾರರ ಬೆಂಬಲವೂ ನಮಗೆ ಲಭಿಸಿದೆ' ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಿ.ಎಂ. ನಂದಕುಮಾರ್ ತಿಳಿಸಿದರು.

'ಮತ್ತೊಬ್ಬ ಕೆಲಸ ಮಾಡುತ್ತಾನೆ'

'ಗುತ್ತಿಗೆದಾರರು ಪ್ರತಿಭಟನೆ ಮಾಡುತ್ತೇನೆ, ಕೆಲಸ ಮಾಡುವುದಿಲ್ಲ ಎಂದು ಹೇಳಿದರೆ, ಮತ್ತೊಬ್ಬ ಬಂದು ಕೆಲಸ ಮಾಡುತ್ತಾನೆ. ಸರ್ಕಾರವನ್ನು ಯಾರೂ ಬ್ಲಾಕ್ ಮೇಲ್ ಮಾಡಬಾರದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದರು.

ಬಿಬಿಎಂಪಿ ಗುತ್ತಿಗೆದಾರರು ಬಿಲ್ ಬಾಕಿ ಬಗ್ಗೆ ಪ್ರತಿಭಟನೆ ಹಮ್ಮಿಕೊಂಡಿರುವ ಬಗ್ಗೆ ಸುದ್ದಿಗಾರರು ಕೇಳಿದಾಗ, 'ಗುತ್ತಿಗೆದಾರರ ನೋವು ನನಗೂ ಅರ್ಥವಾಗುತ್ತದೆ. ಶೇ 50ರಷ್ಟಿದ್ದ ಬಿಲ್ ಬಾಕಿಯನ್ನು ಶೇ 25ಕ್ಕೆ ಇಳಿಸಿದ್ದೇನೆ. ಒಂದಷ್ಟು ಭಾಗ ನಾಗಮೋಹನದಾಸ್ ಆಯೋಗದ ಮುಂದಿದೆ. ಅದು ಇತ್ಯರ್ಥವಾದ ನಂತರ ಕಾನೂನಾತ್ಮಕವಾಗಿ ಸಾಧ್ಯವಾಗುವ ಸಹಾಯ ಮಾಡಲಾಗುವುದು' ಎಂದು ಹೇಳಿದರು.

ಅಭಿನಂದನಾ ಸಮಾರಂಭದಲ್ಲಿ ಸಾಹಿತಿ ಎಸ್‌.ಜಿ.ಸಿದ್ಧರಾಮಯ್ಯ ಬಣ್ಣನೆ

'ಕನ್ನಡದ ಅಂತರರಾಷ್ಟ್ರೀಯ ಕವಿ ಶಿವಪ್ರಕಾಶ್'

ಬೆಂಗಳೂರು: 'ಚರಿತ್ರೆ, ಪುರಾಣವನ್ನು ಮುರಿದು ಕಟ್ಟುವ ಪ್ರಕ್ರಿಯೆಯಲ್ಲಿ ಪಂಪ, ರನ್ನ, ಕುವೆಂಪು ಅವರ ಸಾಲಿಗೆ ಕವಿ ಎಚ್.ಎಸ್.ಶಿವಪ್ರಕಾಶ್ ಕೂಡ ಸೇರುತ್ತಾರೆ. ಟಿಪ್ಪು ಸುಲ್ತಾನ್, ಮಂಟೇಸ್ವಾಮಿ ಸೇರಿದಂತೆ ಅವರ ಹಲವು ಕೃತಿಗಳಲ್ಲೂ ಇದನ್ನು ಕಾಣಬಹುದು' ಎಂದು ಸಾಹಿತಿ ಎಸ್.ಜಿ.ಸಿದ್ಧರಾಮಯ್ಯ ಅಭಿಪ್ರಾಯಪಟ್ಟರು.

ಸಿರಿವರ ಕಲ್ಚರಲ್ ಅಕಾಡೆಮಿ ಮತ್ತು ಅನನ್ಯ ಕ್ರಿಯೇಶನ್ಸ್ ಸಹಯೋಗದಲ್ಲಿ ಸೋಮವಾರ ನಡೆದ 'ಮಂಟೇಸ್ವಾಮಿ ಕಥಾ ಪ್ರಸಂಗ' ಪ್ರದರ್ಶನದ ಕಾರ್ಯಕ್ರಮದಲ್ಲಿ ಕವಿ ಎಚ್.ಎಸ್. ಶಿವಪ್ರಕಾಶ್ ಅವರನ್ನು ಸನ್ಮಾನಿಸಿ ಮಾತನಾಡಿದರು.

'ಶಿವಪ್ರಕಾಶ್ ಅವರು ಜಗತ್ತನ್ನು ಸುತ್ತುತ್ತಾ, ಹೊರ ದೇಶದ ವಿಶ್ವವಿದ್ಯಾಲಯಗಳಲ್ಲಿ ಕನ್ನಡದ ಪ್ರಜ್ಞೆಯನ್ನು ಪಸರಿಸಿದ್ದಾರೆ. ಹಾಗಾಗಿ ಅವರು ಕನ್ನಡದ ಅಂತರರಾಷ್ಟ್ರೀಯ ಕವಿ' ಎಂದರು.

ಸಂಗೀತ ನಿರ್ದೇಶಕ ಹಂಸಲೇಖ ಮಾತನಾಡಿ, 'ಮಂಟೇಸ್ವಾಮಿ ಕಥಾ ಪ್ರಸಂಗವನ್ನು ಶಿವಪ್ರಕಾಶ್ ಅವರು ಸರಳವಾಗಿ ಬರೆದಿದ್ದಾರೆ. 12 ಶತಮಾನದಲ್ಲಿ ಬಸವಣ್ಣನವರು ಕಾಯಕವೇ ಕೈಲಾಸ ಎಂದರು. ಅಂದು ಸನಾತನಿಗಳು ಪೂಜೆಯೇ ಕಾಯಕ ಎಂದರು. ಮಂಟೇಸ್ವಾಮಿ, ಕಾಯಕ ಮತ್ತು ಪೂಜೆ ಎರಡನ್ನೂ ಒಳಗೊಂಡ ಸುಂದರವಾದ ಸೂತ್ರವನ್ನು ಕೊಟ್ಟಿದ್ದಾರೆ' ಎಂದು ಪ್ರತಿಪಾದಿಸಿದರು.

ಸಿರಿವರ ಕಲ್ಚರ್ ಅಕಾಡೆಮಿ ಹಾಗೂ ಅನನ್ಯ ಕ್ರಿಯೇಷನ್ಸ್ ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕವಿ ಎಚ್.ಎಸ್. ಶಿವಪ್ರಕಾಶ್ ಅವರನ್ನು ಸನ್ಮಾನಿಸಲಾಯಿತು. ರವೀಂದ್ರನಾಥ ಸಿರಿವರ, ಎಸ್‌.ಜಿ. ಸಿದ್ಧರಾಮಯ್ಯ, ತೇಜಸ್ವಿನಿ ಹಂಸಲೇಖ, ಲತಾ ಹಂಸಲೇಖ ಮತ್ತು ಹಂಸಲೇಖ ಹಾಜರಿದ್ದರು —ಪ್ರಜಾವಾಣಿ ಚಿತ್ರ

'ಬಸವಣ್ಣನವರಿಗೆ ಜನಿವಾರ ಹಾಕಿ, ಸನಾತನ ಧರ್ಮಕ್ಕೆ ಸೇರಿಸುವ ಪಿತೂರಿಯಾಗಿ 'ವಚನ ದರ್ಶನ' ಬಂದಿದೆ. ಹಿಂದಿನಿಂದಲೂ ವೈದಿಕ ಪರಂಪರೆ ಹೀಗೆ ದಾಳಿ ಮಾಡುತ್ತಾ ಬಂದಿದೆ. ಕಬ್ಬಿಣ ನಮ್ಮ ಚಿನ್ನ, ಕೌಶಲ ನಮ್ಮ ಬಲ, ಕಪ್ಪು ನಮ್ಮ ಗುರುತು, ಕಾಯಕ ನಮ್ಮ ವಿಳಾಸ ಎಂದು ಮಂಟೇಸ್ವಾಮಿ ಹೇಳುತ್ತಾರೆ. ನಾವು ಕಾಯಕ ಮಾಡುತ್ತಾ, ಇಂಥ ದಾಳಿಗಳನ್ನು ಎದುರಿಸಬೇಕು. ಈ ಕಾರ್ಯಕ್ರಮವೇ 'ವಚನ ದರ್ಶನ'ದ ಖಂಡನಾ ಸಭೆಯಾಗಲಿ. ತಂಬೂರಿ ಮೀಟೋಣ, ವಚನ ದರ್ಶನವನ್ನು ಸುಡೋಣ' ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಶಿವಪ್ರಕಾಶ್, 'ಮೊದಲ ಬಾರಿಗೆ ಈ ನಾಟಕ ಪ್ರದರ್ಶನವಾದಾಗ ಇಷ್ಟೊಂದು ಜನಪ್ರಿಯವಾಗುತ್ತದೆ ಎಂದು ಕೊಂಡಿರಲಿಲ್ಲ. ಈಗಾಗಲೇ 700 ಪ್ರದರ್ಶನಗಳನ್ನು ಕಂಡಿದೆ. ಇದು ನನ್ನ ಹಿರಿಮೆ, ಗರಿಮೆಯನ್ನು ಹೆಚ್ಚಿಸಿದೆ. ಅದಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸುವೆ' ಎಂದರು.

ಗಾಯಕಿ ಲತಾ ಹಂಸಲೇಖಾ ಮತ್ತು ಕುಟುಂಬದವರು ಶಿವಪ್ರಕಾಶ್ ಅವರನ್ನು ಅಭಿನಂದಿಸಿದರು. ರಾಜೇಶ್ ಮತ್ತು ತಂಡದವರು ಶಿವಪ್ರಕಾಶ್ ಅವರಿಗೆ ತಂಬೂರಿಯನ್ನು ಉಡುಗೊರೆಯಾಗಿ ನೀಡಿದರು.

ಭಕ್ತಿಯ ಜತೆಗೆ ಜ್ಞಾನವೂ ಅಗತ್ಯ

ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇವಸ್ಥಾನಗಳಿಗೆ ಹೋಗುವಾಗ ಅಥವಾ ಹೋದಾಗ ಅಲ್ಲಿನ ವಾಸ್ತುಶಿಲ್ಪ, ಆಚರಣೆ, ಇತಿಹಾಸವನ್ನು ತಿಳಿದುಕೊಳ್ಳಬೇಕು. ಭಕ್ತಿಯ ಜತೆಗೆ ಜ್ಞಾನವೂ ಅಗತ್ಯ' ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ ಸಹಯೋಗದಲ್ಲಿ 'ಅಭಿಜ್ಞಾನ' ಪ್ರಕಾಶನವು ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸಾ.ಕೃ. ರಾಮಚಂದ್ರ ರಾವ್ ಅವರ 'ತಿರುಪತಿ ತಿಮ್ಮಪ್ಪ' ಕೃತಿ ಬಿಡುಗಡೆ ಮಾಡಿ, ಮಾತನಾಡಿದರು.

'ದೇವಸ್ಥಾನಗಳಲ್ಲಿ ಸಿಗದ ಮಾಹಿತಿ ಪುಸ್ತಕಗಳಲ್ಲಿ ದೊರೆಯುತ್ತಿರುವುದು ನಮ್ಮ ಸೌಭಾಗ್ಯ. ದೇವಸ್ಥಾನಗಳಿಗೆ ಹೋದಾಗ ಭಕ್ತಿಯಿಂದ ದೇವರ ದರ್ಶನ ಮಾಡುವ ಜತೆಗೆ ಅಲ್ಲಿನ ವಿಶೇಷತೆ ಬಗ್ಗೆಯೂ ತಿಳಿದುಕೊಳ್ಳಬೇಕು. ಈ ಮೂಲಕ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು' ಎಂದರು. ಬೇಲಿಮಠದ ಶಿವರುದ್ರ ಸ್ವಾಮೀಜಿ, 'ನಾವು ಮೌನ ಧ್ವನಿಯಲ್ಲಿ ಭಗವಂತನನ್ನು ಕಾಣಬೇಕು. ಈ ಕೃತಿಯು ಸ್ಪಷ್ಟ ಮಾರ್ಗದರ್ಶಕ ಸೂತ್ರವಾಗಿದ್ದು, ಭಗವಂತನ ವಾಸ್ತವ ಸತ್ಯವನ್ನು ಕಟ್ಟಿಕೊಟ್ಟಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೃತಿ ಬಗ್ಗೆ ಮಾತನಾಡಿದ ಕರ್ನಾಟಕ ರಾಜ್ಯಮುಕ್ತ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ಮುಖ್ಯಸ್ಥ ಶಲ್ವಪಿಳ್ಳೈ ಅಯ್ಯಂಗಾರ್, 'ತಿರುಪತಿಯ ಸಮಗ್ರ ಇತಿಹಾಸ, ಜಾನಪದ, ನಂಬಿಕೆ, ಗುಡಿ ಎಲ್ಲದರ ಬಗ್ಗೆ ತಿಳಿಸಲಾಗಿದೆ. ತಿರುಪತಿಯ ಬಗ್ಗೆ ಅಧ್ಯಯನ ಮಾಡಲು ಇದು ಆಕರ ಗ್ರಂಥವಾಗಲಿದೆ' ಎಂದರು.

ರಾಮಚಂದ್ರ ರಾವ್ ಅವರ ಜೀವನ ಮತ್ತು ಸಾಧನೆ ಬಗ್ಗೆ ವಿದ್ವಾಂಸ ಟಿ.ವಿ. ವೆಂಕಟಾಚಲ ಶಾಸ್ತ್ರಿ ಮಾತನಾಡಿದರು.

'ಶಾಸಕರ ಭವನದಲ್ಲಿ ನಾಯಿ ಹಾವಳಿ'

ಹಾವೇರಿ: 'ಬೆಂಗಳೂರಿನ ಶಾಸಕರ ಭವನದಲ್ಲಿ ನಾಯಿಗಳ ಹಾವಳಿ ಹೆಚ್ಚಾಗಿರುವ ಬಗ್ಗೆ ಶಾಸಕರು ದೂರು ನೀಡಿದ್ದು, ಆ ಸಮಸ್ಯೆಯನ್ನು ಬಗೆಹರಿಸಬೇಕಿದೆ' ಎಂದು ವಿಧಾನಸಭೆಯ ಉಪಸಭಾಪತಿ ರುದ್ರಪ್ಪ ಲಮಾಣಿ ಹೇಳಿದರು.

ಇಲ್ಲಿ ಸೋಮವಾರ ತಾಲ್ಲೂಕು ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, 'ಸವಣೂರು ತಾಲ್ಲೂಕಿನಲ್ಲಿ 4 ತಿಂಗಳಲ್ಲಿ 551 ಮಂದಿಗೆ ನಾಯಿ ಕಡಿತದಿಂದ ಗಾಯವಾಗಿದೆ. ಹಾವೇರಿ ತಾಲ್ಲೂಕಿನಲ್ಲೂ ಪ್ರಕರಣ ಹೆಚ್ಚಿವೆ' ಎಂದರು.

'ನಾಯಿಗಳನ್ನು ಹಿಡಿದು ಬೇರೆಡೆ ಬಿಡಲು ಪ್ರಯತ್ನಿಸಿದರೆ, ಪ್ರಾಣಿ ದಯಾ ಸಂಘದವರು ಆಕ್ಷೇಪಿಸುತ್ತಾರೆ. ನಾಯಿಗಳ ಸ್ಥಳಾಂತರ ವಿಷಯ ದೊಡ್ಡ ಸಮಸ್ಯೆಯಾಗಿದೆ ಎಂದು ಶಾಸಕರು ದೂರಿದ್ದಾರೆ.

Karnataka Golf Association
No.1, Golf Avenue, Kodihalli, Bengaluru - 560 008.

NOTICE

Notice is hereby given under Rule 19.7 of the Karnataka Golf Association read in conjunction with section 11 (3) of the Karnataka Societies Registration Act 1960 that a Special General Meeting of the Karnataka Golf Association will be held on **Friday** the **27th Sept 2024** at **4:00 PM** at the KGA Club House to consider and pass certain resolutions circulated to Members individually.

Sd/-
Col. C P Nanjappa (Retd)
Hon. Secretary

Date: 03.09.2024
Place: Bengaluru

ಒಳ ಮೀಸಲಾತಿ ಅನುಷ್ಠಾನಕ್ಕೆ ಆಗ್ರಹಿಸಿ ಪ್ರತಿಭಟನೆ 9ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಸಮುದಾಯಗಳಿಗೆ ಸುಪ್ರೀಂ ಕೋರ್ಟ್ ತೀರ್ಪಿನಂತೆ ಒಳ ಮೀಸಲಾತಿ ಜಾರಿಗೊಳಿಸುವಂತೆ ರಾಜ್ಯ ಸರ್ಕಾರವನ್ನು ಆಗ್ರಹಿಸಲು ಸೆಪ್ಟೆಂಬರ್ 9ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ತಿಳಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಎನ್. ಮೂರ್ತಿ, 'ಸರ್ಕಾರ ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯ (ಟಿಎಸ್‌ಪಿ) ಅನುದಾನ ದುರ್ಬಳಕೆ ಮಾಡಿಕೊಂಡಿರುವ ಹಣವನ್ನು ಕೂಡಲೇ ಸಮುದಾಯದ ಅಭಿವೃದ್ಧಿಗೆ ಹಿಂದಿರುಗಿಸಬೇಕು' ಎಂದು ಒತ್ತಾಯಿಸಿದರು.

'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಕಡಿತ ಹಾಗೂ ರದ್ದುಗೊಳಿಸಿರುವ ಪ್ರಬುದ್ಧ ಯೋಜನೆ ಮರು ಜಾರಿಗೊಳಿಸಬೇಕು' ಎಂದು ಆಗ್ರಹಿಸಿದರು.

ಬಿಬಿಎಂಪಿ ವಲಯದಲ್ಲಿ 2,795 ರಸ್ತೆಗುಂಡಿ • ದುರಸ್ತಿಗೆ ₹660 ಕೋಟಿ ವೆಚ್ಚ

'ದೆಹಲಿ ರಸ್ತೆಗಿಂತ ಬೆಂಗಳೂರು ರಸ್ತೆ ಉತ್ತಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೆಹಲಿಯ ರಸ್ತೆಗಳಿಗಿಂತ ಬೆಂಗಳೂರಿನ ರಸ್ತೆಗಳು ಎಷ್ಟೋ ಪಾಲು ಚೆನ್ನಾಗಿವೆ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಬೆಂಗಳೂರಿನಲ್ಲಿ ರಸ್ತೆ ಗುಂಡಿಗಳು ಹೆಚ್ಚುತ್ತಿರುವ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, 'ಇತ್ತೀಚೆಗೆ ದೆಹಲಿಗೆ ಭೇಟಿ ನೀಡಿದಾಗ ಮುಖ್ಯರಸ್ತೆಗಳನ್ನು ಬಿಟ್ಟು ಒಳ ರಸ್ತೆಗಳಲ್ಲಿ ಓಡಾಡಿದೆ. ಅಲ್ಲಿನ ರಸ್ತೆಗಳಿಗಿಂತ ನಾವೇ ಎಷ್ಟೋ ಮುಂದಿದ್ದೇವೆ. ಹಾಗೆಂದು ಟೀಕೆ ಮಾಡುವುದಿಲ್ಲ. ಅಲ್ಲಿನ ಪರಿಸ್ಥಿತಿ ಬೇರೆಯೇ ಇರಬಹುದು' ಎಂದರು.

'ಬಿಬಿಎಂಪಿ ವಲಯದಲ್ಲಿ 2,795 ರಸ್ತೆಗುಂಡಿಗಳನ್ನು ಗುರುತಿಸಲಾಗಿದೆ. ಎಲ್ಲ ರಸ್ತೆ ಗುಂಡಿಗಳನ್ನು ಮುಂದಿನ 15 ದಿನಗಳಲ್ಲಿ ಸಂಪೂರ್ಣವಾಗಿ ಮುಚ್ಚಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ₹ 660 ಕೋಟಿ ವೆಚ್ಚದಲ್ಲಿ ಪ್ರಮುಖ ರಸ್ತೆಗಳನ್ನು ದುರಸ್ತಿ ಕೆಲಸ ಕೈಗೆತ್ತಿಕೊಳ್ಳಲಾಗುವುದು' ಎಂದು ತಿಳಿಸಿದರು.

ಡಿ.ಕೆ. ಶಿವಕುಮಾರ್

'ಮಳೆ ಬಂದ ತಕ್ಷಣ ನಗರದಾದ್ಯಂತ ಕೆಲವೆಡೆ ವಸತಿ ಪ್ರದೇಶಗಳಿಗೆ ನೀರು ನುಗ್ಗಿ ಜನರಿಗೆ ತೊಂದರೆ ಉಂಟಾಗುತ್ತಿತ್ತು. ಅವುಗಳನ್ನು ಭಾಗಶಃ ಸರಿಪಡಿಸಲಾಗಿದೆ' ಎಂದರು.

ಹಳೇ ಬೈಕ್‌ನಲ್ಲಿ ರಸ್ತೆ ವೀಕ್ಷಣೆ: 'ರಸ್ತೆಗಳ ವೀಕ್ಷಣೆಗೆಂದೇ ನನ್ನ ಹಳೆಯ ಬೈಕ್ ದುರಸ್ತಿ ಮಾಡಿಸಿದ್ದೇನೆ. ಅಧಿಕಾರಿಗಳು ಮುಖ್ಯರಸ್ತೆಗಳನ್ನು ಮಾತ್ರ ತೋರಿಸುತ್ತಾರೆ. ಒಳ ರಸ್ತೆಗಳನ್ನು ಬೈಕ್‌ನಲ್ಲಿ ಓಡಾಡಿ ನಾನು ವೀಕ್ಷಿಸುತ್ತೇನೆ. ಜೊತೆಗೆ ಆಯುಕ್ತರನ್ನು ಕುಳ್ಳಿರಿಸಿಕೊಂಡು ಒಂದು ಸುತ್ತು ಹೋಗುತ್ತೇನೆ' ಎಂದು ಶಿವಕುಮಾರ್ ಹೇಳಿದರು.

ಸಾರ್ವಜನಿಕರಿಗಾಗಿ 'ರಸ್ತೆ ಗುಂಡಿ ಗಮನ' ಎನ್ನುವ ತಂತ್ರಾಂಶವನ್ನು ಪರಿಚಯಿಸಿದ್ದು, ಅದರಲ್ಲಿ ಗುಂಡಿಗಳ ಫೋಟೊ ತೆಗೆದು ಅಪ್‌ಲೋಡ್ ಮಾಡುವ ವ್ಯವಸ್ಥೆ ರೂಪಿಸಲಾಗಿದೆ ಎಂದರು.

'30 ಅಡಿ ರಸ್ತೆ': 'ರಾಜಕಾಲುವೆಯ 50 ಮೀ. ಸುತ್ತಳತೆಯಲ್ಲಿ ಯಾವುದೇ ನಿರ್ಮಾಣ ಕಾರ್ಯಗಳನ್ನು ಮಾಡುವಂತಿಲ್ಲ ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ನಿಯಮಗಳು ಸೇರಿದಂತೆ ಕೆಲವು ನಿಯಮಗಳಿವೆ. ಪ್ರಸ್ತುತ 300 ಕಿ.ಮೀ ಅನ್ನು ಗುರುತಿಸಿ 30 ಅಡಿ ರಸ್ತೆ ನಿರ್ಮಿಸಲಾಗುವುದು. ಭೂಮಿ ಬಿಟ್ಟುಕೊಡುವ ಖಾಸಗಿ ಜಮೀನುಗಳ ಮಾಲೀಕರಿಗೆ ಪರಿಹಾರವಾಗಿ ಟಿಡಿಆರ್ ನೀಡಲಾಗುವುದು' ಎಂದು ಶಿವಕುಮಾರ್ ಹೇಳಿದರು.

'ಹೆಬ್ಬಾಳ, ನಾಗವಾರ, ಬೆಳ್ಳಂದೂರು ಅಕ್ಕಪಕ್ಕ, ಬೆಂಗಳೂರು ದಕ್ಷಿಣ ಭಾಗದಲ್ಲಿ ಒಂದಷ್ಟು ಕಡೆ ಭೂಮಿ ಗುರುತಿಸಲಾಗಿದೆ. ಮೊದಲ ಹಂತದಲ್ಲಿ 100 ಕಿ.ಮೀ ಕೆಲಸ ಮಾಡಲಾಗುವುದು. ಇದಕ್ಕೆ ₹200 ಕೋಟಿ ಅನುದಾನ ಮೀಸಲಿಡಲಾಗಿದೆ. ಈ ವಿಚಾರವನ್ನು ಸಚಿವ ಸಂಪುಟ ಸಭೆ ಹಾಗೂ ವಿರೋಧ ಪಕ್ಷಗಳ ನಾಯಕರ ಜೊತೆ ನಡೆದ ಸಭೆಗಳಲ್ಲೂ ಪ್ರಸ್ತಾಪಿಸಲಾಗಿದೆ. ಈ ರಸ್ತೆಗಳಲ್ಲಿ ಬಸ್ ಓಡಾಟಕ್ಕೆ ಅವಕಾಶವಿಲ್ಲ. ಬದಲಾಗಿ ಶಾಲಾ, ನಾಗರಿಕರ ವಾಹನಗಳ ಓಡಾಟಕ್ಕೆ ಅವಕಾಶ ನೀಡಲಾಗುವುದು' ಎಂದು ವಿವರಿಸಿದರು.

'ನಂಬಿಕೆ ನಕ್ಷೆ' ಯೋಜನೆ ಜಾರಿ

'ಬಿಬಿಎಂಪಿ ವ್ಯಾಪ್ತಿಯಲ್ಲಿ 4 ಸಾವಿರ ಚದರ ಅಡಿ (50X80) ವಿಸ್ತೀರ್ಣದ ವರೆಗಿನ ನಿವೇಶನದಲ್ಲಿ ಕಟ್ಟಡ ನಿರ್ಮಿಸಲು ಆನ್‌ಲೈನ್ ಮೂಲಕ ನಕ್ಷೆ ಮಂಜೂರಾತಿ ವ್ಯವಸ್ಥೆ 'ನಂಬಿಕೆ ನಕ್ಷೆ' ಯೋಜನೆ ಜಾರಿಗೆ ತರಲಾಗುತ್ತಿದೆ' ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಕಟ್ಟಡ ನಕ್ಷೆಯನ್ನು ಅನುಮೋದಿತ ಕಟ್ಟಡ ವಿನ್ಯಾಸಕಾರರು ಅಥವಾ ಎಂಜಿನಿಯರ್‌ಗಳಿಂದ ಅನುಮೋದಿಸಿಕೊಂಡು, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಮಂಜೂರಾತಿ ಪಡೆದುಕೊಳ್ಳುವ ಯೋಜನೆ ಇದಾಗಿದೆ' ಎಂದರು.

'ಬಿಡಿಎ, ಗೃಹ ನಿರ್ಮಾಣ ಸಂಘದವರು 50X80 ಅಡಿ ವಿಸ್ತೀರ್ಣದ ವರೆಗಿನ ನಿವೇಶನಗಳನ್ನೇ ಹೆಚ್ಚು ಅಭಿವೃದ್ಧಿಪಡಿಸಿದ್ದಾರೆ. ಇಷ್ಟು ವಿಸ್ತೀರ್ಣದ ನಿವೇಶನದಲ್ಲಿ ಮನೆ ನಿರ್ಮಾಣ ಮತ್ತು ನವೀಕರಣಕ್ಕೆ ಜನರು ಯಾವುದೇ ತೊಂದರೆ ಇಲ್ಲದೆ ಮುಂದಾಗಬಹುದು. ಅನುಮೋದಿತ ಲೆಕ್ಕ ಪರಿಶೋಧಕರಂತೆ, ಅನುಮೋದಿತ ಎಂಜಿನಿಯರ್‌ಗಳು ಹಾಗೂ ಕಟ್ಟಡ ವಿನ್ಯಾಸಕಾರರ ಮೂಲಕ ತಾತ್ಕಾಲಿಕ ಕಟ್ಟಡ ನಕ್ಷೆಗೆ ಅನುಮತಿ ನೀಡಲಾಗುವುದು. ನಂತರ ಬಿಬಿಎಂಪಿ ಎಂಜಿನಿಯರ್‌ಗಳು ಪರಿಶೀಲಿಸಲಿದ್ದಾರೆ' ಎಂದು ತಿಳಿಸಿದರು.

'ಮೊದಲು ಬಿಬಿಎಂಪಿಯ ಎರಡು ವಲಯಗಳಲ್ಲಿ ಪ್ರಾಯೋಗಿಕವಾಗಿ ಈ ಯೋಜನೆಯನ್ನು ಜಾರಿಗೆ ತರಲಾಗಿತ್ತು. ಈಗ ಎಲ್ಲ ವಲಯಗಳಿಗೆ ವಿಸ್ತರಿಸಲಾಗುತ್ತಿದೆ. ಇದರಿಂದ ಜನರು ಪಾಲಿಕೆಗೆ ಅಲೆಯುವುದು ತಪ್ಪಲಿದೆ' ಎಂದರು.

ಬಿಎಸ್‌ಪಿ ತೊರೆಯಲು ರಾಜ್ಯ ಸಮಿತಿ ನಿರ್ಧಾರ: ಮುನಿಯಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿಯ ಒಳಮೀಸಲಾತಿಗೆ ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ರಾಷ್ಟ್ರೀಯ ಅಧ್ಯಕ್ಷೆ ಮಾಯಾವತಿ ವಿರೋಧ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ರಾಜ್ಯದ ಮುಖಂಡರು ಪಕ್ಷ ತೊರೆಯಲು ನಿರ್ಧರಿಸಿದ್ದೇವೆ' ಎಂದು ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪರಿಶಿಷ್ಟ ಜಾತಿ ಸಮುದಾಯಕ್ಕೆ ಒಳಮೀಸಲಾತಿ ನೀಡುವ ಸುಪ್ರೀಂ ಕೋರ್ಟ್ ತೀರ್ಪನ್ನು ಮಾಯಾವತಿ ವಿರೋಧಿಸಿದ್ದಾರೆ. ಈ ಬಗ್ಗೆ ಕರ್ನಾಟಕದ ಬಿಎಸ್‌ಪಿ ಮುಖಂಡರು ಹಾಗೂ ರಾಷ್ಟ್ರೀಯ ಮುಖಂಡರಲ್ಲಿ ಭಿನ್ನಾಭಿಪ್ರಾಯ ಇದೆ' ಎಂದರು.

'ಜನಸಂಖ್ಯೆಗೆ ಅನುಗಣವಾಗಿ ಒಳಮೀಸಲಾತಿ ನೀಡಲು ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗವು ಮಾಡಿರುವ ಶಿಫಾರಸುಗಳು ಡಾ.ಬಿ.ಆರ್. ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯ ಹಾಗೂ ಸಂವಿಧಾನದಲ್ಲಿ ಪ್ರತಿಪಾದಿಸುವ ತತ್ವಗಳಿಗೆ ಅನ್ವಯವಾಗಿವೆ.

ಮಾರಸಂದ್ರ ಮುನಿಯಪ್ಪ

ಈ ಕುರಿತು ಚರ್ಚಿಸುವ ಉದ್ದೇಶದಿಂದ ಮಾಯಾವತಿ ಅವರನ್ನು ಭೇಟಿಯಾಗುವುದಕ್ಕಾಗಿ ಲಖನೌಗೆ ತೆರಳಿದ್ದ ಬಿಎಸ್‌ಪಿ ರಾಜ್ಯ ನಿಯೋಗಕ್ಕೆ ಅವಕಾಶ ನೀಡದೇ ಅವಮಾನಿಸಲಾಗಿದೆ' ಎಂದು ದೂರಿದರು.

'ಅಂಬೇಡ್ಕರ್, ಕಾನ್ಶಿರಾಮ್ ಸಿದ್ಧಾಂತದಿಂದ ಬಿಎಸ್‌ಪಿ ದೂರ ಸರಿದಿದೆ. ಅಲ್ಲದೇ ಪಕ್ಷವು ತನ್ನ ಪ್ರಜಾಸತ್ತಾತ್ಮಕ ಸ್ವರೂಪವನ್ನು ಕಳೆದುಕೊಂಡಿದೆ. ಆದ್ದರಿಂದ, ಬಹುಜನ ಸಮಾಜದಲ್ಲಿರುವ ದುರ್ಬಲ ಸಮುದಾಯಗಳ ಅಳಲು ಅರಣ್ಯರೋಧನವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಬಿಎಸ್‌ಪಿ ಕರ್ನಾಟಕ ರಾಜ್ಯ ಸಮಿತಿಯ ಪದಾಧಿಕಾರಿಗಳು ಕೂಡಲೇ ಪಕ್ಷವನ್ನು ತೊರೆಯುವ ನಿರ್ಧಾರ ಕೈಗೊಂಡಿದ್ದೇವೆ' ಎಂದು ಹೇಳಿದರು.

ರಾಜ್ಯ ಸಂಯೋಜಕ ಎಂ. ಗೋಪಿನಾಥ್, ಪ್ರಧಾನ ಕಾರ್ಯದರ್ಶಿಗಳಾದ ಆರ್. ಮುನಿಯಪ್ಪ, ಕೆ.ಬಿ.ವಾಸು ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿದ್ದರು.

ಎರಡು ದಿನದಲ್ಲಿ ದೋಷಾರೋಪ ಪಟ್ಟಿ ಸಲ್ಲಿಕೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ತನಿಖೆಯನ್ನು ಬಹುತೇಕ ಪೂರ್ಣಗೊಳಿಸಿರುವ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಎರಡು ದಿನಗಳ ಒಳಗೆ ದೋಷಾರೋಪ ಪಟ್ಟಿ ಸಲ್ಲಿಸುವ ಸಾಧ್ಯತೆಯಿದೆ' ಎಂದು ಮೂಲಗಳು ತಿಳಿಸಿವೆ.

ಜೂನ್ 9ರಂದು ಪಟ್ಟಣಗೆರೆಯ ಶೆಡ್‌ನಲ್ಲಿ ರೇಣುಕಸ್ವಾಮಿ ಅವರ ಕೊಲೆ ನಡೆದಿತ್ತು. ಸೆಪ್ಟೆಂಬರ್ 9ಕ್ಕೆ ಕೃತ್ಯ ನಡೆದು ಮೂರು ತಿಂಗಳು ಪೂರ್ಣಗೊಳ್ಳಲಿದ್ದು, ಅದರ ಒಳಗಾಗಿ ದೋಷಾರೋಪ ಪಟ್ಟಿ ಸಲ್ಲಿಸಬೇಕಿದೆ. ತನಿಖಾಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ ಎಂದು ಗೊತ್ತಾಗಿದೆ.

ಕೊಲೆ ಆರೋಪದಡಿ ನಟ ದರ್ಶನ್ ಹಾಗೂ ಅವರ ಆಪ್ತೆ ಪವಿತ್ರಾಗೌಡ ಸೇರಿ 17 ಮಂದಿಯನ್ನು ಬಂಧಿಸಲಾಗಿತ್ತು.

ರೇಣುಕಸ್ವಾಮಿ

ದರ್ಶನ್

ಪವಿತ್ರಾ ಗೌಡ

ತನಿಖೆ ಹಂತದಲ್ಲಿ ಲಭಿಸಿದ ಎಲ್ಲ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿದ್ದ ತನಿಖಾಧಿಕಾರಿಗಳು ಹೈದರಾಬಾದ್ ಹಾಗೂ ಬೆಂಗಳೂರಿನ ವಿಧಿವಿಜ್ಞಾನ ಪ್ರಯೋಗಾಲಯಗಳಿಗೆ (ಎಫ್‌ಎಸ್‌ಎಲ್) ರವಾನಿಸಿದ್ದರು. ಎಲ್ಲ ವರದಿಗಳೂ ಪೊಲೀಸರ ಕೈಸೇರಿದ್ದು, 4,500ಕ್ಕೂ ಹೆಚ್ಚು ಪುಟಗಳ ದೋಷಾರೋಪ ಪಟ್ಟಿ ಸಿದ್ಧ ಮಾಡಿಕೊಂಡಿದ್ದಾರೆ. 240ಕ್ಕೂ ಅಧಿಕ ಸಾಕ್ಷಿಗಳ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

'ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿ ಇರುವ ನಟ ದರ್ಶನ್ ಅವರು ಇದುವರೆಗೂ ಜಾಮೀನು ಕೋರಿ ಅರ್ಜಿ ಸಲ್ಲಿಸಿಲ್ಲ. ದೋಷಾರೋಪ ಪಟ್ಟಿ ಸಲ್ಲಿಕೆಯಾದ ನಂತರ ಅರ್ಜಿ ಸಲ್ಲಿಸಲಾಗುವುದು. ಪವಿತ್ರಾ ಗೌಡ ಅವರ ಜಾಮೀನು ಅರ್ಜಿಯನ್ನು 57ನೇ ನಗರ ಸಿವಿಲ್ ನ್ಯಾಯಾಲಯವು ವಜಾಗೊಳಿಸಿದೆ' ಎಂದು ಮೂಲಗಳು ಹೇಳಿವೆ.

ತನಿಖಾಧಿಕಾರಿಯಾಗಿ ಚಂದ್ರಗುಪ್ತ

ರಾಜ್ಯದ ಕಾರಾಗೃಹಗಳಲ್ಲಿರುವ ವ್ಯವಸ್ಥೆ ಪರಿಶೀಲಿಸಿ ವರದಿ ನೀಡಲು ಸಿಸಿಬಿ ಜಂಟಿ ಪೊಲೀಸ್ ಕಮಿಷನರ್ ಚಂದ್ರಗುಪ್ತ ಅವರನ್ನು ನೇಮಿಸಲಾಗಿದೆ.

ಅಲ್ಲದೇ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ದರ್ಶನ್ ಅವರಿಗೆ ನೀಡಿದ್ದ ವಿಶೇಷ ಆತಿಥ್ಯ ಪ್ರಕರಣದ ತನಿಖೆಯನ್ನೂ ಚಂದ್ರಗುಪ್ತ ಅವರು ತನಿಖೆ ನಡೆಸಲಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಮೂರು ಪ್ರಕರಣಗಳು ದಾಖಲಾಗಿವೆ. ವಿಶೇಷ ಆತಿಥ್ಯ ನೀಡಿದ್ದ ಆರೋಪದ ಅಡಿ ಒಂಬತ್ತು ಮಂದಿ ಜೈಲು ಸಿಬ್ಬಂದಿಯನ್ನು ಅಮಾನತು ಮಾಡಲಾಗಿತ್ತು.

ಕಾರಾಗೃಹದಲ್ಲಿ ದರ್ಶನ್ ವಿಡಿಯೊ ಕರೆ ಮಾಡಿ ಮಾತನಾಡಿರುವುದು, ಸಿಗರೇಟು ಸೇದುತ್ತಾ ರೌಡಿಶೀಟರ್ ವಿಲ್ಸನ್ ಗಾರ್ಡನ್ ನಾಗ, ಕುಳ್ಳ ಸೀನನ ಜತೆಗೆ ಹರಟೆ ಹೊಡೆಯುತ್ತಿದ್ದ ಪ್ರಕರಣದ ತನಿಖೆಯನ್ನೂ ಚಂದ್ರಗುಪ್ತ ನಡೆಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ನರ್ಸಿಂಗ್ ಕಾಲೇಜು ಶುಲ್ಕ ನಿಯಂತ್ರಣಕ್ಕೆ ಪ್ರಾಧಿಕಾರ

ಬೆಂಗಳೂರು: ರಾಜ್ಯದಲ್ಲಿ ನರ್ಸಿಂಗ್ ಕಾಲೇಜುಗಳ ಶುಲ್ಕ ನಿಯಂತ್ರಣಕ್ಕೆ ಪ್ರಾಧಿಕಾರ ರಚಿಸಲಾಗುವುದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ ಅವರು ಹೇಳಿದರು.

'ನರ್ಸಿಂಗ್ ಕಾಲೇಜುಗಳಲ್ಲಿ ಅಧಿಕ ಶುಲ್ಕ ವಸೂಲು ಮಾಡುತ್ತಿರುವ ಬಗ್ಗೆ ನಮ್ಮ ಕಚೇರಿಗೆ ಹಲವಾರು ದೂರುಗಳು ಸಲ್ಲಿಕೆಯಾಗಿವೆ. ಇದರಿಂದ ವಿದ್ಯಾರ್ಥಿಗಳಿಗೆ ಹಣಕಾಸಿನ ಹೊರೆ ಆಗುವುದನ್ನು ತಪ್ಪಿಸಲು ವೈದ್ಯಕೀಯ ಶಿಕ್ಷಣ ಇಲಾಖೆಯ ಜಂಟಿ ಕಾರ್ಯದರ್ಶಿಗಳ ನೇತೃತ್ವದಲ್ಲಿ ಶುಲ್ಕ ನಿಯಂತ್ರಣ ಪ್ರಾಧಿಕಾರ ರಚಿಸಲಾಗುವುದು' ಎಂದರು.

ನರ್ಸಿಂಗ್ ಕಾಲೇಜುಗಳ ಶುಲ್ಕಗಳನ್ನು ಪರಿಶೀಲಿಸುವ ಕಾರ್ಯವನ್ನು ಈ ಪ್ರಾಧಿಕಾರಕ್ಕೆ ವಹಿಸಲಾಗುವುದು ಎಂದ ಸಚಿವರು, ಸರ್ಕಾರ ನಿಗದಿಪಡಿಸಿರುವುದಕ್ಕಿಂತಲೂ ಹೆಚ್ಚು ಶುಲ್ಕ ವಸೂಲು ಮಾಡುತ್ತಿರುವ ಸಂಸ್ಥೆಗಳ ಪ್ರಮಾಣ ಪತ್ರಗಳನ್ನು ರದ್ದುಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಶುಲ್ಕವನ್ನು ಶೇ 20ರಷ್ಟು ಹೆಚ್ಚಿಸಬೇಕು ಎಂದು ನರ್ಸಿಂಗ್ ಕಾಲೇಜುಗಳ ಆಡಳಿತ ಮಂಡಳಿ ಪ್ರತಿನಿಧಿಗಳು ಇತ್ತೀಚೆಗೆ ಮಾಡಿದ್ದ ಮನವಿಯನ್ನು ಸಚಿವರು ತಿರಸ್ಕರಿಸಿದರು.

ಪ್ರಾಧಿಕಾರವು ಬಿಎಸ್‌ಸಿ ನರ್ಸಿಂಗ್, ಜನರಲ್ ನರ್ಸಿಂಗ್ ಮತ್ತು ಮಿಡ್‌ವೈಫ್ರೀ (ಜಿಎನ್‌ಎಂ) ಡಿಪ್ಲೊಮಾ ಕೋರ್ಸ್‌ಗಳ ಶುಲ್ಕದ ಬಗ್ಗೆಯೂ ನಿಗಾವಹಿಸಲಿದೆ ಎಂದರು.

ನರ್ಸಿಂಗ್ ಕಾಲೇಜುಗಳನ್ನು ನಡೆಸಲು ಅನುಮತಿ ಪಡೆದಿರುವ ಕಟ್ಟಡಗಳಲ್ಲಿ ನರ್ಸಿಂಗ್ ಕೋರ್ಸ್‌ಗಳನ್ನು ಮಾತ್ರ ನಡೆಸಬೇಕು. ಬೇರೆ ಯಾವುದೇ ಕೋರ್ಸ್‌ಗಳನ್ನು ನಡೆಸುತ್ತಿದ್ದರೆ ಅಂತಹ ಕಾಲೇಜುಗಳ ಅನುಮತಿ ಹಿಂಪಡೆಯಬೇಕು ಎಂದೂ ಪಾಟೀಲ ನಿರ್ದೇಶನ ನೀಡಿದರು.



ಹೂಡಿಕೆ ವಂಚನೆ: ನಾಲ್ವರ ಬಂಧನ

ನವದೆಹಲಿ (ಪಿಟಿಐ): ವಂಚನೆಯ ಉದ್ದೇಶದ ಸ್ಮಾರ್ಟ್‌ಫೋನ್ ಆ್ಯಪ್‌ಗಳನ್ನು ಬಳಸಿ, ಷೇರುಪೇಟೆಯಲ್ಲಿ ಹಣ ಹೂಡಿಕೆ ಮಾಡುವುದಾಗಿ ಜನರನ್ನು ಮೋಸಗೊಳಿಸಿದ ಆರೋಪದ ಅಡಿ ನಾಲ್ಕು ಮಂದಿಯನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬೆಂಗಳೂರಿನಲ್ಲಿ ಬಂಧಿಸಿದ್ದಾರೆ. ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ಅಡಿಯಲ್ಲಿ ಇವರನ್ನು ಬಂಧಿಸಲಾಗಿದೆ.

ಶಶಿ ಕುಮಾರ್ ಎಂ., ಸಚಿನ್ ಎಂ., ಕಿರಣ್ ಎಸ್.ಕೆ. ಎನ್ನುವವರನ್ನು ಆಗಸ್ಟ್ 15ರಂದು ಬಂಧಿಸಲಾಗಿದೆ. ಚರಣ್ ರಾಜ್ ಸಿ. ಎನ್ನುವವರನ್ನು ಆಗಸ್ಟ್ 21ರಂದು ಬಂಧಿಸಲಾಗಿದೆ ಎಂದು ಇ.ಡಿ. ಪ್ರಕಟಣೆ ತಿಳಿಸಿದೆ. ನಕಲಿ ಐಪಿಒ ಹಾಗೂ ಕೆಲವು ಷೇರುಗಳಲ್ಲಿ ಹೂಡಿಕೆ ಮಾಡಲು ಆರೋಪಿಗಳು ಸಾರ್ವಜನಿಕರನ್ನು ಪ್ರೇರೇಪಿಸುತ್ತಿದ್ದರು, ಅವರಿಂದ ಕೆಲವು ಶೆಲ್ ಕಂಪನಿಗಳ ಖಾತೆಗಳಿಗೆ ಹಣ ವರ್ಗಾವಣೆ ಮಾಡಿಸಿಕೊಳ್ಳುತ್ತಿದ್ದರು ಎಂದು ಇ.ಡಿ. ಹೇಳಿದೆ.

23ನೆಯ ಕಾನೂನು ಆಯೋಗ ರಚನೆ

ನವದೆಹಲಿ (ಪಿಟಿಐ): 23ನೆಯ ಕಾನೂನು ಆಯೋಗವನ್ನು ರಚಿಸಿ ಕೇಂದ್ರ ಸರ್ಕಾರವು ಸೋಮವಾರ ಅಧಿಸೂಚನೆ ಹೊರಡಿಸಿದೆ. ಆಯೋಗದ ಅವಧಿಯು ಮೂರು ವರ್ಷಗಳು. ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನ ನ್ಯಾಯಮೂರ್ತಿಗಳನ್ನು ಇದರ ಅಧ್ಯಕ್ಷ ಹಾಗೂ ಸದಸ್ಯರನ್ನಾಗಿ ನೇಮಕ ಮಾಡಲು ಅವಕಾಶ ಇದೆ.

22ನೆಯ ಕಾನೂನು ಆಯೋಗದ ಅವಧಿಯು ಆಗಸ್ಟ್ 31ಕ್ಕೆ ಕೊನೆಗೊಂಡಿದೆ. ಕಳೆದ ಕೆಲವು ತಿಂಗಳುಗಳಿಂದ ಇದಕ್ಕೆ ಅಧ್ಯಕ್ಷ ಇರಲಿಲ್ಲ. ಏಕರೂಪಿ ನಾಗರಿಕ ಸಂಹಿತೆಗೆ ಸಂಬಂಧಿಸಿದಂತೆ ಆಯೋಗವು ವರದಿ ಸಲ್ಲಿಸಿದೆ.

ಅಲ್ಲದೆ, ಕಾನೂನು ಆಯೋಗವು ಏಕಕಾಲದಲ್ಲಿ ಚುನಾವಣೆ ನಡೆಸುವ ಬಗ್ಗೆ ವರದಿಯೊಂದನ್ನು ಸಿದ್ಧಪಡಿಸಿದೆ. ಈ ವರದಿಯನ್ನು ಕಾನೂನು ಸಚಿವಾಲಯಕ್ಕೆ ಸಲ್ಲಿಸಬೇಕಿದೆ. ಅಧ್ಯಕ್ಷರಿಲ್ಲದೆ ವರದಿಯನ್ನು ಸಲ್ಲಿಸುವುದಕ್ಕೆ ಅವಕಾಶ ಇಲ್ಲ ಎಂದು ಮೂಲಗಳು ಹೇಳಿವೆ.

22ನೆಯ ಕಾನೂನು ಆಯೋಗದ ಅಧ್ಯಕ್ಷ ಆಗಿದ್ದ ನ್ಯಾಯಮೂರ್ತಿ ರಿತುರಾಜ್ ಅವಸ್ಥಿ ಅವರನ್ನು, ಕೆಲವು ತಿಂಗಳುಗಳ ಹಿಂದೆ ಲೋಕಪಾಲದ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

ಲಿಂಗತ್ವ ಅಲ್ಪಸಂಖ್ಯಾತರು ಎದುರಿಸುತ್ತಿರುವ ಸಮಸ್ಯೆ ಅನಾವರಣ

'ಹೆಣ್ತನ' ಗೀತೆಗಳ ಆಲ್ಬಂ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಗತ್ವ ಅಲ್ಪಸಂಖ್ಯಾತರು ಸಮಾಜದಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಬಿಂಬಿಸುವ ಇಂಗ್ಲಿಷ್ ಗೀತೆಗಳುಳ್ಳ 'ಹೆಣ್ತನ' ಆಲ್ಬಂ ಅನ್ನು ಸೋಮವಾರ ಬಿಡುಗಡೆ ಮಾಡಲಾಯಿತು.

ನಗರದ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ 'ಒಂದೆಡೆ' ಸಂಸ್ಥೆ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಹಿನ್ನೆಲೆ ಗಾಯಕಿ ಮೇರಿ ಉಷಾ ಕೋಕಿಲಾ ನಿರ್ದೇಶಿಸಿರುವ 'ಹೆಣ್ತನ' ಆಲ್ಬಂ ಅನ್ನು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಬಿಡುಗಡೆ ಮಾಡಿದರು.

ಲಿಂಗತ್ವ ಅಲ್ಪಸಂಖ್ಯಾತರ ಪರ ಹಕ್ಕುಗಳ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಅವರು ಆಲ್ಬಂಗೆ ಹಾಡಿದ್ದಾರೆ. ವಿವಿಧ ಪಾತ್ರಗಳಿಗೆ ಸಮುದಾಯದವರೇ ಬಣ್ಣ ಹಚ್ಚಿದ್ದಾರೆ. ಬೆಂಗಳೂರು ನಗರ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಚಿತ್ರೀಕರಣ ಮಾಡಲಾಗಿದೆ.

ಬಳಿಕ ಮಾತನಾಡಿದ ದಯಾನಂದ, 'ಅಕ್ಕೈ ಪದ್ಮಶಾಲಿ ಮತ್ತು ಅವರ ತಂಡದ ಸದಸ್ಯರೊಂದಿಗೆ ಚರ್ಚಿಸಿದ ಬಳಿಕ ಸಮುದಾಯದ ಬಗ್ಗೆ ನಾನು ಹೊಂದಿದ್ದ ಅಭಿಪ್ರಾಯ ಮತ್ತು ಆಲೋಚನೆಗಳು ಬದಲಾಯಿತು. ಸಮುದಾಯದ ಮೇಲೆ ಪೊಲೀಸರ ದೌರ್ಜನ್ಯ ಮೊದಲಿನಂತಿಲ್ಲ. ಪ್ರತಿಯೊಬ್ಬರಿಗೂ ಬದುಕುವ ಹಕ್ಕನ್ನು ಸಂವಿಧಾನ ನೀಡಿದೆ. ಯಾರ ಮೇಲೂ ದೌರ್ಜನ್ಯ ಮಾಡುವಂತಿಲ್ಲ' ಎಂದು ಹೇಳಿದರು.

ಸಮಾಜದಲ್ಲಿ ಬದಲಾವಣೆ ತರಲು ಸಮುದಾಯದವರು ಪೊಲೀಸ್ ಇಲಾಖೆ ಜೊತೆ ಕೈ ಜೋಡಿಸಬೇಕು. ಬದಲಾವಣೆಯನ್ನು ಸ್ವೀಕರಿಸಲು ಸಮಾಜಕ್ಕೂ ಸಾಕಷ್ಟು ಸಮಯ ಬೇಕಾಗಿದೆ. ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳು ಗಮನಕ್ಕೆ ಬಂದಿದ್ದು, ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಮಾತನಾಡಿ, 'ಜಾತಿ, ಧರ್ಮದ ಕಾರಣಕ್ಕಾಗಿ ದೇಶದಲ್ಲಿ ಅಸ್ಪೃಶ್ಯರು ಯಾತನೆ ಅನುಭವಿಸಿದರು. ದೇವರು, ಧರ್ಮ, ಅಧ್ಯಾತ್ಮವನ್ನು ಮಾರಾಟದ ದಂಧೆಯಾಗಿ ಮಾಡಿಕೊಳ್ಳಲಾಗಿದೆ. ಯಾರೂ ತಾನು ಹೆಣ್ಣು ಮತ್ತು ಗಂಡಾಗಿ ಹುಟ್ಟಬೇಕು ಎಂದು ಅರ್ಜಿ ಹಾಕಿಕೊಂಡಿರುವುದಿಲ್ಲ. ಸಮಾಜದಲ್ಲಿ ಎಲ್ಲ ಸಮುದಾಯದವರಿಗೂ ಬದುಕುವ ಹಕ್ಕಿದೆ' ಎಂದು ಹೇಳಿದರು.

'ಹೆಣ್ತನ' ಆಲ್ಬಂ ನೋಡಿದಾಗ ಮನಸ್ಸಿಗೆ ನೋವು ಉಂಟಾಯಿತು. ಲಿಂಗತ್ವ ಅಲ್ಪಸಂಖ್ಯಾತರ ಮೇಲೆ ರೌಡಿಗಳು, ಪೊಲೀಸರು ದೌರ್ಜನ್ಯ ನಡೆಸಿದ್ದಾರೆ. ರಕ್ಷಣೆ ಮಾಡಬೇಕಾದವರೇ ಈ ರೀತಿ ಮಾಡಿದರೆ ಯಾರ ಬಳಿ ಹೋಗಬೇಕು?' ಎಂದು ಬೇಸರ ವ್ಯಕ್ತಪಡಿಸಿದರು.

ಸುಗಮ ಸಂಗೀತ ಗಾಯಕಿ ಎಂ.ಡಿ.ಪಲ್ಲವಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೆ.ಸರಳಾ ಅವರು ಸಂವಿಧಾನದ ಪೀಠಿಕೆ ಓದಿದರು. ನಟ ಕಿಶೋರ್ ಕುಮಾರ್, ನಟಿ ಸಂಯುಕ್ತಾ ಹೊರನಾಡು, ಅಕ್ಕೈ ಪದ್ಮಶಾಲಿ ಮಾತನಾಡಿದರು. ಕನ್ನಡ ಉಪನ್ಯಾಸಕಿ ಅನಿತಾ ಉಪಸ್ಥಿತರಿದ್ದರು.

'ಹೆಣ್ತನ' ಆಲ್ಬಂ ಬಿಡುಗಡೆ ಕಾರ್ಯಕ್ರಮದಲ್ಲಿ ನಟಿ ಸಂಯುಕ್ತಾ ಹೊರನಾಡು, ಅಕ್ಕೈ ಪದ್ಮಶಾಲಿ, ನಟ ಕಿಶೋರ್ ಕುಮಾರ್, ಬಿ ದಯಾನಂದ, ಮಂಜಮ್ಮ ಜೋಗತಿ, ಎಲ್‌.ಎನ್‌.ಮುಕುಂದ ರಾಜ್, ಮೇರಿ ಉಷಾ ಕೋಕಿಲಾ ಭಾಗವಹಿಸಿದ್ದರು — ಪ್ರಜಾವಾಣಿ ಚಿತ್ರ

ವೇಶ್ಯಾವಾಟಿಕೆ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕಿಯರನ್ನು ಕಳ್ಳಸಾಗಣೆ ಮೂಲಕ ನಗರಕ್ಕೆ ಕರೆತಂದು ವೇಶ್ಯಾವಾಟಿಕೆ ದಂಧೆಗೆ ದೂಡಿದ್ದ ಮೂವರು ಆರೋಪಿಗಳನ್ನು ಸಿಸಿಬಿಯ ಮಹಿಳಾ ಸಂರಕ್ಷಣಾ ದಳದ ಸಿಬ್ಬಂದಿ ಹಾಗೂ ಬೊಮ್ಮನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಒಡಿಶಾದ ಸೂರಜ್ ಸಹಜಿ (26), ಕರೀಷ್ಮಾ ಶೇಕ್ (23) ಹಾಗೂ ಸ್ಥಳೀಯ ನಿವಾಸಿ, ಟೆಕಿ ಸುಬ್ರಹ್ಮಣ್ಯ ಶಾಸ್ತ್ರಿ ಬಂಧಿತರು. 'ಹೊಂಗಸಂದ್ರದ ಮನೆಯಲ್ಲಿ ವೇಶ್ಯಾವಾಟಿಕೆ ದಂಧೆ ನಡೆಯುತ್ತಿರುವ ಬಗ್ಗೆ ಖಚಿತ ಮಾಹಿತಿ ಬಂದಿತ್ತು. ಮನೆ ಮೇಲೆ ದಾಳಿ ನಡೆಸಿದಾಗ ಬಾಂಗ್ಲಾದೇಶ ಮೂಲದ ಇಬ್ಬರು ಬಾಲಕಿಯರು ಪತ್ತೆಯಾದರು. ಅವರನ್ನು ರಕ್ಷಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಸಾಫ್ಟ್‌ವೇರ್ ಉದ್ಯೋಗಿಯಾಗಿದ್ದ ಸುಬ್ರಹ್ಮಣ್ಯ ಶಾಸ್ತ್ರಿ ಬಾಲಕಿಯರನ್ನು ಕರೆಸಿಕೊಂಡಿದ್ದ. ಆತನ ಸೂಚನೆ ಮೇರೆಗೆ ಉಳಿದ ಆರೋಪಿಗಳಿಬ್ಬರೂ ಬಾಲಕಿಯರನ್ನು ಪಶ್ಚಿಮ ಬಂಗಾಳದಿಂದ ನಗರಕ್ಕೆ ಕರೆತಂದಿದ್ದರು. ಹೊಂಗಸಂದ್ರದ ಬಾಡಿಗೆ ಮನೆಯಲ್ಲಿ ಇರಿಸಿ ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದರು. ಆರೋಪಿಗಳ ವಿರುದ್ಧ ಬೊಮ್ಮನಹಳ್ಳಿ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

PERSONAL

Change of Name

CHANGE OF NAME
I, NAMRATA NAZRE, D/o Sunil Nazre, R/at # 13A(7/10),10/22, Kumara Krupa Road, Upper Chabriya Layout, Bengaluru-560001, have changed my name to NAMRATA SUNIL NAZRE vide affidavit dated 02.09.2024, before notary B.S. Padma Prasad, Bengaluru. Henceforth I shall be called as NAMRATA SUNIL NAZRE only

CHANGE OF NAME
I, BHAGYA VENKATRAM, residing at No.117, Yashasvi Nilya, 6th Cross, 1st Stage, 3rd Block, Suvarna Badavene, Nayandanahalli Ring Road, Nagarabhavi, Bangalore-560072, have changed my name to R. BHAGYA vide affidavit dated 29.08.2024, before notary H.R.Karunakara, Bengaluru. Henceforth I shall be called as R. BHAGYA only.

I, BIRADAR CHANDRASHEKAR BAPURAY, have changed my name to BIRADAR CHANDRASHEKAR, Vide Affidavit dated 02.09.2024 sworn before advocate and notary Ambujakshi, Bangalore

CHANGE OF NAME
I, A.V. VANISHREE @ VANISHREE VENKAT W/o Venkata Krishnan, residing at Sparrow's Nest, No. 64, St.John's Road, S.C.Gardens Post, Bengaluru- 560042, declare that both the above names pertain to me only. Vide affidavit dated 12.07.2024 before Notary Idinabba, Bengaluru.

CONNECT

R.E.S. POLYTECHNIC
Estd: 1986 - Recognised by Govt. of Karnataka & AICTE
EVENING / WEEKEND CLASSES
Available for working Professionals to EE
10th Pass / What Next ???
JOIN DIPLOMA IN: ♦ Computer Science ♦ IS ♦ Civil ♦ Mechanical ♦ Automobile ♦ Electrical ♦ Electronics ♦ Fashion Tech ♦ Commerce (CP)
5, Sunkadakatte, Magadi Road, Hegganahalli Cross, Bengaluru-91
Call: Secretary - 99166 46466
RES-24507

You Have Problem? Solutions for all problems from
FAMOUS ASTROLOGER BABA MUSA KHAN 10 Years Same Location Fees after work
9740748819 Open Challenge
Family Dispute, Job, Enemies, Love Affair, Child Problem, Second Wife Problem, Delay in Marriage, Love Marriage, Relation Issue, foreign tour, Etc
For Urgent Solutions Meet Once
Adugodi, Koramangala 8th Blk, Nr Narayan School

CHANGE OF NAME
I, VENKATRAM, residing at No.117, Yashasvi Nilya, 6th Cross, 1st Stage, 3rd Block, Suvarna Badavene, Nayandanahalli Ring Road, Nagarabhavi, Bangalore-560072, have changed my name to T. VENKATRAM vide affidavit dated 29.08.2024, before notary H.R.Karunakara, Bengaluru. Henceforth I shall be called as T. VENKATRAM only.

I, DEEKSHA D/o. C.R.Harish R/a#39 2nd Cross, Kalidasa Layout Srinagar, Bengaluru-560050 Have changed my Name to DEEKSHA HARISH vide affidavit dated:31.8.2024 before Notary Mohammed Hussain.k Bangalore

DH Classifieds More value, more impact — ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9901641752 | +91 9845114560 | +91 9900428036

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

'ಸು–30ಎಂಕೆಐ' ವಿಮಾನ: ಎಚ್‌ಎಎಲ್‌ನಿಂದ 240 ಎಂಜಿನ್

ನವದೆಹಲಿ (ಪಿಟಿಐ): ಭಾರತೀಯ ವಾಯುಪಡೆಯ ಶಕ್ತಿಶಾಲಿ 'ಸು–30ಎಂಕೆಐ' ಯುದ್ಧವಿಮಾನಗಳಿಗೆ 240 ಏರೊ–ಎಂಜಿನ್‌ಗಳನ್ನು ಎಚ್‌ಎಎಲ್‌ನಿಂದ ₹26,000 ಕೋಟಿ ವೆಚ್ಚದಲ್ಲಿ ತಯಾರಿಸುವ ಪ್ರಸ್ತಾವನೆಗೆ ಕೇಂದ್ರ ಸಚಿವ ಸಂಪುಟವು ಸೋಮವಾರ ಒಪ್ಪಿಗೆ ನೀಡಿದೆ.

ರಕ್ಷಣಾ ಸಚಿವಾಲಯವು ಈ ವಿಷಯ ತಿಳಿಸಿದೆ. ಒಂದು ವರ್ಷದ ನಂತರ ಏರೊ–ಎಂಜಿನ್‌ಗಳನ್ನು ಪೂರೈಸುವ ಪ್ರಕ್ರಿಯೆ ಶುರುವಾಗಲಿದ್ದು, ಎಂಟು ವರ್ಷಗಳಲ್ಲಿ ಅಷ್ಟೂ ಎಂಜಿನ್‌ಗಳನ್ನು ಒದಗಿಸಲು ಗಡುವು ಹಾಕಿಕೊಳ್ಳಲಾಗಿದೆ.

ಎಂಜಿನ್‌ಗಳನ್ನು ತಯಾರಿಸಲು ಶೇ 53ರಷ್ಟು ದೇಸಿ ಪರಿಕರಗಳನ್ನೇ ಬಳಸಲಾಗುವುದು ಎಂದೂ ಹೇಳಿದೆ.

ಒಡಿಶಾದ ಕೋರಾಪುಟ್‌ನಲ್ಲಿನ ಎಚ್‌ಎಎಲ್ ಘಟಕದಲ್ಲಿ ಎಂಜಿನ್‌ಗಳನ್ನು ತಯಾರಿಸಲಾಗುವುದು ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಮಿಗ್–29 ಪತನ: ಪೈಲಟ್ ಪಾರು

ಜೈಪುರ/ನವದೆಹಲಿ (ಪಿಟಿಐ): ಭಾರತೀಯ ವಾಯುಪಡೆಯ ಮಿಗ್–29 ಯುದ್ಧವಿಮಾನವು ರಾಜಸ್ಥಾನದ ಬಾಡ್‌ಮೇರ್‌ನಲ್ಲಿ ಸೋಮವಾರ ರಾತ್ರಿ ಪತನಗೊಂಡಿದ್ದು, ಪೈಲಟ್ ಸುರಕ್ಷಿತವಾಗಿ ಅದರಿಂದ ಹೊರ ಜಿಗಿದಿದ್ದಾರೆ.

ವಾಯುಪಡೆಯ ಹಿರಿಯ ಅಧಿಕಾರಿಯೊಬ್ಬರು ಈ ವಿಷಯ ತಿಳಿಸಿದ್ದಾರೆ. ತಾಂತ್ರಿಕ ಸಮಸ್ಯೆಯಿಂದ ಯುದ್ಧವಿಮಾನವು ಪತನಗೊಂಡಿದ್ದು, ನಿಖರ ಕಾರಣ ಪತ್ತೆಮಾಡಲು ತನಿಖೆಗೆ ಆದೇಶಿಸಲಾಗಿದೆ ಎಂದೂ ಹೇಳಿದ್ದಾರೆ.

ದೈನಂದಿನ ತರಬೇತಿ ವೇಳೆ ಈ ಅವಘಡ ಸಂಭವಿಸಿದ್ದು, ಜೀವಹಾನಿಯಾಗಿಲ್ಲ ಎಂದು 'ಎಕ್ಸ್'ನಲ್ಲಿಯೂ ವಾಯುಪಡೆಯು ಮಾಹಿತಿ ನೀಡಿದೆ.

ಸಾರಿಗೆ ನೌಕರರ ಒಕ್ಕೂಟದಿಂದ ನಾಳೆ ಪ್ರತಿಭಟನೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ (ಕೆಎಸ್‌ಆರ್‌ಟಿಸಿ) ಕಾರ್ಯನಿರ್ವಹಿಸುತ್ತಿರುವ ನೌಕರರ 38 ತಿಂಗಳ ಬಾಕಿ ವೇತನ ನೀಡುವಂತೆ ಆಗ್ರಹಿಸಿ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸೆಪ್ಟೆಂಬರ್ 4ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಕರ್ನಾಟಕ ರಸ್ತೆ ಸಾರಿಗೆ ಮಜ್ದೂರ್ ಸಂಘ ಒಕ್ಕೂಟ ತಿಳಿಸಿದೆ.

ಡೆಲಿವರಿ ಹುಡುಗರ ಬೆದರಿಸಿ ಹಣ ಸುಲಿಗೆ: ನಾಲ್ವರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರಕಾಸ್ತ್ರ ಹಿಡಿದು ಡೆಲಿವರಿ ಹುಡುಗರನ್ನು ಬೆದರಿಸಿ ಹಣ ಹಾಗೂ ಮೊಬೈಲ್ ಸುಲಿಗೆ ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಜೀವನ್ ಬಿಮಾ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಎಚ್‌ಎಎಲ್‌ನ ವಿಭೂತಿಪುರದ ಭರತ್(19), ಅನ್ನಸಂದ್ರಪಾಳ್ಯದ ಜೋಯಲ್‌ಅಭಿಷೇಕ್(19), ಹೆಣ್ಣೂರು ಮುಖ್ಯ ರಸ್ತೆಯ ನಿವಾಸಿ ಐಸಾಕ್(22) ಸೇರಿ ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ ನಾಲ್ಕು ಬೈಕ್ ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ. ಮಾರತ್‌ಹಳ್ಳಿ, ಕೆ.ಆರ್.ಪುರ, ಬೈಯಪನಹಳ್ಳಿ ಹಾಗೂ ಜೆ.ಬಿ.ನಗರ ಠಾಣೆಯಲ್ಲಿ ಆರೋಪಿಗಳ ವಿರುದ್ಧ ಏಳು ಪ್ರಕರಣಗಳು ದಾಖಲಾಗಿದ್ದವು ಎಂದು ಪೊಲೀಸರು ಹೇಳಿದರು.

ವಿವಿಧ ಕಂಪನಿಗಳ ಡೆಲಿವರಿ ಹುಡುಗರನ್ನೇ ಗುರಿಯಾಗಿಸಿ ಆರೋಪಿಗಳು ಚಾಕು ಹಿಡಿದು ಅಡ್ಡಗಟ್ಟುತ್ತಿದ್ದರು. ಬಳಿಕ ಬೆದರಿಸಿ ಅವರ ಬಳಿಯಿರುವ ಊಟ, ತಿಂಡಿ, ಮೊಬೈಲ್ ಹಾಗೂ ದ್ವಿಚಕ್ರ ವಾಹನವನ್ನು ದೋಚಿಕೊಂಡು ಪರಾರಿ ಆಗುತ್ತಿದ್ದರು. ಆಗಸ್ಟ್ 4 ಮತ್ತು 21ರಂದು ಎಚ್‌ಎಎಲ್‌ನ ಕೋನೇನ ಅಗ್ರಹಾರದಲ್ಲಿ ಮಾರಕಾಸ್ತ್ರ ಹಿಡಿದು ಡೆಲಿವರಿ ಹುಡುಗರನ್ನು ದೋಚಿದ್ದ ದೃಶ್ಯಗಳು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದವು. ಸುಲಿಗೆಗೆ ಒಳಗಾದ ಉತ್ತರ ಭಾರತ ಮೂಲದ ಡೆಲಿವರಿ ಹುಡುಗರನ್ನು ಪತ್ತೆಹಚ್ಚಿ ದೂರು ಪಡೆದು ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ರಾತ್ರಿ ವೇಳೆ ಸುಲಿಗೆ ನಡೆಸುತ್ತಿದ್ದರು. ಸುಲಿಗೆಯ ಹಣದಲ್ಲಿ ಪಾರ್ಟಿ ನಡೆಸುತ್ತಿದ್ದರು. ಪಾರ್ಟಿಯ ಉದ್ದೇಶಕ್ಕೆ ಈ ರೀತಿಯ ಕೃತ್ಯ ಎಸಗುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

ಐಸಾಕ್

ಭರತ್

ಜೋಯಲ್

ಲೈಂಗಿಕ ದೌರ್ಜನ್ಯ

ನೆಲಮಂಗಲ: ಬೆಂಗಳೂರು ಉತ್ತರ ತಾಲ್ಲೂಕಿನ ಹಳ್ಳಿಯೊಂದರಲ್ಲಿ ಮಹಿಳೆಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಲಾಗಿದ್ದು, ಆರೋಪಿ ಭಾರದ್ವಾಜ್ ಎಂಬಾತನ ವಿರುದ್ಧ ಮಾದನಾಯಕನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಭಾರದ್ವಾಜ್ ಹಾಗೂ ದೌರ್ಜನ್ಯಕ್ಕೆ ಒಳಗಾದ ಮಹಿಳೆ ಅಕ್ಕಪಕ್ಕದ ಮನೆಗಳಲ್ಲಿ ನೆಲಸಿದ್ದರು. ಭಾರದ್ವಾಜ್ ಮನೆಯಲ್ಲಿದ್ದ ಫ್ರಿಡ್ಜ್‌ನಲ್ಲಿ ಮಹಿಳೆ ಹಾಲಿನ ಪೊಟ್ಟಣ ಇಟ್ಟಿದ್ದರು. ಅದನ್ನು ತರಲು ಹೋದಾಗ ಕೈಎಳೆದು ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ದೂರು ನೀಡಲಾಗಿದೆ. ತನಿಖೆ ನಡೆದಿದೆ ಎಂದು ಪೊಲೀಸರು ಹೇಳಿದರು.

ಮುಡಾ ನಿವೇಶನ ಹಂಚಿಕೆ ಪ್ರಕರಣ: ದೂರುದಾರರ ವಕೀಲರ ವಾದ

‘ಸಿದ್ದರಾಮಯ್ಯ ಅವಧಿಯಲ್ಲೇ ಅಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ಮುಡಾ ನಿವೇಶನ ಹಂಚಿಕೆ ಮಾಡುವಾಗ ಪಕ್ಷಪಾತಿ ಧೋರಣೆ ತಳೆಯಲಾಗಿದ್ದು ಅದಕ್ಕಾಗಿ ತನಿಖೆ ಆಗಲೇಬೇಕು. ಇದೆಲ್ಲವೂ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ನಡೆದಿದೆ. 2017ರಲ್ಲಿ ಮುಡಾ ಕೈಗೊಂಡಿರುವ ನಿರ್ಣಯವೇ ಇಡೀ ಪ್ರಕರಣದ ಕೊಂಡಿಯಾಗಿದೆ...’

ಪ್ರಕರಣದ ದೂರುದಾರರ ಪರ ಹಿರಿಯ ವಕೀಲ ಕೆ.ಜಿ. ರಾಘವನ್ ಅವರು ನ್ಯಾಯಪೀಠದ ಮುಂದೆ ಅರುಹಿದ್ದು ಹೀಗೆ.

ರಾಜ್ಯಪಾಲರು ನೀಡಿರುವ ಅನುಮತಿ ಪ್ರಶ್ನಿಸಿ ಸಿದ್ದರಾಮಯ್ಯ ಸಲ್ಲಿಸಿರುವ ರಿಟ್ ಅರ್ಜಿಯ ವಿಚಾರಣೆಯನ್ನು, ‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಸೋಮವಾರ ಮುಂದುವರಿಸಿದರು.

ದೂರುದಾರ ಮೈಸೂರಿನ ಸ್ನೇಹಮಯಿ ಕೃಷ್ಣ ಪರ ವಾದ ಮಂಡಿಸಿದ ಹೈಕೋರ್ಟ್‌ನ ಹಿರಿಯ ವಕೀಲ ಕೆ.ಜಿ.ರಾಘವನ್, ‘ಮುಡಾ ಹಗರಣ ಮಾಧ್ಯಮಗಳಲ್ಲಿ ವರದಿಯಾದ ಬೆನ್ನಲ್ಲೇ ರಾಜ್ಯ ಸರ್ಕಾರ ಐಎಎಸ್ ಅಧಿಕಾರಿ (ವೆಂಕಟಾಚಲಪತಿ) ಮತ್ತು, ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ನೇತೃತ್ವದಲ್ಲಿ ತನಿಖಾ ಆಯೋಗ ರಚಿಸಿದೆ. ಮೇಲ್ನೋಟಕ್ಕೆ ಅಕ್ರಮ ನಡೆದಿರುವುದು ಕಂಡುಬಂದ ಕಾರಣಕ್ಕಾಗಿಯೇ ಈ ಆಯೋಗ ರಚಿಸಲಾಗಿದೆ. ಸರ್ಕಾರ ಸಾರ್ವಜನಿಕ ನಂಬಿಕೆ ಕಳೆದು ಕೊಂಡಿರುವುದನ್ನು ಇದು ತೋರಿಸುತ್ತದೆ’ ಎಂದರು.

‘ಪಾರ್ವತಿ ಅವರಲ್ಲದೇ ಬೇರೆ ಯಾವುದೇ ಸಾಮಾನ್ಯ ವ್ಯಕ್ತಿ ತನ್ನ ಜಮೀನು ವಶಪಡಿಸಿಕೊಂಡಿದ್ದಕ್ಕೆ ಪರಿಹಾರ ಕೇಳಿದ್ದರೆ, ಮುಡಾ ಅಂತಹ ವ್ಯಕ್ತಿಗೆ ಮೊದಲು ಹಕ್ಕು ತೋರಿಸುವಂತೆ ಕೇಳುತ್ತಿತ್ತು. ಆಗ ಆ ವ್ಯಕ್ತಿಯು ನ್ಯಾಯಾಲಯದ ಮೆಟ್ಟಿಲೇರಬೇಕಿತ್ತು. ಆದರೆ, ಪಾರ್ವತಿ ಅವರ ಪ್ರಕರಣದಲ್ಲಿ ಇದೆಲ್ಲಾ ಆಗಿಲ್ಲ. ನಿಯಮಗಳನ್ನು ತಿದ್ದುಪಡಿ ಮಾಡಲಾಗಿದ್ದು, ಬದಲಿ ನಿವೇಶನ ಹಂಚಿಕೆ ಮಾಡಲಾಗಿದೆ’ ಎಂದು ಆಕ್ಷೇಪಿಸಿದರು.

‘ಸಾರ್ವಜನಿಕ ಸೇವಕರ ನಡೆ ಕರಾರುವಕ್ಕಾಗಿ ಇರಬೇಕು. ಪ್ರಮಾದ ಆಗಿರುವುದರಲ್ಲಿ ಸಾರ್ವಜನಿಕ ಸೇವಕನ ಸಣ್ಣ ಪಾತ್ರವಿದ್ದರೂ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅನ್ವಯವಾಗುತ್ತದೆ’ ಎಂಬ ನ್ಯಾಯಮೂರ್ತಿ ನಾಗಪ್ರಸನ್ನ ಅವರ ತೀರ್ಪೊಂದನ್ನು ಅವರ ಪೀಠದ ಮುಂದೆಯೇ ಉದಾಹರಿಸಿದ ರಾಘವನ್, ‘ಮುಡಾ ನಿರ್ಧಾರದಲ್ಲಿ ಮುಖ್ಯಮಂತ್ರಿ ಪಾತ್ರವಿದೆಯೇ ಎಂಬುದನ್ನು ಪರಿಶೀಲಿಸಬೇಕಿದೆ’ ಎಂದರು.

‘ಅನುಚಿತ ಅನುಕೂಲ ಪಡೆಯಲು ಅಧಿಕಾರಿ ಮೇಲೆ ಪ್ರಭಾವ ಬಳಸಿದರೆ ಅದು ಅಪರಾಧ. ಕಲಂ 17ಎ ಹಂತದಲ್ಲಿ ಸಹಜ ನ್ಯಾಯತತ್ವ ಅನ್ವಯವೇ ಆಗುವುದಿಲ್ಲ. ಸಾರ್ವಜನಿಕ ಆಡಳಿತದಲ್ಲಿ ಶುದ್ಧತೆ ಕಾಯ್ದುಕೊಳ್ಳಬೇಕಿರುವ ಕಾರಣ ರಾಜ್ಯಪಾಲರು ತನಿಖೆಗೆ ಅನುಮತಿ ನೀಡಿದ್ದಾರೆ. ವಂಚನೆ ನಡೆದಿದೆಯೋ, ಇಲ್ಲವೋ ಎಂಬುದನ್ನು ಅರಿಯಲು ಯಾವ ವಿಧಾನ ಅನುಸರಿಸಬೇಕು ಎಂದು ಹೇಳುವುದು ನ್ಯಾಯಪೀಠದ ಜವಾಬ್ದಾರಿ’ ಎಂದರು.

ಮುಡಾ ಹಿಂದಿನ ಆಯುಕ್ತ ದಿನೇಶ್‌ಕುಮಾರ್ ಅಮಾನತು

ಜಿ.ಟಿ.ದಿನೇಶ್ ಕುಮಾರ್

ಮೈಸೂರು: ಇಲ್ಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿಂದಿನ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಸರ್ಕಾರ ಆದೇಶಿಸಿದೆ. ಆಗಸ್ಟ್ 31ರಂದೇ ಆದೇಶ ಹೊರಬಿದ್ದಿದ್ದು, ಆ. 28ರಂದು ಅವರನ್ನು ಸರ್ಕಾರವು ಹಾವೇರಿ ವಿಶ್ವವಿದ್ಯಾಲಯದ ಕುಲಸಚಿವ ಹುದ್ದೆಗೆ ವರ್ಗಾವಣೆ ಮಾಡಿತ್ತು.

‘ಆಯುಕ್ತರ ಮೇಲಿನ ಆರೋಪಗಳ ಕುರಿತು ತಾಂತ್ರಿಕ ಸಮಿತಿಯು ನೀಡಿರುವ ವರದಿ ಆಧರಿಸಿ ಕ್ರಮ ಕೈಗೊಳ್ಳಲಾಗಿದೆ’ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶದಲ್ಲಿ ತಿಳಿಸಿದೆ. ಆದರೆ, ಯಾರ ಅಧ್ಯಕ್ಷತೆಯ ಸಮಿತಿ ವರದಿ ಎಂಬುದನ್ನು ಸ್ಪಷ್ಟಪಡಿಸಿಲ್ಲ.

‘ಮುಡಾ ಸಭೆಗಳಲ್ಲಿ ಪ್ರಸ್ತಾಪಿಸಲಾದ ಬಹುತೇಕ ವಿಷಯಗಳಲ್ಲಿ ಸ್ಪಷ್ಟ ಅಭಿಪ್ರಾಯವನ್ನು ಮಂಡಿಸದಿರುವುದು, ಸರ್ಕಾರದ ನಿರ್ದೇಶನಗಳ ಉಲ್ಲಂಘನೆ, ವಿನ್ಯಾಸ ನಕ್ಷೆಗಳಿಗೆ ನಿಯಮಬಾಹಿರವಾಗಿ ಅನುಮೋದನೆ, ನಿಯಮ ಮೀರಿ ಭೂಸ್ವಾಧೀನ ಹಾಗೂ ಬದಲಿ ನಿವೇಶನಕ್ಕೆ ಶಿಫಾರಸು, ನಿಯಮ ಮೀರಿ 50:50 ಅನುಪಾತದಲ್ಲಿ ನಿವೇಶನಗಳ ವಿತರಣೆ ಮೊದಲಾದ ಲೋಪಗಳ ಆಧಾರದ ಮೇಲೆ ಅಮಾನತು ಮಾಡಲಾಗಿದೆ’ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಈ ಎಲ್ಲ ಲೋಪಗಳ ಕುರಿತು ಟಿ.ವಿ. ಮುರಳಿ ಅಧ್ಯಕ್ಷತೆಯ ಸಮಿತಿಯು 2023ರ ನವೆಂಬರ್‌ನಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಕ್ರಮಕ್ಕೆ ಶಿಫಾರಸು ಮಾಡಿತ್ತು.

ಮುಡಾ ನಿವೇಶನ ಹಂಚಿಕೆ ಹಗರಣ ಬೆಳಕಿಗೆ ಬಂದ ಬೆನ್ನಲ್ಲೇ, ಹಿಂದಿನ ಆಯುಕ್ತರಾದ ಜಿ.ಟಿ. ದಿನೇಶ್ ಕುಮಾರ್ ಹಾಗೂ ಡಿ.ಬಿ.ನಟೇಶ್ ವಿರುದ್ಧ ಕ್ರಮ ಕೈಗೊಳ್ಳಬೇಕೆಂಬ ಆಗ್ರಹ ಕೇಳಿಬಂದಿತ್ತು. ಶಾಸಕ ಟಿ.ಎಸ್. ಶ್ರೀವತ್ಸ ಸೇರಿದಂತೆ ಹಲವರು ಲೋಕಾಯುಕ್ತ ಹಾಗೂ ಪೊಲೀಸರಿಗೆ ದೂರು ಸಲ್ಲಿಸಿದ್ದರು. ಆದರೆ ನಟೇಶ್ ಅವರ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿಲ್ಲ.

‘ಋಣ ತೀರಿಸಲು ಬಾಗ್ಮನೆಗೆ ಜಮೀನು ನೀಡಿದರೆ?’

ಕೈಗಾರಿಕಾ ಸಚಿವ ಎಂ.ಬಿ.ಪಾಟೀಲಗೆ ಛಲವಾದಿ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಛಲವಾದಿ ನಾರಾಯಣಸ್ವಾಮಿ

ಬೆಂಗಳೂರು: ‘ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರು ಬಾಗ್ಮನೆ ಡೆವಲಪರ್ಸ್ ಕಡೆಯಿಂದ ₹4 ಕೋಟಿ ಸಾಲ ಪಡೆದಿದ್ದಕ್ಕೆ ಪ್ರತಿಯಾಗಿ ಅದೇ ಕಂಪನಿಯ ನಿರ್ದೇಶಕರಾಗಿರುವ ವೈಗೈ ಇನ್ವೆಸ್ಟ್‌ಮೆಂಟ್ ಪ್ರೈ.ಲಿ ಇವರಿಗೆ ಹೈಟೆಕ್ ಡಿಫೆನ್ಸ್ ಎಸ್ಇಝಡ್ ಪಾರ್ಕ್‌ನಲ್ಲಿ 8 ಎಕರೆ ಜಮೀನು ನೀಡಲಾಗಿದೆಯೇ’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ ಆರೋಪಗಳಿಗೆ ಪೂರಕ ದಾಖಲೆಗಳನ್ನೂ ಬಿಡುಗಡೆ ಮಾಡಿದರು.

‘ಸಾಲ ಪಡೆದಿರುವ ವಿಚಾರವನ್ನು ಅವರು ಚುನಾವಣಾ ಪ್ರಮಾಣ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಸಾಲ ಪಡೆದಿದ್ದಕ್ಕೆ ಸಚಿವರು ಋಣ ಸಂದಾಯ ಮಾಡಿದ್ದಾರೆಯೇ ಎಂಬುದನ್ನು ಸ್ಪಷ್ಟಪಡಿಸಬೇಕು’ ಎಂದರು.

ಸುಮಾರು ₹160 ಕೋಟಿ ಬೆಲೆ ಬಾಳುವ ಎಂಟು ಎಕರೆ ಜಮೀನನ್ನು ಇದೇ ಫೆಬ್ರುವರಿಯಲ್ಲಿ ಬಾಗ್ಮನೆಯವರಿಗೆ ಸೇರಿದ ವೈಗೈ ಸಂಸ್ಥೆಗೆ ಹಂಚಿಕೆ ಮಾಡಿದ್ದಾರೆ. ಈ ಕಂಪನಿಯ ನಿರ್ದೇಶಕರಾದ ರಾಜಾ ಬಾಗ್ಮನೆ ಮತ್ತು ದಂಡಿಗಾನಹಳ್ಳಿ ರಾಮಕೃಷ್ಣಪ್ಪ ಅವರು ಬಾಗ್ಮನೆ ಕಂಪನಿಗೂ ನಿರ್ದೇಶಕರಾಗಿದ್ದಾರೆ ಎಂದು ವಿವರಿಸಿದರು.

‘ಮತ್ತೊಂದು ಪ್ರಕರಣದಲ್ಲಿ ಹರಿತಾ ಲಾಜಿಸ್ಟಿಕ್ಸ್ ವೇರ್‌ಹೌಸ್ ಪ್ರೈ.ಲಿ.ಗೆ 10 ಎಕರೆ ಸಿ.ಎ ನಿವೇಶನ ಹಂಚಿಕೆ ಮಾಡಲಾಗಿದೆ. ಇದು ತೆಲಂಗಾಣದ ಮಿರ್ಜಾಪುರ್ ಮೂಲದ ಕಂಪನಿ. ತೆಲಂಗಾಣದವರಿಗೆ ಕರ್ನಾಟಕದ ಕೈಗಾರಿಕಾ ಪ್ರದೇಶದಲ್ಲಿ ಸಿ.ಎ ನಿವೇಶನ ಏಕೆ ಕೊಡಬೇಕು? ಸಿ.ಎ ನಿವೇಶನಗಳನ್ನು ಕನ್ನಡಿಗರಿಗೆ ಕೊಡಬೇಕು. ಅಪಾರ್ಟ್‌ಮೆಂಟ್ ನಿರ್ಮಿಸಲು ಇವರು ಜಮೀನು ಕೊಟ್ಟಿದ್ದಾರೆ. ಡಿಫೆನ್ಸ್ ಏರೋಸ್ಪೇಸ್ ಪಾರ್ಕ್‌ನಲ್ಲಿ ಎಷ್ಟು ಕಂಪನಿಗಳಿಗೆ ವಸತಿ ಯೋಜನೆಗೆ ಸಿ.ಎ ನಿವೇಶನ ಕೊಡುತ್ತೀರಿ? ಎಷ್ಟು ಜನರಿಗೆ ಸಂಶೋಧನೆ ಮತ್ತು ಅಭಿವೃದ್ಧಿಗೆ ನಿವೇಶನ ಕೊಡುತ್ತೀರಿ’ ಎಂದು ನಾರಾಯಣಸ್ವಾಮಿ ಪ್ರಶ್ನಿಸಿದರು.

‘ಬಿಜೆಪಿ ಮತ್ತು ಆರ್‌ಎಸ್‌ಎಸ್‌ನವರು ದಲಿತ –ದಲಿತರ ಮಧ್ಯೆ ಬಡಿದಾಡಿಸುತ್ತಿದ್ದಾರೆ’ ಎಂಬ ಸಚಿವ ಪ್ರಿಯಾಂಕ್ ಖರ್ಗೆ ಅವರ ಆರೋಪಕ್ಕೆ ಪ್ರತಿಕ್ರಿಯಿಸಿದ ನಾರಾಯಣಸ್ವಾಮಿ, ‘ನಾನು ಕಾನ್ವೆಂಟ್‌ನಲ್ಲಿ ಓದಿಲ್ಲದೇ ಇರಬಹುದು. ಆದರೆ, ಹೆಬ್ಬೆಟ್ಟು ಅಲ್ಲ. ನನಗೆ ಕಾಮನ್‌ಸೆನ್ಸ್ ಇದೆ. ಬಿಜೆಪಿಯಾಗಲಿ, ಆರ್‌ಎಸ್‌ಎಸ್ ಆಗಲಿ ನನ್ನನ್ನು ಬಳಕೆ ಮಾಡುತ್ತಿಲ್ಲ. ಕಾಂಗ್ರೆಸ್ ಸರ್ಕಾರದ ಅಕ್ರಮಗಳನ್ನು ವಿಧಾನಪರಿಷತ್ ವಿರೋಧ ಪಕ್ಷದ ನಾಯಕನಾಗಿ ಜನರ ಗಮನಕ್ಕೆ ತರುತ್ತಿದ್ದೇನೆ. ಜಾತಿ ರಕ್ಷಣೆ ಪಡೆಯುವ ಪ್ರಯತ್ನ ಮಾಡುತ್ತಿಲ್ಲ’ ಎಂದರು.

ಸರ್ಕಾರದ ನಿರ್ಧಾರಕ್ಕೂ ಒಡನಾಟಕ್ಕೂ ಸಂಬಂಧವಿಲ್ಲ: ಸಚಿವ ಎಂ.ಬಿ.ಪಾಟೀಲ



ಎಂ.ಬಿ.ಪಾಟೀಲ

‘ನಮ್ಮ ಕುಟುಂಬಕ್ಕೂ ಬಾಗ್ಮನೆ ಕುಟುಂಬಕ್ಕೂ 25–30 ವರ್ಷಗಳಿಂದ ಒಡನಾಟವಿದೆ. ಆದರೆ, ಕುಟುಂಬ ಮಟ್ಟದ ವ್ಯವಹಾರಕ್ಕೂ ಸರ್ಕಾರದ ಮಟ್ಟದಲ್ಲಿ ಆಗುವ ನಿರ್ಧಾರಗಳಿಗೂ ಸಂಬಂಧವಿಲ್ಲ’ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಪ್ರತಿಕ್ರಿಯಿಸಿದ್ದಾರೆ.

‘ಬಾಗ್ಮನೆ ಸಂಸ್ಥೆಯವರು ಬೆಂಗಳೂರಿನ ಏರೋಸ್ಪೇಸ್ ಪಾರ್ಕ್‌ನಲ್ಲಿ ಕೈಗಾರಿಕಾ ನಿವೇಶನ ಕೋರಿ ಅರ್ಜಿ ಹಾಕಿದ್ದರು. ಇಂತಹ ಸಂದರ್ಭದಲ್ಲಿ ನಾವು ಸಂಸ್ಥೆಯ ಅರ್ಹತೆ, ಸಾಧನೆಗಳನ್ನು ಮಾತ್ರ ಪರಿಗಣಿಸುತ್ತೇವೆ’ ಎಂದು ತಿಳಿಸಿದ್ದಾರೆ.

‘ಬೆಂಗಳೂರಿನ ಅಭಿವೃದ್ಧಿಗೆ ಪ್ರೆಸ್ಟೀಜ್, ಬ್ರಿಗೇಡ್, ಎಂಬೆಸಿ, ಮಂತ್ರಿ, ಬಾಗ್ಮನೆ ಸಮೂಹ ಸೇರಿ ಹಲವು ಉದ್ಯಮಗಳು ಕೊಡುಗೆ ನೀಡಿವೆ. ಬೆಂಗಳೂರಿನ ಅಭಿವೃದ್ಧಿಗೆ ಕೊಡುಗೆ ನೀಡಿರುವುದನ್ನು ನಾರಾಯಣಸ್ವಾಮಿ ಅರ್ಥ ಮಾಡಿಕೊಳ್ಳಬೇಕು’ ಎಂದಿದ್ದಾರೆ.

49 ಮಂದಿಗೆ ‘ಮುಖ್ಯಮಂತ್ರಿ ಪದಕ’ ವಿತರಣೆ ಇಂದು

ಪ್ರಜಾವಾಣಿ ವಾರ್ತೆ

ಈಶ್ವರ ಖಂಡ್ರೆ

ಬೆಂಗಳೂರು: ಅರಣ್ಯ ಇಲಾಖೆಗೆ ಹೊಸದಾಗಿ ಆಯ್ಕೆಯಾಗಿರುವ 267 ಅರಣ್ಯ ವೀಕ್ಷಕರಿಗೆ ನೇಮಕಾತಿ ಪತ್ರ ಮತ್ತು ಇಲಾಖೆಯಲ್ಲಿ 2022 ಮತ್ತು 2023ನೇ ಸಾಲಿನಲ್ಲಿ ಗಣನೀಯ ಸೇವೆ ಸಲ್ಲಿಸಿದ 49 ಅರಣ್ಯಾಧಿಕಾರಿಗಳು ಮತ್ತು ಸಿಬ್ಬಂದಿಗೆ ‘ಮುಖ್ಯಮಂತ್ರಿ ಪದಕ’ವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ (ಸೆ. 3) ಪ್ರದಾನ ಮಾಡಲಿದ್ದಾರೆ.

‘ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸಂಜೆ 4 ಗಂಟೆಗೆ ಈ ಕಾರ್ಯಕ್ರಮ ನಡೆಯಲಿದೆ’ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

‘310 ಅರಣ್ಯ ವೀಕ್ಷಕರ ಹುದ್ದೆಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿತ್ತು. ಒಟ್ಟು 1.94 ಲಕ್ಷ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಈ ಪೈಕಿ, ಎಸ್ಸೆಸ್ಸೆಲ್ಸಿ ಮತ್ತು ತತ್ಸಮಾನ ಪರೀಕ್ಷೆಯಲ್ಲಿ ಗಳಿಸಿದ ಅತಿ ಹೆಚ್ಚು ಅಂಕ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆ ಮೂಲಕ ಪಾರದರ್ಶಕವಾಗಿ 267 ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ’ ಎಂದು ಅವರು ತಿಳಿಸಿದ್ದಾರೆ.

‘ಅರಣ್ಯ ಸಂರಕ್ಷಣೆ, ವನ್ಯಜೀವಿ ಸಂರಕ್ಷಣೆ, ಅರಣ್ಯ ಕೃಷಿ, ಅರಣ್ಯ ನಿರ್ವಹಣೆ, ತರಬೇತಿ, ಸಂಶೋಧನೆ, ಕಾರ್ಯಯೋಜನೆ, ಜನರ ಪಾಲ್ಗೊಳ್ಳುವಿಕೆ, ಅಭಿವೃದ್ಧಿ ಕಾರ್ಯ, ಮಾನವ- ಪ್ರಾಣಿ ಸಂಘರ್ಷ ನಿಯಂತ್ರಣ, ನಾವೀನ್ಯಪೂರ್ಣ ಉಪಕ್ರಮ ಅಳವಡಿಕೆ ಇತ್ಯಾದಿ ಕ್ಷೇತ್ರದಲ್ಲಿ ಗಣನೀಯ ಕೆಲಸ ಮಾಡಿ ಅರಣ್ಯ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಗುರುತಿಸಿ 2017ರಿಂದ ‘ಮುಖ್ಯಮಂತ್ರಿ ಪದಕ’ ನೀಡಲಾಗುತ್ತಿದೆ’ ಎಂದೂ ಅವರು ಹೇಳಿದ್ದಾರೆ.

ಜಲಸಂಪನ್ಮೂಲ ಸಚಿವ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

‘ಎತ್ತಿನಹೊಳೆ’ 2027ಕ್ಕೆ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರದ ಸ್ವಲ್ಪ ಭಾಗ, ತುಮಕೂರು, ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ಜನರಿಗೆ ಅನುಕೂಲ ಆಗಲಿರುವ ಎತ್ತಿನಹೊಳೆ ಯೋಜನೆ 2027ಕ್ಕೆ ಪೂರ್ಣಗೊಳ್ಳಲಿದೆ’ ಎಂದು ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ಯೋಜನೆಯ ಪ್ರಮುಖ ಜಾಗದಲ್ಲಿ ನೀರು ಮೇಲಕ್ಕೆ ಎತ್ತುವ ಪಂಪ್‌ಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದೇ 6ರಂದು ಮಧ್ಯಾಹ್ನ 12.05ಕ್ಕೆ ಚಾಲನೆ ನೀಡಲಿದ್ದಾರೆ. ಕೆಲವು ಪ್ರಮುಖ ಭಾಗಗಳಲ್ಲಿ 10.30ರ ಒಳಗೆ ಸಚಿವರು ಚಾಲನೆ ನೀಡಲಿದ್ದಾರೆ’ ಎಂದರು.

ಶಿವಕುಮಾರ್

‘ಪ್ರಸ್ತುತ ಪಂಪ್ ಮಾಡಿದ ನೀರನ್ನು 132 ಕಿ.ಮೀ ದೂರದ ವಾಣಿ ವಿಲಾಸ ಸಾಗರಕ್ಕೆ ಹರಿಸಲಾಗುವುದು. ಅರಣ್ಯ ಭೂಮಿ ತಕರಾರು ಬಗೆಹರಿಸಿ ಮುಂದಿನ 140 ಕಿ.ಮೀ ಕಾಮಗಾರಿ ಪೂರ್ಣಗೊಳಿಸಿ, ತುಮಕೂರಿಗೆ ನೀರು ಹರಿಸಲಾಗುವುದು’ ಎಂದು ಹೇಳಿದರು.

‘ಹೆಬ್ಬನಹಳ್ಳಿ ವಿತರಣಾ ತೊಟ್ಟಿ 4ರಿಂದ 32 ಕಿ.ಮೀ. ದೂರದಲ್ಲಿ ಎಸ್ಕೇಪ್ ಚಾನೆಲ್ ಮಾಡಲಾಗಿದೆ. ಅಲ್ಲಿಂದ ನಾಲೆ ಮೂಲಕ ವಾಣಿವಿಲಾಸ ಸಾಗರಕ್ಕೆ ನೀರು ಹರಿಸಲಾಗುವುದು. ನ. 1ರ ವೇಳೆಗೆ ಸುಮಾರು 5 ಟಿಎಂಸಿ ಅಡಿ ನೀರು ಮೇಲಕ್ಕೆ ಎತ್ತಲಾಗುವುದು. ಅರಣ್ಯ ಇಲಾಖೆಯಿಂದ 502 ಎಕರೆ ಜಮೀನು ಪಡೆಯಬೇಕಾಗಿದ್ದು, ಅದಕ್ಕೆ ಬದಲು 452 ಎಕರೆ ಜಮೀನು ನೀಡಿದ್ದೇವೆ. ಮುಂದಿನ ನಾಲ್ಕು ತಿಂಗಳಲ್ಲಿ ಈ ಕೆಲಸ ಮುಗಿಯಲಿದ್ದು, ಆ ನಂತರ ತುಮಕೂರು ಭಾಗದ ಕೆಲಸ ತ್ವರಿತವಾಗಿ ಮುಗಿಸಲಾಗುವುದು’ ಎಂದರು.

‘ಯೋಜನೆಯ ಒಟ್ಟು 24 ಟಿಎಂಸಿ ಅಡಿ ನೀರನ್ನು ಕುಡಿಯುವ ನೀರು ಹಾಗೂ ಕೆರೆಗಳನ್ನು ತುಂಬಿಸಲು ಉದ್ದೇಶಕ್ಕೆ ಬಳಸಿಕೊಳ್ಳಲಾಗುವುದು. ಪ್ರಾಯೋಗಿಕ ಪರೀಕ್ಷೆ ನಡೆಸುವುದಕ್ಕೆ ಮೊದಲು ಒಂದಷ್ಟು ಕಡೆ ನೀರು ಸೋರಿಕೆಯಾಗಿತ್ತು. ಅದನ್ನು ಸರಿಪಡಿಸಲಾಗಿದೆ. ಸಣ್ಣ, ನದಿ, ತೊರೆಗಳಿಂದ ಎತ್ತುವ ನೀರನ್ನು ಹೇಗೆ ಸದುಪಯೋಗಪಡಿಸಿಕೊಳ್ಳಬೇಕು ಎಂದು ಅಧ್ಯಯನ ಮಾಡಲು ಪ್ರತ್ಯೇಕ ತಂಡ ರಚಿಸಲಾಗಿದೆ’ ಎಂದು ಹೇಳಿದರು.

‘ತುಂಗಭದ್ರಾ ಕ್ರಸ್ಟ್ ಗೇಟ್ ತುಂಡಾದ ಅವಘಡ ಸಂಭವಿಸಿದ ಮೇಲೆ ಸೆಕ್ಷನ್ 38, 39 ಅಣೆಕಟ್ಟು ಸಂರಕ್ಷಣಾ ಕಾಯ್ದೆ ಪ್ರಕಾರ, ಸಿಡಬ್ಲ್ಯುಸಿ ಮಾಜಿ ಅಧ್ಯಕ್ಷ ಎ.ಕೆ. ಬಜಾಜ್ ಅವರ ಅಧ್ಯಕ್ಷತೆಯಲ್ಲಿ ನೂತನವಾಗಿ ಅಣೆಕಟ್ಟು ಸಂರಕ್ಷಣೆ ಪರಿಶೀಲನಾ ಸಮಿತಿ ರಚಿಸಲಾಗಿದೆ’ ಎಂದರು.

‘ಕಬಿನಿ ಅಣೆಕಟ್ಟು ಕೂಡ ಅಪಾಯದಲ್ಲಿದೆ ಎಂದು ಮಾಧ್ಯಮಗಳು ವರದಿ ಮಾಡುತ್ತಿವೆ. ಈ ಸಮಿತಿ ಅಲ್ಲಿಗೂ ತೆರಳಿ ನೀರಿನ ಆಳಕ್ಕೆ ಇಳಿದು ಪರಿಶೀಲನೆ ನಡೆಸಿದೆ. ಯಾವುದಾದರೂ ತೊಂದರೆ ಇದ್ದರೆ ತಕ್ಷಣ ಕಾರ್ಯಪ್ರವೃತ್ತರಾಗುವಂತೆ ಸೂಚನೆ ನೀಡಿದ್ದೇನೆ’ ಎಂದು ಹೇಳಿದರು.

ಮುಖ್ಯಾಂಶಗಳು

- ನೀರು ಮೇಲಕ್ಕೆ ಎತ್ತುವ ಪಂಪ್‌ಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ
- ಪಂಪ್ ಮಾಡಿದ ನೀರನ್ನು ವಾಣಿವಿಲಾಸ ಸಾಗರಕ್ಕೆ ಹರಿಸಲು ಕ್ರಮ
- ತುಮಕೂರಿಗೂ ನೀರು ಹರಿಸಲು ಕ್ರಮ

1500ಕ್ಕೂ ಅಧಿಕ ವಿಶೇಷ ಬಸ್

ಗಣೇಶನ ಹಬ್ಬ; ಪ್ರಯಾಣಿಕರ ದಟ್ಟಣೆ ತಪ್ಪಿಸಲು ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೌರಿ–ಗಣೇಶ ಹಬ್ಬದ ಸಂದರ್ಭದಲ್ಲಿ ಉಂಟಾಗುವ ಪ್ರಯಾಣಿಕರ ದಟ್ಟಣೆಯನ್ನು ಕಡಿಮೆ ಮಾಡಲು ಕೆಎಸ್ಆರ್‌ಟಿಸಿ 1,500ಕ್ಕೂ ಅಧಿಕ ವಿಶೇಷ ಬಸ್‌ಗಳನ್ನು ಓಡಿಸಲು ನಿರ್ಧರಿಸಿದೆ.

ಸೆಪ್ಟೆಂಬರ್ 5ರಿಂದ 7ರವರೆಗೆ ಬೆಂಗಳೂರಿನಿಂದ ಬಸ್‌ಗಳು ವಿವಿಧೆಡೆ ಸಂಚರಿಸಲಿವೆ. ಸೆ.8ರಂದು ವಾಪಸ್ಸಾಗಲಿವೆ.

ಗೌರಿ ವ್ರತ, ಗಣೇಶ ಚತುರ್ಥಿಗೆ ಊರಿಗೆ ತೆರಳುವವರ ಸಂಖ್ಯೆ ಹೆಚ್ಚಳವಾಗುವುದರಿಂದ ವಿಶೇಷ ಬಸ್‌ಗಳನ್ನು ಓಡಿಸಲಾಗುವುದು ಎಂದು ಕೆಎಸ್‌ಆರ್‌ಟಿಸಿ ಪ್ರಕಟಣೆ ತಿಳಿಸಿದೆ.

ಕರ್ನಾಟಕ ಸಾರಿಗೆ, ರಾಜಹಂಸ, ಸ್ಲೀಪರ್, ಐರಾವತ, ಐರಾವತ ಕ್ಲಬ್ ಕ್ಲಾಸ್, ಇ.ವಿ. ಪವರ್ ಪ್ಲಸ್, ಅಂಬಾರಿ ಕ್ಲಬ್ ಕ್ಲಾಸ್, ಅಂಬಾರಿ ಉತ್ಸವ್ ಹಾಗೂ ಪಲ್ಲಕ್ಕಿ ಸಾರಿಗೆ ಸೇವೆಗಳ ಜೊತೆಗೆ ಹೆಚ್ಚುವರಿ ಬಸ್‌ಗಳ ಸಂಚಾರ ಇರಲಿದೆ.

ಕೆಂಪೇಗೌಡ ಬಸ್ ನಿಲ್ದಾಣ, ಮೈಸೂರು ರಸ್ತೆ ಬಸ್ ನಿಲ್ದಾಣ ಮತ್ತು ಶಾಂತಿ ನಗರದ ಬಿಎಂಟಿಸಿ ಬಸ್ ನಿಲ್ದಾಣದಿಂದ ಬಸ್‌ಗಳು ಹೊರಡಲಿವೆ.

ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ, ಶೃಂಗೇರಿ, ಹೊರನಾಡು, ಶಿವಮೊಗ್ಗ, ಮಡಿಕೇರಿ, ಮಂಗಳೂರು, ದಾವಣಗೆರೆ, ಗೋಕರ್ಣ, ಕೊಲ್ಲೂರು, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಕಾರವಾರ, ಬಳ್ಳಾರಿ, ಹೊಸಪೇಟೆ, ಕಲಬುರಗಿ, ರಾಯಚೂರು ಮುಂತಾದ ಸ್ಥಳಗಳಿಗೆ ಹಾಗೂ ನೆರೆಯ ರಾಜ್ಯಗಳ ಹೈದರಾಬಾದ್, ಚೆನ್ನೈ, ಊಟಿ, ಕೊಡೈಕೆನಾಲ್, ಸೇಲಂ, ತಿರುಚಿನಾಪಳ್ಳಿ, ಪುದುಕೋಟೆ, ಮದುರೈ, ಪಣಜಿ, ಶಿರಡಿ, ಪುಣೆ, ಎರ್ನಾಕುಲಂ, ಪಾಲ್ಘಾಟ್ ಹಾಗೂ ಇತರೆ ಸ್ಥಳಗಳಿಗೆ ವಿಶೇಷ ಬಸ್‌ಗಳ ಕಾರ್ಯಾಚರಣೆ ಇರಲಿದೆ.

ಲಂಚ: ಶಿಕ್ಷೆಗೊಳಗಾದ ಉಪ ನೋಂದಣಾಧಿಕಾರಿ ವಜಾ

ನ್ಯಾಯಾಲಯದಿಂದ ಶಿಕ್ಷೆ – ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಂಚ ಪಡೆದ ಪ್ರಕರಣದಲ್ಲಿ ನ್ಯಾಯಾಲಯವು ಶಿಕ್ಷೆ ವಿಧಿಸಿದ್ದ ಉಪ ನೋಂದಣಾಧಿಕಾರಿ ಭಾಸ್ಕರ್ ಸಿದ್ದರಾಮಪ್ಪ ಚೌರ ಅವರನ್ನು ಕರ್ತವ್ಯದಿಂದ ವಜಾ ಮಾಡಿ ನೋಂದಣಿ ಮತ್ತು ಮುದ್ರಾಂಕ ಆಯುಕ್ತ ದಯಾನಂದ ಕೆ.ಎ. ಸೋಮವಾರ ಆದೇಶ ಹೊರಡಿಸಿದ್ದಾರೆ.

ಪ್ರಸ್ತುತ ಹೊಳೆನರಸೀಪುರದಲ್ಲಿ ಉಪ ನೋಂದಣಾಧಿಕಾರಿಯಾಗಿರುವ ಭಾಸ್ಕರ ಎಸ್. ಚೌರ 2019ರಲ್ಲಿ ಜಾಲದಲ್ಲಿ ಉಪ ನೋಂದಣಾಧಿಕಾರಿ ಆಗಿದ್ದಾಗ ನಿವೇಶನದ ಕ್ರಯಪತ್ರ ನೋಂದಣಿ ಮಾಡಿಕೊಡಲು ₹15,000 ಲಂಚ ಪಡೆಯುತ್ತಿದ್ದ ವೇಳೆ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ಸಿಕ್ಕಿಬಿದ್ದಿದ್ದರು. ಲಂಚ ಪಡೆದಿರುವುದು ಸಾಬೀತಾಗಿದ್ದರಿಂದ ಹೆಚ್ಚುವರಿ ನಗರ ಸಿವಿಲ್ ನ್ಯಾಯಾಲಯವು ಶುಕ್ರವಾರ ಮೂರು ವರ್ಷಗಳ ಜೈಲು ಶಿಕ್ಷೆ, ₹5 ಲಕ್ಷ ದಂಡ ವಿಧಿಸಿತ್ತು.

ಶಿಕ್ಷೆಗೆ ಒಳಗಾಗಿರುವ ಭಾಸ್ಕರ ಎಸ್. ಚೌರ ಅವರನ್ನು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿ 1957ರ ನಿಯಮ 8ರ ಅನ್ವಯ ತಕ್ಷಣವೇ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಜಾಗೊಳಿಸಲಾಗಿದೆ ಎಂದು ಸಕ್ಷಮ ಪ್ರಾಧಿಕಾರಿಯೂ ಆಗಿರುವ ದಯಾನಂದ ಅವರ ಆದೇಶದಲ್ಲಿ ತಿಳಿಸಲಾಗಿದೆ.

‘ಯುಪಿಎಸ್‌ಸಿ ರೀತಿ ಕೆಪಿಎಸ್‌ಸಿ ಪರೀಕ್ಷೆ ನಡೆಯಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯುಪಿಎಸ್‌ಸಿ ಪರೀಕ್ಷೆಗಳು ಇವತ್ತಿಗೂ ಭ್ರಷ್ಟಾಚಾರರಹಿತವಾಗಿ ನಡೆಯುತ್ತಿವೆ. ಅದೇ ಮಾದರಿಯಲ್ಲಿ ಕೆಪಿಎಸ್‌ಸಿ ಪರೀಕ್ಷೆಗಳನ್ನು ನಡೆಸಬೇಕು’ ಎಂದು ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಒತ್ತಾಯಿಸಿದರು.

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ನಡೆದ ಪರೀಕ್ಷೆಯ ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ತಪ್ಪುಗಳೇ ತುಂಬಿದ್ದರಿಂದ ಮರು ಪರೀಕ್ಷೆ ನಡೆಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಸೋಮವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

‘ದೇಶದಾದ್ಯಂತ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಇದರ ಮಧ್ಯೆ ಯುಪಿಎಸ್‌ಸಿ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಿದೆ’ ಎಂದರು.

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ಮರು ಪರೀಕ್ಷೆ ನಡೆಸಲು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆಯಿಂದ ಸೋಮವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು –ಪ್ರಜಾವಾಣಿ ಚಿತ್ರ

ಇನ್‌ಸೈಟ್ಸ್ ಐಎಎಸ್ ಸಂಸ್ಥಾಪಕ ಜಿ.ಬಿ. ವಿನಯಕುಮಾರ್ ಮಾತನಾಡಿ, ‘ಮರು ಪರೀಕ್ಷೆ ನಡೆಸಲು ಸೂಚನೆ ನೀಡಿರುವುದು ಉತ್ತಮ ನಿರ್ಧಾರ. ಆದರೆ, ಅಷ್ಟು ಸಾಲದು. ಕೆಪಿಎಸ್‌ಸಿಯ ಎಲ್ಲ ಭ್ರಷ್ಟ ಸದಸ್ಯರನ್ನು ಕಿತ್ತುಹಾಕಬೇಕು. ಪ್ರಾಮಾಣಿಕತೆ ಮತ್ತು ಅರ್ಹತೆ ಇರುವವರನ್ನು ನೇಮಿಸುವ ಮೂಲಕ ಆಮೂಲಾಗ್ರ ಬದಲಾವಣೆ ಮಾಡಬೇಕು’ ಎಂದು ಆಗ್ರಹಿಸಿದರು.

ನಟ ಚೇತನ್ ಅಹಿಂಸಾ, ವಕೀಲ ಹರಿರಾಮ್, ಅಕ್ಕ ಕೋಚಿಂಗ್ ಸೆಂಟರ್‌ನ ಶಿವಕುಮಾರ್, ಟಾಪರ್ಸ್ ಅಕಾಡೆಮಿಯ ಶಿವಕುಮಾರ್ ಹುಲುಮನಿ, ಕರವೇ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ಸಣ್ಣೀರಪ್ಪ, ಉಪಾಧ್ಯಕ್ಷ ಡಿ.ಪಿ. ಅಂಜನಪ್ಪ, ಬೆಂಗಳೂರು ನಗರ ಘಟಕದ ಅಧ್ಯಕ್ಷ ಧರ್ಮರಾಜ್, ಮುನಿಸ್ವಾಮಿ ಮಾತನಾಡಿದರು.

> **ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ಮರು ಪರೀಕ್ಷೆ ನಡೆಸಲು ಮುಖ್ಯಮಂತ್ರಿ ಸೂಚನೆ ನೀಡಿರುವುದು ಕರವೇ ನಡೆಸಿದ ಹೋರಾಟಕ್ಕೆ ಸಿಕ್ಕ ಜಯ**
> **ಟಿ.ಎ. ನಾರಾಯಣ ಗೌಡ,** ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ

‘ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಕುರ್ಚಿ ಖಾಲಿಯಿಲ್ಲ. ಕುರ್ಚಿ ಖಾಲಿ ಇದ್ದಿದ್ದರೆ ಅದರ ಬಗ್ಗೆ ಮಾತನಾಡಬಹುದಿತ್ತು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ನಾನು ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಎನ್ನುವ ಶಾಸಕ ಆರ್.ವಿ. ದೇಶಪಾಂಡೆ ಹೇಳಿಕೆ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಹಿರಿಯರಾದ ದೇಶಪಾಂಡೆ ಅವರು ಆಸೆ ಪಡುವುದು ತಪ್ಪಲ್ಲ. ಆದರೆ, ಮಾಧ್ಯಮಗಳ ಮುಂದೆ ಮಾತನಾಡಬಾರದಿತ್ತು’ ಎಂದರು.

‘ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ವಿರುದ್ಧ ನ್ಯಾಯಾಲಯದ ತೀರ್ಪು ಬಂದರೆ ಮುಂದಿನ ನಡೆ ಏನು’ ಎಂಬ ಪ್ರಶ್ನೆಗೆ, ‘ಯಾವುದೇ ವ್ಯತಿರಿಕ್ತ ಪರಿಣಾಮ ಆಗುವುದಿಲ್ಲ. ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ’ ಎಂದರು.

ಸಿ.ಎಂ ಜಾಲತಾಣ ನಿರ್ವಹಣೆ: ತಿಂಗಳಿಗೆ ₹54 ಲಕ್ಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಾಮಾಜಿಕ ಜಾಲತಾಣ ನಿರ್ವಹಣೆಗಾಗಿ ಪ್ರತಿ ತಿಂಗಳು ಸರಾಸರಿ ₹54 ಲಕ್ಷ ವೆಚ್ಚ ಮಾಡಲಾಗುತ್ತಿದೆ.

‘ಪಾಲಿಸಿ ಫ್ರಂಟ್’ ಎಂಬ ಸಂಸ್ಥೆ ಮುಖ್ಯಮಂತ್ರಿಯವರ ಅಧಿಕೃತ ಮತ್ತು ಖಾಸಗಿ ಸಾಮಾಜಿಕ ಜಾಲತಾಣಗಳನ್ನು ನಿರ್ವಹಿಸುತ್ತಿದೆ.

‘ರಾಜ್ಯವು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ. ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಹಣವಿಲ್ಲದ ಕಾರಣ ಕಾಮಗಾರಿಗಳೂ ನಿಂತು ಹೋಗಿವೆ. ಕೆಲಸ ಮಾಡಿದ ಗುತ್ತಿಗೆದಾರರಿಗೆ ನೀಡಲು ಹಣವಿಲ್ಲ. ಆದರೆ, ಮುಖ್ಯಮಂತ್ರಿ ಕಚೇರಿ ಸಾಮಾಜಿಕ ಜಾಲತಾಣದ ಮೂಲಕ ಪ್ರಚಾರಕ್ಕೆ ಭಾರಿ ಮೊತ್ತ ಖರ್ಚು ಮಾಡುತ್ತಿದೆ ಎಂಬ ವಿಷಯ ಗಮನಕ್ಕೆ ಬಂದಿದ್ದು, ಈ ಬಗ್ಗೆ ಮಾಹಿತಿ ನೀಡಬೇಕು’ ಎಂದು ಮರಿಲಿಂಗಗೌಡ ಮಾಲಿ ಪಾಟೀಲ ಎಂಬುವರು ಮಾಹಿತಿ ಹಕ್ಕು ಅಡಿ ಮಾಹಿತಿ ಕೋರಿದ್ದರು.

ಈ ಅರ್ಜಿಗೆ, ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಷನ್ ಮತ್ತು ಅಡ್ವರ್ಟೈಸಿಂಗ್ ಲಿಮಿಟೆಡ್ ಇದಕ್ಕೆ ಉತ್ತರ ನೀಡಿದ್ದು, ಸಂಸ್ಥೆಗೆ ಬಿಡುಗಡೆ ಮಾಡಿರುವ ಮೊತ್ತದ ವಿವರವನ್ನೂ ನೀಡಿದೆ. ‘ಪ್ರತಿ ತಿಂಗಳು ಸರಾಸರಿ ₹54 ಲಕ್ಷ ಪಾವತಿ ಮಾಡಲಾಗುತ್ತಿದೆ. 2023ರ ಅಕ್ಟೋಬರ್‌ನಿಂದ 2024ರ ಮಾರ್ಚ್ ಅವಧಿಯಲ್ಲಿ ₹3 ಕೋಟಿ ಪಾವತಿಸಲಾಗಿದೆ. 2024ರ ಮಾರ್ಚ್ ಒಂದೇ ತಿಂಗಳಲ್ಲಿ ಎರಡು ಬಿಲ್‌ಗಳ ಮೂಲಕ ₹1.06 ಕೋಟಿ ಪಾವತಿಸಲಾಗಿದೆ’ ಎಂದು ಹೇಳಿದೆ.

ಇದಕ್ಕೆ ಪ್ರತಿಕ್ರಿಯೆ ನೀಡಿರುವ ‘ಪಾಲಿಸಿ ಫ್ರಂಟ್’, ‘ನಾವು ಮುಖ್ಯಮಂತ್ರಿ ಮತ್ತು ವಾರ್ತಾ ಇಲಾಖೆಯ ಸಾಮಾಜಿಕ ಜಾಲತಾಣಗಳನ್ನು ನಿರ್ವಹಿಸುತ್ತಿದ್ದೇವೆ. ಸರ್ಕಾರದ ನೀತಿಗಳು, ಯೋಜನೆಗಳು, ಕಾರ್ಯಕ್ರಮಗಳ ಮಾಹಿತಿಯನ್ನು ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ತಲುಪಿಸುತ್ತಿದ್ದೇವೆ. ವಿವಿಧ ಕಾರ್ಯಕ್ರಮಗಳ ಪ್ರಚಾರಾಂದೋಲನಗಳಲ್ಲೂ ನಿರತರಾಗಿದ್ದೇವೆ’ ಎಂದು ಹೇಳಿಕೊಂಡಿದೆ.

ಅತ್ಯಾಚಾರ ಆರೋಪ: ಯೋಗ ಗುರು ಬಂಧನ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಹಿಂದಿನ ಜನ್ಮದಲ್ಲಿ ಸಂಬಂಧ ಇತ್ತು ಎಂದು ವಿದೇಶಿ ಮಹಿಳೆಯನ್ನು ನಂಬಿಸಿ ಅತ್ಯಾಚಾರ ಎಸಗಿದ ಆರೋಪದಲ್ಲಿ ‘ಕೇವಲ ಫೌಂಡೇಷನ್’ನ ಯೋಗ ಗುರು ಪ್ರದೀಪ್ ಉಲ್ಲಾಳ್ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಆನ್‌ಲೈನ್‌ನಲ್ಲಿ ಯೋಗ ತರಬೇತಿ ಪಡೆಯುತ್ತಿದ್ದ ನನ್ನನ್ನು ಮಲ್ಲೇನಹಳ್ಳಿ ಬಳಿ ಇರುವ ಯೋಗ ಕೇಂದ್ರಕ್ಕೆ 2021 ಮತ್ತು 2022ರಲ್ಲಿ ಮೂರು ಬಾರಿ ಕರೆಸಿಕೊಂಡು ಅತ್ಯಾಚಾರ ಎಸಗಿದ್ದ’ ಎಂದು ಯುವತಿ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದು, ಆರೋಪಿಯನ್ನು ಬಂಧಿಸಿದ್ದಾರೆ.

ಪ್ರದೀಪ್ ಉಲ್ಲಾಳ್

‘ಪಂಜಾಬ್‌ನ ನನ್ನ ಕುಟುಂಬ 2010ರಿಂದ ಕ್ಯಾಲಿಫೋರ್ನಿಯಾದಲ್ಲಿ ನೆಲಸಿದೆ. 2020ರಲ್ಲಿ ಸ್ನೇಹಿತನೊಬ್ಬನ ಮೂಲಕ ಪರಿಚಯವಾದ ಪ್ರದೀಪ್ ಉಲ್ಲಾಳ್, ಆನ್‌ಲೈನ್‌ನಲ್ಲಿ ಯೋಗಭ್ಯಾಸ ಮಾಡಿಸುತ್ತಿದ್ದ. 2021ರ ನ. 1ರಂದು ಮಲ್ಲೇನಹಳ್ಳಿಗೆ ಕರೆಸಿಕೊಂಡಿದ್ದ. 21 ದಿನ ಇಲ್ಲೇ ಉಳಿದಿದ್ದೆ’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ಹಿಂದಿನ ಜನ್ಮದಲ್ಲಿ ನಮ್ಮಿಬ್ಬರ ನಡುವೆ ಸಂಬಂಧ ಇತ್ತು ಎಂದು ಹೇಳಿ ಮೈ ಮುಟ್ಟುತ್ತಿದ್ದ. ಎನರ್ಜಿ ವರ್ಕ್, ಕುಂಡಲಿ ಬ್ಲಾಕ್, ಡಿವೈನ್ ಲವ್ ಮಾಡುತ್ತಿದ್ದೇನೆ ಎಂದು ಆಧ್ಯಾತ್ಮಿಕವಾಗಿ ಮಾತನಾಡಿ ಅತ್ಯಾಚಾರ ಮಾಡಿದ್ದ’ ಎಂದು ದೂರಿದ್ದಾರೆ.

ಸಿ.ಎಂ ಆಗಲು ದೇಶಪಾಂಡೆ ಅರ್ಹರು: ವೈದ್ಯ

ಕಾರವಾರ/ಧಾರವಾಡ: ಶಾಸಕ ಆರ್.ವಿ.ದೇಶಪಾಂಡೆ ಅವರು ಮುಖ್ಯಮಂತ್ರಿಆಗಲು ಅರ್ಹರು. ಅವರಿಗೆ ಸಿದ್ದರಾಮಯ್ಯ ಆಪ್ತರಾಗಿದ್ದು, ಅವರೇ ಮುಖ್ಯಮಂತ್ರಿಯಾಗಲು ಹೇಳಿರಬಹುದು’ ಎಂದು ಸಚಿವ ಮಂಕಾಳ ವೈದ್ಯ ಹೇಳಿದರು.

ಸಿದ್ದರಾಮಯ್ಯ ಅನುಮತಿ ನೀಡಿದರೆ, ತಾವು ಮುಖ್ಯಮಂತ್ರಿ ಆಗುವುದಾಗಿ ದೇಶಪಾಂಡೆ ಹೇಳಿಕೆ ನೀಡಿದ್ದಕ್ಕೆ ಸೋಮವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ಮುಖ್ಯಮಂತ್ರಿ ಬದಲಾವಣೆ ಸದ್ಯಕ್ಕಿಲ್ಲ. ಹೈಕಮಾಂಡ್ ಮಟ್ಟದಲ್ಲೂ ಚರ್ಚೆ ನಡೆದಿಲ್ಲ. ಒಂದು ವೇಳೆ ದೇಶಪಾಂಡೆ ಮುಖ್ಯಮಂತ್ರಿಯಾದರೆ, ಸಂತೋಷಪಡುವವರಲ್ಲಿ ನಾನು ಮೊದಲಿಗ’ ಎಂದರು.

ಧಾರವಾಡದಲ್ಲಿ ಸುದ್ದಿಗಾರರ ಜೊತೆ ಸಚಿವ ಜಮೀರ್ ಅಹಮದ್ ಖಾನ್ ಮಾತನಾಡಿ, ‘ಹಿರಿಯರಾದ ದೇಶಪಾಂಡೆ ಅವರು ಮುಖ್ಯಮಂತ್ರಿಯಾಗುವ ಆಸೆ ಇದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವುದರಲ್ಲಿ ತಪ್ಪೇನೂ ಇಲ್ಲ. ಆದರೆ, ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ’ ಎಂದರು.

> **ಹಿರಿಯ ಶಾಸಕ ಆರ್.ವಿ.ದೇಶಪಾಂಡೆ ಮುಖ್ಯಮಂತ್ರಿ ಆಗುವರು ಎಂದರೆ ಖುಷಿಯ ವಿಚಾರ. ಅವರು ಆ ಸ್ಥಾನಕ್ಕೇರಿದರೆ ಜಿಲ್ಲೆ ಅಭಿವೃದ್ಧಿ ಆಗುತ್ತದೆ. ಪಕ್ಷಾತೀತವಾಗಿ ಬೆಂಬಲಿಸುವೆ**
> **ಶಿವರಾಮ ಹೆಬ್ಬಾರ,** ಶಾಸಕ

ಒಂದೇ ಬೈಕ್‌ನಲ್ಲಿ ಮೂವರ ಪ್ರಯಾಣ: ಒಬ್ಬನ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷ್ಣರಾಜೇಂದ್ರ ಮಾರುಕಟ್ಟೆಯ ಬಿಜಿಎಸ್ ಮೇಲ್ಸೇತುವೆಯಲ್ಲಿ ಜಾಮಿಯಾ ಮಸೀದಿ ಎದುರು ನಡೆದ ಅಪಘಾತದಲ್ಲಿ ಬೈಕ್ ಮಧ್ಯದಲ್ಲಿ ಕುಳಿತಿದ್ದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದು, ಹಿಂಬದಿ ಸವಾರ ಗಾಯಗೊಂಡಿದ್ದಾರೆ.

ಮೊಹಮ್ಮದ್ ನೌಹಿದುರ್ ರೆಹಮಾನ್(19) ಮೃತಪಟ್ಟವರು.

ಅಮೀರ್ ಫಸಿ(19) ಅವರಿಗೆ ಗಾಯವಾಗಿದ್ದು, ಸವಾರ ಮೊಹಮ್ಮದ್ ಶೋಯೆಬ್ ಪಾರಾಗಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

‘ಶನಿವಾರ ರಾತ್ರಿ 8.30ರ ಸುಮಾರಿಗೆ ಒಂದೇ ಬೈಕ್‌ನಲ್ಲಿ ಮೂವರು ತೆರಳುತ್ತಿದ್ದರು. ಮೊಹಮ್ಮದ್ ಉಲ್ಲಾಖಾನ್ ಅವರು ಬೈಕ್ ಚಲಾಯಿಸುತ್ತಿದ್ದರು. ಜಾಮಿಯಾ ಮಸೀದಿ ಎದುರು ದ್ವಿಚಕ್ರ ವಾಹನವನ್ನು ಅತಿ ವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸುತ್ತಿದ್ದರು. ಮುಂದೆ ತೆರಳುತ್ತಿದ್ದ ಆಟೊಗೆ ಡಿಕ್ಕಿಯಾದ ಪರಿಣಾಮ ರೆಹಮಾನ್ ಅವರಿಗೆ ತಲೆಯ ಭಾಗಕ್ಕೆ ಗಂಭೀರ ಸ್ವರೂಪದ ಗಾಯವಾಗಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದ ಅವರು ಭಾನುವಾರ ಮೃತಪಟ್ಟಿದ್ದಾರೆ’ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಸಿಟಿ ಮಾರುಕಟ್ಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲೈಂಗಿಕ ದೌರ್ಜನ್ಯ: ಅರುಣ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಅರುಣ್ ಕುಮಾರ್

ಪುತ್ತೂರು (ದಕ್ಷಿಣ ಕನ್ನಡ): ಬಿಜೆಪಿ ಮುಖಂಡ ಅರುಣ್ ಕುಮಾರ್ ಪುತ್ತಿಲ ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಿ 47 ವರ್ಷದ ಮಹಿಳೆಯೊಬ್ಬರು ದೂರು ನೀಡಿದ್ದು, ಇಲ್ಲಿನ ಮಹಿಳಾ ಪೊಲೀಸ್ ಠಾಣೆಯಲ್ಲಿ ಭಾನುವಾರ ಎಫ್‌ಐಆರ್ ದಾಖಲಾಗಿದೆ.

‘ನನ್ನನ್ನು ಬೆಂಗಳೂರಿನ ಹೋಟೆಲ್ ಒಂದಕ್ಕೆ 2023ನೇ ಜೂನ್ ತಿಂಗಳಲ್ಲಿ ಕರೆಸಿಕೊಂಡಿದ್ದ ಅರುಣ್ ಕುಮಾರ್ ಪುತ್ತಿಲ, ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಸಿ, ನನ್ನ ಇಚ್ಛೆಗೆ ವಿರುದ್ಧವಾಗಿ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ’ ಎಂದು ಮಹಿಳೆ ಆರೋಪಿಸಿದ್ದಾರೆ

ಆರೋಪಿ ಅರುಣ್ ಪುತ್ತಿಲ ಅವರು ಇಲ್ಲಿನ ಪ್ರಿನ್ಸಿಪಾಲ್ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಸೋಮವಾರ ಹಾಜರಾಗಿದ್ದಾರೆ. ವಿಚಾರಣೆ ನಡೆಸಿದ ನ್ಯಾಯಾಲಯವು ಅವರಿಗೆ ಜಾಮೀನು ಮಂಜೂರು ಮಾಡಿದೆ.

ದೂರಿನ ಕುರಿತು ಪ್ರತಿಕ್ರಿಯಿಸಿರುವ ಅರುಣ್ ಕುಮಾರ್ ಪುತ್ತಿಲ, ‘ನ್ಯಾಯಾಂಗ ವ್ಯವಸ್ಥೆಯ ಮೇಲೆ ಸಂಪೂರ್ಣ ವಿಶ್ವಾಸವಿದೆ. ನನ್ನ ವಿರುದ್ಧ ಮಾಡಲಾಗಿರುವ ಸುಳ್ಳು ಆರೋಪಗಳಿಗೆ ಸಂಬಂಧಿಸಿ ಕಾನೂನು ಹೋರಾಟ ನಡೆಸುತ್ತೇನೆ’ ಎಂದು ತಿಳಿಸಿದ್ದಾರೆ.

ಭಕ್ತರ ಎದುರು ಆರೋಪ ಸಾಬೀತುಪಡಿಸಲಿ; ಸ್ವಾಮೀಜಿ ಸವಾಲು

ಸಿರಿಗೆರೆ ಶ್ರೀ ಬೆಂಬಲಿಸಿ ಸಾವಿರಾರು ಭಕ್ತರ ಜಾಥಾ

ಪ್ರಜಾವಾಣಿ ವಾರ್ತೆ

ಸಿರಿಗೆರೆ (ಚಿತ್ರದುರ್ಗ): ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯನ್ನು ಬೆಂಬಲಿಸಿ ತಾಲ್ಲೂಕಿನ ಭರಮಸಾಗರ ಹೋಬಳಿ ವ್ಯಾಪ್ತಿಯ 36 ಹಳ್ಳಿಗಳ ಸಾವಿರಾರು ಭಕ್ತರು ಇಲ್ಲಿನ ಬೆನ್ನೂರು ಸರ್ಕಲ್‌ನಿಂದ ಸಿರಿಗೆರೆಯವರೆಗೂ 6 ಕಿ.ಮೀ. ಪಾದಯಾತ್ರೆ ಹಾಗೂ ಬೈಕ್ ಜಾಥಾ ನಡೆಸಿದರು.

ಬೆನ್ನೂರು ಸರ್ಕಲ್‌ನಲ್ಲಿ ಸೇರಿದ್ದ ಭಕ್ತರು, ಶ್ರೀಗಳ ವಿರುದ್ಧ ದಾವಣಗೆರೆಯಲ್ಲಿ ಭಾನುವಾರ ಸಭೆ ನಡೆಸಿದವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ಮುಖಂಡ ಬಿ.ಸಿ.ಪಾಟೀಲ್, ಉದ್ಯಮಿ ಅಣಬೇರು ರಾಜಣ್ಣ ವಿರುದ್ಧ ಘೋಷಣೆ ಕೂಗಿದರು.

ಶ್ರೀಗಳ ಪರ ಘೋಷಣೆ ಕೂಗುತ್ತಾ ಕಾಲ್ನಡಿಗೆ, ಬೈಕ್ ಜಾಥಾ ಮೂಲಕ ಮಠದ ಆವರಣ ತಲುಪಿದರು. ಸದ್ಧರ್ಮ ನ್ಯಾಯಪೀಠದಲ್ಲಿದ್ದ ಶ್ರೀಗಳನ್ನು ಭೇಟಿಯಾಗಿ ಅವರನ್ನು ಬೆಂಬಲಿಸಿದ ಘೋಷಣಾ ಪತ್ರಗಳನ್ನು ಸಮರ್ಪಿಸಿದರು.

ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಬೆಂಬಲಿಸಿ 36 ಹಳ್ಳಿಗಳ ಸಾವಿರಾರು ಭಕ್ತರು ಬೆನ್ನೂರು ಸರ್ಕಲ್‌ನಿಂದ ಸಿರಿಗೆರೆಯವರೆಗೂ ಪಾದಯಾತ್ರೆ ನಡೆಸಿದರು – ಪ್ರಜಾವಾಣಿ ಚಿತ್ರ

ಸ್ವಾಮೀಜಿ ಸವಾಲು: ‘₹ 2,000 ಕೋಟಿ ಬೆಲೆಯ ಮಠದ ಆಸ್ತಿಯನ್ನು ನಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಂಡಿದ್ದೇವೆ ಎಂದು ಆಪಾದಿಸುವವರು ಅದನ್ನು ಭಕ್ತರ ಮುಂದೆ ಸಾಬೀತುಪಡಿಸಲಿ’ ಎಂದು ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸವಾಲು ಹಾಕಿದರು.

‘ಮಠದ ಆಸ್ತಿ ಹಿರಿಯ ಗುರುಗಳ ಹೆಸರಿನಲ್ಲಿದೆ. ಇವೆಲ್ಲವೂ ಮಠದ ಆಸ್ತಿಗಳೇ ಆಗಿದ್ದು, ಟ್ರಸ್ಟ್ ಡೀಡ್‌ನಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ. ಹೀಗಿದ್ದೂ ಮಿಥ್ಯಾರೋಪ ಮಾಡಲಾಗುತ್ತಿದೆ’ ಎಂದು ವಾಗ್ದಾಳಿ ನಡೆಸಿದರು.

ಮಠದ ಹಿಂದಿನ ಕಾರ್ಯದರ್ಶಿಯ ಹೆಸರಿನಲ್ಲಿ ಉತ್ತಂಗಿ, ಮೈಸೂರು, ಸಿರಿಗೆರೆ, ಬೆನ್ನೂರು ಸರ್ಕಲ್‌ನಲ್ಲಿ ಆಸ್ತಿಗಳಿವೆ. ಅವರಿಗೆ ಮಠದ ಬಗ್ಗೆ ಕಾಳಜಿ ಇದ್ದರೆ ಆ ಆಸ್ತಿಗಳನ್ನು ಮಠಕ್ಕೆ ವರ್ಗಾಯಿಸಿಕೊಡುವ ಕೆಲಸ ಮಾಡಲಿ. ರಾಷ್ಟ್ರೀಯ ಹೆದ್ದಾರಿಗೆ ಸ್ವಾಧೀನವಾದ ಜಮೀನಿಗೆ ಬಂದ ₹40 ಲಕ್ಷ ಪರಿಹಾರದ ಹಣ ಹಿಂದಿನ ಕಾರ್ಯದರ್ಶಿಯಿಂದ ಬರಬೇಕಾಗಿದೆ. ವಿನಾಕಾರಣ ದೂಷಿಸುವ ಜನರು ಈ ಆಸ್ತಿಗಳು ಮಠಕ್ಕೆ ಸೇರುವಂತೆ ಮಾಡಲಿ’ ಎಂದು ತಿಳಿಸಿದರು.

ಕ್ಷೇಮ ಕುಶಲ

ಸೋಲುವುದನ್ನೂ ಕಲಿಸಬೇಕಿದೆ

ಸುಷ್ಮಾ ಸವಸುದ್ದಿ

ತ್ರಮ್ಮನಿಗೆ ಟೈಫಾಯ್ಡ್ ಆದ ಕಾರಣ ಆಸ್ಪತ್ರೆಗೆ ಸೇರಿಸಿದ್ದೆವು. ಅವನ ಪಕ್ಕದ ಬೆಡ್‌ನಲ್ಲಿ ಎಂಟೊ-ಒಂಬತ್ತೊ ಕ್ಲಾಸಿನ ಹುಡುಗ ಮಲಗಿದ್ದ. ಅವನಿಗೆ ಇಂತದ್ದೇ ಕಾಯಿಲೆ ಇದೆ ಎಂದು ವೈದ್ಯರಿಗೂ ಹೇಳಲು ಆಗಿರಲಿಲ್ಲ. ಯಾವುದೋ ಆಘಾತದಿಂದ ನಿಸ್ತೇಜ ಆಗಿರಬೇಕು ಎಂದಿದ್ದರಂತೆ. ಉತ್ಸಾಹದ ಚಿಲುಮೆಯಂತಿದ್ದ ಮಗ, ಮುದುರಿಕೊಂಡು ಹಾಸಿಗೆ ಹಿಡಿದಿದ್ದು ಅರಗಿಸಿಕೊಳ್ಳಲು ತಂದೆ-ತಾಯಿಗೂ ಕಷ್ಟವಾಗಿತ್ತು. ವಿಷಯ ತಿಳಿದು ಆಸ್ಪತ್ರೆಗೆ ಬಂದ ಶಿಕ್ಷಕಿಯನ್ನು ಕಂಡಿದ್ದೆ ತಡ, 'ಟೀಚರ್ ಕ್ಷಮಿಸಿ. ರಾಜ್ಯಮಟ್ಟದ ಸ್ಪರ್ಧೆಯಲ್ಲಿ ನನಗೆ ಗೆಲ್ಲಲು ಆಗಲಿಲ್ಲ' ಎಂದು ಕಣ್ಣೀರು ಹಾಕಿದ. ಆಗ ಆತನ ಬಗ್ಗೆ ಸಣ್ಣ ಸುಳಿವು ಸಿಕ್ಕಿತು. ಆಟ-ಪಾಠದಲ್ಲಿ ಸದಾ ಮುಂದಿದ್ದ ಆತನಿಗೆ ಒಂದು ಸೋಲು ಆಘಾತಗೊಳಿಸಿತ್ತು. ಗೆಲ್ಲುವುದನ್ನು ಕಲಿಸಿದ್ದ ಶಿಕ್ಷಕರು ಮತ್ತು ಪಾಲಕರು, ಸೋಲನ್ನು ಸ್ವೀಕರಿಸುವುದು ಹೇಗೆ ಎಂಬುದನ್ನು ಅವನಿಗೆ ಕಲಿಸುವುದನ್ನು ಮರೆತಿದ್ದರು. 'ಓದಬೇಕು, ರ‍್ಯಾಂಕ್ ಬರಬೇಕು, ಸ್ಪರ್ಧೆಗಳಲ್ಲಿ ಗೆಲ್ಲಬೇಕು, ಓದಿನ ಜೊತೆಗೆ ನೃತ್ಯ, ಚಿತ್ರಕಲೆ, ಸಂಗೀತ, ತಂತ್ರಜ್ಞಾನ – ಎಲ್ಲವನ್ನೂ ಕಲಿಯಬೇಕು. ಚೆನ್ನಾಗಿ ಓದಿದರೆ ಮಾತ್ರ ಒಂದು ಒಳ್ಳೆಯ ಕೆಲಸ. ಚೆನ್ನಾದ ಕೆಲಸವನ್ನು ಗಿಟ್ಟಿಸಿಕೊಂಡರೇ ಮಾತ್ರ ಒಂದು ಒಳ್ಳೆಯ ಬದುಕು. ಸ್ಪರ್ಧಾತ್ಮಕ ಜಗತ್ತಿದು... ಓಡಲೇಬೇಕು... ಗೆಲ್ಲಲೇಬೇಕು...' – ಎನ್ನುವುದನ್ನೇ ಸತತವಾಗಿ ಮಕ್ಕಳ ತಲೆಯಲ್ಲಿ ತುರುಕುತ್ತಿದ್ದೇವೆ. ಈ ರೀತಿಯ ನಡೆ, ಒತ್ತಡ ಕೇವಲ ಪಾಲಕರದ್ದಲ್ಲ; ನಮ್ಮ ವ್ಯವಸ್ಥೆಯೇ ಹಾಗಾಗಿದೆ. ಓಡುತ್ತಿರುವ ಜಗತ್ತು ಓಡುವುದಕ್ಕೆ ಮಾತ್ರವೇ ಉತ್ತೇಜಿಸುತ್ತದೆ. ಅದು ತಪ್ಪೂ ಅಲ್ಲ. ಆದರೆ ಓಡುವಾಗ ಎಡವಿ ಬೀಳುವುದು, ಗಾಯಗೊಳ್ಳುವುದು ಸಹಜ ಎನ್ನುವುದನ್ನು, ಆ ಗಾಯವನ್ನು ಸಹಿಸಿಕೊಳ್ಳುವುದನ್ನು, ಮತ್ತೆ ಮೈಕೊಡವಿ ಏಳುವುದನ್ನು, ಎದ್ದು ಓಡುವುದನ್ನು, ತಮ್ಮೊಂದಿಗೆ ಓಡುತ್ತಿರುವವರು ಎಡುವಿದಾಗ ಕೈಚಾಚುವ ಔದಾರ್ಯವನ್ನು ಕಲಿಸುವುದನ್ನು ಮರೆಯುತ್ತಿದ್ದೇವೆ ಎಂದು ಅನ್ನಿಸುವುದಿಲ್ಲವೇ?!

'ಗುರುಗಳು ಬೈದರು, ಪರೀಕ್ಷೆಯಲ್ಲಿ ಫೇಲಾದೆ, ಕೆಲಸ ಸಿಗಲಿಲ್ಲ, ಸಾಲ ತೀರಿಸೋಕೆ ಆಗ್ಲಿಲ್ಲ, ಅವಮಾನ ಆಯ್ತು, ನಂಬಿದವರು ಬಿಟ್ಟುಹೋದರು, ಮೋಸಕ್ಕೊಳಗಾದೆ' ಎನ್ನುವ ಅನೇಕ ಕಾರಣಗಳಿಗೆ ಆತ್ಮಹತ್ಯೆ ಮಾಡಿಕೊಳ್ಳುವವರ ಸುದ್ದಿಗಳು ಇಂದು ಅಷ್ಟೇನು ಆಘಾತ ಹುಟ್ಟಿಸದಷ್ಟು ಸಾಮಾನ್ಯವಾಗಿ ಬಿಟ್ಟಿವೆಯಲ್ಲವೆ? ಶ್ರೀಮಂತ ಮನೆತನದ ಯುವತಿಯೊಬ್ಬಳು ತನ್ನ ಚೆಂದದ ಮುಖದ ಮೇಲಾದ ಮೊಡವೆಗಳಿಗೆ ಬೇಸತ್ತು, ಖಿನ್ನತೆಗೆ ಒಳಗಾಗಿ, ಆತ್ಮಹತ್ಯೆಯನ್ನು ಮಾಡಿಕೊಂಡಳು ಎಂಬ ವಿಷಯ ತೀರಾ ಗಾಸಿಗೊಳಿಸಿತ್ತು. ವಿಶ್ವವಿದ್ಯಾಲಯಗಳಲ್ಲಿ ಪದವಿ ಗಿಟ್ಟಿಸಿಕೊಂಡ ವಿದ್ಯಾವಂತವರೂ ಹೀಗೆ ಸಣ್ಣ ಪುಟ್ಟ ನೋವು, ನಿರಾಸೆ, ಅವಮಾನಗಳಿಗೆ ಹೆದರಿ ಜೀವವನ್ನೇ ಅಂತ್ಯಗೊಳಿಸಿಕೊಳ್ಳುವ ನಿರ್ಧಾರಕ್ಕೆ ಬರುತ್ತಾರೆ ಎಂದರೆ ಆ ಶಿಕ್ಷಣ ಕಲಿಸಿದ್ದಾದರೂ ಏನು?

ವಾಸ್ತವವನ್ನು ತೆರೆದಿಡಿ: ಮನೆಯೇ ಮೊದಲ ಪಾಠಶಾಲೆ. ಅದು ನಮಗೆ ಜಗತ್ತನ್ನು ತೋರಿಸುವ ಮೊದಲ ಕಿಟಕಿ. ಗೆಲ್ಲುವ, ಸೋಲುವ ಪಾಠಗಳೂ ಅಲ್ಲಿಂದಲೇ ನಮ್ಮ ಮಕ್ಕಳಿಗೆ ಶುರುವಾಗಬೇಕು. ಮಕ್ಕಳನ್ನು ಅತಿ ಮುದ್ದು ಮಾಡುವ ಭರದಲ್ಲಿ ಪಾಲಕರು ವಾಸ್ತವವನ್ನು ಮುಚ್ಚಿಡುತ್ತಾರೆ. ತಮ್ಮ ಕಷ್ಟ-ಸೆಣಸಾಟಗಳನ್ನು ಅವರಿಂದ ಮರೆಮಾಚಿದರೆ ಮುಂದೊಮ್ಮೆ ಕಲ್ಲು-ಮುಳ್ಳುಗಳ ದಾರಿ ಎದುರಾದಾಗ ನಡಿಗೆ ಕಷ್ಟವಾಗಿಬಿಡಬಹುದು. ನಡೆಯುವುದನ್ನೇ ನಿಲ್ಲಿಸಿಬಿಡಬಹುದು.

ತಿರಸ್ಕಾರವನ್ನು ಸ್ವೀಕರಿಸಲು ಕಲಿಸಿ: ಸೋಲು, ತಿರಸ್ಕಾರ, ಅವಮಾನಗಳೆಲ್ಲ ಬದುಕಿನಲ್ಲಿ ಸಹಜ ಎಂಬುದನ್ನು ಮಕ್ಕಳ ಮನಸ್ಸಲ್ಲಿ ಗಟ್ಟಿಯಾಗಿ ಬಿತ್ತಬೇಕಿದೆ. ಅವುಗಳು ಎದುರಾಗುವುದು ಬದುಕನ್ನು ಮತ್ತಷ್ಟು ಗಟ್ಟಿಗೊಳಿಸುವುದಕ್ಕಾಗಿಯೇ ಹೊರತು ಬದುಕನ್ನು ಮುಗಿಸಲು ಅಲ್ಲ. ಸೋಲು, ತಿರಸ್ಕಾರವನ್ನು ಎದುರಿಸಲಾಗದವರು ಖಿನ್ನತೆಗೆ ಜಾರುವ ಅಥವಾ ತನಗೆ ಸಿಗದದ್ದು ಮತ್ತೆ ಯಾರಿಗೂ ಸಿಗದಿರಲಿ ಎನ್ನುವ ಪ್ರತೀಕಾರದ ಮನಃಸ್ಥಿತಿಗೆ ಹೋಗುವ ಸಾಧ್ಯತೆ ಹೆಚ್ಚು. ಎಲ್ಲರ ಅಭಿಪ್ರಾಯಗಳನ್ನೂ ಗೌರವಿಸುವುದನ್ನು ನಮ್ಮ ನಡೆಯಿಂದಲೇ ಮಕ್ಕಳಿಗೆ ಕಲಿಸಬೇಕು.

ಮನಬಿಚ್ಚಿ ಮಾತನಾಡಿ: ಮಕ್ಕಳಿಗೆ ನಾವು ಕೊಡಬಹುದಾದ ದೊಡ್ಡ ಉಡುಗೊರೆ ಎಂದರೆ ಅವರಿಗಾಗಿ ನಾವು ನೀಡುವ ಸಮಯ. ಅವರೊಂದಿಗೆ ನಿತ್ಯದ ಆಗು-ಹೋಗುಗಳನ್ನು ಮಾತನಾಡುವುದು, ಅವರು ಮಾಡುವ ತಪ್ಪು-ಒಪ್ಪುಗಳನ್ನೆಲ್ಲ ನಮ್ಮಲ್ಲಿ ಹೇಳಿಕೊಳ್ಳುವಷ್ಟು ನಮ್ಮ ಬಗ್ಗೆ ವಿಶ್ವಾಸವನ್ನು ಬೆಳೆಸಿಕೊಳ್ಳುವಂತೆ ಮಾಡುವುದು ಅಗತ್ಯ. ಹೊರ ಜಗತ್ತಿನ ಲೋಕರೂಢಿಗಳ ಜತೆಗೆ ಒಳ ಜಗತ್ತಿನ ತಳಮಳವನ್ನೂ ಮನಬಿಚ್ಚಿ ನಮ್ಮಲ್ಲಿ ಅವರು ಹೇಳಿಕೊಳ್ಳುವಷ್ಟು ನಾವು ಅವರಿಗೆ ಒಳ್ಳೆಯ ಸ್ನೇಹಿತರಾದರೇ ಸಾಕು. ಎಂಥದೇ ಕಷ್ಟಕಾಲದಲ್ಲೂ ಅವರಿಗೆ ಒಂಟಿತನ ಕಾಡದು. ಬದುಕಿನ ಉದ್ದೇಶ ಗೆಲ್ಲುವುದಲ್ಲ; ಸೋಲುವುದೂ ಅಲ್ಲ. ಕುವೆಂಪು ಹೇಳಿದಂತೆ 'ಬದುಕಿನ ಉದ್ದೇಶ ಬದುಕುವುದು'. ನಾವು ಮಕ್ಕಳನ್ನು ಗೆಲುವಿಗಾಗಿ ಅಲ್ಲ, ಬದುಕಿಗಾಗಿ ಸಜ್ಜುಗೊಳಿಸಬೇಕಿದೆ. ❖

ಹೋಲಿಕೆ ಬೇಡ

ಇನ್ನೊಬ್ಬರೊಂದಿಗೆ ಮಾಡುವ/ಮಾಡಿಕೊಳ್ಳುವ ಹೋಲಿಕೆ ಮನುಷ್ಯನ ಬಹುದೊಡ್ಡ ವೈರಿ. ಅದು ಕೆಲವೊಮ್ಮೆ ನಮ್ಮ ಖುಷಿ, ಸಂತೃಪ್ತಿಗಳನ್ನೇ ನುಂಗಿಬಿಡುತ್ತದೆ. ಕೆಲವೊಮ್ಮೆ ಅದು ನಮ್ಮ ಜೀವನದ ದಾರಿಯನ್ನೇ ಬದಲಿಸುವ ಅಪಾಯವೂ ಇದೆ. ಹಾರುವ ಹಕ್ಕಿಯನ್ನು ಈಜುವ ಮೀನಿಗೆ ಹೋಲಿಸಿ, ನೀರಿಗೆ ಬಿಡುವುದು ಎಷ್ಟು ಮೂರ್ಖವೋ, ಎಲ್ಲ ಮಕ್ಕಳಿಗೂ ಓದುವ, ರ‍್ಯಾಂಕ್ ಬರಲೇಬೇಕೆಂದು ಒತ್ತಡ ಹೇರುವುದೂ ಅಷ್ಟೇ ಮೂರ್ಖತನ. ಮತ್ತೊಬ್ಬರಿಗೆ ಹೋಲಿಕೆಯನ್ನು ಮಾಡಿ ಜರಿಯುವುದು ಖಿನ್ನತೆಗೆ, ಕೀಳರಿಮೆಗೆ ಕಾರಣವಾಗಬಹುದು.

ಮನಸ್ಸಿನ ಕಸದಿಂದ ರಸ!

ಡಾ. ಕೆ. ಎಸ್. ಪವಿತ್ರ

ಒಬ್ಬ ವ್ಯಕ್ತಿಗೆ ತನ್ನ ಪಕ್ಕದ ಮನೆಯವರನ್ನು ಕಂಡರೆ ಬಲು ಸಿಟ್ಟು. ಆದರೆ ಸಿಟ್ಟನ್ನು ಹೊರಹಾಕಿ, ಜಗಳವಾಡುವ ಬದಲು, ಆತ ತನ್ನ ಸುತ್ತಮುತ್ತಲ ಖಾಲಿ ಜಾಗದಲ್ಲಿ ಚಿಕ್ಕದೊಂದು ಕೈತೋಟ ಮಾಡುವುದನ್ನು ಆರಂಭಿಸಿದ್ದಾನೆ. ಗುದ್ದಲಿಯಿಂದ ಅಗೆಯುವುದರಲ್ಲಿ, ಪ್ರತಿನಿತ್ಯ ಮಣ್ಣು ತೋಡಿ, ಕಳೆ ತೆಗೆದು, ನೀರನ್ನು ಹಾಕುವಾಗ ವ್ಯಯವಾಗುವ ಶಕ್ತಿಯಲ್ಲಿ ಕೋಪದಿಂದ-ನೆರೆಯವರ ಮೇಲಿರುವ ಅಸಹನೆಯಿಂದ ಉಂಟಾದ ಶಕ್ತಿಯೂ ಅಡಕವಾಗಿಬಿಡುತ್ತದೆ. ಗುದ್ದುವ-ತೋಡುವ-ಅಗೆಯುವ-ನೆಡುವ -ನೀರು ಹಾಕುವ ಕ್ರಿಯೆಗಳೆಲ್ಲಾ ಆತನ ನಕಾರಾತ್ಮಕ ಭಾವನೆಗಳನ್ನು ಹೊರ ಹಾಕಿ ಈಗ ಆತನ ಕೈತೋಟ ಬಣ್ಣ ಬಣ್ಣದ ಹೂಗಳಿಂದ ನಳನಳಿಸುತ್ತಿದೆ. ಆತನೀಗ ನೆರೆಹೊರೆಯವರ ಮೇಲೆ ಸಿಡುಕುವ ಸಿಡಿಮಿಡಿ ವ್ಯಕ್ತಿಯಲ್ಲ. ತನ್ನ ಕೈತೋಟದಲ್ಲಿ ಬಣ್ಣದ ಹೂಗಳನ್ನು ನೋಡುತ್ತ ಆನಂದಿಸುವ, ಸಂತೃಪ್ತ ಮನುಷ್ಯ.

ಮತ್ತೊಬ್ಬ ಮಹಿಳೆಗೆ ಅವರ ಆಫೀಸಿನ ಮೇಲಧಿಕಾರಿ ಮತ್ತೆ ಮತ್ತೆ ಕೆಲಸದ ಬಗ್ಗೆ ಗದರಿಸುತ್ತಾರೆ. ಅವರ ಸ್ವಭಾವವೇ ಹಾಗೆ ಎಂಬುದು ಆಫೀಸಿನ ಎಲ್ಲರಿಗೂ ಗೊತ್ತಿರುವ ಸಂಗತಿಯೇ. ಆದರೆ ಬೈದರೆ ಬೇಸರವಾಗದಿರುತ್ತೆಯೆ? ಅದೂ ಕೆಲಸವೆಲ್ಲವನ್ನೂ ಮಾಡಿಯೂ ಬೈಸಿಕೊಂಡರೆ? ಆದರೇನು ಮಾಡುವುದು! ಒಳ್ಳೆಯ ಸಂಬಳ-ಸವಲತ್ತು; ಈ ಕೆಲಸ ಬದುಕಿಗೆ ಅನಿವಾರ್ಯ. ಕೆಲಸ ಬಿಡುವುದು, ಆ ಮೇಲೆ ಪಶ್ಚಾತ್ತಾಪ ಪಡುವಂತೆ ಥಟ್ಟೆಂದು ಏನಾದರೂ ಹೇಳಿಬಿಡುವುದು, ಇವ್ಯಾವುದನ್ನೂ ಮಾಡದೆ, ಆ ಮಹಿಳೆ ಮಾಡಿದ್ದೇನು ಗೊತ್ತೆ? ಹೀಗೆ ಮಾಡಿಬಿಡಬೇಕೆಂದು ಅನ್ನಿಸಿದ ತುಡಿತಗಳನ್ನೆಲ್ಲ ತಡೆದು, ಪ್ರತಿನಿತ್ಯ ಬಸ್ಸು ಹಿಡಿದು ಮನೆಗೆ ಮೂರು ಕಿ.ಮೀ. ಬರುವುದರ ಬದಲು, ಲುಟಲುಟನೆ ನಡೆದು ಅದರ ಮೂಲಕ ಹೊರಹಾಕಿದ್ದು! ದೇಹಕ್ಕೆ ವ್ಯಾಯಾಮವೂ ಆದಂತಾಯಿತು, ಮನಸ್ಸೂ ಸಮಾಧಾನಕ್ಕೆ ಬಂತು.

ಮತ್ತೊಬ್ಬ ವ್ಯಕ್ತಿಗೆ ಅದೆಷ್ಟು ಕೋಪ! ಎಲ್ಲರನ್ನೂ ಚಚ್ಚಿ ಹಾಕಿ ಬಿಡಬೇಕು ಅನ್ನುವಷ್ಟು! ಮೊಬೈಲ್ ಒಡೆದು ಹಾಕುವ-ಗೋಡೆಗೆ ಗುದ್ದುವ ಬದಲು, ಇತ್ತೀಚೆಗೆ ಬಾಕ್ಸಿಂಗ್‌ಗೆ ಆತ ಸೇರಿದ್ದಾರೆ. ದೇಹ-ಮನಸ್ಸು ಎರಡನ್ನೂ ಬಾಕ್ಸಿಂಗ್-ಜಿಮ್ ಮೂಲಕ ಹದಗೊಳಿಸುತ್ತಿದ್ದಾರೆ!

ಈ ಮೂರೂ ನಿದರ್ಶನಗಳು ಏನು ತೋರಿಸುತ್ತವೆ? ನಮ್ಮ ಮನಸ್ಸಿನ ನಕಾರಾತ್ಮಕ ಭಾವನೆಗಳನ್ನು ಸಕಾರಾತ್ಮಕ ಕ್ರಿಯೆಯಾಗಿ ಪರಿವರ್ತಿಸಲು ಸಾಧ್ಯವಿದೆ ಎಂಬ ಕೌಶಲವನ್ನು ಇವು ತೋರಿಸುತ್ತವೆ. ನಮ್ಮ 'ಮನಸ್ಸು' ಎಂಬ ಅಂಗ ತನ್ನನ್ನು ರಕ್ಷಿಸಿಕೊಳ್ಳಲು ಹಲವು ರಕ್ಷಣಾತಂತ್ರಗಳನ್ನು ಇರಿಸಿಕೊಂಡಿರುತ್ತದೆ. ಅಂತಹ ರಕ್ಷಣಾತಂತ್ರಗಳಲ್ಲಿ ಕೆಲವು ಆತುರದಿಂದ ಮಾಡುವ ಬಾಲಿಶ ತಂತ್ರಗಳು. ಎಂದರೆ ಅಂಕಗಳು ಕಡಿಮೆ ಬಂದಾಗ 'ತಾನು ಸರಿಯಾಗಿ ಓದಿಲ್ಲ' ಎಂದು ಒಪ್ಪುವ ಬದಲು ಶಿಕ್ಷಕರೇ ಸರಿಯಾಗಿ ಮೌಲ್ಯಮಾಪನ ಮಾಡಿಲ್ಲ ಎನ್ನುವ ರೀತಿ. ಕೆಲವು ಪ್ರಬುದ್ಧ, ಆರೋಗ್ಯಕರ ರಕ್ಷಣಾತಂತ್ರಗಳು. ಅವುಗಳಲ್ಲಿ ಒಂದು ನಕಾರಾತ್ಮಕ ಭಾವನೆಗಳನ್ನು ಒಂದು ಉಪಯುಕ್ತ, ಇತರರು ಪ್ರಶಂಸಿಸಬಹುದಾದ, ಹಲವರಿಗೆ ಸಂತಸವನ್ನು ಉಂಟುಮಾಡಬಹುದಾದ ಕ್ರಿಯೆಯಾಗಿ ಬದಲಾಯಿಸುವುದು. ಅದನ್ನು ಮನೋವೈಜ್ಞಾನಿಕವಾಗಿ 'ಮೇಲೇರುವುದು' 'Sublimation' ಎಂದು ಕರೆಯಲಾಗುತ್ತದೆ. ಈ ಪದದ ಮೂಲವನ್ನು ಅರ್ಥಮಾಡಿಕೊಳ್ಳಲು ನಾವು ಭೌತಶಾಸ್ತ್ರದ ಮೊರೆ ಹೋಗಬೇಕು. ಸಾಮಾನ್ಯವಾಗಿ ಘನಪದಾರ್ಥಗಳು ಅನಿಲವಾಗಿ ಆವಿಯಾಗುವ ಸ್ಥಿತಿಗೆ ತಲುಪುವ ಬಗೆ ಹೇಗೆ? ಮೊದಲು ದ್ರವವಾಗಿ ಆಮೇಲೆ ಅನಿಲವಾಗುತ್ತವೆ ತಾನೆ? ಕೆಲವೊಮ್ಮೆ ಹಾಗೆ ದ್ರವಸ್ಥಿತಿಗೆ ಬರದೆ ನೇರವಾಗಿ ಅನಿಲವಾಗುವ ಸಂಭವವೂ ಇದೆ. ಈ ಪ್ರಕ್ರಿಯೆಯನ್ನೇ ಉತ್ಪತನ ಅಥವಾ ಮೇಲೇರುವುದು ಎಂದು ಕರೆಯುವುದು. ಇದಕ್ಕೆ ಶಕ್ತಿಯ ಅವಶ್ಯಕತೆ ಮತ್ತಷ್ಟು.

ಈಗ 'ಕಸದಿಂದ ರಸ'ವಾಗುವ ವಿಷಯಕ್ಕೆ ಬರೋಣ. ಮನುಷ್ಯರಾಗಿ ನಮಗೆ ಮನಸ್ಸಿಗೆ ತುಂಬಾ ಒತ್ತಡ ತರುವ ಕೋಪ-ದುಃಖ-ಹತಾಶೆ-ಲೈಂಗಿಕ ತುಡಿತಗಳು ಆಗಾಗ್ಗೆ ಅನುಭವಕ್ಕೆ ಬರುವುದು ಸಹಜವಷ್ಟೆ. ಅವುಗಳನ್ನು ಅನುಭವಿಸುವ ತೀವ್ರತೆಯ ಸ್ಥಿತಿಯಲ್ಲಿ ಅವುಗಳಲ್ಲಿ ಅಪಾರವಾದ ಶಕ್ತಿಯಿದೆ ಎಂಬುದನ್ನು ನಾವು ಗಮನಿಸಲಾರೆವು. ಇಂತಹ ತೀವ್ರ ನಕಾರಾತ್ಮಕ ಭಾವನೆಗಳಲ್ಲಿ ಇರುವ ಅಪಾರ ಶಕ್ತಿಯನ್ನು ಉಪಯೋಗಿಸುವುದು ಸಾಧ್ಯವಾದರೆ ಅದರಿಂದ ಉಪಯುಕ್ತವಾದ - ನಾಲ್ಕು ಜನರು ಗಮನಿಸುವಂತೆ ಮಾಡುವ, ನಮಗೆ ಸಂತೋಷವಾಗುವಂತ ಕ್ರಿಯೆ ಸಾಧ್ಯವಾದೀತು. ಘನಪದಾರ್ಥ ನೇರವಾಗಿ ಆವಿಯಾಗುವಂತಹ ಸ್ಥಿತಿಯಲ್ಲಿ ಬೇಕಾದ್ದು ಹೆಚ್ಚಿನ ತಾಪ ಮತ್ತು ಒತ್ತಡ ಎಂಬುದನ್ನು ನಾವು ಮರೆಯುವಂತಿಲ್ಲ!

ನಮ್ಮ ಸುತ್ತಮುತ್ತಲಲ್ಲಿ ಹಲವು ಉದಾಹರಣೆಗಳನ್ನು 'ಕಸ ಹೇಗೆ ರಸ'ವಾಗುತ್ತದೆ ಎಂಬುದಕ್ಕೆ ನಾವು ನೋಡುತ್ತಲೇ ಇರುತ್ತೇವೆ. ಸುಂದರ ಚಿತ್ರಕಲೆಯ ಮೂಲಕ ತನ್ನ ಅತೃಪ್ತ ಲೈಂಗಿಕ ಕಾಮನೆಗಳನ್ನು ವ್ಯಕ್ತಿಯೊಬ್ಬ ಹರಿಯಬಿಡುವುದು, ಮಕ್ಕಳನ್ನು ಕಳೆದುಕೊಂಡ ತಂದೆ-ತಾಯಿ ದೊಡ್ಡ ಬೆಂಬಲದ ಸಂಘಟನಾ ಕಾರ್ಯವನ್ನು ಬೆಳೆಸಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುವುದು, ಸದಾ ಇತರರ ಬಗೆಗೆ ಸಂದೇಹ ಪಡುವ ವ್ಯಕ್ತಿಯೊಬ್ಬ ಸೈನ್ಯ-ಪತ್ತೇದಾರಿಯಂತಹ ವೃತ್ತಿಗಳನ್ನು ಆರಿಸಿಕೊಂಡು ಯಶಸ್ಸು ಸಾಧಿಸುವುದು ಇವೆಲ್ಲ 'ಕಸದಿಂದ ರಸ ತೆಗೆಯುವ' ಉದಾಹರಣೆಗಳೇ. ದಾಂಪತ್ಯಕಲಹಗಳಲ್ಲಿಯೂ ಈ ತಂತ್ರ ಉಪಯುಕ್ತವೇ.



'ಕಸದಿಂದ ರಸವಾಗಿಸುವ' ರಕ್ಷಣಾತಂತ್ರ ಉಪಯುಕ್ತವೇನೋ ಸರಿ. ಆದರೆ ಅದು ನಕಾರಾತ್ಮಕ ಭಾವನೆಗಳನ್ನು ಹಿನ್ನೆಲೆಯಲ್ಲಿ ಹೊಂದಿದೆ ಎಂಬ ಅರಿವು ಮುಖ್ಯ. ಕ್ರಮೇಣ ಅದರ ಹಿನ್ನೆಲೆಯಲ್ಲಿರುವ ಸಮಸ್ಯೆಗೆ ಚರ್ಚೆ-ಸೂಕ್ತ ಪರಿಹಾರ ಕಂಡುಕೊಳ್ಳುವುದು ಅತ್ಯಗತ್ಯ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ – ಗಣಿತ

ವಾಸ್ತವ ಸಂಖ್ಯೆಗಳು

ಅಭ್ಯಾಸ 1.1

6) 7 x 11 x13 +13 ಮತ್ತು 7 x6 x5 x4 x3 x2 x1 +5 'ಇವು ಸಂಯುಕ್ತ ಸಂಖ್ಯೆಗಳಾಗಿವೆ ಏಕೆ ವಿವರಿಸಿ

ಉತ್ತರ:– 7 x 11 x13 +13 = 13 (7 x 11 +1)

= 13 x 78

∴ ಇದು ಸಂಯುಕ್ತ ಸಂಖ್ಯೆ

$7 \times 6 \times 5 \times 4 \times 3 \times 2 \times 1 + 5$

$= 5(7\times6\times4\times3\times2\times1+1)$

$= 5(1008+1) = 5\times1009$

∴ ಇದು ಸಂಯುಕ್ತ ಸಂಖ್ಯೆ

7) ಒಂದು ಕ್ರೀಡಾಂಗಣದ ಸುತ್ತಲೂ ವೃತ್ತಾಕಾರದ ಮಾರ್ಗವಿದೆ ಸೋನಿಯಾಳು ಆ ಕ್ರೀಡಾಂಗಣದ ಒಂದು ಸುತ್ತನ್ನು ಪೂರ್ಣಗೊಳಿಸಲು 18 ನಿಮಿಷಗಳನ್ನು ತೆಗೆದುಕೊಂಡರೆ, ರವಿಯು ಅದೇ ಸುತ್ತನ್ನು ಪೂರ್ಣಗೊಳಿಸಲು 12 ನಿಮಿಷಗಳನ್ನು ತೆಗೆದುಕೊಳ್ಳುತ್ತಾನೆ, ಒಂದೊಮ್ಮೆ ಅವರಿಬ್ಬರೂ ಒಂದೇ ಬಿಂದುವಿನಿಂದ ಏಕಕಾಲದಲ್ಲಿ ಆರಂಭಿಸಿ, ಏಕಮುಖವಾಗಿ ಚಲಿಸಿದರೆ, ಎಷ್ಟು ನಿಮಿಷಗಳ ನಂತರ ಅವರು ಪುನಃ ಆರಂಭಿಕ ಬಿಂದುವಿನಲ್ಲಿ ಸಂಧಿಸುತ್ತಾರೆ?

ಉತ್ತರ:– ಸೋನಿಯಾಳಿಗೆ ಕ್ರೀಡಾಂಗಣ 1 ಸುತ್ತು ಪೂರ್ಣಗೊಳಿಸಲು ತೆಗೆದುಕೊಳ್ಳುವ ಸಮಯ = 18 ನಿಮಿಷ

ರವಿ ಅದೇ ಕ್ರೀಡಾಂಗಣವನ್ನು 1 ಸುತ್ತು ಪೂರ್ಣಗೊಳಿಸಲು ತೆಗೆದುಕೊಳ್ಳುವ ಸಮಯ= 12 ನಿಮಿಷ

ಏಕಕಾಲದಲ್ಲಿ ಚಲಿಸಿದರೆ ಅವರು ಸಂಧಿಸುವ ಸಮಯ = ?

$LCM(18, 12) = 2\times3\times3\times2\times1=36$

ಅವರಿಬ್ಬರೂ 36 ನಿಮಿಷಗಳ ತರುವಾಯ ಒಂದು ಸ್ಥಳದಲ್ಲಿ ಸಂಧಿಸುತ್ತಾರೆ

ಅಭ್ಯಾಸ 1.2

1) $\sqrt{5}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ

ಉತ್ತರ:– $\sqrt{5}$ ಒಂದು ಭಾಗಲಬ್ಧ ಸಂಖ್ಯೆ ಎಂದು ಭಾವಿಸಿ

i.e. $\sqrt{5} = a/b$

$b\sqrt{5} = a$

ಎರಡೂ ಕಡೆ ವರ್ಗಗೊಳಿಸಿದಾಗ

$(b\sqrt{5})^2 = a^2$

$\Rightarrow 5b^2 = a^2$................ (1)

5 ಇದು a ಅನ್ನು ಭಾಗಿಸುತ್ತದೆ

5 ಇದು b^2 ಅನ್ನು ಭಾಗಿಸುತ್ತದೆ

ಸಮೀಕರಣ 1ರಲ್ಲಿ b^2 ಆದೇಶಿಸಿದಾಗ

$5b^2 = (5c)^2$

$5b^2 = 25c^2$

$b^2 = 5c^2$

ಅಂದರೆ 5 ಇದು $5b^2$ ಅನ್ನು ಭಾಗಿಸುತ್ತದೆ

5 ಇದು b ಅನ್ನು ಭಾಗಿಸುತ್ತದೆ

a ಮತ್ತು b ಗಳು ಕನಿಷ್ಠ 5 ಸಾಮಾನ್ಯ ಅಪವರ್ತನ ಹೊಂದಿವೆ

a ಮತ್ತು b ಗಳು ಭಾಗಲಬ್ಧ ಸಂಖ್ಯೆಗಳಲ್ಲ ಹೀಗಾಗಿ $\sqrt{5}$ ಒಂದು ಅಭಾಗಲಬ್ಧ ಸಂಖ್ಯೆಯಾಗಿದೆ.

2) $3+2\sqrt{5}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ

ಉತ್ತರ:– $3+2\sqrt{5}$ ಒಂದು ಭಾಗಲಬ್ಧ ಸಂಖ್ಯೆ ಎಂದು ಭಾವಿಸಿ

$3 + 2\sqrt{5} = x/y$ {ಇಲ್ಲಿ co-prime x and y ($y \neq 0$) }

$2\sqrt{5} = \frac{x}{y} - 3$

$\sqrt{5} = \frac{1}{2}(\frac{x}{y} - 3)$

$2\sqrt{5} = \frac{x}{y} - 3$

$\sqrt{5} = \frac{1}{2}(\frac{x}{y} - 3)$

Since, x and y are integers, ಹೀಗಾಗಿ $\frac{1}{2}(\frac{x}{y} - 3)$ ಒಂದು ಭಾಗಲಬ್ಧ ಸಂಖ್ಯೆಯಾಗಿದೆ. ಅಂದರೆ ಇದರರ್ಥ $\sqrt{5}$ ಭಾಗಲಬ್ಧ ಸಂಖ್ಯೆಯಾಗಿದೆ ಆದರೆ ನಿಜ ಹೇಳಬೇಕೆಂದರೆ $\sqrt{5}$ ಇದೂ ಭಾಗಲಬ್ಧ ಸಂಖ್ಯೆಯಲ್ಲ! ಆದುದ್ದರಿಂದ $3+2\sqrt{5}$ ಒಂದು ಅಭಾಗಲಬ್ಧ ಸಂಖ್ಯೆಯಾಗಿದೆ.

3) ಈ ಕೆಳಗಿನ ಸಂಖ್ಯೆಗಳನ್ನು ಅಭಾಗಲ್ಧ ಸಂಖ್ಯೆಗಳೆಂದು ಸಾಧಿಸಿ

(i) $1/\sqrt{2}$
(ii) $7\sqrt{5}$
(iii) $6 + \sqrt{2}$

ಉತ್ತರ:–

(i) $1/\sqrt{2}$ ಒಂದು ಭಾಗಲಬ್ಧ ಸಂಖ್ಯೆ ಎಂದು ಭಾವಿಸಿ

co-prime x and y ($y \neq 0$)

$1/\sqrt{2} = x/y$

$\therefore \sqrt{2} = y/x$

Since, x and y are integers, ಹೀಗಾಗಿ $\sqrt{2}$ ಒಂದು ಭಾಗಲಬ್ಧ ಸಂಖ್ಯೆಯಾಗಿದೆ. ಆದರೆ ನಿಜ ಹೇಳಬೇಕೆಂದರೆ $\sqrt{2}$ ಇದೂ ಭಾಗಲಬ್ಧ ಸಂಖ್ಯೆಯಲ್ಲ!

ಆದುದ್ದರಿಂದ $1/\sqrt{2}$ ಒಂದು ಅಭಾಗಲಬ್ಧ ಸಂಖ್ಯೆಯಾಗಿದೆ.

(ii) $7\sqrt{5}$ ಒಂದು ಭಾಗಲಬ್ಧ ಸಂಖ್ಯೆ ಎಂದು ಭಾವಿಸಿ

co-prime x and y ($y \neq 0$)

$7\sqrt{5} = x/y$

$\therefore \sqrt{5} = x/7y$

Since, x and y are integers, ಹೀಗಾಗಿ $\sqrt{5}$ ಒಂದು ಭಾಗಲಬ್ಧ ಸಂಖ್ಯೆಯಾಗಿದೆ. ಆದರೆ ನಿಜ ಹೇಳಬೇಕೆಂದರೆ $\sqrt{5}$ ಇದೂ ಭಾಗಲಬ್ಧ ಸಂಖ್ಯೆಯಲ್ಲ!

ಆದುದ್ದರಿಂದ $7\sqrt{5}$ ಒಂದು ಅಭಾಗಲಬ್ಧ ಸಂಖ್ಯೆಯಾಗಿದೆ.

(iii) $6 + \sqrt{2}$ ಒಂದು ಭಾಗಲಬ್ಧ ಸಂಖ್ಯೆ ಎಂದು ಭಾವಿಸಿ

co-prime x and y ($y \neq 0$)

$6 + \sqrt{2} = x/y$

$\therefore \sqrt{2} = (x/y) - 6$

Since, x and y are integers, ಹೀಗಾಗಿ $(x/y) - 6$ ಒಂದು ಭಾಗಲಬ್ಧ ಸಂಖ್ಯೆಯಾಗಿದೆ ಹೀಗಾಗಿ $\sqrt{2}$ ಭಾಗಲಬ್ಧ ಸಂಖ್ಯೆಯಾಗಿದೆ ಆದರೆ ನಿಜ ಹೇಳಬೇಕೆಂದರೆ $\sqrt{2}$ ಇದೂ ಭಾಗಲಬ್ಧ ಸಂಖ್ಯೆಯಲ್ಲ!

ಆದುದ್ದರಿಂದ $6 + \sqrt{2}$ ಒಂದು ಅಭಾಗಲಬ್ಧ ಸಂಖ್ಯೆಯಾಗಿದೆ.

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC PHYSICS

CURRENT ELECTRICITY

22. If each of the resistances in the network is R as shown in the fig, what is the resistance between A and B?



The given network can be reduced to the network shown below.



This is a balanced Wheatstone bridge. Hence the current through R between C and B is zero.

∴ Net resistance between A and B =

$$\frac{(R+R)(R+R)}{(R+R)+(R+R)} = \frac{4R^2}{4R} = R$$

23. Find the currents I_1, I_2 and I_3 in the network shown below.



Ans :- **Applying KCL to the junction D,**

$I_1 + I_3 = I_2$.........(i)

Applying voltage law to the mesh BADB,

$6I_3 + (I_1 + I_3)\,12 = -7$

$\Rightarrow 18I_3 + 12I_1 = -7$........(ii)

For the mesh BCDB

$2 \times I_1 + 12 \times I_2 = 8 \Rightarrow 2I_1 + 12(I_1 + I_3) = 8$

$\Rightarrow 14I_1 + 12I_3 = 8$ (or) $7I_1 + 6I_3 = 4$.....(iii)

Solving the eqns (ii) & (iii),

we get, $I_1 = \frac{19}{9}$ A

From the eqn (iii), we get $I_3 = \frac{97}{54}$ A

$\therefore I_2 = I_1 + I_3 = \frac{19}{9} - \frac{97}{54} = \frac{17}{54}$ A

24. In the Wheatstone's bridge shown in the figure, P and Q are ratio arms. R is a unknown resistance. S is 100 Ω resistor. When S is shunted with 200 Ω the bridge is balanced. On interchanging P and Q the value of shunt resistance across S for the balance is 300 Ω. Find R and the ratio P : Q



From, Wheatstone's principle

$$\frac{P}{Q} = \frac{R}{\left(\frac{200 \times 100}{200+100}\right)}$$

$$\frac{P}{Q} = \frac{3R}{200} \text{..............(i)}$$

On interchanging P & Q, shunt across S for balance is 300Ω

$$\frac{Q}{P} = \frac{R}{\left(\frac{300 \times 100}{300+100}\right)}$$

$$\frac{Q}{P} = \frac{4R}{300} \text{..............(ii)}$$

$$\text{(i)} \times \text{(ii)} \rightarrow 1 = \frac{3R}{200} \times \frac{4R}{300}$$

$$\Rightarrow 12R^2 = 300 \times 200$$

$$\therefore R = 70.7\ \Omega$$

$$\text{From (i)}, \frac{P}{Q} = \frac{3R}{200} = \frac{3 \times 70.7}{200}$$

$$= 1.0605 \simeq 1.06$$

25. Obtain the condition for the balance of a Wheatstone's network by applying Kirchoff's law.

Ans:- The wheatstone's network is the arrangement of resistances used for measuring one of them in terms of the other three. The meter bridge is based on this principle.

Consider a wheatstone's network consisting of 4 resistances P, Q, R and S connected to form a quadrilateral ABCD is as shown in the figure. Across BD a galvanometer of resistance G is connected and across AC a cell of emf E is connected.

The currents in various parts of the circuit are as in the figure -



ರಾಯಚೂರು ಜಿಲ್ಲೆಯ ಕೆಲವೆಡೆ ಜಿಟಿಜಿಟಿ ಮಳೆ

ತಗ್ಗಿದ ಮಳೆ, ನದಿಗಳ ಅಬ್ಬರ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲ್ಯಾಣ ಕರ್ನಾಟಕದ ಭಾಗದಲ್ಲಿ ಎರಡು ದಿನಗಳಿಂದ ತೀವ್ರಗೊಂಡಿದ್ದ ವರುಣನ ಅಬ್ಬರ ಸೋಮವಾರ ತಗ್ಗಿದೆ. ಮೋಡ ಮುಸುಕಿದ ವಾತಾವರಣದೊಂದಿಗೆ ಜಿಟಿಜಿಟಿ ಮಳೆ ಮುಂದುವರಿದಿದೆ. ನದಿಗಳ ಹರಿವಿನ ಪ್ರಮಾಣ ಇಳಿಕೆಯಾಗಿ ಮುಳುಗಡೆಯಾಗಿದ್ದ ಸೇತುವೆಗಳು ಸಂಚಾರಕ್ಕೆ ಮುಕ್ತವಾಗಿವೆ.

ಮುನ್ನೆಚ್ಚರಿಕೆ ಕ್ರಮವಾಗಿ ಕಲಬುರಗಿ ಮತ್ತು ಬೀದರ್ ಜಿಲ್ಲೆಯ ಶಾಲೆಗಳಿಗೆ ರಜೆ ಘೋಷಿಸಲಾಗಿತ್ತು. ಕಾಗಿಣಾ, ಬೆಣ್ಣೆತೊರಾ, ಮುಲ್ಲಾಮಾರಿ, ಕಮಲಾವತಿ ನದಿಗಳು ಉಕ್ಕಿ ಹರಿದಿದ್ದರಿಂದ 15ಕ್ಕೂ ಹೆಚ್ಚು ಸೇತುವೆಗಳು ಮುಳುಗಡೆಯಾಗಿದ್ದವು. ಕಡಿತಗೊಂಡಿದ್ದ ಸಂಪರ್ಕ ಪುನರಾರಂಭವಾಗಿದೆ.

ಕಾಗಿಣಾ ಪ್ರವಾಹದಲ್ಲಿ ಕೊಚ್ಚಿಕೊಂಡು ಬಂದ ಮುಳ್ಳಿನ ಗಿಡಗಂಟಿಗಳು ಸೇಡಂನ ಬಿಬ್ಬಳ್ಳಿ ಸೇತುವೆ ಉದ್ದಕ್ಕೂ ಜಮೆಯಾಗಿ ವಾಹನ ಸಂಚಾರಕ್ಕೆ ಅಡ್ಡಿಯಾಗಿದೆ. ಸಂಗಾವಿ (ಎಂ) ಗ್ರಾಮದ ನಾಲಾ ನೀರಲ್ಲಿ ಕೊಚ್ಚಿ ಹೋದ ರಾಜು ನರಸಪ್ಪ ಅವರ ಶೋಧ ಕಾರ್ಯ ಮುಂದುವರಿದಿದೆ.

ಸೇಡಂನ 33, ಅಫಜಲಪುರದ 13 ಹಾಗೂ ಕಾಳಗಿಯ 6 ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಆಳಂದದಲ್ಲಿ 22 ಮನೆಗಳ ಗೋಡೆಗಳು ಹಾಗೂ ಸಾಲೇಗಾಂವ ಗ್ರಾಮದ ಸರ್ಕಾರಿ ಶಾಲೆಯ ಕಾಂಪೌಂಡ್ ಕುಸಿದು ಬಿದ್ದಿದೆ. ರಾಯಚೂರು ಜಿಲ್ಲೆಯ ಕೆಲವೆಡೆ ಜಿಟಿಜಿಟಿ ಮಳೆಯಾಗಿದ್ದು, ನಗರದ ನಿಜಲಿಂಗಪ್ಪ ಕಾಲೊನಿಯಲ್ಲಿ ಹಳೆಯ ಮರವೊಂದು ನೆಲಕ್ಕುರುಳಿದೆ. ದೇವದುರ್ಗ, ಲಿಂಗಸುಗೂರು ತಾಲ್ಲೂಕಿನಲ್ಲಿ ತುಂತುರು ಮಳೆಯಾಗಿದೆ. ಇಸ್ಲಾಂಪುರ ಮೂಲಕ ಬೀದರ್–ಔರಾದ್ ಸಂಪರ್ಕಿಸುವ ಸೇತುವೆ ಮಾಂಜ್ರಾ ನದಿ ಹಿನ್ನೀರಿನಲ್ಲಿ ಮುಳುಗಿದೆ. ಮೂರು ದಿನಗಳಲ್ಲಿ ಜಿಲ್ಲೆಯ 138 ಮನೆಗಳಿಗೆ ಹಾನಿಯಾಗಿದೆ.

ಬೀದರ್ ಜಿಲ್ಲೆಯಾದ್ಯಂತ ಸತತ ಮೂರನೇ ದಿನವೂ ಮಳೆಯಾಗಿದೆ. ನೆರೆಯ ಮಹಾರಾಷ್ಟ್ರದಲ್ಲೂ ವ್ಯಾಪಕ ಮಳೆಯಾಗುತ್ತಿರುವ ಕಾರಣ ಮಾಂಜ್ರಾ ನದಿ ಉಕ್ಕಿ ಹರಿಯುತ್ತಿದೆ. ಕೆಲವು ಗ್ರಾಮಗಳ ಗದ್ದೆಗಳಿಗೆ ನೀರು ನುಗ್ಗಿದೆ. ಕಾರಂಜಾ ಜಲಾಶಯ ಭರ್ತಿಯಾಗುವ ಹಂತಕ್ಕೆ ಬಂದಿದ್ದು, ನದಿಗೆ ನೀರು ಹರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಜಿಲ್ಲೆಯಾದ್ಯಂತ 119 ಮನೆಗಳಿಗೆ ಹಾನಿಯಾಗಿದೆ.

ಔರಾದ್ ತಾಲ್ಲೂಕಿನ ಎಕಂಬಾ ಗ್ರಾಮದಲ್ಲಿ ಮನೆಯ ಕಬ್ಬಿಣದ ಶೀಟುಗಳಲ್ಲಿ ವಿದ್ಯುತ್ ಪ್ರವಹಿಸಿದ ಪರಿಣಾಮ ದಿಲೀಪ ಪವಾರ (32) ಎಂಬುವರು ಮೃತಪಟ್ಟಿದ್ದಾರೆ.

ಭರ್ತಿಯಾಗುವತ್ತ ತುಂಗಭದ್ರಾ ಜಲಾಶಯ –ಪ್ರಜಾವಾಣಿ ಚಿತ್ರ

ತುಂಗಭದ್ರಾ ಅಣೆಕಟ್ಟೆ ಭರ್ತಿಗೆ 1.94 ಅಡಿ ಬಾಕಿ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆ ಭರ್ತಿಯಾಗಲು 1.94 ಅಡಿ ಬಾಕಿ ಉಳಿದಿದ್ದು, ಜಲಾಶಯದಲ್ಲಿ 98.10 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ. ಅಣೆಕಟ್ಟೆಯ ಗರಿಷ್ಠ ಮಟ್ಟ 1,633 ಅಡಿ ಆಗಿದ್ದು, ಸೋಮವಾರ ಬೆಳಿಗ್ಗೆ 1,631.06 ಅಡಿ ನೀರಿನ ಮಟ್ಟ ಇತ್ತು. 105.78 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯದ ಜಲಾಶಯ ಭರ್ತಿಗೆ ಇನ್ನು 7 ಟಿಎಂಸಿ ಅಡಿ ನೀರು ಬೇಕಿದೆ. ಒಳಹರಿವಿನ ಪ್ರಮಾಣ ಸರಾಸರಿ 26,272 ಕ್ಯುಸೆಕ್ ಇದೆ. ಹೊರಹರಿವಿನ ಪ್ರಮಾಣ 15,237 ಕ್ಯುಸೆಕ್ ಇದೆ.

'ಸದ್ಯದ ಸ್ಥಿತಿಯಲ್ಲೇ ಒಳಹರಿವಿನ ಪ್ರಮಾಣ ಇದ್ದರೆ ತಕ್ಷಣಕ್ಕೆ ಕ್ರಸ್ಟ್‌ಗೇಟ್ ತೆರೆಯುವ ಅಗತ್ಯ ಇಲ್ಲ. ಆದರೆ ಒಳಹರಿವಿನ ಪ್ರಮಾಣ 40 ಸಾವಿರ ಕ್ಯುಸೆಕ್‌ಗಿಂತ ಹೆಚ್ಚಾದರೆ ಕ್ರಸ್ಟ್‌ಗೇಟ್ ತೆರೆದು, ನೀರು ನದಿಗೆ ಹರಿಸುವುದು ಅನಿವಾರ್ಯ ಆಗಬಹುದು. ನದಿತೀರದ ಜನರು ಎಚ್ಚರಿಕೆಯಿಂದ ಇರಬೇಕು' ಎಂದು ತುಂಗಭದ್ರಾ ಮಂಡಳಿ ತಿಳಿಸಿದೆ.

ನೀರು ಹೊರಕ್ಕೆ: ಎರಡು ದಿನಗಳಿಂದ ಅಣೆಕಟ್ಟೆಯಲ್ಲಿ ನೀರಿನ ಮಟ್ಟ ಕಾಯ್ದುಕೊಳ್ಳಲು ಕ್ರಸ್ಟ್ ಗೇಟ್ ತೆರೆಯದೆ, ಅಧಿಕ ಜಲವಿದ್ಯುತ್ ಉತ್ಪಾದನೆ ಮಾಡುವ ಮೂಲಕ 5 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಅಧಿಕ ನೀರು ಹೊರಬಿಡುವ ಸಂದರ್ಭ ಎದುರಾದಾಗ ಕ್ರಸ್ಟ್‌ಗೇಟ್ ತೆರೆಯುವುದು ಅನಿವಾರ್ಯವಾಗಲಿದೆ.

3 ಜಿಲ್ಲೆಗೆ 'ಯೆಲ್ಲೊ ಅಲರ್ಟ್'

ಬೆಂಗಳೂರು: ರಾಜ್ಯದ ವಿಜಯಪುರ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದಲ್ಲಿ ಮಂಗಳವಾರ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಈ ಮೂರು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಒಳನಾಡಿನ ಕೆಲವು ಭಾಗಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ. ಕರಾವಳಿಯಲ್ಲಿ ಗಂಟೆಗೆ 35 ಕಿ.ಮೀ.ಗಳಿಂದ 55 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಂಭವವಿದೆ. ಆದ್ದರಿಂದ ಮೀನುಗಾರರು ಮುನ್ನೆಚ್ಚರಿಕೆ ವಹಿಸಬೇಕು ಎಂದು ಇಲಾಖೆ ತಿಳಿಸಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.38	11,248	10,715
ಹಾರಂಗಿ	2,859	2,858.64	10,700	10,700
ಕಬಿನಿ	2,284	2,283.63	8,025	8,350
ಹೇಮಾವತಿ	2,922	2,921.85	6,222	6,175
ಲಿಂಗನಮಕ್ಕಿ	1,819	1,817.50	16,283	16,230
ಸೂಪಾ (ಮೀ)	564	560.72	10,162	4,505.54
ಮಾಣಿ	595	590.36	1,761	0
ತುಂಗಭದ್ರಾ	1,633	1,631.06	30,031	15,237
ಮಲಪ್ರಭಾ	2,079.5	2,078.50	5,544	5,544
ಘಟಪ್ರಭಾ	2,175	2,174.41	8,027	5,622
ಭದ್ರಾ *	186	183	7,128	5,948
ಆಲಮಟ್ಟಿ (ಮೀ)	519.60	519.25	1,31,250	1,32,611
ನಾರಾಯಣಪುರ (ಮೀ)	492.25	491.59	30,000	8,272

* ನೆಲಮಟ್ಟದಿಂದ

ಸೇತುವೆ ಮುಳುಗಡೆ: ಗ್ರಾಮಸ್ಥರು ಅತಂತ್ರ

ಜೊಯಿಡಾ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಸೂಪಾ ಜಲಾನಯನ ಪ್ರದೇಶದಲ್ಲಿ ಹೆಚ್ಚು ಮಳೆ ಆಗುತ್ತಿದ್ದು, ಜಲಾಶಯ ಸಂಪೂರ್ಣವಾಗಿ ಭರ್ತಿಯಾಗುವ ಹಂತ ತಲುಪಿದೆ. ಇದರ ಪರಿಣಾಮ ಹಿನ್ನೀರು ಎಲ್ಲೆಡೆ ಆವರಿಸಿದೆ. ಸೇತುವೆಗಳು ಮುಳುಗಡೆಯಾಗಿವೆ.

ಕಾಳಿ ನದಿಗೆ ಉಳವಿ-ಗೋವಾ ಗಡಿಯ ರಾಜ್ಯ ಹೆದ್ದಾರಿಯ ಕಾಳಪೆ ಗ್ರಾಮದಲ್ಲಿ ನಿರ್ಮಿಸಿದ ಸೇತುವೆಯ ಎರಡೂ ಬದಿಯಲ್ಲಿ ನೀರು ತುಂಬಿಕೊಂಡಿದ್ದು, ರಸ್ತೆ ಸಂಪರ್ಕ ಸಂಪೂರ್ಣ ಕಡಿತವಾಗಿದೆ. ಇದರಿಂದ ಬಜಾರ ಕುಣಂಗ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆಲ ಗ್ರಾಮಗಳ ಜನರು ಗ್ರಾಮದಿಂದ ಹೊರಕ್ಕೆ ಬರಲು ಸಾಧ್ಯವಾಗುತ್ತಿಲ್ಲ.

ಚಾಮುಂಡೇಶ್ವರಿ ಅಭಿವೃದ್ಧಿ ಪ್ರಾಧಿಕಾರ ಸಿ.ಎಂ ನೇತೃತ್ವದಲ್ಲಿ ಇಂದು ಸಭೆ

ಪ್ರಜಾವಾಣಿ ವಾರ್ತೆ

ಮೈಸೂರು: ಅರಸು ವಂಶಸ್ಥರ 'ಹಕ್ಕು ಪ್ರತಿಪಾದನೆ'ಯ ಕಾರಣದಿಂದ ವಿವಾದಕ್ಕೆ ಗುರಿಯಾಗಿರುವ, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಮೊದಲ ಸಭೆಯು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಮಂಗಳವಾರ (ಸೆ.3) ಚಾಮುಂಡಿ ಬೆಟ್ಟದ ದಾಸೋಹ ಭವನದಲ್ಲಿ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್‌.ಸಿ.ಮಹದೇವಪ್ಪ ಭಾಗವಹಿಸಲಿದ್ದಾರೆ.

ಸಭೆಯ ಮಾಹಿತಿಯನ್ನು ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ, 'ಚಾಮುಂಡಿ ಬೆಟ್ಟ ನಿರ್ವಹಣೆ ಮಾಡುತ್ತಿರುವ ರಾಜ್ಯ ಸರ್ಕಾರವು, ಸಾರ್ವಜನಿಕರ ಒತ್ತಾಯದ ಮೇರೆಗೆ ಇದೇ ಜುಲೈ 1ರಂದು ಪ್ರಾಧಿಕಾರ ರಚಿಸಿತ್ತು. ಅದನ್ನು ವಿರೋಧಿಸಿ 26ರಂದು ಪ್ರಮೋದಾದೇವಿ ಒಡೆಯರ್ ತಂದಿದ್ದ ತಡೆಯಾಜ್ಞೆ ಇತ್ತೀಚೆಗಷ್ಟೇ ತೆರವುಗೊಂಡಿದೆ' ಎಂದು ತಿಳಿಸಿದರು.

ಈ ಕುರಿತು ಶ್ರೀರಂಗಪಟ್ಟಣದಲ್ಲಿ ಪ್ರತಿಕ್ರಿಯಿಸಿದ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, 'ಚಾಮುಂಡಿ ಬೆಟ್ಟದ ದೇವಾಲಯ ಸಂಬಂಧ ನ್ಯಾಯಾಲಯದ ತಡೆಯಾಜ್ಞೆ ತೆರವಾಗಿದೆ. ಇನ್ನೆರಡು ದೇವಾಲಯಗಳಿಗೆ ಸಂಬಂಧಿಸಿದಂತೆ ತಡೆಯಾಜ್ಞೆ ಇದ್ದು, ತೆರವಾಗುವ ವಿಶ್ವಾಸವಿದೆ' ಎಂದರು. ಪ್ರಮೋದಾದೇವಿ ಅವರು ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

'ದೂರು ನೀಡಿದ್ದ ಮಹಿಳೆ ಸಾವಿನ ಬಗ್ಗೆ ಅನುಮಾನ'

ಮೈಸೂರು: 'ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರು, 17 ವರ್ಷ ವಯಸ್ಸಿನ ನನ್ನ ಮಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಆರೋಪಿಸಿ ಪೊಲೀಸರಿಗೆ ದೂರು ನೀಡಿದ್ದ ಮಹಿಳೆಯ ಸಾವಿನ ತನಿಖೆಯ ಮಾಹಿತಿಯನ್ನು ಒದಗಿಸುವಂತೆ ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ಪತ್ರ ಬರೆದಿದ್ದೇನೆ' ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ತಿಳಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಆ ಪ್ರಕರಣದಲ್ಲಿ ಮಾಜಿ ಮುಖ್ಯಮಂತ್ರಿ ಇರಲಿ ಅಥವಾ ಜನಸಾಮಾನ್ಯರೇ ಇರಲಿ, ತಪ್ಪು ಮಾಡಿದ್ದರೆ ಯಾರನ್ನೂ ಸುಮ್ಮನೆ ಬಿಡುವ ಪ್ರಶ್ನೆಯೇ ಇಲ್ಲ' ಎಂದರು.

'ಸಾವಿನ ಬಗ್ಗೆ ಆಕೆಯ ಕುಟುಂಬದವರು ಹಲವು ಅನುಮಾನ ವ್ಯಕ್ತಪಡಿಸಿದ್ದಾರೆ. ಸಾವಿಗೀಡಾಗುವ ಎರಡು ದಿನಗಳ ಹಿಂದೆಯಷ್ಟೇ ಆಕೆ ನನ್ನನ್ನು ಭೇಟಿಯಾಗಿದ್ದರು. ಕ್ಯಾನ್ಸರ್‌ನಿಂದ ದಿಢೀರ್ ಸಾವು ಹೇಗೆ ಉಂಟಾಗುತ್ತದೆ ಎಂಬುದೇ ಪ್ರಶ್ನೆ. ಮೃತದೇಹದ ಹಸ್ತಾಂತರದ ವೇಳೆಯೂ ಹಲವು ಲೋಪಗಳಾಗಿವೆ. ಇದು ಕೂಡ ಅನುಮಾನಕ್ಕೆ ಕಾರಣವಾಗಿದೆ' ಎಂದರು.

'ತಾಯಿಯದ್ದು ಸಹಜ ಸಾವಲ್ಲ' ಎಂದು ಹುಳಿಮಾವು ಠಾಣೆಯಲ್ಲಿ ಕುಟುಂಬದವರು ನೀಡಿದ ದೂರು ಆಧರಿಸಿದ ತನಿಖೆಯ ಪ್ರಗತಿ ವರದಿಯನ್ನು 15 ದಿನಗಳಲ್ಲಿ ನೀಡುವಂತೆ ಕೋರಿದ್ದೇನೆ. ಸದ್ಯ ಪ್ರಕರಣದ ತನಿಖೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲ' ಎಂದು ಪ್ರತಿಕ್ರಿಯಿಸಿದರು.

ಮೇಯರ್, ಉಪ ಮೇಯರ್ ಮೀಸಲಾತಿ ಪ್ರಕಟ

ಬೆಂಗಳೂರು: ಚುನಾವಣೆ ಬಾಕಿ ಇರುವ ಬಿಬಿಎಂಪಿ ಹೊರತುಪಡಿಸಿ ರಾಜ್ಯದ ಹತ್ತು ಮಹಾನಗರ ಪಾಲಿಕೆಗಳ ಮುಂದಿನ ಅವಧಿಯ ಮೇಯರ್ ಮತ್ತು ಉಪ ಮೇಯರ್ ಹುದ್ದೆಗಳ ಮೀಸಲಾತಿಯನ್ನು ನಗರಾಭಿವೃದ್ಧಿ ಇಲಾಖೆ ಸೋಮವಾರ ಪ್ರಕಟಿಸಿದೆ.

ಮೂರು ಮೇಯರ್ ಹುದ್ದೆಗಳು ಸಾಮಾನ್ಯ ವರ್ಗಕ್ಕೆ ಮತ್ತು ಎರಡು ಹುದ್ದೆಗಳು ಸಾಮಾನ್ಯ ಮಹಿಳೆಯರಿಗೆ ಮೀಸಲಾಗಿವೆ. ಹಿಂದುಳಿದ ವರ್ಗಗ ಪ್ರವರ್ಗ 'ಎ' ಮತ್ತು ಹಿಂದುಳಿದ ವರ್ಗಗಳ ಪ್ರವರ್ಗ 'ಎ' ಮಹಿಳೆಯರಿಗೆ ತಲಾ ಒಂದು, ಪರಿಶಿಷ್ಟ ಜಾತಿಗೆ ಮತ್ತು ಪರಿಶಿಷ್ಟ ಜಾತಿಯ ಮಹಿಳೆಯರಿಗೆ ತಲಾ ಒಂದಯ ಹಾಗೂ ಪರಿಶಿಷ್ಟ ಪಂಗಡಗಳಿಗೆ ಒಂದು ಮೇಯರ್ ಹುದ್ದೆಯನ್ನು ಮೀಸಲಿಡಲಾಗಿದೆ.

ಸಾಮಾನ್ಯ ವರ್ಗಕ್ಕೆ ಎರಡು ಮತ್ತು ಸಾಮಾನ್ಯ ಮಹಿಳೆಯರಿಗೆ ಮೂರು ಉಪ ಮೇಯರ್ ಹುದ್ದೆಗಳನ್ನು ಮೀಸಲಿಡಲಾಗಿದೆ. ಹಿಂದುಳಿದ ವರ್ಗಗಳ ಪ್ರವರ್ಗ 'ಎ'ಗೆ ಒಂದು, ಹಿಂದುಳಿದ ವರ್ಗಗಳ ಪ್ರವರ್ಗ 'ಎ' ಮಹಿಳೆಯರಿಗೆ ಎರಡು , ಹಿಂದುಳಿದ ವರ್ಗಗಳ ಪ್ರವರ್ಗ 'ಬಿ'ಗೆ ಒಂದು ಮತ್ತು ಪರಿಶಿಷ್ಟ ಜಾತಿ ಮಹಿಳೆಯರಿಗೆ ಒಂದು ಉಪ ಮೇಯರ್ ಹುದ್ದೆ ಮೀಸಲಿಡಲಾಗಿದೆ.

ಮಹಿಳೆ ಸಾವು; ಡೆಂಗಿ ಶಂಕೆ

ಸಾಸ್ವೆಹಳ್ಳಿ (ದಾವಣಗೆರೆ ಜಿಲ್ಲೆ): ಶಂಕಿತ ಡೆಂಗಿ ಜ್ವರದಿಂದ ಬಳಲುತ್ತಿದ್ದ ಹೊನ್ನಾಳಿ ತಾಲ್ಲೂಕಿನ ಲಿಂಗಾಪುರ ಗ್ರಾಮದ ವಿಮಲಾ ನಾಗರಾಜ್ ಬೋವಿ (27) ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಆಯುಕ್ತರ ಕಛೇರಿ
ಮಹಾನಗರಪಾಲಿಕೆ, ಬಳ್ಳಾರಿ
ದೂರವಾಣಿ ಸಂಖ್ಯೆ : 08392-273479 /278168
ಫ್ಯಾಕ್ಸ್ : 08392-273477
ವೆಬ್‌ಸೈಟ್ : www.bellarycity.gov.in
ಇ-ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ-583101

ಸಂ:ಮನಪಾಬ/ಆಶಾ/ಬೀದಿನಾಯಿ/01/2024-25 ದಿನಾಂಕ:– 28.08.2024

ಟೆಂಡರ್ ಪ್ರಕಟಣೆ

2024-25ನೇ ಸಾಲಿನ ಬಳ್ಳಾರಿ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿರುವ ಬೀದಿನಾಯಿಗಳಿಗೆ ಆಂಟಿರೇಬೀಸ್ ವ್ಯಾಕ್ಸಿನೇಷನ್ ಹಾಗೂ ಸಂತಾನ ಹರಣ ಚಿಕಿತ್ಸೆ ಮಾಡಿಸಲು ಟೆಂಡರ್ ಕರೆಯಲಾಗಿದ್ದು, ಅರ್ಹ ಆಸಕ್ತಿವುಳ್ಳ ಬಿಡ್‌ದಾರರು ಈ ಕೆಳಕಂಡ ದಿನಾಂಕದೊಳಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು..

ಕ್ರ.ಸಂ	ವಿಷಯ	ದಿನಾಂಕ	ಸಮಯ
1	ಇಂಡೆಂಟ್ ಸಂಖ್ಯೆ::DMA/2024-25/SE3567		
2	ಟೆಂಡರ್‌ನ್ನು ಸಲ್ಲಿಸಲು ಪ್ರಾರಂಭಿಕ ದಿನಾಂಕ	28.08.2024	
3	ಟೆಂಡರ್ ಪೂರ್ವಭಾವಿ ಸಭೆ ದಿನಾಂಕ	05.09.2024	ಮಹಾನಗರಪಾಲಿಕೆಯ ಸಭಾಂಗಣದಲ್ಲಿ 11.00 AM
4	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	11.09.2024	05:30 PM
5	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	13.09.2024	11:00 AM
6	ಆರ್ಥಿಕ ಬಿಡ್ ತರೆಯುವ ದಿನಾಂಕ	16.09.2024	11.00 AM ನಂತರ

ಸದರಿ ಟೆಂಡರ್ನ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಮಹಾನಗರಪಾಲಿಕೆ, ಬಳ್ಳಾರಿ ಕಛೇರಿಯ ಕೆಲಸದ ವೇಳೆಯಲ್ಲಿ ದೂರವಾಣಿ ಸಂಖ್ಯೆ:9036676999 ಅಥವಾ http://eproc.karnataka.gov.in ವೆಬ್‌ಸೈಟ್‌ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ.
ತಮ್ಮ ವಿಶ್ವಾಸಿ
ಆಯುಕ್ತರು, ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ.

ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರ
ವಿನೋಬನಗರ, ಶಿವಮೊಗ್ಗ. website: www: shivamogga.uda..gov.in
ನೋಟಿಫಿಕೇಶನ್ ನಂ. : ಶಿಭನಪ್ರಾ/ನಿ-2/ಊರಗಡೂರು/2024-25 ದಿನಾಂಕ: 30.08.2024

ಪ್ರಕಟಣೆ

ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರವು ಶಿವಮೊಗ್ಗ ನಗರ ವ್ಯಾಪ್ತಿಯ ಊರಗಡೂರು ಗ್ರಾಮದಲ್ಲಿ ವಿವಿಧ ಸರ್ವೆ ನಂಬರಗಳಲ್ಲಿ ಅಭಿವೃದ್ಧಿಪಡಿಸಿರುವ "ಊರಗಡೂರು" ವಸತಿ ಬಡಾವಣೆಯ ನಿವೇಶನಗಳ ಹಂಚಿಕೆಗೆ ಸಾರ್ವಜನಿಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹಂಚಿಕೆಗೆ ಲಭ್ಯವಿರುವ ನಿವೇಶನಗಳ ವಿವರ

ಕ್ರ ಸಂ	ನಿವೇಶನದ ಅಳತೆ ಮೀಟರ್‌ಗಳಲ್ಲಿ	ನಿವೇಶನಗಳ ಸಂಖ್ಯೆ	ಚ.ಮೀ.ಗೆ ನಿವೇಶನದ ಬೆಲೆ ರೂ.	ನಿವೇಶನದ ಒಟ್ಟು ಬೆಲೆ ರೂ.	ನೋಂದಣಿ ಶುಲ್ಕ ರೂ.	ಅರ್ಜಿಯೊಂದಿಗೆ ಪಾವತಿಸಬೇಕಾದ ಪ್ರಾರಂಭಿಕ ಠೇವಣಿ: ಪ.ಜಾ/ಪ.ಪಂ. ಮಾ.ಸೈ., ಅಂಧರು (ನಿವೇಶನ ಬೆಲೆಯ ಶೇ. 3 ರಷ್ಟು)	ಇತರೆ (ನಿವೇಶನ ಬೆಲೆಯ ಶೇ. 10 ರಷ್ಟು)
1	2	3	4	5	6	7	8
1	6.00x9.00 ಮೀ.(EWS)	39	ರೂ.6187-00(ಚ.ಅಡಿಗೆ ರೂ 575-00)	334098-00	100-00	10023-00	33410-00
2	6.00x9.00 ಮೀ	58	ರೂ.12374-00 (ಚ. ಅಡಿಗೆ ರೂ1150-00)	668196-00	100-00	20046-00	66820-00
3	9.00x12.00 ಮೀ	158	ರೂ.12374-00 (ಚ. ಅಡಿಗೆ ರೂ1150-00)	1336392-00	150-00	40092-00	133640-00
4	9.00x15.00 ಮೀ	105	ರೂ.12374-00 (ಚ. ಅಡಿಗೆ ರೂ1150-00)	1670490-00	150-00	50115-00	167050-00
5	12.00x18.00 ಮೀ	71	ರೂ.12374-00 (ಚ. ಅಡಿಗೆ ರೂ1150-00)	2672784-00	200-00	80185-00	267280-00

ನಿಬಂಧನೆಗಳು : 1. ಈ ಮೊದಲು ನಿವೇಶನಕ್ಕೆ ಅರ್ಜಿ ಸಲ್ಲಿಸಿ, ಠೇವಣಿ ಪಾವತಿಸಿರುವವರು ಹಿಂದಿನ ಚಲನ್ ಪ್ರತಿ ಲಗತ್ತಿಸಿ ವ್ಯತ್ಯಾಸದ ಹಣದೊಂದಿಗೆ ನಿವೇಶನಕ್ಕಾಗಿ ಈ ಕೆಳಕಂಡ ಬ್ಯಾಂಕುಗಳಲ್ಲಿ ಅರ್ಜಿಯನ್ನು ಸಲ್ಲಿಸಬಹುದು. 2. ನಿವೇಶನಕ್ಕಾಗಿ ಈವರೆಗೂ ನೋಂದಣಿ ಮಾಡಿಸದೇ ಇರುವವರು ಕಾಲಂ (6) ರಲ್ಲಿ ಸೂಚಿಸಿರುವ ನೋಂದಣಿ ಶುಲ್ಕವನ್ನು ನಿವೇಶನದ ಅರ್ಜಿ ಜೊತೆಯಲ್ಲಿಯೇ ಬ್ಯಾಂಕ್‌ನಲ್ಲಿ ಪಾವತಿಸತಕ್ಕದ್ದು, ಈ ಹಿಂದೆ ನೋಂದಣಿ ಮಾಡಿಸಿದ್ದಲ್ಲಿ ಮತ್ತೆ ನೋಂದಣಿ ಮಾಡಿಸುವ ಅಗತ್ಯವಿಲ್ಲ. 3. ನಿವೇಶನದ ಅರ್ಜಿ ನಮೂನೆಗಳನ್ನು ರೂ. 300/- ಅರ್ಜಿ ಶುಲ್ಕ ಪಾವತಿಸಿ ಈ ಕೆಳಕಂಡ ಬ್ಯಾಂಕಿನಲ್ಲಿ ಅರ್ಜಿಯನ್ನು ಪಡೆಯತಕ್ಕದ್ದು. 4. ಭರ್ತಿ ಮಾಡಿದ ನಿವೇಶನದ ಅರ್ಜಿಯನ್ನು ಆಯಾ ಅಳತೆಗೆ ತಕ್ಕಂತೆ ಕಾಲಂ 7 ಮತ್ತು 8 ರಲ್ಲಿನ ಪ್ರಾರಂಭಿಕ ಠೇವಣಿಯನ್ನು ಡಿ.ಡಿ. ಅಥವಾ ನಗದು ರೂಪದಲ್ಲಿ ಕೆಳಕಂಡ ಯಾವುದಾದರೂ ಬ್ಯಾಂಕಿನಲ್ಲಿ ಸಲ್ಲಿಸತಕ್ಕದ್ದು. ಕೆನರಾ ಬ್ಯಾಂಕ್, ವಿನೋಬನಗರ ಶಾಖೆ A/c No.: 2907101012447 IFSC Code: CNRB0002907

ಶಿವಮೊಗ್ಗ ನಗರದಲ್ಲಿ ಅರ್ಜಿ ಸಲ್ಲಿಸುವವರು:– 1. ಕೆನರಾ ಬ್ಯಾಂಕ್, ವಿನೋಬನಗರ ಶಾಖೆ (ಸೂಡ ಕಛೇರಿ ಪಕ್ಕ), ಶಿವಮೊಗ್ಗ 2. ಕೆನರಾ ಬ್ಯಾಂಕ್, ವಿದ್ಯಾನಗರ ಶಾಖೆ, ಶಿವಮೊಗ್ಗ 3. ಕೆನರಾ ಬ್ಯಾಂಕ್, ಮುಖ್ಯ ಶಾಖೆ, ನೆಹರು ರಸ್ತೆ, ಶಿವಮೊಗ್ಗ 4. ಕೆನರಾ ಬ್ಯಾಂಕ್, ಶಿವಮೂರ್ತಿ ಸರ್ಕಲ್ ಶಾಖೆ, ಶಿವಮೊಗ್ಗ 5. ಕೆನರಾ ಬ್ಯಾಂಕ್ ಶೇಷಾದ್ರಿಪುರಂ ಶಾಖೆ, ಶಿವಮೊಗ್ಗ 6. ಕೆನರಾ ಬ್ಯಾಂಕ್, ಗಾಂಧಿಬಜಾರ್ ಶಾಖೆ, ಶಿವಮೊಗ್ಗ 7. ಕೆನರಾ ಬ್ಯಾಂಕ್, ದುರ್ಗಿಗುಡಿ ಶಾಖೆ, ಶಿವಮೊಗ್ಗ 8. ಕೆನರಾ ಬ್ಯಾಂಕ್, ಅಮೀರ್ ಅಹ್ಮದ್ ಸರ್ಕಲ್ ಶಾಖೆ, ಶಿವಮೊಗ್ಗ 9. ಕೆನರಾ ಬ್ಯಾಂಕ್, ಗೋಪಾಳ ಶಾಖೆ, ಶಿವಮೊಗ್ಗ

ಭದ್ರಾವತಿಯಲ್ಲಿ ಅರ್ಜಿ ಸಲ್ಲಿಸುವವರು:– 1. ಕೆನರಾ ಬ್ಯಾಂಕ್, ಬಿ.ಹೆಚ್. ರಸ್ತೆ ಶಾಖೆ, ಭದ್ರಾವತಿ 2. ಕೆನರಾ ಬ್ಯಾಂಕ್, ಚನ್ನಗಿರಿ ರಸ್ತೆ ಶಾಖೆ, ಭದ್ರಾವತಿ

5. ಪ್ರಾರಂಭಿಕ ಠೇವಣಿ ಪಾವತಿಸಿ ಅರ್ಜಿ ಸಲ್ಲಿಸಿದ್ದಕ್ಕೆ ಸಂಬಂಧಪಟ್ಟ ಬ್ಯಾಂಕ್‌ನಿಂದ ಸ್ವೀಕೃತಿ ಪಡೆಯತಕ್ಕದ್ದು. 6. ಅರ್ಜಿ ಸಲ್ಲಿಸಲು ನೀವು ಕರ್ನಾಟಕದಲ್ಲಿ ವಾಸವಾಗಿದ್ದು, ಕನಿಷ್ಠ 18 ವರ್ಷ ವಯಸ್ಸಿನವರಾಗಿರಬೇಕು. 7. ಈ ಮೊದಲು ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ/ಈ ಹಿಂದಿನ ನಗರಾಭಿವೃದ್ಧಿ ಮಂಡಳಿಯಿಂದ /ಸರ್ಕಾರದ ಸಂಸ್ಥೆಗಳಿಂದ ನಿವೇಶನ ಹಂಚಿಕೆ ಪಡೆದವರು ಈ ನಿವೇಶನ ಹಂಚಿಕೆಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುದಿಲ್ಲ. ಒಂದು ವೇಳೆ ನಿವೇಶನ ಕೋರಿ ಅರ್ಜಿ ಸಲ್ಲಿಸಿದ್ದಲ್ಲಿ ಅಂತವರ ಅರ್ಜಿಯನ್ನು ಪರಿಗಣಿಸದೇ ಕಟ್ಟಿರುವ ಮುಂಗಡ ಹಣವನ್ನು ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. 8. ನೀವು ಪಾವತಿಸುವ ಪ್ರಾರಂಭಿಕ ಠೇವಣಿಗೆ ಯಾವುದೇ ಬಡ್ಡಿ ನೀಡಲಾಗುವುದಿಲ್ಲ. ನಿವೇಶನ ಹಂಚಿಕೆಯಾದ ಅರ್ಜಿದಾರರಿಗೆ ಆ ಮೊತ್ತವನ್ನು ನಿವೇಶನ ಬೆಲೆಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು. ನಿವೇಶನ ಹಂಚಿಕೆಯಾಗದವರಿಗೆ ಯಾವುದೇ ಬಡ್ಡಿ ಇಲ್ಲದೆ ಪ್ರಾರಂಭಿಕ ಠೇವಣಿಯನ್ನು ರೀಫಂಡ್ ಕೋರಿದ್ದಲ್ಲಿ ಹಿಂದಿರುಗಿಸಲಾಗುವುದು. ನೋಂದಣಿ ಹಣವನ್ನು ವಾಪಾಸ್ಸು ನೀಡಲಾಗುವುದಿಲ್ಲ. ಅಥವಾ ನಿವೇಶನ ಬೆಲೆಗೆ ಹೊಂದಾಣಿಕೆ ಮಾಡಿಕೊಳ್ಳಲಾಗುದಿಲ್ಲ. 9. ಮೇಲೆ ನಮೂದಿಸಲಾದ ನಿವೇಶನಗಳ ಬೆಲೆಗಳು ತಾತ್ಕಾಲಿಕವಾಗಿದ್ದು, ನಿವೇಶನ ಹಂಚಿಕೆ ಸಮಯದಲ್ಲಿ ಪರಿಷ್ಕರಣೆಗೆ ಒಳಗಾಗಬಹುದು. 10. ಕಾರಣಾಂತರಗಳಿಂದಾಗಿ ನಿವೇಶನಗಳ ಸಂಖ್ಯೆಯಲ್ಲಿ ವ್ಯತ್ಯಾಸವಾದಲ್ಲಿ ಹಂಚಿಕೆಗಾಗಿ ನಿವೇಶನಗಳ ಸಂಖ್ಯೆಯನ್ನು ಕಡಿಮೆ/ಹೆಚ್ಚು ಮಾಡಲಾಗುವುದು. ಮತ್ತು ನಿವೇಶನದ ಅಳತೆ ಅಂದಾಜು ಅಳತೆಯಾಗಿದ್ದು, ಹಂಚಿಕೆ ಸಮಯದಲ್ಲಿ ಸ್ಥಳದಲ್ಲಿ ಲಭ್ಯವಾಗುವ ಅಳತೆಗಳಿಗೆ ಅನುಗುಣವಾಗಿ ನಿವೇಶನ ಹಂಚಿಕೆ ಮಾಡಲಾಗುವುದು. 11. ನಿವೇಶನಗಳ ಹಂಚಿಕೆಯನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ನಿವೇಶನ ಹಂಚಿಕೆ ನಿಯಮ 1991ರ ತಿದ್ದುಪಡಿ ನಿಯಮ 2005 ರಲ್ಲಿ ನಿಗದಿಪಡಿಸಲಾದಂತೆ ನಿವೇಶನಗಳನ್ನು ವಿವಿಧ ಪ್ರವರ್ಗಗಳಿಗೆ ನಿಗಧಿಪಡಿಸಿ ಹಂಚಿಕೆ ಮಾಡಲಾಗುವುದು. ಈ ಬಗ್ಗೆ ಪ್ರಾಧಿಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ.

*) ಅರ್ಜಿ ಫಾರಂಗಳನ್ನು ದಿನಾಂಕ 02-09-2024 ರಿಂದ 30-09-2024 ರವರಗೆ ಮೇಲ್ಕಂಡ ಬ್ಯಾಂಕ್‌ಗಳಲ್ಲಿ ನೀಡಲಾಗುವುದು.
*) ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 30-10-2024 ಅಪೂರ್ಣ ಮಾಹಿತಿಯೊಂದಿಗೆ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಲಾಗವುದು.

ಸಹಿ/- (ಹೆಚ್.ಎಸ್.ಸುಂದರೇಶ್) ಅಧ್ಯಕ್ಷರು, ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರ, ಶಿವಮೊಗ್ಗ
ಸಹಿ/- (ವಿಶ್ವನಾಥ್ ಪಿ. ಮುದಜ್ಜಿ) ಆಯುಕ್ತರು, ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರ, ಶಿವಮೊಗ್ಗ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24-25/183/08/603

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಲೋ.ಇ., ಉಡುಪಿ ವಿಭಾಗ, ಉಡುಪಿ-576101
ದೂರವಾಣಿ & ಫ್ಯಾಕ್ಸ್: (0820)2531802
ನಂ:ಪಿಡಬ್ಲ್ಯೂಡಿ:ಯುಡಿಎನ್:ಎನ್‌ಐಟಿ:13:2024-25: ಎಇ-2 ದಿ: 02.09.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (3ನೇ ಕರೆ)

2024-25ನೇ ಸಾಲಿಗೆ ರೂ. 7.00 ಲಕ್ಷದಿಂದ 15.00 ಲಕ್ಷದವರೆಗಿನ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ / ಮೋರಿ ನಿರ್ವಹಣೆ ಯೋಜಯಡಿ 2 ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 4ನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ 'ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್' "kppp.karnataka.gov.in" ಮುಖಾಂತರ ಟೆಂಡರನ್ನು ಕರ್ನಾಟಕ ಟ್ರಾನ್ಸ್‌ಫರೆನ್ಸಿ ಇನ್ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಆ್ಯಕ್ಟ್-2023ರಲ್ಲಿ ನಿರೂಪಿತ ಶರ್ತಗೊಳಪಟ್ಟು ಟೆಂಡರನ್ನು ಆಹ್ವಾನಿಸಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್"kppp.karnataka.gov.in" ಮುಖಾಂತರ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 09.09.2024ರ ಸಂಜೆ 5.30ರವರೆಗೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯನ್ನು ಸಂಪರ್ಕಿಸುವುದು.
ಸಹಿ/- ಕಾರ್ಯಪಾಲಕ ಅಭಿಯಂತರರ ಪರವಾಗಿ
ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ

International Institute of Information Technology Bangalore
26/c, Hosur Road, Electronics city phase-1, Bengaluru – 560100
Tender # IIITB-EAST-002/2024, dated 30th August 2024
NOTICE INVITING TENDER
Tenders are invited for providing **"Architectural Design & Consulting Services"** for our New Construction Project at Bangalore. Interested architects may visit https://www.iiitb.ac.in/tenders for further details.
Sd/- CAO, IIIT-B

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.
ಸಂಖ್ಯೆ:ಕಾಅ/ಗ್ರಾಕುನೀ&ನೈವಿ/ಬೆಂನ/ತಾಂಸ/ಟೆಂಡರ್/07/2024-25 ದಿನಾಂಕ: 31-08-2024

ಅಲ್ಪಾವಧಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಟೆಂಡರ್ ಪ್ರಕಟಣೆ

2023-24 ನೇ ಸಾಲಿನ ಎಸ್.ಬಿ.ಎಂ ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **12-09-2024 ರಂದು ಸಂಜೆ 4.00 ಗಂಟೆಯವರೆಗೆ** ಸಲ್ಲಿಸಬಹುದಾಗಿರುತ್ತದೆ.
ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: https://kppp.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/- ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/1801/ಅಡ್ವರ್ಟೋ/2024-25

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಆರೋಗ್ಯ ಸೌಧ, 7ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು-560023
ದೂರವಾಣಿ ಸಂ: 22536200, ಇಮೇಲ್: directorsast@gmail.com
ಸಂಖ್ಯೆ: ಆಕುಕ/ಎಸ್‌ಎಎಸ್‌ಟಿ/ಐಟಿ/15/2024-25 ದಿನಾಂಕ: 30.08.2024

ಟೆಂಡರ್ ಪ್ರಕಟಣೆ

ವಿಷಯ: ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ವಾರ್ಷಿಕ ನಿರ್ವಹಣಾ ಒಪ್ಪಂದ ಮತ್ತು SAST ಅಪ್ಲಿಕೇಶನ್‌ನ ಗ್ರಾಹಕೀಕರಣಕ್ಕಾಗಿ ಸೇವಾ ಪೂರೈಕೆದಾರರ ಆಯ್ಕೆಗೆ ಟೆಂಡರ್ ಅನ್ನು ಆಹ್ವಾನಿಸುತ್ತಿದೆ.
ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ 1882ರ ಭಾರತೀಯ ಟ್ರಸ್ಟ್ ಕಾಯಿದೆ ಅಡಿಯಲ್ಲಿ ನೋಂದಾಯಿಸಲಾಗಿದೆ ವಿವಿಧ ಸರ್ಕಾರಿ ಆರೋಗ್ಯ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ತನ್ನ ಯೋಜನೆಗಳ ಯಶಸ್ವಿ ಅನುಷ್ಠಾನಕ್ಕಾಗಿ, ವಾರ್ಷಿಕ ನಿರ್ವಹಣಾ ಒಪ್ಪಂದ ಮತ್ತು SAST ಅಪ್ಲಿಕೇಶನ್ ಗ್ರಾಹಕೀಕರಣಕ್ಕಾಗಿ ಸೇವಾ ಪೂರೈಕೆದಾರರನ್ನು ನೇಮಿಸಿಕೊಳ್ಳಲು ಟ್ರಸ್ಟ್ ಪ್ರಯತ್ನಿಸುತ್ತದೆ. **29.08.2024** ರಿಂದ **https://kppp.karnataka.gov.in/#/portal/portal-home** ನಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ಸಲ್ಲಿಸಬೇಕು. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ **08.10.2024 ರಂದು ಸಂಜೆ 5.00 ಗಂಟೆಯವರೆಗೆ.**
ಸಹಿ/- ನಿರ್ದೇಶಕರು (ಆಪರೇಷನ್ಸ್)
ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಬೆಂಗಳೂರು
DIPR/CP/BCPL/1803/2024-25

ಕರ್ನಾಟಕ ಸರ್ಕಾರ
(ಶಾಲಾ ಶಿಕ್ಷಣ ಇಲಾಖೆ)
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
6ನೇ ಅಡ್ಡ ರಸ್ತೆ , ಮಲ್ಲೇಶ್ವರಂ, ಬೆಂಗಳೂರು-560 003.
ದೂರವಾಣಿ: 080-26422238/45, ಇ-ಮೇಲ್: mdktbs.tender@gmail.com
ವೆಬ್‌ಸೈಟ್: https://textbooks.karnataka.gov.in
ಸಂಖ್ಯೆ: ಎ5/ಕ.ಪ.ಪು.ಸಂ./ADM/DTPM/1/2024/E-28539 ದಿನಾಂಕ: 02.09.2024

ಅಲ್ಪಾವಧಿ ಟೆಂಡರ್ ಅಧಿಸೂಚನೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

2024-25ನೇ ಸಾಲಿನ **1ರಿಂದ 12ನೇ ತರಗತಿಯ ಅಂದಾಜು 1100 ಶೀರ್ಷಿಕೆಗಳ ಮುದ್ರಣ ಪೂರ್ವ ಕಾರ್ಯಗಳು** ಅಂದರೆ ಪಠ್ಯಪುಸ್ತಕಗಳ ಒಳಪುಟಗಳ, ರಕ್ಷಾಪುಟಗಳ ಹಾಗೂ ಇತರೆ ಡಿ.ಟಿ.ಪಿ ಕಾರ್ಯದ ಸಂಬಂಧ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ನಿಗದಿಪಡಿಸಿರುವಂತೆ ಕರ್ನಾಟಕ ರಾಜ್ಯದೊಳಗೆ ಮೂಲಭೂತ ಸೌಲಭ್ಯವುಳ್ಳ ಅರ್ಹ ಡಿ.ಟಿ.ಪಿ. ಸಂಸ್ಥೆಗಳಿಂದ 2 ಬಿಡ್ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.
ಪೂರ್ಣ ವಿವರಗಳನ್ನು ಇ-ಪೋರ್ಟಲ್ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಟೆಂಡರ್ ದಸ್ತಾವೇಜಿನಲ್ಲಿ ಪರಿಶೀಲಿಸಬಹುದು. ಬಿಡ್‌ಗಳನ್ನು **ದಿನಾಂಕ: 10.09.2024ರಂದು ಸಂಜೆ 5.30 ರವರೆಗೂ** ಆನ್‌ಲೈನ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ.
ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪೂರ್ಣ ವಿಳಾಸ:
https://kppp.karnataka.gov.in
ಸಹಾಯವಾಣಿ: 080-46010000 / 68948777
ಇಲಾಖೆಯ ವೆಬ್‌ಸೈಟ್: http://textbooks.karnataka.gov.in/
ಸಹಿ/- ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ), ಬೆಂಗಳೂರು

ನಗರಸಭಾ ಕಾರ್ಯಾಲಯ, ಹರಿಹರ-577601
ಫೋ:08192-244266 ka.harihar.cmc@gmail.com
ನಂ.ನಸಹ/ತಾಂತ್ರಿಕ/ಎಸ್‌ಬಿಎಂ 2.0/ಸಿಆರ್-01/2024-25 ದಿ: 29-08-2024

ಟೆಂಡರ್ ಪ್ರಕಟಣೆ

ಹರಿಹರ ನಗರಸಭೆ ಸ್ವಚ್ಛ ಭಾರತ್ ಮಿಷನ್ (ನಗರ) 2.0 ಯೋಜನೆಯಡಿಯಲ್ಲಿ ಮೆಟೀರಿಯಲ್ ರಿಕವರಿ ಫೆಸಿಲಿಟಿ (MRF) ಘಟಕದ ನಿರ್ಮಾಣಕ್ಕೆ ತಯಾರಿಸಿರುವ ವಿಸ್ತೃತ ಯೋಜನಾ ವರದಿಯಲ್ಲಿನ ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ-1999-2000ರ Act 2000ರ ನಿಯಮದಂತೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ-3ರ ನಿಯಮದನ್ವಯ ಈ ಕೆಳಗಿನ ಕಾಮಗಾರಿಗಳ ಇಂಡೆಂಟ್ ನಂಬರ್‌ಗಳ ಕಾಮಗಾರಿಗಳನ್ನು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಸಿವಿಲ್ ಅರ್ಹ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು ಇಚ್ಛೆಯುಳ್ಳ ಗುತ್ತಿಗೆದಾರರು ಈ ಕೆಳಗಿನ ಕಾಮಗಾರಿಗಳಿಗೆ ತಮ್ಮ ದರಗಳನ್ನು e-procurement ಮುಖಾಂತರ ಸಲ್ಲಿಸಲು ಕೋರಿದೆ. ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ದಾಖಲೆಗಳನ್ನು http://kppp.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು ಭರ್ತಿ ಮಾಡಿದ ಟೆಂಡರ್‌ಗಳನ್ನು e-procurement ವೆಬ್‌ಸೈಟ್ ಮೂಲಕ ಸಲ್ಲಿಸಬಹುದು ಹಾಗೂ ಹೆಚ್ಚಿನ ಮಾಹಿತಿಯನ್ನು ತಾಂತ್ರಿಕ ಶಾಖೆ ನಗರಸಭೆ, ಹರಿಹರ ಇವರಿಂದ ಪಡೆಯಬಹುದಾಗಿದೆ. (1) ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 14-09-2024 ರಂದು ಸಾಯಂಕಾಲ 05-30 ಗಂಟೆಯವರೆಗೆ. (2) ಇ-ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17-09-2024 ರಂದು ಬೆಳಿಗ್ಗೆ 11-00 ಗಂಟೆಗೆ. (3) ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಆರ್ಥಿಕ ಬಿಡ್ ತೆರೆಯುವ ದಿ:20-09-2024 ರಂದು ಅಥವಾ ಅನುಮೋದನೆ ನೀಡಿದ ನಂತರ ಕಾಮಗಾರಿಗಳ ವಿವರ:– Construction of proposed 13 TPD MRF center (Material Recovery Facility) of PEB structure (Primary shed of 5553 sqft) at Harihara CMC DMA/2024-25/OW/WORK_INDENT 27817
ಅಂದಾಜು ಮೊತ್ತ(ರೂ ಲಕ್ಷಗಳಲ್ಲಿ):– 83.00
ಸಹಿ/- ಆಡಳಿತಾಧಿಕಾರಿಗಳು ನಗರಸಭೆ, ಹರಿಹರ.
ಸಹಿ/-ಪೌರಾಯುಕ್ತರು, ನಗರಸಭೆ, ಹರಿಹರ.
ವಾಸಾಇ/ಡಿವಿಜಿ/299/ಕೆಎಸ್‌ಎಂಸಿಎ/2024-25

ಕರ್ನಾಟಕ ಸರ್ಕಾರ
ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ ಮೈಸೂರು ಜಿಲ್ಲೆ, ಮೈಸೂರು
ಡಾ. ಬಾಬು ಜಗಜೀವನ್‌ರಾಮ್ ಭವನ ಕಟ್ಟಡ, ಆದಿಪಂಪ ರಸ್ತೆ, ನಾರಾಯಣಸ್ವಾಮಿ ಬ್ಲಾಕ್, ವಿನಾಯಕನಗರ, ಮೈಸೂರು
Email : dswomysore9@gmail.com ದೂ.: 0821-2344661
ಸಂಖ್ಯೆ:ನಿಪಕೇ.ಮೈ/ಆಡಳಿತ/ಸಿಆರ್-1/2024-25 ದಿನಾಂಕ : 02-09-2024

ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ನಿರಾಶ್ರಿತರ ಪರಿಹಾರ ಕೇಂದ್ರ, ಜ್ಯೋತಿನಗರ, ಮೈಸೂರು ಇಲ್ಲಿನ ನಿರಾಶ್ರಿತರುಗಳ ಊಟದ ನಿರ್ವಹಣೆಗಾಗಿ 2024-25ನೇ ಸಾಲಿಗೆ ಬೇಕಾಗಿರುವ ಆಹಾರ ಪದಾರ್ಥಗಳು ಮತ್ತು ಇತರೆ ಅಗತ್ಯ ವಸ್ತುಗಳ ಪೂರೈಕೆಗಾಗಿ ಇ-ಟೆಂಡರ್ (ಇ-ಪ್ರೊಕ್ಯೂರ್‌ಮೆಂಟ್) ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳಿಗಾಗಿ ಇ.ಎಂ.ಡಿ. ಬಗ್ಗೆ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ htpp//.kppp.karnataka.gov.in ನಲ್ಲಿ ನೋಡಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ವಿಳಾಸದಲ್ಲಿ ಪಡೆಯಬಹುದು.
1. ಇ-ಟೆಂಡರ್ ನಮೂನೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ : 02-09-2024 ರಿಂದ 01-10-2024 ರ ಬೆಳಿಗ್ಗೆ 11.00 ಗಂಟೆಯವರೆಗೆ
2. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಇ-ಟೆಂಡರ್‌ಗೆ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 01-10-2024 ರ ಸಂಜೆ 04.00 ಗಂಟೆಯವರೆಗೆ
3. Prebid ಸಭೆ ದಿನಾಂಕ : 24-09-2024 ರ ಬೆಳಿಗ್ಗೆ 11.00 ಗಂಟೆಯ ನಂತರ.
4. ಇ-ಟೆಂಡರ್ ತೆರೆಯುವ ದಿನಾಂಕ : 04-10-2024 ರ ಬೆಳಿಗ್ಗೆ 11.00 ಗಂಟೆಯ ನಂತರ.
ಸಹಿ/- ಜಂಟಿ ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ ಹಾಗೂ
ಕಾರ್ಯದರ್ಶಿ, ನಿರಾಶ್ರಿತರ ಪರಿಹಾರ ಕೇಂದ್ರ, ಮೈಸೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಹಿರಿಯ ಸಹಾಯಕ ನಿರ್ದೇಶಕರು ತೋಟಗಾರಿಕೆ, (ದಕ್ಷಿಣ ವಲಯ),
9ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು –11.
ಸಂಖ್ಯೆ: ಹಿಸನಿತೋ(ದಕ್ಷಿಣ)/ಟೆಂಡರ್/11/2024-25 ದಿನಾಂಕ: 02.09.2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಆಹ್ವಾನ ಪತ್ರ (ಐಎಫ್‌ಟಿ)
(ದ್ವಿಲಕೋಟೆ ಪದ್ಧತಿ) (ಎಸ್‌ಟಿಡಿ ಕೆಡಬ್ಲ್ಯೂ-3)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆ (ದಕ್ಷಿಣ), ಇವರು (ಈ ದಾಖಲಾತಿ-ಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವವರು ಎಂದು ಓದಲಾಗಿದೆ) ಇವರು ಕೆಟಿಪಿಪಿ ಕಾಯಿದೆಗಳು 2000ರಂತೆ, ಅನುಷ್ಠಾನಗೊಳಿಸಲು ಉದ್ಯಾನವನಗಳನ್ನು ನಿರ್ವಹಣೆ ಮಾಡಲು ಕಾರ್ಮಿಕ ಇಲಾಖೆಯಡಿಯಲ್ಲಿ ನೋಂದಾಯಿತರಾಗಿರುವ ಅರ್ಹ ಮತ್ತು ನುರಿತ ವ್ಯಕ್ತಿಗಳು /ಏಜೆನ್ಸಿಗಳು/ಸಂಸ್ಥೆಗಳಿಂದ (ಈ ದಾಖಲೆಯಲ್ಲಿ ಗುತ್ತಿಗೆದಾರರೆಂದು ಓದಲಾಗಿದೆ) ಉದ್ಯಾನವನಗಳಿಗೆ ನಿರ್ವಹಣೆ ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು/ವರ್ಗೀಕರಣ
1.	ವಾರ್ಡ್ ಸಂಖ್ಯೆ-181, ಬಿ.ಟಿ.ಎಂ ಬಡಾವಣೆಯ ಉದ್ಯಾನವನಗಳಲ್ಲಿ ಲ್ಯಾಂಡ್‌ಸ್ಕೇಪ್ ಅಭಿವೃದ್ಧಿ, ಸುಂದರೀಕರಣ ಮತ್ತು ನೀರಿನ ಸೌಲಭ್ಯಗಳನ್ನು ಒದಗಿಸುವುದು. (ಎನ್.ಎಸ್ ಪಾಳ್ಯ ಪಾರ್ಕ್, ಮಿನಿ ಫಾರೆಸ್ಟ್ ಪಾರ್ಕ್ ಭಾಗ-1&2) (3ನೇ ಕರೆ) (ಸಾಮಾನ್ಯರಿಗೆ) **ಅಂದಾಜು ಮೊತ್ತ: ₹.99,99,536/-, ಇಎಂಡಿ ಮೊತ್ತ: ₹.2,00,000/-**

ಟೆಂಡರ್ ವೇಳಾಪಟ್ಟಿ: (1) ಪ್ರಕಟಣೆಯ ದಿನಾಂಕ **02.09.2024.** (2) ಟೆಂಡರ್ ದಾಖಲೆಗಳನ್ನು ದಿನಾಂಕ **04.09.2024**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **06.09.2024**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (4) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ **12.09.2024**ರ ಸಂಜೆ **4:00** ಗಂಟೆಗೆ. (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ **13.09.2024**ರ ಸಂಜೆ **4:30** ಗಂಟೆಗೆ. (6) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರಿಕ ಬಿಡ್‌ಗಳಿಗೆ ಅನುಮೋದನೆ ದೊರೆತ ನಂತರ ತಿಳಿಸಲಾಗುವುದು.
ಸಹಿ/- ಹಿರಿಯ ಸಹಾಯಕ ನಿರ್ದೇಶಕರು ತೋಟಗಾರಿಕೆ (ದಕ್ಷಿಣ ವಲಯ)

ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ (ಜಾರಿ), ಬಳ್ಳಾರಿ e-mail:- jcenfczbly@gmail.com,
ದೂರವಾಣಿ ಸಂಖ್ಯೆ: 08392-294612, 294901.
ಸಂಖ್ಯೆ:ವಾತೆಜಂಆ(ಜಾ)/ಬ/ಸಿಬ್ಬಂದಿ-1/ಹೊಟೆ/2024-25, ದಿನಾಂಕ:02.09.2024

ಟೆಂಡರ್ ಪ್ರಕಟಣೆ
(ಕೆಪಿಪಿಪಿ-ಪೋರ್ಟಲ್ ಮೂಲಕ)

ಬಳ್ಳಾರಿಯಲ್ಲಿರುವ ವಾಣಿಜ್ಯ ತೆರಿಗೆ ಇಲಾಖೆಯ ವಾಣಿಜ್ಯ ತೆರಿಗೆ ಭವನದ ನಿರ್ವಹಣೆಗೆ 15 ಸಿಬ್ಬಂದಿಗಳನ್ನು **ದಿ:01.11.2024** ರಿಂದ **ದಿ:31.10.2025**ರವರೆಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಏಜೆನ್ಸಿಯಿಂದ ಪಡೆಯಲು ಟೆಂಡರ್ ಆಹ್ವಾನಿಸಲಾಗಿದ್ದು, ಕೆಪಿಪಿಪಿ-ಪೋರ್ಟಲ್ ಮೂಲಕ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸುವ ಇಚ್ಛಿಸುವವರು **https://kppp.karnataka.gov.in**ವೆಬ್‌ಸೈಟ್ ಮೂಲಕ ಟೆಂಡರ್ ಡಾಕುಮೆಂಟುಗಳನ್ನು **ದಿ:02.09.2024** ರಿಂದಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ: **ದಿ:18.09.2024** ರಅಪರಾಹ್ನ 04.00 ಗಂಟೆವರೆಗೆ, ತಾಂತ್ರಿಕ ಬಿಡ್‌ಗಳನ್ನು **ದಿ:19.09.2024**ರ ಅಪರಾಹ್ನ 04.30 ನಿಮಿಷಕ್ಕೆ ಹಾಗೂ ಆರ್ಥಿಕ ಬಿಡ್‌ಗಳನ್ನು **ದಿ:20.09.2024**ರ ಪೂರ್ವಾಹ್ನ 11.30 ನಿಮಿಷಕ್ಕೆ ತೆರೆಯಲಾಗುವುದು. ಟೆಂಡರಿನಅಂದಾಜು ಮೊತ್ತ **ರೂ.41,93,396/-** ಇದ್ದು **EMD** ಮೊತ್ತ **ರೂ.83,868/-** ನಿಗಧಿಪಡಿಸಲಾಗಿರುತ್ತದೆ. ಷರತ್ತು, ನಿಬಂಧನೆಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ಪ್ರಕಟಣಾ ಫಲಕ/ ಈ ಇಲಾಖೆಯ ವೆಬ್ ಸೈಟ್ **https://gst.kar.nic.in/index.aspx in Tender/Auction Menu**ಹಾಗೂ **https://kppp.karnataka.gov.in** ವೆಬ್‌ಸೈಟ್ ಪರಿಶೀಲಿಸಲು ಹಾಗೂ ಈ ಕಛೇರಿಯ ವಿಷಯ ನಿರ್ವಾಹಕರನ್ನು (ಮೊ.ಸಂ.9739209251) ಸಂಪರ್ಕಿಸಲು ತಿಳಿಸಲಾಗಿದೆ.
ಸಹಿ/- ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/410/ಕೆಎಸ್‌ಎಂಸಿಎ/2024-25

ಕೈದಿಗಳಿಗೆ ‘ಇ-ಮುಲಾಖಾತ್’, ಉಚಿತ ದೂರವಾಣಿ ಕರೆ ಸೌಲಭ್ಯ • ಸಿ.ಸಿ.ಟಿ.ವಿ ಮೂಲಕ ನಿಗಾ

ಮಂಡ್ಯ: ಅಕ್ರಮ ತಡೆಗೆ ‘ಪ್ರಿಸನ್ ಕಾಲ್ ಸಿಸ್ಟಂ’

• ಸಿದ್ದು ಆರ್‌.ಜಿ.ಹಳ್ಳಿ

ಮುಖ್ಯಾಂಶಗಳು
- ರಾಜ್ಯದ ಕಾರಾಗೃಹಗಳಲ್ಲಿ ಒಟ್ಟು 83 ದೂರವಾಣಿ ಬೂತ್
- ಕಾರಾಗೃಹದಲ್ಲಿ ಮೊಬೈಲ್ ಬಳಸಿದರೆ 5 ವರ್ಷ ಶಿಕ್ಷೆ

ಮಂಡ್ಯ: ಕಾರಾಗೃಹ ಸಿಬ್ಬಂದಿಯ ಕಣ್ತಪ್ಪಿಸಿ ಕೈದಿಗಳು ಕಾನೂನುಬಾಹಿರವಾಗಿ ಮೊಬೈಲ್‌ಫೋನ್ ಬಳಸುವುದನ್ನು ತಡೆಗಟ್ಟಲೆಂದೇ, ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆಯು ಉಚಿತ ದೂರವಾಣಿ ವ್ಯವಸ್ಥೆ (ಪ್ರಿಸನ್ ಕಾಲ್ ಸಿಸ್ಟಮ್) ಮತ್ತು ವಿಡಿಯೊ ಸಂದರ್ಶನ (ಇ-ಮುಲಾಖಾತ್) ಸೌಲಭ್ಯ ಕಲ್ಪಿಸಿದೆ.

ರಾಜ್ಯದ ಕೇಂದ್ರ ಕಾರಾಗೃಹ ಮತ್ತು ಜಿಲ್ಲಾ ಕಾರಾಗೃಹಗಳಲ್ಲಿ ಒಟ್ಟು 83 ‘ಪ್ರಿಸನ್ ಕಾಲ್ ಸಿಸ್ಟಮ್’ ಉಪಕರಣ ಅಳವಡಿಸಲಾಗಿದೆ. ಪ್ರತಿ ಕೈದಿಯು ನಿರ್ದಿಷ್ಟವಾದ ಮೂರು ಸಂಖ್ಯೆಗಳಿಗೆ (ವಕೀಲರು, ಕುಟುಂಬಸ್ಥರು ಮತ್ತು ಸಂಬಂಧಿಕರು) ಕರೆ ಮಾಡಲು ಅವಕಾಶವಿದೆ.

‘ಟೆಲಿಫೋನ್ ಬೂತ್‌ನಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದ್ದು, ಕೈದಿ ಯಾರೊಂದಿಗೆ, ಏನು ಮಾತನಾಡುತ್ತಿದ್ದಾರೆ ಎಂಬುದು ಸಂಪೂರ್ಣ ರೆಕಾರ್ಡ್ ಆಗುತ್ತದೆ. ನಾವು ಕಂಟ್ರೋಲ್ ರೂಮ್‌ನಲ್ಲಿ ಕುಳಿತು ಆಡಿಯೊ ಮತ್ತು ವಿಡಿಯೊ ದೃಶ್ಯಾವಳಿಗಳ ಮೇಲೆ ಹದ್ದಿನ ಕಣ್ಣಿಟ್ಟಿರುತ್ತೇವೆ. ಹೀಗಾಗಿ ಕೈದಿಗಳು ಸೌಲಭ್ಯ ದುರ್ಬಳಕೆ ಮಾಡಿಕೊಳ್ಳಲು ಸಾಧ್ಯವಿಲ್ಲ’ ಎನ್ನುತ್ತಾರೆ ಮಂಡ್ಯ ಜಿಲ್ಲಾ ಕಾರಾಗೃಹ ಅಧೀಕ್ಷಕ ಟಿ.ಕೆ.ಲೋಕೇಶ್.

ನಿತ್ಯ 140 ಕರೆಗಳು!: ಮಂಡ್ಯ ಜಿಲ್ಲಾ ಕಾರಾಗೃಹದಲ್ಲಿ ನಿತ್ಯ ಸರಾಸರಿ 140 ಕೈದಿಗಳು ‘ಪ್ರಿಸನ್ ಕಾಲ್ ಸಿಸ್ಟಮ್’ ಮೂಲಕ ಕರೆ ಮಾಡುತ್ತಿದ್ದಾರೆ. ಬೆಳಿಗ್ಗೆ 7ರಿಂದ ಸಂಜೆ 6ರವರೆಗೆ ಅವಕಾಶ ಕಲ್ಪಿಸಲಾಗಿದೆ. ಒಂದು ಕರೆಗೆ ಗರಿಷ್ಠ 7 ನಿಮಿಷ ನಿಗದಿಪಡಿಸಿದ್ದು, ಪ್ರತಿ ಕೈದಿ ತಿಂಗಳಲ್ಲಿ ಗರಿಷ್ಠ 100 ನಿಮಿಷ ಮಾತನಾಡಬಹುದು.

‘ಕುಟುಂಬ ನಿರ್ವಹಣೆ, ಮಕ್ಕಳ ವಿದ್ಯಾಭ್ಯಾಸ, ಪ್ರಕರಣದ ವಿಚಾರಣೆಗೆ ಸಂಬಂಧಪಟ್ಟಂತೆ ಮಾಹಿತಿ ಪಡೆಯಲು ಮತ್ತು ವಿಷಯವನ್ನು ತಿಳಿಸಲು ಇದು ಕೈದಿಗಳಿಗೆ ಅನುಕೂಲ. ಪತ್ರ ವ್ಯವಹಾರ ಮಾಡುವವರಿಗೆ ಉಚಿತವಾಗಿ ಪೋಸ್ಟ್ ಕಾರ್ಡ್‌ಗಳನ್ನು ಒದಗಿಸುತ್ತೇವೆ. ಈ ಸೌಲಭ್ಯಗಳು ಕೈದಿಗಳ ಖಿನ್ನತೆಯನ್ನು ದೂರ ಮಾಡುತ್ತವೆ’ ಎನ್ನುತ್ತಾರೆ ಕಾರಾಗೃಹದ ವೀಕ್ಷಕರು.

ಮೊಬೈಲ್ ಬಳಸಿದರೆ 5 ವರ್ಷ ಶಿಕ್ಷೆ: ಕಾರಾಗೃಹದಲ್ಲಿ ಮೊಬೈಲ್‌ಫೋನ್ ಬಳಸಿದರೆ ಮೊದಲು 6 ತಿಂಗಳ ಶಿಕ್ಷೆ ಇತ್ತು, ಕಾರಾಗೃಹಗಳ ಅಧಿನಿಯಮಕ್ಕೆ 2022ರಲ್ಲಿ ತಿದ್ದುಪಡಿ ತಂದ ನಂತರ, ಮೊಬೈಲ್ ಸೇರಿದಂತೆ ಯಾವುದೇ ನಿಷೇಧಿತ ವಸ್ತುಗಳನ್ನು ಕೈದಿಗಳು ಬಳಕೆ ಮಾಡಿದರೆ ಮತ್ತು ಅದಕ್ಕೆ ಸಹಾಯ ಮಾಡುವ ಅಧಿಕಾರಿ, ಸಿಬ್ಬಂದಿಗೆ 5 ವರ್ಷಗಳ ಕಾರಾಗೃಹ ಶಿಕ್ಷೆ ವಿಧಿಸಬಹುದು. ಮಂಡ್ಯ ಕಾರಾಗೃಹದಲ್ಲಿ ಕಾನೂನುಬಾಹಿರವಾಗಿ ಮೊಬೈಲ್ ಬಳಕೆ ಮಾಡಿದ ಆರೋಪದ ಮೇಲೆ ಮಂಡ್ಯ ಪಶ್ಚಿಮ ಪೊಲೀಸ್ ಠಾಣೆಯಲ್ಲಿ 5 ಪ್ರಕರಣಗಳನ್ನು ದಾಖಲಿಸಲಾಗಿದೆ.



‘ಪ್ರಿಸನ್ ಕಾಲ್ ಸಿಸ್ಟಮ್’ ಬೂತ್‌ನಲ್ಲಿ ಕರೆ ಮಾಡುತ್ತಿರುವ ಕೈದಿ –ಪ್ರಜಾವಾಣಿ ಚಿತ್ರ

ಬೀಡಿ ನೀಡಲು ಆಗ್ರಹಿಸಿ ಪ್ರತಿಭಟಿಸಿದ ಕೈದಿಗಳು

ಶಿವಮೊಗ್ಗ: ಬೀಡಿ, ಸಿಗರೇಟು ಹಾಗೂ ತಂಬಾಕು ಸೇವನೆಗೆ ಅವಕಾಶ ನೀಡುವಂತೆ ಒತ್ತಾಯಿಸಿ ಇಲ್ಲಿನ ಕೇಂದ್ರ ಕಾರಾಗೃಹದಲ್ಲಿ ಸೋಮವಾರ ಬೆಳಿಗ್ಗೆ ಕೈದಿಗಳು ಉಪಾಹಾರ ಸೇವಿಸಲು ನಿರಾಕರಿಸಿದರು.

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಭಾಗಿಯಾಗಿರುವ ನಟ ದರ್ಶನ್ ಸಹಚರರನ್ನು ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಿಂದ ಎರಡು ದಿನಗಳ ಹಿಂದೆ ಇಲ್ಲಿನ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಲಾಗಿದೆ.

ಇವರನ್ನು ಶಿವಮೊಗ್ಗಕ್ಕೆ ಸ್ಥಳಾಂತರಿಸುವ ಹಿಂದಿನ ದಿನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ. ಮಿಥುನ್‌ಕುಮಾರ್ ನೇತೃತ್ವದಲ್ಲಿ 100ಕ್ಕೂ ಹೆಚ್ಚು ಪೊಲೀಸರ ತಂಡ ಕೇಂದ್ರ ಕಾರಾಗೃಹದಲ್ಲಿ ತಪಾಸಣೆ ನಡೆಸಿತ್ತು. ಈ ವೇಳೆ ಅಲ್ಲಿ ಬೆಂಕಿ ಪೊಟ್ಟಣ, ಬೀಡಿ ಕಟ್ಟು ಸಿಕ್ಕಿತ್ತು. ಈ ಬಗ್ಗೆ ತುಂಗಾ ನಗರ ಠಾಣೆ ಪೊಲೀಸರು ಸ್ವಯಂ ಪ್ರೇರಿತವಾಗಿ ಎಫ್‌ಐಆರ್ ದಾಖಲಿಸಿಕೊಂಡಿದ್ದರು. ನಂತರ ಜೈಲಿನಲ್ಲಿ ಇನ್ನಷ್ಟು ಬಿಗಿ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಇದೆಲ್ಲದರ ಪರಿಣಾಮ ಬೀಡಿ-ತಂಬಾಕು ಸಿಗದಂತಾಗಿದ್ದೇ ಕೈದಿಗಳ ಆಕ್ರೋಶಕ್ಕೆ ಕಾರಣವಾಗಿದೆ. ಕಾರಾಗೃಹದಲ್ಲಿರುವ 778 ಕೈದಿಗಳು ಬೆಳಿಗ್ಗೆ ಉಪಾಹಾರ ಸೇವಿಸದೇ ಒಗ್ಗಟ್ಟು ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು ಎಂದು ತಿಳಿದುಬಂದಿದೆ.

‘ಜೈಲಿನಲ್ಲಿ ಯಾವುದೇ ಪ್ರತಿಭಟನೆ ನಡೆದಿಲ್ಲ. ಕೈದಿಗಳು ಬೀಡಿ-ತಂಬಾಕಿಗೆ ಬೇಡಿಕೆ ಇಟ್ಟಿದ್ದು ನಿಜ. ಅದಕ್ಕೆ ಅವಕಾಶವಿಲ್ಲ ಎಂಬುದನ್ನು ಅವರಿಗೆ ಮನವರಿಕೆ ಮಾಡಲಾಯಿತು. ನಂತರ ಎಲ್ಲರೂ ಉಪಾಹಾರ ಸೇವಿಸಿದ್ದಾರೆ’ ಎಂದು ಶಿವಮೊಗ್ಗ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ಆರ್. ಅನಿತಾ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ದುಷ್ಕರ್ಮಿಗಳ ಭೇಟಿಗೆ ಕಡಿವಾಣ’

‘ಮುಖಾಮುಖಿ ಸಂದರ್ಶನದಲ್ಲಿ ಕೆಲವೊಮ್ಮೆ ಕೈದಿಗಳನ್ನು ಭೇಟಿ ಮಾಡಲು ದುಷ್ಕರ್ಮಿಗಳು ಸ್ನೇಹಿತರ ಸೋಗಿನಲ್ಲಿ ಬರುತ್ತಿದ್ದರು. ಆದರೆ, ‘ಇ-ಮುಲಾಖಾತ್’ (ವಿಡಿಯೊ ಸಂದರ್ಶನ) ವ್ಯವಸ್ಥೆಯಿಂದ ಅದಕ್ಕೆ ಕಡಿವಾಣ ಬಿದ್ದಿದೆ’ ಎನ್ನುತ್ತಾರೆ ಮಂಡ್ಯ ಜಿಲ್ಲಾ ಕಾರಾಗೃಹ ಅಧೀಕ್ಷಕ ಟಿ.ಕೆ.ಲೋಕೇಶ್.

‘ಕೈದಿಗಳ ಕುಟುಂಬದವರು ಅಥವಾ ಸ್ನೇಹಿತರು (ಸಂದರ್ಶಕರು) ಸ್ಮಾರ್ಟ್‌ಫೋನ್/ ಕಂಪ್ಯೂಟರ್ ಮೂಲಕ NPIP ವೆಬ್‌ಸೈಟ್‌ನಲ್ಲಿ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ನಮೂದಿಸಿ, ನೋಂದಣಿ ಮಾಡಿಕೊಳ್ಳಬೇಕು. ಸಂದರ್ಶಕರ ಕೋರಿಕೆಯನ್ನು ಕಾರಾಗೃಹದ ಸಿಬ್ಬಂದಿ ಅನುಮತಿಸಿ, ದಿನಾಂಕ ಮತ್ತು ಸಮಯ ನಿಗದಿಪಡಿಸುತ್ತಾರೆ’ ಎಂದು ತಿಳಿಸಿದರು.

ದರ್ಶನ್‌ಗೆ ಸರ್ಜಿಕಲ್ ಚೇರ್

ಬಳ್ಳಾರಿ: ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್ ಕೋರಿಕೆ ಮೇರೆಗೆ ಕಾರಾಗೃಹ ಅಧಿಕಾರಿಗಳು ಸೋಮವಾರ ಶೌಚಕ್ಕೆ ಸರ್ಜಿಕಲ್ ಚೇರ್ ಒದಗಿಸಿದೆ. ದರ್ಶನ್‌ಗೆ ಬೆನ್ನುಬಿಲ್ಲು (ಎಲ್-5) ಸಮಸ್ಯೆ ಮತ್ತು ಕೈ ನೋವು ಇರುವ ಬಗ್ಗೆ ಕುಟುಂಬಸ್ಥರು ಬಳ್ಳಾರಿ ಮತ್ತು ಬೆಂಗಳೂರಿನ ಕಾರಾಗೃಹದ ಅಧಿಕಾರಿಗಳಿಗೆ ದಾಖಲೆಗಳನ್ನು ಸಲ್ಲಿಸಿದ್ದರು.

ಈ ಮಧ್ಯೆ ಆರೋಗ್ಯ ಇಲಾಖೆ ವೈದ್ಯರು, ದರ್ಶನ್ ಅವರ ಆರೋಗ್ಯ ತಪಾಸಣೆ ಮಾಡಿ ಬೆನ್ನುಬಿಲ್ಲು ಸಮಸ್ಯೆ ಇರುವುದು ಖಚಿತಪಡಿಸಿದರು. ಅದರ ಬೆನ್ನಲ್ಲೇ ಚೇರನ್ನು ಕಾರಾಗೃಹಕ್ಕೆ ತಲುಪಿಸಿದರು.

ದರ್ಶನ್ ಪರ ವಕೀಲರು ಕಾರಾಗೃಹಕ್ಕೆ ಭೇಟಿ ನೀಡುವ ನಿರೀಕ್ಷೆಯಿತ್ತು. ಆದರೆ, ಬರಲಿಲ್ಲ. ದರ್ಶನ್ ಅಭಿಮಾನಿಗಳು ನಿತ್ಯ ಜೈಲು ಬಳಿ ಬರುತ್ತಿದ್ದು, ಆಗಾಗ್ಗೆ ಜನದಟ್ಟಣೆ ಆಗುತ್ತಿದೆ. ಪೊಲೀಸ್ ಬಿಗಿ ಭದ್ರತೆ ಮುಂದುವರಿದಿದೆ.

ಸುದ್ದಿ 2 ನಿಮಿಷ

ಅರ್ಚಕರ ತಸ್ತೀಕ್ ಹಣ ನೀಡಲು ಪ್ರತ್ಯೇಕ ಆ್ಯಪ್: ರಾಮಲಿಂಗಾರೆಡ್ಡಿ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ‘ಮುಜರಾಯಿ ದೇವಾಲಯಗಳ ಅರ್ಚಕರ ತಸ್ತೀಕ್ ಹಣವನ್ನು (ಗೌರವ ಧನ) ನೇರವಾಗಿ ಅವರ ಬ್ಯಾಂಕ್ ಖಾತೆಗೆ ವರ್ಗಾಯಿಸಲು ಪ್ರತ್ಯೇಕ ಆ್ಯಪ್ ಸಿದ್ಧಪಡಿಸಲಾಗುತ್ತಿದ್ದು, ಇನ್ನೊಂದು ತಿಂಗಳಲ್ಲಿ ಪ್ರಕ್ರಿಯೆ ಪೂರ್ಣಗೊಳ್ಳಲಿದೆ’ ಎಂದು ಹಿಂದೂ ಧಾರ್ಮಿಕ ಹಾಗೂ ಧರ್ಮಾದಾಯ ದತ್ತಿಗಳ ಇಲಾಖೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ತಾಲ್ಲೂಕಿನ ಆರತಿ ಉಕ್ಕಡ ಅಹಲ್ಯಾದೇವಿ ದೇವಾಲಯಕ್ಕೆ ಸೋಮವಾರ ಭೇಟಿ ನೀಡಿದ್ದ ಅವರು ಸುದ್ದಿಗಾರರ ಜತೆ ಮಾತನಾಡಿ, ‘ಅರ್ಚಕ ಅಥವಾ ನೌಕರ ತೀರಿಕೊಂಡರೆ ನೀಡಲಾಗುತ್ತಿದ್ದ ಪರಿಹಾರ ಮೊತ್ತವನ್ನು ₹35 ಸಾವಿರದಿಂದ ₹2 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಅರ್ಚಕರು ಮತ್ತು ದೇವಾಲಯಗಳ ನೌಕರರ ಮಕ್ಕಳಿಗೆ ಶಿಷ್ಯವೇತನ ನೀಡಲಾಗುತ್ತಿದ್ದು, ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಒಂದು ತಿಂಗಳಲ್ಲಿ ಹಣ ಬಿಡುಗಡೆಯಾಗುತ್ತದೆ. ಮೈಸೂರಿನ ಚಾಮುಂಡಿಬೆಟ್ಟ, ಘಾಟಿ ಸುಬ್ರಹ್ಮಣ್ಯ, ಹುಲಿಗೆಮ್ಮ, ರೇಣುಕಾ ಎಲ್ಲಮ್ಮ ದೇವಾಲಯಗಳಿಗೆ ವರ್ಷದಲ್ಲಿ ಹತ್ತಾರು ಲಕ್ಷ ಭಕ್ತರು ಬರುತ್ತಾರೆ. ಅವುಗಳನ್ನು ಮಲೆ ಮಹದೇಶ್ವರ ದೇಗುಲ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ಪ್ರಾಧಿಕಾರ ರಚಿಸಲಾಗಿದೆ’ ಎಂದರು.

‘ಆರ್.ವಿ.ದೇಶಪಾಂಡೆ ಅವರು, ತಾವು 2028ರ ನಂತರ ಮುಖ್ಯಮಂತ್ರಿಯಾಗಬಹುದು ಎಂಬ ಅರ್ಥದಲ್ಲಿ ಹೇಳಿಕೆ ನೀಡಿದ್ದು, ಬೇರೆ ಅರ್ಥ ಕಲ್ಪಿಸಬಾರದು. ಬಿಜೆಪಿ ಮತ್ತು ಜೆಡಿಎಸ್ ನಾಯಕರು ಸಿದ್ದರಾಮಯ್ಯ ಅವರ ಬಗ್ಗೆ ಆರೋಪ ಮಾಡುವ ಮುನ್ನ ತಮ್ಮ ಮೇಲಿರುವ ಆರೋಪ ತೊಳೆದುಕೊಳ್ಳಲಿ’ ಎಂದು ಪ್ರತಿಕ್ರಿಯಿಸಿದರು.

ಪಿಎಸ್‌ಐ 402 ಹುದ್ದೆಗಳಿಗೆ 22ರಂದು ಪರೀಕ್ಷೆ

ಬೆಂಗಳೂರು: ಒಟ್ಟು 402 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳಿಗೆ ಇದೇ ತಿಂಗಳ 22ರಂದು ಲಿಖಿತ ಪರೀಕ್ಷೆ ನಡೆಯಲಿದೆ. ಪರೀಕ್ಷೆ ನಡೆಸಲು ಅಗತ್ಯವಾದ ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

‘ಈ ಹುದ್ದೆಗಳಿಗೆ 66 ಸಾವಿರ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದು, ಪರೀಕ್ಷೆಗೆ ಒಂದು ವಾರ ಮೊದಲು ಪ್ರವೇಶ ಪತ್ರ ಬಿಡುಗಡೆ ಮಾಡಲಾಗುವುದು’ ಎಂದು ಅವರು ತಿಳಿಸಿದ್ದಾರೆ.

‘ಗ್ರಾಮ ಆಡಳಿತಾಧಿಕಾರಿ ಹುದ್ದೆಗೆ ಕನ್ನಡ ಕಡ್ಡಾಯ ಪರೀಕ್ಷೆ ಇದೇ 29ರಂದು ನಡೆಯಲಿದೆ’ ಎಂದರು.

ಕೆಪಿಎಸ್‌ಸಿ: ಮರು ಪರೀಕ್ಷೆಗೆ ಸೂಚನೆ

ಒಂದನೇ ಪುಟದಿಂದ...

ಪರೀಕ್ಷೆಯಲ್ಲಾದ ಎಡವಟ್ಟುಗಳ ಬಗ್ಗೆ ತಮ್ಮ ‘ಎಕ್ಸ್’ ಖಾತೆಯಲ್ಲಿ ವಿಷಯ ಹಂಚಿಕೊಂಡಿರುವ ಮುಖ್ಯಮಂತ್ರಿ, ‘ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಪರೀಕ್ಷೆಯಲ್ಲಿ ಕನ್ನಡಕ್ಕೆ ಅನುವಾದ ಮಾಡಲಾದ ಪ್ರಶ್ನೆಗಳು ಅಸಮರ್ಪಕ ಆಗಿದ್ದವು ಎಂಬ ವಿಚಾರ ನನ್ನ ಗಮನಕ್ಕೆ ಬಂದ ತಕ್ಷಣ, ಪರೀಕ್ಷಾರ್ಥಿಗಳಿಗೆ ಅನ್ಯಾಯ ಆಗಬಾರದೆಂಬ ಉದ್ದೇಶದಿಂದ ಮುಂದಿನ ಎರಡು ತಿಂಗಳುಗಳ ಒಳಗೆ ಮರು ಪರೀಕ್ಷೆ ಮಾಡುವಂತೆ ಕೆಪಿಎಸ್‌ಸಿಗೆ ಸೂಚನೆ ನೀಡಿದ್ದೇನೆ’ ಎಂದಿದ್ದಾರೆ.

‘ಕರ್ತವ್ಯಲೋಪ ಎಸಗಿದ ಅಧಿಕಾರಿಗಳನ್ನು ಕೆಲಸದಿಂದ ಬಿಡುಗಡೆ ಮಾಡಲಾಗಿದೆ. ಮುಂಬರುವ ಪರೀಕ್ಷೆಗಳನ್ನು ಅತ್ಯಂತ ಜವಾಬ್ದಾರಿಯುತವಾಗಿ, ಸಮರ್ಪಕವಾಗಿ ನಡೆಸಲು ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು. ನೇಮಕಾತಿ ಪ್ರಕ್ರಿಯೆಗಳ ಸಮಗ್ರತೆ ಮತ್ತು ವಿಶ್ವಾಸಾರ್ಹತೆಯನ್ನು ಎತ್ತಿಹಿಡಿದು, ಪರೀಕ್ಷಾರ್ಥಿಗಳ ಹಿತ ರಕ್ಷಿಸಲು ನಾವು ಬದ್ಧರಾಗಿದ್ದೇವೆ’ ಎಂದೂ ಹೇಳಿದ್ದಾರೆ.

> ಮರುಪರೀಕ್ಷೆ ನಡೆಸಲು ಸರ್ಕಾರ ನಿರ್ಧಾರ ಕೈಗೊಂಡಿರುವುದು ಉದ್ಯೋಗಕಾಂಕ್ಷಿಗಳು ಮತ್ತು ಪ್ರತಿಪಕ್ಷಗಳ ಹೋರಾಟಕ್ಕೆ ಸಿಕ್ಕ ಜಯ
> **ಆರ್.ಅಶೋಕ,**
> ವಿಧಾನಸಭೆ ವಿರೋಧ ಪಕ್ಷ ನಾಯಕ

ನಿಯಮ ಉಲ್ಲಂಘನೆ, ಅಧಿಕಾರಿಗಳಿಂದ ಲೋಪ: ಪ್ರಿಯಾಂಕ್ ಖರ್ಗೆ

‘ಕೋವಿಡ್ ಅಕ್ರಮ: ವರದಿಯಲ್ಲಿ ಉಲ್ಲೇಖ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ನಿರ್ವಹಣೆ ಹೆಸರಿನಲ್ಲಿ ಅಕ್ರಮ ನಡೆದಿರುವ ಬಗ್ಗೆ ನ್ಯಾಯಮೂರ್ತಿ ಡಿಕುನ್ಹಾ ತನಿಖಾ ಆಯೋಗದಲ್ಲಿ ಉಲ್ಲೇಖ ಇರುವುದು ಗೊತ್ತಾಗಿದೆ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಕೋವಿಡ್ ಹಗರಣಕ್ಕೆ ಸಂಬಂಧಿಸಿದಂತೆ ಆಯೋಗ ಮಧ್ಯಂತರ ವರದಿ ನೀಡಿದೆ. ಕೋವಿಡ್ ನಿರ್ವಹಣೆಯ ಹೆಸರಿನಲ್ಲಿ ನಡೆದ ಬಹಳಷ್ಟು ಪ್ರಕ್ರಿಯೆಗಳಲ್ಲಿ ನಿಯಮ ಉಲ್ಲಂಘನೆ, ಅಧಿಕಾರಿಗಳಿಂದ ಲೋಪ ಹಾಗೂ ಅಕ್ರಮ ನಡೆದಿರುವ ಮಾಹಿತಿ ಇರುವುದು ಗೊತ್ತಾಗಿದೆ’ ಎಂದು ತಿಳಿಸಿದರು.

‘ವರದಿಯಲ್ಲಿ ಏನಿದೆ ಎಂಬ ವಿಚಾರ ಅಧಿಕೃತವಾಗಿ ಗೊತ್ತಿಲ್ಲ. ಸಚಿವ ಸಂಪುಟ ಸಭೆಗೆ ವರದಿ ಬಂದಾಗಲಷ್ಟೇ ವಿವರ ಗೊತ್ತಾಗಲಿದೆ’ ಎಂದೂ ಅವರು ಹೇಳಿದರು.

‘ಒತ್ತಡ ಹಾಕಿ ಕೋವಿಡ್ ಹಗರಣ ವರದಿ ತರಿಸಿಕೊಂಡಿದ್ದಾರೆ’ ಎಂಬ ಮಾಜಿ ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಆರೋಪಕ್ಕೆ ಪ್ರತಿಕ್ರಿಯಿಸಿದ ಪ್ರಿಯಾಂಕ್, ‘ಒತ್ತಡ ಹಾಕಿ ತರಿಸಿಕೊಂಡರೆ ತಪ್ಪೇನಿದೆ. ಬೇಗ ತನಿಖೆ ಮುಗಿಸಿ ಎಂದು ತನಿಖಾ ಸಂಸ್ಥೆಗಳಿಗೆ ಹೇಳುವುದೂ ತಪ್ಪೇ’ ಎಂದು ಪ್ರಶ್ನಿಸಿದರು.

‘ಅಷ್ಟಕ್ಕೂ ಮಧ್ಯಂತರ ವರದಿ ಕೊಡಿ ಎಂದು ನಾವು ಒತ್ತಡ ಹಾಕಿಲ್ಲ. ಮಾಜಿ ಮುಖ್ಯಮಂತ್ರಿ, ಮಾಜಿ ಸಚಿವರ ಹೆಸರನ್ನು ನಾವು ಹೇಳಿದ್ದೇವೆಯೇ? ವರದಿಯಲ್ಲಿ ಏನಿದೆ ನಮಗೆ ಗೊತ್ತಿಲ್ಲ. ಏನಿದೆ ಎಂದು ಅವರಿಗೆ ಹೇಗೆ ಗೊತ್ತಾಗುತ್ತದೆ’ ಎಂದರು.

‘ಬಿಜೆಪಿಯವರು ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿಕೊಂಡು ನೋಡುತ್ತಾರೆ. ಯಾರೂ ವಿಡಿಯೊ ಇದೆ ಅಂದಾಕ್ಷಣ ಯಾಕೆ ತಡೆಯಾಜ್ಞೆ ತರುತ್ತಾರೆ. ವರದಿ ಬಂದ ತಕ್ಷಣ ಕಾನೂನು ಹೋರಾಟ ಮಾಡುತ್ತೇವೆಂದು ಯಾಕೆ ಹೇಳುತ್ತಾರೆ’ ಎಂದು ಹೇಳಿದರು.

‘ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಹೇಳಿದ್ದ 21 ಹಗರಣಗಳದ್ದು ಕೇವಲ ಟ್ರೈಲರ್. ಎಲ್ಲ ಹಗರಣಗಳನ್ನು ನಾವು ಕಾನೂನಾತ್ಮಕವಾಗಿ ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುತ್ತೇವೆ. ಕೆಲವು ಪ್ರಕರಣಗಳಲ್ಲಿ ಕೇಂದ್ರ ಸರ್ಕಾರದ ತನಿಖಾ ಏಜೆನ್ಸಿಗಳು ಕೈಯಾಡಿಸುತ್ತಿವೆ. ಬಿಜೆಪಿಯವರಿಗೂ ಇದರಲ್ಲಿ ಯಾವುದೇ ಅನುಮಾನ ಬೇಡ’ ಎಂದರು.

ಸುಧಾಕರ್ ಪ್ರಮಾಣಪತ್ರ ನೀಡಲಿ: ಡಿಕೆಶಿ

‘ಕಾಂಗ್ರೆಸ್‌ನಲ್ಲಿದ್ದು ಈಗ ಬಿಜೆಪಿಗೆ ಹೋಗಿರುವ ಸುಧಾಕರ್ ತಮ್ಮ ಹೇಳಿಕೆಯ ಬಗ್ಗೆ ಮೊದಲು ಪ್ರಮಾಣಪತ್ರ ನೀಡಲಿ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೋವಿಡ್ ವರದಿ ಬಗ್ಗೆ ಪ್ರಸ್ತಾಪಿಸಿದ್ದ ಕೆ. ಸುಧಾಕರ್ ‘ಕಾಂಗ್ರೆಸ್‌ನವರು ಸತ್ಯಹರಿಶ್ಚಂದ್ರರೇ?’ ಎಂದು ಪ್ರಶ್ನಿಸಿರುವ ಬಗ್ಗೆ ಕೇಳಿದಾಗ, ‘ಅವರ ರಕ್ತ, ಆಚಾರ, ವಿಚಾರ ಎಲ್ಲವೂ ಕಾಂಗ್ರೆಸ್ ಆಗಿತ್ತು. ಈಗ ನಾಲ್ಕೈದು ವರ್ಷಗಳಿಂದ ಬದಲಾಗಿದೆ’ ಎಂದರು.

‘ನಾನು ಕೋವಿಡ್ ಹಗರಣದ ತನಿಖಾ ವರದಿಯನ್ನು ಓದಿಲ್ಲ. ವರದಿಯನ್ನು ಪರಿಶೀಲಿಸಿದ ನಂತರ ಪ್ರತಿಕ್ರಿಯಿಸುತ್ತೇನೆ’ ಎಂದರು.

‘ಬಿಜೆಪಿಯವರಿಂದ ಲೂಟಿ’



‘ಬಿಜೆಪಿ ಅವಧಿಯಲ್ಲಿ ಕೋವಿಡ್ ನಿರ್ವಹಣೆ ಹೆಸರಿನಲ್ಲಿ ಬಹಳ ದೊಡ್ಡ ಹಗರಣ ನಡೆದಿದೆ. ಸಾವು - ಬದುಕಿನ ಸಂದರ್ಭದಲ್ಲಿ ಮಾನವೀಯ ದೃಷ್ಟಿಯಿಂದ ಕೆಲಸ ಮಾಡಬೇಕಿತ್ತು. ಆದರೆ, ಬಿಜೆಪಿಯವರು ಸಾವಿರಾರು ಕೋಟಿ ಲೂಟಿ ಹೊಡೆದಿದ್ದಾರೆ’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಆ ಅವಧಿಯಲ್ಲಿ ಆರೋಗ್ಯ ಸಚಿವ ಆಗಿದ್ದವರು ಇದರ ಹೊಣೆ ಹೊರಬೇಕಾಗುತ್ತದೆ’ ಎಂದರು.

‘ಪಿಎಸ್‌ಐ ನೇಮಕಾತಿಯೂ ಸೇರಿದಂತೆ ಎಲ್ಲ ಹಗರಣಗಳ ವರದಿ ತರಿಸಿಕೊಳ್ಳುತ್ತೇವೆ. ಎಲ್ಲ ಹಗರಣಗಳನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತೇವೆ’ ಎಂದರು.

ಪ್ರದೋಷ್ ರಾವ್ ಅರ್ಜಿ ವಿಚಾರಣೆ 11ಕ್ಕೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಬೆಳಗಾವಿಯ ಹಿಂಡಲಗಾ ಜೈಲಿಗೆ ಸ್ಥಳಾಂತರ ಮಾಡಿರುವುದನ್ನು ಆಕ್ಷೇಪಿಸಿ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ಪ್ರದೋಷ್ ಎಸ್. ರಾವ್ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಇದೇ 11ಕ್ಕೆ ನಿಗದಿಪಡಿಸಿದೆ. ಪ್ರದೋಷ್ ಸಲ್ಲಿಸಿರುವ ರಿಟ್ ಅರ್ಜಿಯು ಸೋಮವಾರ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯಪೀಠದ ವಿಚಾರಣೆಗೆ ಬಂದಿತು.

ಪಲ್ಲಕ್ಕಿ ಉತ್ಸವ

ಕಲಬುರಗಿಯ ಶರಣಬಸವೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ಕೊನೆಯ ಸೋಮವಾರದ ಅಂಗವಾಗಿ ನಡೆದ ಪಲ್ಲಕ್ಕಿ ಉತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಕೆಪಿಎಸ್‌ಸಿ ಸಭೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಎಸ್‌ಸಿ ಸಭೆ ಮಂಗಳವಾರ (ಸೆ.3) ಮಧ್ಯಾಹ್ನ 3 ಗಂಟೆಗೆ ನಿಗದಿಯಾಗಿದ್ದು, ಈ ಸಭೆಯಲ್ಲಿ ಪರೀಕ್ಷಾ ಗೊಂದಲಗಳ ಬಗ್ಗೆ ಚರ್ಚೆ ನಡೆಯುವ ಸಾಧ್ಯತೆಯಿದೆ.

ಪ್ರತಿ ಮಂಗಳವಾರ ಆಯೋಗದ ಸಭೆ ನಡೆಯುವುದು ರೂಢಿ. ಆದರೆ, ಪೂರ್ವಭಾವಿ ಪರೀಕ್ಷೆ ಮಂಗಳವಾರ (ಆಗಸ್ಟ್ 27) ನಡೆದಿದ್ದ ಕಾರಣ ಅಂದು ಸಭೆ ನಡೆದಿಲ್ಲ. ಪರೀಕ್ಷೆಯ ಬಳಿಕ ಆಯೋಗ ಈ ಬಗ್ಗೆ ಚರ್ಚೆ ಮಾಡಿಲ್ಲ.

‘ಇಂಗ್ಲಿಷ್‌ನಲ್ಲಿದ್ದ ಪ್ರಶ್ನೆಗಳನ್ನು ಗೂಗಲ್ ತಂತ್ರಜ್ಞಾನ ಅಥವಾ ಎಐ ಬಳಸಿ ಕನ್ನಡಕ್ಕೆ ಭಾಷಾಂತರ ಮಾಡಿಲ್ಲ’ ಎಂದು ಕಾರ್ಯದರ್ಶಿ ರಾಕೇಶ್‌ಕುಮಾರ್ ಸ್ಪಷ್ಟನೆ ನೀಡಿದ್ದಾರೆ. ಆದರೆ, ಗೂಗಲ್ ತಂತ್ರಜ್ಞಾನ ಬಳಸಿಯೇ ಭಾಷಾಂತರ ಮಾಡಿರುವುದನ್ನು ಅಭ್ಯರ್ಥಿಗಳು ಪುರಾವೆಗಳ ಸಹಿತ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಹೀಗಾಗಿ, ಭಾಷಾಂತರ ನಡೆದ ಸ್ಥಳಕ್ಕೆ ಮೊಬೈಲ್ ಅಥವಾ ಇತರ ಉಪಕರಣವನ್ನು ತೆಗೆದುಕೊಂಡು ಹೋಗಿರುವ ಅನುಮಾನ ಮೂಡಿದೆ. ಈ ಬಗ್ಗೆಯೂ ಸಭೆಯಲ್ಲಿ ಆಯೋಗದ ಸದಸ್ಯರು ಪ್ರಸ್ತಾಪಿಸುವ ಸಾಧ್ಯತೆ ಇದೆ ಎಂದೂ ಮೂಲಗಳು ಹೇಳಿವೆ.

ಪರೀಕ್ಷಾ ನಿಯಂತ್ರಕರೇ ಹೊಣೆ?: ‘ಕೆಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವ ಸಂಪೂರ್ಣ ಹೊಣೆ ಪರೀಕ್ಷಾ ನಿಯಂತ್ರಕರದ್ದು. ಇದೇ ಜ. 31ರಿಂದ ಐಎಎಸ್ ಅಧಿಕಾರಿ ಗ್ಯಾನೇಂದ್ರ ಕುಮಾರ್ ಪರೀಕ್ಷಾ ನಿಯಂತ್ರಕರಾಗಿದ್ದಾರೆ. ಪ್ರಶ್ನೆಪತ್ರಿಕೆ ಸಿದ್ಧಪಡಿಸಿ, ಫಲಿತಾಂಶ ನೀಡುವವರೆಗೆ ಅವರೇ ಗೌಪ್ಯತೆ ಕಾಪಾಡಿಕೊಳ್ಳಬೇಕು. ಹೀಗಾಗಿ, ಪೂರ್ವಭಾವಿ ಪರೀಕ್ಷೆಯಲ್ಲಿ ಕನ್ನಡ ಅನುವಾದದಲ್ಲಿ ಆಗಿರುವ ಲೋಪಗಳ ಹೊಣೆಯನ್ನು ಪರೀಕ್ಷಾ ನಿಯಂತ್ರಕರೇ ವಹಿಸಿಕೊಳ್ಳಬೇಕಿದೆ ಎಂದು ಆಯೋಗದ ಸದಸ್ಯರೊಬ್ಬರು ಮಾಹಿತಿ ನೀಡಿದರು.

‘ಟ್ರಸ್ಟ್‌ಗೆ ಭೂಮಿ: ವಿವರಣೆ ಕೊಡಿ’

ಒಂದನೇ ಪುಟದಿಂದ...

ಈ ಬಗ್ಗೆ ರಾಜ್ಯಪಾಲರಿಗೆ ಅವರು ದೂರು ನೀಡಿದ್ದರು.

‘ಸಿ.ಎ ನಿವೇಶನಕ್ಕೆ ಕೆಐಎಡಿಬಿಗೆ ಒಟ್ಟು 193 ಸಂಸ್ಥೆಗಳು ಅರ್ಜಿ ಹಾಕಿದ್ದವು. ಈ ಪೈಕಿ, 43 ಸಂಸ್ಥೆಗಳು ಆಯ್ಕೆ ಆಗಿದ್ದವು. ಅವುಗಳಲ್ಲಿ ಖರ್ಗೆ ಕುಟುಂಬಕ್ಕೆ ಸೇರಿದ ಸಿದ್ದಾರ್ಥ ವಿಹಾರ ಟ್ರಸ್ಟ್ ಕೂಡಾ ಒಂದು. ಈ ರೀತಿ ಭೂಮಿ ಹಂಚಿಕೆ ಆಗಿರುವುದರ ಹಿಂದೆ ಪ್ರಭಾವ ಕೆಲಸ ಮಾಡಿದೆ. ಸ್ವಜನಪಕ್ಷಪಾತ ಎದ್ದು ಕಾಣುತ್ತಿದ್ದು, ಈ ಕಾರಣಕ್ಕೆ ತನಿಖೆ ಆಗಬೇಕು’ ಎಂದು ನಾರಾಯಣಸ್ವಾಮಿ ದೂರಿನಲ್ಲಿ ಆಗ್ರಹಿಸಿದ್ದರು.

ಮಾರ್ಚ್ 4ರಂದು ಅರ್ಜಿಗಳ ಪರಿಶೀಲನೆ ನಡೆದಿದ್ದು, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅಧ್ಯಕ್ಷತೆಯಲ್ಲಿ ಮಾರ್ಚ್ 5ರಂದು ಸಭೆ ನಡೆಸಿ ನಿರ್ಣಯ ಕೈಗೊಂಡು ಮಾರ್ಚ್ 6ರಿಂದ ಹಂಚಿಕೆ ಪತ್ರಗಳನ್ನು ನೀಡಲಾಗಿದೆ. ಈ ಎಲ್ಲ ಪ್ರಕ್ರಿಯೆಗಳನ್ನು ಇಷ್ಟೊಂದು ತರಾತುರಿಯಲ್ಲಿ ಏಕೆ ಮಾಡಲಾಗಿದೆ. ಅರ್ಜಿ ಸಲ್ಲಿಸಲು 14 ದಿನಗಳ ಕಾಲಾವಕಾಶ ನೀಡಲಾಗಿದೆ. ಅವಸರದಲ್ಲಿ ಪ್ರಕ್ರಿಯೆ ಮುಗಿಸಲು ಸ್ವಜನಪಕ್ಷಪಾತವೇ ಕಾರಣ ಎಂದು ದೂರಿನಲ್ಲಿ ಆರೋಪಿಸಿದ್ದರು. ಈ ಪ್ರಕರಣದಲ್ಲಿ ನಿಯಮ ಉಲ್ಲಂಘನೆ ಆಗಿದೆಯೇ ಮತ್ತು ತರಾತುರಿಯಲ್ಲಿ ನಿರ್ಣಯ ಕೈಗೊಂಡಿರುವುದಕ್ಕೆ ಕಾರಣ ಏನು ಎಂಬುದರ ಕುರಿತು ರಾಜ್ಯಪಾಲರು ವಿವರಣೆ ಕೇಳಿದ್ದಾರೆ ಎಂದು ಗೊತ್ತಾಗಿದೆ.

ರಾಹುಲ್ ಖರ್ಗೆಯವರ ಸಹೋದರನೂ ಆಗಿರುವ ಸಚಿವ ಪ್ರಿಯಾಂಕ್ ಖರ್ಗೆ ಈ ವಿಷಯವನ್ನು ಖಚಿತಪಡಿಸಿದ್ದಾರೆ.

ಮುಡಾ: 9ರವರೆಗೆ ಸಿಎಂ ನಿರಾಳ

ಒಂದನೇ ಪುಟದಿಂದ...

ವಿಚಾರಣೆ ವೇಳೆ ದೂರುದಾರ ಸ್ನೇಹಮಯಿ ಕೃಷ್ಣ ಪರ ಹಿರಿಯ ವಕೀಲ ಕೆ.ಜಿ.ರಾಘವನ್ ಸುದೀರ್ಘ ವಾದ ಮಂಡಿಸಿದರು.

ವಾದ ಆಲಿಸಿದ ನ್ಯಾಯಪೀಠ, ‘ಅಡ್ವೊಕೇಟ್ ಜನರಲ್ ಇದೇ 9ಕ್ಕೆ ತಮ್ಮ ವಾದ ಮಂಡನೆ ಪೂರ್ಣಗೊಳಿಸಬೇಕು. ನಂತರ ರಾಜ್ಯಪಾಲರ ಕಚೇರಿ ಸೇರಿದಂತೆ ಪ್ರಕರಣದ ಇತರೆ ಪ್ರತಿವಾದಿಗಳ ಪರ ವಕೀಲರು ಮಂಡಿಸಿರುವ ಪ್ರತಿವಾದಕ್ಕೆ ಮುಖ್ಯಮಂತ್ರಿಗಳ ಪರ ಹಿರಿಯ ವಕೀಲರು ಅಭಿಷೇಕ್ ಮನುಸಿಂಘ್ವಿ ಇದೇ 12ರಂದು ಪ್ರತ್ಯುತ್ತರ ನೀಡಿ ವಾದ ಮಂಡಿಸಬೇಕು. ಅಂದು ಅರ್ಜಿ ಕುರಿತ ವಿಚಾರಣೆ ಪೂರ್ಣಗೊಳ್ಳಬೇಕು’ ಎಂದು ನ್ಯಾಯಪೀಠ ಉಭಯ ಪಕ್ಷದ ವಕೀಲರಿಗೆ ಮೌಖಿಕವಾಗಿ ಸೂಚಿಸಿದೆ.

ಮುಖ್ಯಾಂಶಗಳು
- ರಾಹುಲ್ ಖರ್ಗೆ ನೇತೃತ್ವದ ಟ್ರಸ್ಟ್‌ಗೆ 5 ಎಕರೆ ಹಂಚಿಕೆ
- ಪ್ರಭಾವ, ಸ್ವಜನಪಕ್ಷಪಾತ, ಅಕ್ರಮ ಆರೋಪ
- ರಾಜ್ಯಪಾಲರಿಗೆ ಬಿಜೆಪಿಯ ಛಲವಾದಿ ನಾರಾಯಣಸ್ವಾಮಿ ದೂರು

ಕಳಸಾ ತಿರುವು: ಮತ್ತೆ ಅಡ್ಡಿ

ಒಂದನೇ ಪುಟದಿಂದ...

ಈ ಯೋಜನೆಯ ಪರಿಷ್ಕೃತ ವಿಸ್ತೃತ ಯೋಜನಾ ವರದಿಗೆ ಕೇಂದ್ರ ಜಲ ಆಯೋಗ 2022ರ ಡಿಸೆಂಬರ್ 29ರಂದು ಒಪ್ಪಿಗೆ ನೀಡಿತ್ತು. ಇದರಲ್ಲಿ ಕಳಸಾ ನಾಲಾ ತಿರುವು ಯೋಜನೆಗೆ 1.78 ಟಿಎಂಸಿ ಅಡಿ ಮೀಸಲಿಡಲಾಗಿದೆ.

ಈ ಯೋಜನೆಗೆ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಏಳು ಗ್ರಾಮಗಳ ಅರಣ್ಯ ಬಳಕೆಗೆ (ಜಾಕ್‌ವೆಲ್ ನಿರ್ಮಾಣ, ಪಂಪ್ ಹೌಸ್, ಎಲೆಕ್ಟ್ರಿಕಲ್ ಸಬ್ ಸ್ಟೇಷನ್, ಪೈಪ್‌ಲೈನ್) ಒಪ್ಪಿಗೆ ನೀಡುವಂತೆ ರಾಜ್ಯ ಸರ್ಕಾರವು ಮಂಡಳಿಗೆ ಪ್ರಸ್ತಾವ ಸಲ್ಲಿಸಿತ್ತು. ಈ ಯೋಜನೆಗೆ ಕಾಳಿ ಹಾಗೂ ಸಹ್ಯಾದ್ರಿ ಹುಲಿ ಸಂರಕ್ಷಿತ ಪ್ರದೇಶದ 10.68 ಹೆಕ್ಟೇರ್ ಅರಣ್ಯ ಬಳಸಿಕೊಳ್ಳಲಾಗುತ್ತದೆ ಎಂದು ಪ್ರಸ್ತಾವದಲ್ಲಿ ತಿಳಿಸಿತ್ತು. ಇದಕ್ಕೆ ರಾಜ್ಯ ವನ್ಯಜೀವಿ ಮಂಡಳಿ ಅನುಮೋದನೆ ನೀಡಿ ಕೇಂದ್ರಕ್ಕೆ ಕಳುಹಿಸಿತ್ತು. ವನ್ಯಜೀವಿ ಮಂಡಳಿಯ ಹಿಂದಿನ ಸಭೆಯಲ್ಲಿ ಪ್ರಸ್ತಾವಕ್ಕೆ ಒಪ್ಪಿಗೆ ನೀಡಿರಲಿಲ್ಲ.

‘ಮಹದಾಯಿ ಯೋಜನಾ ಪ್ರದೇಶದ ವಾಸ್ತವಾಂಶದ ಅಧ್ಯಯನಕ್ಕೆ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರವು ತಜ್ಞರ ತಂಡವನ್ನು ಕಳುಹಿಸಿತ್ತು. ಈ ಸಮಿತಿಯು ಹಲವು ಶಿಫಾರಸುಗಳನ್ನು ಮಾಡಿದೆ. ಈ ಬಗ್ಗೆ ಹುಲಿ ಸಂರಕ್ಷಣಾ ಪ್ರಾಧಿಕಾರದಿಂದ ಪ್ರತಿಕ್ರಿಯೆ ಕೇಳಲಾಗಿತ್ತು. ಸಬ್‌ಜುಡೀಸ್ ಆಗುತ್ತದೆ ಎಂಬ ಕಾರಣ ಮುಂದಿಟ್ಟು ಈವರೆಗೆ ಪ್ರತಿಕ್ರಿಯೆ ನೀಡಿಲ್ಲ’ ಎಂದು ವನ್ಯಜೀವಿ ಮಂಡಳಿಯು ತಿಳಿಸಿತು.

ಇದು ಕರ್ನಾಟಕ ಸರ್ಕಾರದ ಯೋಜನೆ. ಗೋವಾ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿದೆ ಎಂದು ಕರ್ನಾಟಕ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತಿಳಿಸಿದರು. ಚರ್ಚೆಯ ನಂತರ, ಈ ವಿಷಯವನ್ನು ಮುಂದಿನ ಸಭೆಗೆ ಮುಂದೂಡಲು ಮಂಡಳಿಯು ತೀರ್ಮಾನಿಸಿತು.

ರಾಜ್ಯದ ಒಪ್ಪಿಗೆ ಮೊದಲೇ ಕೇಂದ್ರದ ಅನುಮೋದನೆ

ಧಾರವಾಡದ ನರೇಂದ್ರದಿಂದ ಗೋವಾಕ್ಕೆ 400 ಕೆ.ವಿ. ಸಾಮರ್ಥ್ಯದ ವಿದ್ಯುತ್ ಮಾರ್ಗ ನಿರ್ಮಿಸಲು ಮುಂದಾಗಿರುವ ‘ಗೋವಾ–ತಮ್ನಾರ್ ವಿದ್ಯುತ್ ಯೋಜನೆಗೆ ಮಂಡಳಿಯು ಷರತ್ತುಬದ್ಧ ವನ್ಯಜೀವಿ ಅನುಮೋದನೆ ನೀಡಿದೆ.

ಈ ಯೋಜನೆಗೆ ಭಗವಾನ್ ಮಹಾವೀರ ವನ್ಯಜೀವಿ ಧಾಮದ 27 ಹೆಕ್ಟೇರ್ ಅರಣ್ಯ ಬಳಕೆಗೆ ಗೋವಾ ಸರ್ಕಾರ ಒಪ್ಪಿಗೆ ಕೇಳಿದೆ. ಈ ಅರಣ್ಯ ಬಳಕೆಗೆ ಈಗ ಒಪ್ಪಿಗೆ ಸಿಕ್ಕಿದೆ. ಜತೆಗೆ, ಈ ಯೋಜನೆಗೆ ರಾಜ್ಯದ 435 ಎಕರೆ ಅರಣ್ಯ ಬಳಕೆಗೆ ಪ್ರಸ್ತಾಪಿಸಲಾಗಿದೆ. ಉದ್ದೇಶಿತ ವಿದ್ಯುತ್ ಮಾರ್ಗವು ದಾಂಡೇಲಿ ಆನೆ ಕಾರಿಡಾರ್, ಭೀಮಗಡ ಅಭಯಾರಣ್ಯದ ಪರಿಸರ ಸೂಕ್ಷ್ಮವಲಯ, ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಪರಿಸರ ಸೂಕ್ಷ್ಮವಲಯ ಹಾಗೂ ದಾಂಡೇಲಿ ಅಭಯಾರಣ್ಯಗಳ ಮೂಲಕ ಹಾದುಹೋಗಲಿದೆ. ದೊಡ್ಡ ಪ್ರಮಾಣದಲ್ಲಿ ಕಾಡು ನಾಶವಾಗಲಿದೆ.

ಕರ್ನಾಟಕ ಭಾಗದಲ್ಲಿ ಯೋಜನೆಯ ಪ್ರಸ್ತಾವನೆಯನ್ನು ಮಂಡಳಿಯ ಸ್ಥಾಯಿ ಸಮಿತಿ ಶಿಫಾರಸು ಮಾಡುವವರೆಗೆ ಕಾಮಗಾರಿಗಳನ್ನು ಪ್ರಾರಂಭಿಸಬಾರದು ಎಂದು ಮಂಡಳಿಯು ಯೋಜನಾ ಸಂಸ್ಥೆಗೆ ಷರತ್ತು ವಿಧಿಸಿದೆ.

ವಿದ್ಯುತ್ ಮಾರ್ಗಕ್ಕೆ ಅರಣ್ಯ ಬಳಸಲು ಅನುಮತಿ ನೀಡುವಂತೆ ‘ಗೋವಾ ತಮ್ನಾರ್ ಟ್ರಾನ್ಸ್‌ಮಿಷನ್ ಪ್ರಾಜೆಕ್ಟ್ ಲಿಮಿಟೆಡ್’ ಕರ್ನಾಟಕ ಸರ್ಕಾರಕ್ಕೆ 2019ರಲ್ಲಿ ಪ್ರಸ್ತಾವನೆ ಸಲ್ಲಿಸಿತ್ತು. 2020ರಲ್ಲಿ ಕೆನರಾ ವೃತ್ತದ ಸಿಸಿಎಫ್ ಸ್ಥಳ ಪರಿಶೀಲನೆ ನಡೆಸಿ, ‘ಪಶ್ಚಿಮಘಟ್ಟದ ದಟ್ಟ ಅರಣ್ಯದಲ್ಲಿ ಈ ಯೋಜನೆ ಹಾದು ಹೋಗಲಿದೆ. ಈ ಯೋಜನೆಯಿಂದ ಹುಲಿ ಆವಾಸಸ್ಥಾನದ ಮೇಲೂ ಪರಿಣಾಮ ಬೀರಲಿದೆ. ಈ ಪ್ರಸ್ತಾವವನ್ನು ತಿರಸ್ಕರಿಸಬೇಕು’ ಎಂದು ಶಿಫಾರಸು ಮಾಡಿದ್ದರು. ಯೋಜನೆಯ ಪ್ರಸ್ತಾವವನ್ನು ತಿರಸ್ಕರಿಸುವುದು ಉತ್ತಮ ಎಂದೂ ಪಿಸಿಸಿಎಫ್ 2021ರಲ್ಲಿ ವರದಿ ಸಲ್ಲಿಸಿದ್ದರು.

ಯೋಜನೆಯ ಅನುಷ್ಠಾನಕ್ಕೆ ಅವಕಾಶ ನೀಡಬಾರದು ಎಂದು ಆಗ್ರಹಿಸಿ ‘ಗೋವಾ ಫೌಂಡೇಷನ್’ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಈ ಕುರಿತು ವರದಿ ನೀಡುವಂತೆ ಸಿಇಸಿಗೆ ಸುಪ್ರೀಂ ಕೋರ್ಟ್ ಸೂಚಿಸಿತ್ತು. ‘ಈ ಮಾರ್ಗದಲ್ಲಿ ಈಗಾಗಲೇ 220 ಕೆ.ವಿ.ಮಾರ್ಗ ಇದೆ. ಹೊಸಮಾರ್ಗ ನಿರ್ಮಾಣಕ್ಕೆ ಸಾವಿರಾರು ಮರಗಳನ್ನು ಕಡಿಯಬೇಕಾಗುತ್ತದೆ. ಅದರ ಬದಲು ಈಗಿರುವ ಮಾರ್ಗ ಬಳಸುವುದು ಉತ್ತಮ. ಅಲ್ಲದೆ, ಕರ್ನಾಟಕ ಸರ್ಕಾರದ ಅನುಮತಿ ಪಡೆದೇ ಮುಂದುವರಿಯಬೇಕು’ ಎಂದು ಸಿಇಸಿ ಶಿಫಾರಸು ಮಾಡಿತ್ತು. ಬಳಿಕ ಸಂಸ್ಥೆಯು ಹೊಸದಾಗಿ ಪ್ರಸ್ತಾವನೆ ಸಲ್ಲಿಸಿತ್ತು. ಇದಕ್ಕೆ ಒಪ್ಪಿಗೆ ನೀಡದಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಅಧಿಕಾರಿಗಳಿಗೆ ಮಾರ್ಚ್‌ನಲ್ಲಿ ಸೂಚನೆ ನೀಡಿದ್ದರು.

‘ಮಂಡಳಿ ತರಾತುರಿ ಏಕೆ’

ಗೋವಾ–ತಮ್ನಾರ್ ಯೋಜನೆ ಬಗ್ಗೆ ಕರ್ನಾಟಕ ರಾಜ್ಯ ವನ್ಯಜೀವಿ ಮಂಡಳಿಯು ಇನ್ನೂ ನಿರ್ಧಾರವನ್ನೇ ಕೈಗೊಂಡಿಲ್ಲ. ಹೀಗಿರುವಾಗ ರಾಷ್ಟ್ರೀಯ ವನ್ಯಜೀವಿ ಮಂಡಳಿಯು ತರಾತುರಿಯಲ್ಲಿ ನಿರ್ಧಾರವನ್ನು ಕೈಗೊಂಡಿದ್ದೇಕೆ? ಗೋವಾ ವ್ಯಾಪ್ತಿಯಲ್ಲಿ ಅನುಮತಿ ನೀಡಿ ಕರ್ನಾಟಕದ ಅನುಮತಿ ಪಡೆದ ನಂತರ ಕಾಮಗಾರಿ ಆರಂಭಿಸಬೇಕೆಂಬ ಮಂಡಳಿಯ ಈ ನಿರ್ಧಾರ ಒತ್ತಡದ ತಂತ್ರ ಎನಿಸುತ್ತಿದೆ ಹಾಗೂ ಲಫಾರ್ಜ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಸ್ಪಷ್ಟ ಉಲ್ಲಂಘನೆ. ಗೋವಾ ರಾಜ್ಯದ ಈ ಯೋಜನೆಯನ್ನು ನಮ್ಮ ರಾಜ್ಯದ ನಾಯಕರು ಪಕ್ಷಭೇದ ಮರೆತು ವಿರೋಧಿಸಬೇಕು. ರಾಜ್ಯ ವನ್ಯಜೀವಿ ಮಂಡಳಿ ಸಭೆಯಲ್ಲಿಈ ಪ್ರಸ್ತಾವನೆಯನ್ನು ತಿರಸ್ಕರಿಸಬೇಕು.

ಗಿರಿಧರ್ ಕುಲಕರ್ಣಿ, ವನ್ಯಜೀವಿ ಸಂರಕ್ಷಣಾವಾದಿ

ಸಚಿವೆ ಲಕ್ಷ್ಮಿ ಹೆಬ್ಬಾಳಕರ, ಮುರುಳೀಧರ್ ಹಾಲಪ್ಪ ನೇತೃತ್ವದ ನಿಯೋಗ ಭೇಟಿ

ನಿಜಲಿಂಗಪ್ಪ ಮನೆ ಖರೀದಿಗೆ ಕೆಪಿಸಿಸಿ ನಿರ್ಧಾರ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ನಗರದ ವಿ.ಸಿ. ಬಡಾವಣೆಯಲ್ಲಿರುವ, ಅಭಿವೃದ್ಧಿ ಕಾಣದೇ ಪಾಳು ಬಿದ್ದ ಸ್ಥಿತಿಯಲ್ಲಿರುವ ಮಾಜಿ ಮುಖ್ಯಮಂತ್ರಿ, ದಿವಂಗತ ಎಸ್. ನಿಜಲಿಂಗಪ್ಪ ಅವರ ನಿವಾಸವನ್ನು ಕೆಪಿಸಿಸಿ ಖರೀದಿ ಮಾಡಲು ಮುಂದಾಗಿದೆ.

ಇದಕ್ಕೆ ಪೂರ್ವಭಾವಿಯಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ, ಕೆಪಿಸಿಸಿ ಉಪಾಧ್ಯಕ್ಷ ಮುರುಳೀಧರ್ ಹಾಲಪ್ಪ ನೇತೃತ್ವದ ನಿಯೋಗ ಸೋಮವಾರ ನಿಜಲಿಂಗಪ್ಪ ಅವರ ನಿವಾಸಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತು. ಮುಖಂಡರು ನಿಜಲಿಂಗಪ್ಪ ಅವರ ಕುಟುಂಬ ಸದಸ್ಯರೊಂದಿಗೆ ಮಾತುಕತೆ ನಡೆಸಿದರು.

‘ಕೆಪಿಸಿಸಿ ಅಧ್ಯಕ್ಷರ ಸೂಚನೆ ಮೇರೆಗೆ ನಾವು ನಿಜಲಿಂಗಪ್ಪ ಅವರ ಮನೆ ಪರಿಶೀಲನೆ ನಡೆಸಿದ್ದೇವೆ. ನಿಜಲಿಂಗಪ್ಪ ಅವರು ಬಾಳಿ ಬದುಕಿದ ಮನೆಯನ್ನು ಪಕ್ಷದ ವತಿಯಿಂದಲೇ ಸ್ಮಾರಕವನ್ನಾಗಿ ಅಭಿವೃದ್ಧಿಗೊಳಿಸಲಾಗುವುದು’ ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳಕರ ತಿಳಿಸಿದರು.

‘ನಿಜಲಿಂಗಪ್ಪ ಎಐಸಿಸಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಅವರ ನಿವಾಸ ಖರೀದಿ ಮಾಡಲು ಕೆಪಿಸಿಸಿ ಅಧ್ಯಕ್ಷರು ನಿರ್ಧರಿಸಿದ್ದಾರೆ’ ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ತಾಜ್ ಪೀರ್ ಹೇಳಿದರು.

₹5 ಕೋಟಿ ಬಿಡುಗಡೆ: 2022ರಲ್ಲಿ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದಾಗ ನಿಜಲಿಂಗಪ್ಪ ಅವರ ನಿವಾಸವನ್ನು ಸರ್ಕಾರದ ವತಿಯಿಂದಲೇ ಖರೀದಿಸಲು ₹4.24 ಕೋಟಿ ನಿಗದಿಪಡಿಸಲಾಗಿತ್ತು. ಸ್ಮಾರಕ ಅಭಿವೃದ್ಧಿಗೆ ₹76 ಲಕ್ಷ ಸೇರಿ ಒಟ್ಟು ₹5 ಕೋಟಿಯನ್ನು ಲೋಕೋಪಯೋಗಿ ಇಲಾಖೆಗೆ ಬಿಡುಗಡೆ ಮಾಡಲಾಗಿತ್ತು. ಕಾರ್ಯನಿರ್ವಾಹಕ ಎಂಜಿನಿಯರ್ ಖಾತೆಯಲ್ಲಿ ಆ ಹಣವಿದೆ. ಆಸ್ತಿ ನೋಂದಣಿಗೆ ನಿಜಲಿಂಗಪ್ಪ ಅವರ ಮಕ್ಕಳು, ಮೊಮ್ಮಕ್ಕಳ ಸಹಿ ಬೇಕು ಎಂದು ಉಪ ನೋಂದಣಾಧಿಕಾರಿ ಕೋರಿದ್ದರು. ಕೆಲ ತಾಂತ್ರಿಕ ತೊಂದರೆಗಳು ಎದುರಾದ ಕಾರಣ ನೋಂದಣಿ ಪ್ರಕ್ರಿಯೆ ಸ್ಥಗಿತಗೊಂಡಿತ್ತು.

ಮಾಜಿ ಮುಖ್ಯಮಂತ್ರಿ ಎಸ್‌.ನಿಜಲಿಂಗಪ್ಪ ಅವರ ಮನೆಯ ಒಳಾಂಗಣದ ಸ್ಥಿತಿ

ಸರ್ಕಾರಕ್ಕೆ ಮನೆ ಕೊಡಲ್ಲ: ನಿಜಲಿಂಗಪ್ಪ ಪುತ್ರ

‘ನಮ್ಮ ಮನೆಯ ವಿಚಾರವಾಗಿ ಸರ್ಕಾರ ಹಲವು ಬಾರಿ ನಮಗೆ ಅವಮಾನ ಮಾಡಿದೆ. ನಾನೇ ಹಲವು ಬಾರಿ ಪತ್ರ ಬರೆದರೂ ಯಾರೂ ಪ್ರತಿಕ್ರಿಯೆ ನೀಡಿಲ್ಲ, ಕಚೇರಿಯಿಂದ ಕಚೇರಿಗೆ ಅಲೆಸಿದ್ದಾರೆ. ಹೀಗಾಗಿ ನಾವು ಸರ್ಕಾರಕ್ಕೆ ನಮ್ಮ ಮನೆಯನ್ನು ಕೊಡದಿರಲು ನಿರ್ಧರಿಸಿದ್ದೇವೆ. ಕೆಪಿಸಿಸಿಗೆ ಮಾರಾಟ ಮಾಡಲು ತಯಾರಿದ್ದು ಅವರು ಕಚೇರಿಯನ್ನಾದರೂ ಮಾಡಿಕೊಳ್ಳಲಿ, ಏನೂ ಬೇಕಾದರೂ ಮಾಡಿಕೊಳ್ಳಲಿ ನಮ್ಮ ಅಭ್ಯಂತರವಿಲ್ಲ’ ಎಂದು ಎಸ್.ನಿಜಲಿಂಗಪ್ಪ ಅವರ ಪುತ್ರ ಕಿರಣ್ ಶಂಕರ್ ತಿಳಿಸಿದರು.

ಬಿಭವ್‌ಗೆ ಜಾಮೀನು

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಆಪ್ತ ಬಿಭವ್ ಕುಮಾರ್ ಅವರಿಗೆ ಸುಪ್ರೀಂ ಕೋರ್ಟ್ ಸೋಮವಾರ ಜಾಮೀನು ಮಂಜೂರು ಮಾಡಿದೆ.

'ಬಿಭವ್ ಅವರು ಕೇಜ್ರಿವಾಲ್ ಅವರ ಆಪ್ತ ಸಹಾಯಕರಾಗಿ ಕಾರ್ಯ ನಿರ್ವಹಿಸಬಾರದು ಮತ್ತು ಮುಖ್ಯಮಂತ್ರಿ ಕಚೇರಿಯು ಅವರಿಗೆ ಯಾವುದೇ ಅಧಿಕೃತ ಜವಾಬ್ದಾರಿ ನೀಡಬಾರದು' ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಉಜ್ಜಲ್ ಭುಯನ್ ಅವರಿದ್ದ ಪೀಠ ಆದೇಶಿಸಿದೆ.

'ಎಲ್ಲ ಸಾಕ್ಷ್ಯಗಳ ವಿಚಾರಣೆ ಪೂರ್ಣಗೊಳ್ಳುವವರೆಗೆ ಬಿಭವ್ ಅವರು ಮುಖ್ಯಮಂತ್ರಿಗಳ ನಿವಾಸಕ್ಕೂ ತೆರಳಬಾರದು' ಎಂದು ನ್ಯಾಯಾಲಯ ನಿರ್ದೇಶನ ನೀಡಿದೆ. 'ಇದು ಸಣ್ಣ ಪುಟ್ಟ ಗಾಯಗಳ ಪ್ರಕರಣವಾಗಿದ್ದು, ಈ ವಿಷಯದಲ್ಲಿ ಜಾಮೀನು ವಿರೋಧಿಸಬಾರದು' ಎಂದು ದೆಹಲಿ ಪೊಲೀಸರ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರಿಗೆ ನ್ಯಾಯಪೀಠ ಹೇಳಿತು. ಕೇಜ್ರಿವಾಲ್ ಅವರ ಅಧಿಕೃತ ನಿವಾಸದಲ್ಲಿ ಮೇ 13ರಂದು ಎಎಪಿಯ ರಾಜ್ಯಸಭಾ ಸದಸ್ಯೆ ಸ್ವಾತಿ ಮಾಲಿವಾಲ್ ಅವರ ಮೇಲೆ ಬಿಭವ್ ಹಲ್ಲೆ ನಡೆಸಿದ್ದರು ಎಂದು ಆರೋಪಿಸಲಾಗಿತ್ತು.

ನಾಯರ್‌ಗೆ ಜಾಮೀನು: ಅಬಕಾರಿ ನೀತಿ ಹಗರಣದ ಜತೆ ನಂಟಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ 23 ತಿಂಗಳಿಂದ ಬಂಧನದಲ್ಲಿದ್ದ ಎಎಪಿ ಸಂವಹನ ವಿಭಾಗದ ಮಾಜಿ ಉಸ್ತುವಾರಿ ವಿಜಯ್ ನಾಯರ್ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ನೀಡಿದೆ.

ಎಎಪಿ ಶಾಸಕನ ಬಂಧನ

ಅಮಾನತುಲ್ಲಾ ಖಾನ್

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಎಪಿ ಶಾಸಕ ಅಮಾನತುಲ್ಲಾ ಖಾನ್ ಅವರನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಸೋಮವಾರ ಬಂಧಿಸಿದೆ.

ದೆಹಲಿಯ ಓಕ್ಲಾದಲ್ಲಿರುವ ಶಾಸಕರ ನಿವಾಸದ ಮೇಲೆ ಇ.ಡಿ ಅಧಿಕಾರಿಗಳು ಬೆಳಿಗ್ಗೆ 6 ಗಂಟೆಗೆ ದಾಳಿ ನಡೆಸಿದರು. ಶೋಧದ ಸಮಯದಲ್ಲಿ ಖಾನ್‌ಗೆ ಕೆಲವು ಪ್ರಶ್ನೆಗಳನ್ನು ಕೇಳಲಾಯಿತು. ಆದರೆ ಅವರು ನುಣುಚಿಕೊಳ್ಳುವ ಉತ್ತರ ನೀಡಿದ್ದರಿಂದ, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಅವರನ್ನು ಬಂಧಿಸಲಾಗಿದೆ.

ಕಸ್ಟಡಿಗೆ ಕೋರಿಕೆ: ದೆಹಲಿ ನ್ಯಾಯಾಲಯದ ವಿಶೇಷ ನ್ಯಾಯಾಧೀಶ ರಾಕೇಶ್ ಸಯಾಲ್ ಅವರ ಮುಂಭಾಗ ಖಾನ್‌ನನ್ನು ಹಾಜರುಪಡಿಸಿದ ಜಾರಿ ನಿರ್ದೇಶನಾಲಯವು 10 ದಿನ ಕಸ್ಟಡಿಗೆ ನೀಡುವಂತೆ ಕೋರಿತು.

ಯೋಧ ಸಾವು: ಉಗ್ರರ ದಾಳಿ ಕಾರಣವಲ್ಲ

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮುವಿನ ಸುಂಜವಾನ್ ಸೇನಾ ನೆಲೆಯಲ್ಲಿ ಸೋಮವಾರ ನಡೆದ ಗುಂಡಿನ ದಾಳಿಯು ಉಗ್ರರಿಂದ ನಡೆದಿಲ್ಲ ಎಂದು ಸೇನೆ ಸ್ಪಷ್ಟಪಡಿಸಿದೆ. ಆದರೆ ಯೋಧರೊಬ್ಬರು ಮೃತಪಟ್ಟಿರುವ ಕುರಿತು ತನಿಖೆ ಕೈಗೊಳ್ಳಲಾಗಿದೆ ಎಂದು ಅದು ತಿಳಿಸಿದೆ.

ಆರಂಭದಲ್ಲಿ ಉಗ್ರರ ದಾಳಿಯಿಂದ ಯೋಧ ಹುತಾತ್ಮರಾಗಿದ್ದಾರೆ ಎಂದು ಹೇಳಲಾಗಿತ್ತು. ಆದರೆ ಅದು ಉಗ್ರರ ದಾಳಿಯಿಂದ ನಡೆದ ಹತ್ಯೆಯಲ್ಲ ಎಂಬುದಾಗಿ ಸೇನೆ ಸ್ಪಷ್ಟನೆ ನೀಡಿದೆ.

ಯೋಧನ ಸಾವಿಗೆ ಖಚಿತ ಕಾರಣ ಏನು ಎಂಬುದನ್ನು ತಿಳಿದುಕೊಳ್ಳಲು ತನಿಖೆ ನಡೆಯುತ್ತಿದೆ ಎಂದು ಸೇನೆಯ ವಕ್ತಾರರು ತಿಳಿಸಿದ್ದಾರೆ.

ಜೈಶ್-ಎ-ಮೊಹಮ್ಮದ್ (ಜೆಇಎಂ) ಜತೆ ನಂಟು ಹೊಂದಿರುವ 'ಕಾಶ್ಮೀರ ಟೈಗರ್ಸ್' ಸಂಘಟನೆ ಈ ದಾಳಿಯ ಹೊಣೆ ಹೊತ್ತುಕೊಂಡಿತ್ತು. ಆದರೆ ಇದನ್ನು ಸೇನೆ ನಿರಾಕರಿಸಿದ್ದು, ಯಾವುದೇ ಉಗ್ರರ ದಾಳಿ ನಡೆದಿಲ್ಲ ಎಂದು ಹೇಳಿದೆ.

ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಗೆ ಶೀಘ್ರ ಚುನಾವಣೆ ನಡೆಯಲಿದ್ದು, ಈ ಘಟನೆಯು ಆತಂಕ ಮೂಡಿಸಿದೆ.

(1) ಭಾರಿ ಮಳೆಯಿಂದಾಗಿ ಸಿಕಂದರಾಬಾದ್‌ನಲ್ಲಿ ರೈಲ್ವೆ ಹಳಿಗಳ ಕೆಳಗಿನ ಜಲ್ಲಿಕಲ್ಲುಗಳು ನೀರಿನಲ್ಲಿ ಕೊಚ್ಚಿ ಹೋಗಿವೆ –ಪಿಟಿಐ ಚಿತ್ರ (2) ತೀವ್ರ ಮಳೆಯಿಂದ ವಿಜಯವಾಡದ ಬಹುತೇಕ ಭಾಗ ಜಲಾವೃತವಾಗಿದ್ದು, ಜನರನ್ನು ದೋಣಿ ಮೂಲಕ ಸುರಕ್ಷಿತ ಪ್ರದೇಶಕ್ಕೆ ಕರೆದೊಯ್ಯಲಾಯಿತು –ಎಎಫ್‌ಪಿ ಚಿತ್ರ

ಮಳೆಗೆ ಆಂಧ್ರ, ತೆಲಂಗಾಣ ತತ್ತರ: 31 ಸಾವು

ಸಂಕಷ್ಟಕ್ಕೆ ಸಿಲುಕಿರುವ ಲಕ್ಷಾಂತರ ಜನ • ರಾಷ್ಟ್ರೀಯ ವಿಪತ್ತು ಎಂದು ಘೋಷಿಸಲು ತೆಲಂಗಾಣ ಸಿ.ಎಂ ಆಗ್ರಹ

ಅಮರಾವತಿ/ಹೈದರಾಬಾದ್ (ಪಿಟಿಐ): ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದ ಕಾರಣ ಮೂರು ದಿನಗಳಿಂದ ಸುರಿದ ಧಾರಾಕಾರ ಮಳೆಗೆ ಆಂಧ್ರ ಪ್ರದೇಶ ಮತ್ತು ತೆಲಂಗಾಣ ತತ್ತರಿಸಿದ್ದು, ಒಟ್ಟು 31 ಜನರು ಮೃತಪಟ್ಟಿದ್ದಾರೆ.

ಪ್ರವಾಹದಿಂದ ಲಕ್ಷಾಂತರ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಎರಡೂ ರಾಜ್ಯಗಳ ಹಲವೆಡೆ ರಸ್ತೆ ಮತ್ತು ರೈಲು ಸಂಪರ್ಕಗಳು ಕಡಿತವಾಗಿದ್ದು, ಸಹಸ್ರಾರು ಎಕರೆ ಕೃಷಿ ಪ್ರದೇಶ ಜಲಾವೃತವಾಗಿದೆ. ಸಂಕಷ್ಟಕ್ಕೆ ಸಿಲುಕಿರುವ ಜನರ ರಕ್ಷಣೆಗೆ ಕಾರ್ಯಾಚರಣೆ ಮುಂದುವರಿದಿದ್ದು, ಪರಿಹಾರ ಕಾರ್ಯಗಳೂ ಸಾಗಿವೆ.

ಮಳೆ ಸಂಬಂಧ ಅವಘಡಗಳಿಂದ ಆಂಧ್ರಪ್ರದೇಶದಲ್ಲಿ 15 ಮತ್ತು ತೆಲಂಗಾಣದಲ್ಲಿ 16 ಮಂದಿ ಅಸುನೀಗಿದ್ದಾರೆ. ಹಲವೆಡೆ ರೈಲ್ವೆ ಹಳಿಗಳು ಕಿತ್ತು ಹೋಗಿವೆ. ಹಳಿಗಳ ಕೆಳಗಿನ ಜಲ್ಲಿಕಲ್ಲುಗಳು ಪ್ರವಾಹದ ನೀರಿನಲ್ಲಿ ಕೊಚ್ಚಿ ಹೋಗಿವೆ. ಸೇತುವೆಗಳು ಕುಸಿದು ಬಿದ್ದಿವೆ.

ಪ್ರಕಾಶಂ ಬ್ಯಾರೆಜ್‌ನಿಂದ ಸೋಮವಾರ ಬೆಳಿಗ್ಗೆ 8 ಗಂಟೆಯ ವೇಳೆಗೆ 11.3 ಲಕ್ಷ ಕ್ಯೂಸೆಕ್ಸ್ ನೀರನ್ನು ಹರಿಸಲಾಗಿದೆ. ಇದು ಪ್ರವಾಹದ ತೀವ್ರತೆಯನ್ನು ಹೆಚ್ಚಿಸಿದೆ.

ತೊಂದರೆ ಸಿಲುಕಿರುವ 4.5 ಲಕ್ಷ ಜನ: ಆಂಧ್ರ ಪ್ರದೇಶದಲ್ಲಿ ಭಾರಿ ಮಳೆಯಿಂದ 4.5 ಲಕ್ಷ ಜನರು ತೊಂದರೆಗೆ ಸಿಲುಕಿದ್ದು, ವಿವಿಧೆಡೆ ತೆರೆದಿರುವ 166 ಕಾಳಜಿ ಕೇಂದ್ರಗಳಿಗೆ 31,238 ಜನರನ್ನು ಸ್ಥಳಾಂತರಿಸಲಾಗಿದೆ. ರಾಜ್ಯದ ಎನ್‌ಟಿಆರ್, ಗುಂಟೂರು, ಕೃಷ್ಣಾ, ಏಲೂರು, ಪಲ್ನಾಡು, ಬಾಪಟ್ಲ, ಪ್ರಕಾಶಂ ಜಿಲ್ಲೆಗಳಲ್ಲಿ ತೀವ್ರ ಹಾನಿಯಾಗಿದೆ ಎಂದು ಆಂಧ್ರ ಸರ್ಕಾರ ಸೋಮವಾರ ತಿಳಿಸಿದೆ.

ಎಸ್‌ಡಿಆರ್‌ಎಫ್‌ನ 20, ಎನ್‌ಡಿಆರ್‌ಎಫ್‌ನ 19 ತಂಡಗಳು ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿವೆ. ಗುಂಟೂರು ಮತ್ತು ಎನ್‌ಟಿಆರ್ ಜಿಲ್ಲೆಗಳಲ್ಲಿ ಭಾರತೀಯ ನೌಕಾಪಡೆಯು ಎರಡು ಹೆಲಿಕಾಪ್ಟರ್‌ಗಳು ರಕ್ಷಣಾ ಕಾರ್ಯಕ್ಕಿಳಿದಿವೆ. ಪ್ರವಾಹ ಪೀಡಿತ ಮತ್ತು ಮುಳಗಡೆ ಪ್ರದೇಶದಲ್ಲಿ ಸಿಲುಕಿರುವವರ ರಕ್ಷಣೆಗೆ ಮತ್ತು ಪರಿಹಾರ ಸಾಮಗ್ರಿಗಳನ್ನು ವಿತರಿಸಲು ಇನ್ನೂ ಆರು ಹೆಲಿಕಾಪ್ಟರ್‌ಗಳನ್ನು ಒದಗಿಸುವಂತೆ ಆಂಧ್ರ ಸರ್ಕಾರ ಕೋರಿದೆ.

ರಾಷ್ಟ್ರೀಯ ವಿಪತ್ತು ಘೋಷಿಸಲು ಆಗ್ರಹ: ಮಳೆ ಸಂಬಂಧಿ ಅವಘಡಗಳಲ್ಲಿ ತೆಲಂಗಾಣ ರಾಜ್ಯದಲ್ಲಿ ಕನಿಷ್ಠ 16 ಮಂದಿ ಮೃತಪಟ್ಟಿದ್ದು, ಹಲವರು ನಾಪತ್ತೆಯಾಗಿದ್ದಾರೆ ಎಂದು ತೆಲಂಗಾಣದ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ತಿಳಿಸಿದ್ದಾರೆ.

ರಾಜ್ಯದಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದ ಸಾಕಷ್ಟು ಜೀವ ಹಾನಿ ಮತ್ತು ಅಪಾರ ಪ್ರಮಾಣದ ಆಸ್ತಿ, ಬೆಳೆ ನಷ್ಟವಾಗಿದೆ. ಹೀಗಾಗಿ ಕೇಂದ್ರ ಸರ್ಕಾರವು ಇದನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಮಳೆಯಿಂದ ಮೃತಪಟ್ಟವರ ಕುಟುಂಬಗಳಿಗೆ ತಲಾ ₹ 5 ಲಕ್ಷ ಪರಿಹಾರವನ್ನು ಮುಖ್ಯಮಂತ್ರಿ ಘೋಷಿಸಿದ್ದಾರೆ. ರಾಜ್ಯದಲ್ಲಿ ಅತಿವೃಷ್ಟಿಯಿಂದ ಉಂಟಾಗಿರುವ ಹಾನಿಯ ಸಮಗ್ರ ವರದಿಯನ್ನು ಕೇಂದ್ರಕ್ಕೆ ಶೀಘ್ರವೇ ಸಲ್ಲಿಸಲಾಗುವುದು ಎಂದಿದ್ದಾರೆ.

ವಿಜಯವಾಡದಲ್ಲಿ ಅಪಾರ ಹಾನಿ

- ಮಳೆಯಿಂದ ಆಂಧ್ರ ಪ್ರದೇಶದ ವಿಜಯವಾಡ ನಗರ ತೀವ್ರ ಸಂಕಷ್ಟಕ್ಕೆ ಸಿಲುಕಿದೆ. ವಿಜಯವಾಡದ ಮೊಗಲ್‌ರಾಜಪುರಂನಲ್ಲಿ ಭೂಕುಸಿತ ಸಂಭವಿಸಿ ಐವರು ಮೃತಪಟ್ಟಿದ್ದಾರೆ.
- ರಕ್ಷಣಾ ಕಾರ್ಯಾಚರಣೆ ಮತ್ತು ಆಹಾರ ಸಾಮಗ್ರಿಗಳ ವಿತರಣೆ ಬಗ್ಗೆ ವಿಜಯವಾಡದ ಅಜಿತ್ ನಗರದ ನಿವಾಸಿಗಳು ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರ ಬಳಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಎರಡು, ಮೂರು ದಿನಗಳಿಂದ ನೀರಿನಲ್ಲಿ ಸಿಲುಕಿ ತಾವು ಅನುಭವಿಸಿದ ನರಕಯಾತನೆಯನ್ನು ಅವರು ಮುಖ್ಯಮಂತ್ರಿ ಬಳಿ ಹೇಳಿ ಅಲವತ್ತುಕೊಂಡರು
- ಆಂಧ್ರಪ್ರದೇಶ, ತೆಲಂಗಾಣದಲ್ಲಿ ಭಾರಿ ಮಳೆಯಾಗುತ್ತಿರುವ ಕಾರಣ ಸಂಘಮಿತ್ರ ಎಕ್ಸ್‌ಪ್ರೆಸ್ (ಬೆಂಗಳೂರು–ದಾನಾಪುರ ಮತ್ತು ದಾನಾಪುರ– ಬೆಂಗಳೂರು) ಸಂಚಾರವನ್ನು ರದ್ದುಗೊಳಿಸಿರುವುದಾಗಿ ಪೂರ್ವ ಮಧ್ಯ ರೈಲ್ವೆ ತಿಳಿಸಿದೆ.
- ಮಹಾರಾಷ್ಟ್ರದ ಮರಾಠವಾಡದಲ್ಲಿ ಭಾರಿ ಮಳೆಯಾಗಿದ್ದು (31.4 ಸೆಂ.ಮೀ), ನಾಲ್ವರು ಮೃತಪಟ್ಟಿದ್ದಾರೆ. ಸುಮಾರು 63 ಗ್ರಾಮಗಳ ಜನರು ತೊಂದರೆಗೆ ಸಿಲುಕಿದ್ದಾರೆ.

₹ 5,000 ಕೋಟಿ ನಷ್ಟ

ಪ್ರಾಥಮಿಕ ಅಂದಾಜಿನ ಪ್ರಕಾರ ಮಳೆಯಿಂದಾಗಿ ತೆಲಂಗಾಣ ರಾಜ್ಯದಲ್ಲಿ ಸುಮಾರು ₹ 5,000 ಕೋಟಿಯಷ್ಟು ಹಾನಿ ಸಂಭವಿಸಿದೆ. ಈ ಪೈಕಿ ತುರ್ತಾಗಿ ₹ 2,000 ಕೋಟಿ ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗುವುದು ಎಂದು ತೆಲಂಗಾಣ ಸಿ.ಎಂ ರೇವಂತ್ ರೆಡ್ಡಿ ತಿಳಿಸಿದ್ದಾರೆ.

ರಾಜ್ಯದ ಸುಮಾರು 1.5 ಲಕ್ಷ ಹೆಕ್ಟೇರ್ ಪ್ರದೇಶದ ಬೆಳೆ ಹಾನಿಯಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ ಎಂದು ಅವರು ತಿಳಿಸಿದ್ದಾರೆ.

432 ರೈಲು ಸಂಚಾರ ರದ್ದು: ಭಾರಿ ಮಳೆ, ಪ್ರವಾಹ ಮತ್ತು ರೈಲ್ವೆ ಹಳಿಗಳ ಮೇಲೆ ನೀರು ನಿಂತ ಪರಿಣಾಮ 432 ರೈಲುಗಳ ಸಂಚಾರವನ್ನು ರದ್ದುಗೊಳಿಸಲಾಗಿದ್ದು, 13 ರೈಲುಗಳ ಸಂಚಾರವನ್ನು ಭಾಗಶಃ ರದ್ದುಗೊಳಿಸಲಾಗಿದೆ. ಸೋಮವಾರ ಮಧ್ಯಾಹ್ನ ದ ವರೆಗೆ 139 ರೈಲುಗಳ ಸಂಚಾರ ಮಾರ್ಗವನ್ನು ಬದಲಿಸಲಾಗಿದೆ ಎಂದು ದಕ್ಷಿಣ ಮಧ್ಯ ರೈಲ್ವೆ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಸೆಬಿ ಅಧ್ಯಕ್ಷೆ ಮೇಲೆ ಮುಗಿಬಿದ್ದ ಕಾಂಗ್ರೆಸ್ • ಪ್ರಧಾನಿ ಮೋದಿ ಸ್ಪಷ್ಟನೆ ನೀಡಲಿ: ಆಗ್ರಹ

ಬುಚ್ ವಿರುದ್ಧ 'ಹಿತಾಸಕ್ತಿ ಸಂಘರ್ಷ' ಆರೋಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಅಧ್ಯಕ್ಷೆ ಮಾಧವಿ ಪುರಿ ಬುಚ್ ವಿರುದ್ಧ ಕಾಂಗ್ರೆಸ್ ಪಕ್ಷ, 'ಹಿತಾಸಕ್ತಿ ಸಂಘರ್ಷ'ದ ಹೊಸ ಆರೋಪ ಮಾಡಿದೆ.

ಮಾಧವಿ ಪುರಿ ಬುಚ್

ಮಾಧವಿ ಅವರು ಏಳು ವರ್ಷಗಳ ಹಿಂದೆ ಸೆಬಿಯ ಪೂರ್ಣಾವಧಿ ಸದಸ್ಯರಾಗಿ ಆಯ್ಕೆಯಾದ ಬಳಿಕವೂ ಐಸಿಐಸಿಐ ಬ್ಯಾಂಕ್‌ನಲ್ಲಿ ಲಾಭದ ಹುದ್ದೆಯಲ್ಲಿ ಮುಂದುವರಿದಿದ್ದಾರೆ ಎಂದು ಪಕ್ಷವು ಸೋಮವಾರ ಹೇಳಿದೆ. ಸಂಪುಟದ ನೇಮಕಾತಿ ಸಮಿತಿಯ (ಎಸಿಸಿ) ಮುಖ್ಯಸ್ಥರಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಈ ಬಗ್ಗೆ ಸ್ಪಷ್ಟನೆ ನೀಡಬೇಕು ಎಂದೂ ಆಗ್ರಹಿಸಿದೆ.

ಬುಚ್ ಅವರು 2017ರ ಏಪ್ರಿಲ್ 5ರಿಂದ 2021ರ ಅಕ್ಟೋಬರ್ 4ರ ವರೆಗೆ ಸೆಬಿಯ ಪೂರ್ಣಾವಧಿ ಸದಸ್ಯರಾಗಿದ್ದರು. 2022ರ ಮಾರ್ಚ್ 2ರಿಂದ ಸೆಬಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರಧಾನಿ ನೇತೃತ್ವದ ಎಸಿಸಿ, ಸೆಬಿ ಅಧ್ಯಕ್ಷರಿಗೆ ಸಂಬಂಧಿಸಿದ ಈ ಸಂಗತಿಗಳನ್ನು ಪರಿಶೀಲಿಸಿದೆಯೇ ಅಥವಾ ಎಸಿಸಿಯನ್ನು ಪ್ರಧಾನಿಗೆ ಹೊರಗುತ್ತಿಗೆ ನೀಡಲಾಗಿದೆಯೇ?

ಜೈರಾಂ ರಮೇಶ್
ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಅದಾನಿ ಸಮೂಹ ವಹಿವಾಟು ನಡೆಸುತ್ತಿದ್ದ ಬರ್ಮುಡಾ ಮತ್ತು ಮಾರಿಷಸ್‌ನ 'ಶೆಲ್' ಕಂಪನಿಗಳಲ್ಲಿ ಮಾಧವಿ ಪುರಿ ಮತ್ತು ಅವರ ಪತಿ ಪಾಲುದಾರಿಕೆ ಹೊಂದಿದ್ದಾರೆ ಎಂದು ಅಮೆರಿಕದ ಶಾರ್ಟ್ ಸೆಲ್ಲರ್ ಕಂಪನಿ ಹಿಂಡೆನ್‌ಬರ್ಗ್ ರಿಸರ್ಚ್ ಈಚೆಗೆ ಆರೋಪಿಸಿತ್ತು. ಅದಾದ ಕೆಲದಿನಗಳ ಬಳಿಕ ಕಾಂಗ್ರೆಸ್ ಹೊಸ ಆರೋಪ ಮಾಡಿದೆ.

'ಭಾರತದ ಮಧ್ಯಮ ವರ್ಗದವರು ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಸಂರಕ್ಷಿಸುವ ಜವಾಬ್ದಾರಿಯನ್ನು ಸೆಬಿಗೆ ವಹಿಸಲಾಗಿದೆ. ಜನರು, ಸೆಬಿ ಮೇಲೆ ತಮ್ಮ ಭರವಸೆ ಇಟ್ಟುಕೊಂಡಿದ್ದಾರೆ. ಅದರ ಅಧ್ಯಕ್ಷರನ್ನು ಭಾರತದ ಪ್ರಧಾನಿ ನೇಮಕ ಮಾಡುತ್ತಾರೆ. ಆದರೆ ಸೆಬಿ ಹಲವು ಸಮಯಗಳಿಂದ ಜನರನ್ನು ವಂಚಿಸುತ್ತಾ ಬಂದಿದೆ' ಎಂದು ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

'ಸೆಬಿ ಅಧ್ಯಕ್ಷರ ಹಿತಾಸಕ್ತಿ ಸಂಘರ್ಷದ ಬಗ್ಗೆ ಗಂಭೀರ ಪ್ರಶ್ನೆಗಳು ಎದ್ದಿವೆ. ಆದರೆ ಸರ್ಕಾರವು ಈ ಪ್ರಶ್ನೆಗಳನ್ನು ಸರಳವಾಗಿ ತಳ್ಳಿಹಾಕಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಹೇಳಿದ್ದಾರೆ.

'₹16.80 ಕೋಟಿ ವೇತನ'

'ಮಾಧವಿ ಬುಚ್ ಅವರು ಸೆಬಿಯ ಪೂರ್ಣಾವಧಿ ಸದಸ್ಯರು ಹಾಗೂ ಅಧ್ಯಕ್ಷರಾದ ಬಳಿಕ (2017ರ ನಂತರ) ವೇತನ ಮತ್ತು ಆದಾಯದ ರೂಪದಲ್ಲಿ ಐಸಿಐಸಿಐನಿಂದ ಒಟ್ಟು ₹ 16.80 ಕೋಟಿ ಪಡೆದಿದ್ದಾರೆ. ಇದೇ ಅವಧಿಯಲ್ಲಿ ಅವರು ಸೆಬಿಯಿಂದ ₹ 3.30 ಕೋಟಿ ಆದಾಯ ಗಳಿಸಿದ್ದಾರೆ. ಅಂದರೆ, ಐಸಿಐಸಿಐನಿಂದ ಪಡೆದ ವೇತನವು ಸೆಬಿಯಿಂದ ಗಳಿಸಿದ ಆದಾಯಕ್ಕಿಂತ 5.09 ಪಟ್ಟು ಅಧಿಕ ಇದೆ' ಎಂದು ಪವನ್ ಖೇರಾ ತಿಳಿಸಿದ್ದಾರೆ.

'2017–2021ರ ಅವಧಿಯಲ್ಲಿ ವೇತನ ರೂಪದಲ್ಲಿ ₹12.63 ಕೋಟಿ ಗಳಿಸಿದ್ದಾರೆ. ಇದೇ ಅವಧಿಯಲ್ಲಿ ಐಸಿಐಸಿಐ ಪ್ರುಡೆನ್ಶಿಯಲ್‌ನಿಂದ ₹22.41 ಲಕ್ಷ ಆದಾಯ ಅವರಿಗೆ ಲಭಿಸಿದೆ. 2021–2023ರ ಅವಧಿಯಲ್ಲಿ ಐಸಿಐಸಿಐ ಬ್ಯಾಂಕ್‌ನ ನೌಕರರ ಷೇರು ಮಾಲೀಕತ್ವದ ಯೋಜನೆಯಡಿ (ಇಎಸ್‌ಒಪಿ) ₹ 2.84 ಕೋಟಿ ಪಡೆದಿದ್ದಾರೆ. ಇವೆಲ್ಲವೂ ಸೆಬಿಯ ನಿಯಮಗಳ ಉಲ್ಲಂಘನೆ' ಎಂದು ಹೇಳಿದ್ದಾರೆ.

ನಿವೃತ್ತಿ ಬಳಿಕ ವೇತನ ನೀಡಿಲ್ಲ: ಬ್ಯಾಂಕ್ ಸ್ಪಷ್ಟನೆ

ಕಾಂಗ್ರೆಸ್ ಆರೋಪದ ಬಗ್ಗೆ ಪ್ರತಿಕ್ರಿಯಿಸಿರುವ ಐಸಿಐಸಿಐ ಬ್ಯಾಂಕ್, 'ಮಾಧವಿ ಪುರಿ ಬುಚ್ ಅವರಿಗೆ ನಿವೃತ್ತಿಯ ಬಳಿಕ ಯಾವುದೇ ವೇತನ ಪಾವತಿ ಮಾಡಿಲ್ಲ' ಎಂದು ಸ್ಪಷ್ಟಪಡಿಸಿದೆ.

'ಮಾಧವಿ ಅವರು 2013ರ ಡಿಸೆಂಬರ್ 31ರಂದು ಸ್ವಯಂ ನಿವೃತ್ತಿ ಪಡೆದುಕೊಂಡಿದ್ದರು. ಆ ಬಳಿಕ ಐಸಿಐಸಿಐ ಬ್ಯಾಂಕ್ ಆಗಲಿ ಅಥವಾ ಅದರ ಸಮೂಹದ ಸಂಸ್ಥೆಗಳಾಗಲಿ ಯಾವುದೇ ವೇತನ, ಇಎಸ್‌ಒಪಿ ನೀಡಿಲ್ಲ. ನಿವೃತ್ತಿ ನಂತರದ ಸೌಲಭ್ಯಗಳನ್ನಷ್ಟೇ ನೀಡಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

'ರಾಜಕೀಯ ಲಾಭಕ್ಕೆ ಬಳಕೆಯಾಗದಿರಲಿ'

ಜನರ ಕಲ್ಯಾಣಕ್ಕೆ ಮಾಹಿತಿ ಲಭ್ಯವಾಗಲಿ: ಆರ್‌ಎಸ್‌ಎಸ್

ಜಾತಿ ಗಣತಿ

ಪಾಲಕ್ಕಾಡ್ (ಕೇರಳ) (ಪಿಟಿಐ): 'ನಿರ್ದಿಷ್ಟ ಜಾತಿ ಅಥವಾ ಸಮುದಾಯಗಳ ಕಲ್ಯಾಣಕ್ಕಾಗಿ ಅವುಗಳ ಮಾಹಿತಿ ಸಂಗ್ರಹಿಸಿದರೆ ಯಾವುದೇ ರೀತಿಯ ಆಕ್ಷೇಪ ಇಲ್ಲ. ಆದರೆ, ಈ ಮಾಹಿತಿ ರಾಜಕೀಯ ಲಾಭಕ್ಕಾಗಿ ಬಳಕೆಯಾಗದಿರಲಿ' ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಸೋಮವಾರ ತಿಳಿಸಿದೆ.

'ಜಾತಿ ಮತ್ತು ಅದಕ್ಕೆ ಸಂಬಂಧಿಸಿದ ವಿಚಾರಗಳು ಹಿಂದೂ ಸಮಾಜದಲ್ಲಿ ತುಂಬಾ ಸೂಕ್ಷ್ಮತೆಯನ್ನು ಹೊಂದಿವೆ. ನಮ್ಮ ರಾಷ್ಟ್ರೀಯ ಏಕತೆ ಮತ್ತು ಭಾವೈಕ್ಯತೆಗೆ ಸಂಬಂಧಿಸಿದ ಪ್ರಮುಖ ವಿಚಾರವಾಗಿರುವ ಜಾತಿ ಗಣತಿಯನ್ನು ಗಂಭೀರವಾಗಿ ನಿಭಾಯಿಸಬೇಕು' ಎಂದು ಆರ್‌ಎಸ್‌ಎಸ್‌ನ ಮಾಧ್ಯಮ ಘಟಕದ ಮುಖ್ಯಸ್ಥ ಸುನಿಲ್ ಅಂಬೇಕರ್ ಅವರು ಹೇಳಿದ್ದಾರೆ.

ಪಾಲಕ್ಕಾಡ್‌ನಲ್ಲಿ ನಡೆದ ಆರ್‌ಎಸ್‌ಎಸ್ ಮತ್ತು ಸಹವರ್ತಿ ಸಂಘಟನೆಗಳ ಹಿರಿಯ ಪದಾಧಿಕಾರಿಗಳ ವಾರ್ಷಿಕ ಸಭೆ 'ಸಮನ್ವಯ ಬೈಠಕ್' ಮುಕ್ತಾಯಗೊಂಡ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಿರ್ದಿಷ್ಟ ಸಮುದಾಯಗಳು ಅಥವಾ ಜಾತಿಗಳ ಹಿಂದುಳಿದಿರುವಿಕೆಯನ್ನು ಪರಿಹರಿಸುವುದಕ್ಕಾಗಿ ಗಣತಿಯ ಮಾಹಿತಿ ಅಗತ್ಯವಾಗಿದೆ. ಅದಕ್ಕಾಗಿ ಸರ್ಕಾರಕ್ಕೆ ಅಂಕಿ–ಅಂಶಗಳು ಬೇಕಾಗುತ್ತವೆ. ಈ ಮೊದಲು ಸಹ ಮಾಹಿತಿ ಪಡೆಯಲಾಗಿದೆ. ಇದರಿಂದ ಯಾವುದೇ ಸಮಸ್ಯೆ ಇಲ್ಲ. ಆದರೆ, ಎಚ್ಚರಿಕೆಯೂ ಅಗತ್ಯ' ಎಂದರು.

ತಮಿಳುನಾಡಿನಲ್ಲಿ ಮತಾಂತರ ಹೆಚ್ಚಳ: 'ತಮಿಳುನಾಡಿನಲ್ಲಿ ಮಿಷನರಿಗಳಿಂದ ಮತಾಂತರ ಪ್ರಕ್ರಿಯೆಯು ಹೆಚ್ಚಾಗಿದ್ದು, ಅದನ್ನು ಗಂಭೀರವಾಗಿ ಪರಿಗಣಿಸಲಾಗುವುದು' ಎಂದು ಅಂಬೇಕರ್ ಹೇಳಿದ್ದಾರೆ. 'ಮತಾಂತರವು ತುಂಬ ಭಯಾನಕವಾಗಿದ್ದು, ಈ ಬಗ್ಗೆ ತಳಮಟ್ಟದಿಂದ ಮಾಹಿತಿ ಸಂಗ್ರಹಿಸಲಾಗುತ್ತಿದೆ. ತಮಿಳುನಾಡಿನಲ್ಲಿ ಮತಾಂತರ ಪ್ರಕ್ರಿಯೆ ಅಧಿಕವಾಗಿರುವ ಬಗ್ಗೆ ಹಲವು ಸಂಘಟನೆಗಳು ವರದಿ ನೀಡಿವೆ' ಎಂದರು.

ಮಹಿಳೆಯರಿಗೆ ತ್ವರಿತವಾಗಿ ನ್ಯಾಯ ಸಿಗಲಿ: 'ದೌರ್ಜನ್ಯಕ್ಕೊಳಗಾದ ಸ್ತ್ರೀಯರಿಗೆ ತ್ವರಿತವಾಗಿ ನ್ಯಾಯ ಒದಗಿಸಬೇಕು' ಎಂದು ಆರ್‌ಎಸ್‌ಎಸ್ ಆಗ್ರಹಿಸಿದೆ.

'ಪಶ್ಚಿಮ ಬಂಗಾಳದಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲೆ ನಡೆದ ಅತ್ಯಾಚಾರವು ದುರದೃಷ್ಟಕರವಾಗಿದ್ದು, ಇದನ್ನು ಆರ್‌ಎಸ್‌ಎಸ್ ಖಂಡಿಸುತ್ತದೆ' ಎಂದು ಅಂಬೇಕರ್ ಹೇಳಿದ್ದಾರೆ. 'ಸಮನ್ವಯ ಬೈಠಕ್‌ನಲ್ಲಿ ಈ ಬಗ್ಗೆ ಸಮಗ್ರವಾಗಿ ಚರ್ಚಿಸಲಾಗಿದೆ. ದೇಶದಲ್ಲಿ ಈ ರೀತಿಯ ಕೃತ್ಯಗಳು ಹೆಚ್ಚಾಗುತ್ತಿವೆ. ಇದರ ನಿಯಂತ್ರಣಕ್ಕೆ ಸರ್ಕಾರ, ಕಾನೂನು ಮತ್ತು ಅಧಿಕಾರಿಗಳು ಯಾವ ಪಾತ್ರ ವಹಿಸಿಕೊಳ್ಳಬಹುದು ಎಂಬುದರ ಬಗ್ಗೆ ವಿಮರ್ಶೆ ನಡೆಸಲಾಗಿದೆ' ಎಂದರು

ಮಾತುಕತೆ ನಡೆಸಲಿ: 'ಬಾಂಗ್ಲಾದೇಶದಲ್ಲಿನ ಹಿಂದೂಗಳು ಮತ್ತು ಇತರ ಅಲ್ಪಸಂಖ್ಯಾತರ ಸುರಕ್ಷತೆ ಬಗ್ಗೆ ಅಲ್ಲಿನ ಸರ್ಕಾರದೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರವು ಮಾತುಕತೆ ನಡೆಸಲಿ' ಎಂದು ಆರ್‌ಎಸ್‌ಎಸ್ ಆಗ್ರಹಿಸಿದೆ.

ರೈತರ ಸಮಸ್ಯೆ: ಸಮಿತಿ ರಚನೆ

ನವದೆಹಲಿ (ಪಿಟಿಐ): ಶಂಭು ಗಡಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಪರಿಹರಿಸಲು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನವಾಬ್ ಸಿಂಗ್ ನೇತೃತ್ವದಲ್ಲಿ ಉನ್ನತಾಧಿಕಾರ ಸಮಿತಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ರಚಿಸಿದೆ.

ಸಮಿತಿಯು ನಿವೃತ್ತ ಐಪಿಎಸ್ ಅಧಿಕಾರಿ ಪಿ.ಎಸ್.ಸಂಧು, ದೇವೇಂದರ್ ಶರ್ಮಾ, ಪ್ರೊ. ರಂಜಿತ್ ಸಿಂಗ್ ಘುಮಾನ್, ಪಂಜಾಬ್ ಕೃಷಿ ವಿಶ್ವವಿದ್ಯಾಲಯದ ಕೃಷಿ ಅರ್ಥಶಾಸ್ತ್ರಜ್ಞ ಡಾ. ಸುಖಪಾಲ್ ಸಿಂಗ್ ಅವರನ್ನೂ ಒಳಗೊಂಡಿದೆ.

ಹರಿಯಾಣದ ಚೌಧರಿ ಚರಣ್ ಸಿಂಗ್ ಕೃಷಿ ವಿಶ್ವವಿದ್ಯಾಲಯ ಕುಲಪತಿ ಪ್ರೊ. ಬಿ.ಆರ್.ಕಾಂಬೋಜ್ ಅವರನ್ನು ವಿಶೇಷ ಆಹ್ವಾನಿತರನ್ನಾಗಿ ಪರಿಗಣಿಸುವಂತೆ ಸಮಿತಿಗೆ ಸುಪ್ರೀಂ ಕೋರ್ಟ್ ತಿಳಿಸಿದೆ.

ವಾರದೊಳಗೆ ಸಭೆ: ವಾರದೊಳಗೆ ಸಮಿತಿಯು ಮೊದಲ ಸಭೆ ನಡೆಸಬೇಕು ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ಉಜ್ವಲ್ ಭುಯಾನ್ ಅವರ ಪೀಠ ಸೂಚಿಸಿದೆ. ಅಲ್ಲದೆ ಪಂಜಾಬ್ ಮತ್ತು ಹರಿಯಾಣ ನಡುವಿನ ಶಂಭು ಗಡಿಯಿಂದ ಟ್ರ್ಯಾಕ್ಟರ್, ಟ್ರಾಲಿ, ಇತ್ಯಾದಿ ವಾಹನಗಳನ್ನು ತಕ್ಷಣವೇ ತೆರವುಗೊಳಿಸಲು ಸೂಚಿಸುವಂತೆ ಪೀಠವು ಸಮಿತಿಗೆ ತಿಳಿಸಿದೆ. ಪಂಜಾಬ್ ಮತ್ತು ಹರಿಯಾಣ ಸರ್ಕಾರಗಳು ಸಮಿತಿಗೆ ಸಲಹೆಗಳನ್ನು ಮುಕ್ತವಾಗಿ ನೀಡಬಹುದು ಎಂದೂ ಪೀಠ ಹೇಳಿದೆ.

ರಾಜಕೀಯ ಪಕ್ಷಗಳಿಂದ ಅಂತರ ಕಾಯ್ದುಕೊಳ್ಳುವಂತೆ ಪ್ರತಿಭಟನನಿರತ ರೈತರಿಗೆ ಎಚ್ಚರಿಕೆ ನೀಡಿದ ಪೀಠ, ಕಾರ್ಯಸಾಧುವಲ್ಲದ ಬೇಡಿಕೆಗಳ ಪರಿಹಾರಿಸಲು ಒತ್ತಾಯಿಸಬಾರದು ಎಂದು ತಿಳಿಸಿದೆ.

ರಾಜಕೀಯಗೊಳಿಸಬಾರದು: ರೈತರ ಪ್ರತಿಭಟನೆ ವಿಷಯವನ್ನು ರಾಜಕೀಯಗೊಳಿಸಬಾರದು ಮತ್ತು ಅವರ ಸಮಸ್ಯೆಗಳನ್ನು ಹಂತ ಹಂತವಾಗಿ ಪರಿಗಣಿಸಬೇಕು ಎಂದು ಸಮಿತಿಗೆ ಸೂಚಿಸಿದೆ.

ತಮ್ಮ ಶಾಂತಿಯುತ ಪ್ರತಿಭಟನೆಯನ್ನು ಬೇರೆಡೆಗೆ ಸ್ಥಳಾಂತರಿಸುವ ಸ್ವಾತಂತ್ರ್ಯವನ್ನು ರೈತರು ಹೊಂದಿದ್ದಾರೆ ಎಂದು ಪೀಠ ಹೇಳಿದೆ.

ಅಂಬಾಲ ಬಳಿಯ ಶಂಭು ಗಡಿಯಲ್ಲಿ ಪ್ರತಿಭಟನ ನಿರತ ರೈತರು ಫೆಬ್ರುವರಿ 13ರಿಂದ ನಿರ್ಮಿಸಿರುವ ಬ್ಯಾರಿಕೇಡ್‌ಗಳನ್ನು ವಾರದೊಳಗೆ ತೆಗೆದುಹಾಕುವಂತೆ ಹೈಕೋರ್ಟ್ ನೀಡಿದ ಆದೇಶವನ್ನು ಪ್ರಶ್ನಿಸಿ ಹರಿಯಾಣ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ. ಆ ಅರ್ಜಿಯ ವಿಚಾರಣೆಯನ್ನು ಪೀಠ ನಡೆಸುತ್ತಿದೆ.

ತೆಲಂಗಾಣ ಸಿ.ಎಂ.ಗೆ ನೋಟಿಸ್

ನವದೆಹಲಿ: ಬಿಆರ್‌ಎಸ್ ಪಕ್ಷದ ನಾಯಕಿ ಕೆ. ಕವಿತಾ ಅವರಿಗೆ ಜಾಮೀನು ನೀಡಿದ ವಿಚಾರವಾಗಿ ಸುಪ್ರೀಂ ಕೋರ್ಟ್ ಬಗ್ಗೆ ಆಡಿದ ಮಾತುಗಳಿಗೆ ಸಂಬಂಧಿಸಿದಂತೆ ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಅವರಿಗೆ ನೋಟಿಸ್ ಜಾರಿಗೆ ಸುಪ್ರೀಂ ಕೋರ್ಟ್ ಸೋಮವಾರ ಆದೇಶಿಸಿದೆ.

2015ರಲ್ಲಿ ನಡೆದ 'ಓಟಿಗಾಗಿ ನೋಟು' ಹಗರಣಕ್ಕೆ ಸಂಬಂಧಿಸಿದಂತೆ ರೇವಂತ್ ರೆಡ್ಡಿ ಹಾಗೂ ಇತರರ ವಿರುದ್ಧ ನಡೆಯುತ್ತಿರುವ ವಿಚಾರಣೆಯನ್ನು ತೆಲಂಗಾಣದ ಆಚೆಗೆ ಸ್ಥಳಾಂತರ ಮಾಡಬೇಕು ಎಂಬ ಮನವಿಯನ್ನು ಪರಿಶೀಲಿಸಿದ ಸುಪ್ರೀಂ ಕೋರ್ಟ್, ಸಾರ್ವಜನಿಕವಾಗಿ ಹೇಳಿಕೆಗಳನ್ನು ನೀಡುವಾಗ ಅವರು ಸಂಯಮ ಪ್ರದರ್ಶಿಸಬೇಕು ಎಂದು ಹೇಳಿತು.



ಬಿಆರ್‌ಎಸ್ ಶಾಸಕ ಗುಂತಕಂಡ್ಲ ಜಗದೀಶ ರೆಡ್ಡಿ ಮತ್ತು ಮೂವರು ಇತರರು ಸಲ್ಲಿಸಿದ ಅರ್ಜಿಯ ವಿಚಾರವಾಗಿ ಎರಡು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸಬೇಕು ಎಂದು ರೇವಂತ್ ರೆಡ್ಡಿ ಮತ್ತು ಇತರರಿಗೆ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಕೆ.ವಿ. ವಿಶ್ವನಾಥನ್ ಅವರು ಇರುವ ವಿಭಾಗೀಯ ಪೀಠವು ಸೂಚಿಸಿದೆ.

ರೇವಂತ್ ರೆಡ್ಡಿ ವಿರುದ್ಧದ ವಿಚಾರಣೆಯನ್ನು ಭೋಪಾಲ್‌ಗೆ ಸ್ಥಳಾಂತರಿಸಬೇಕು ಎಂದು ಜಗದೀಶ ರೆಡ್ಡಿ ಕೋರಿದ್ದಾರೆ. ರಾಜ್ಯದ ಗೃಹ ಇಲಾಖೆಯ ಹೊಣೆಯನ್ನೂ ಹೊತ್ತಿರುವ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರು ತಮ್ಮ ವಿರುದ್ಧದ ಪ್ರಕರಣದ ಕುರಿತು ಸಾರ್ವಜನಿಕವಾಗಿ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಅರ್ಜಿಯಲ್ಲಿ ದೂರಲಾಗಿದೆ.

ಸುಪ್ರೀಂ ಕೋರ್ಟ್ ನೀಡಿದ ಆದೇಶದ ಬಗ್ಗೆ ಮಾತನಾಡಲು ರೇವಂತ್ ರೆಡ್ಡಿ ಧೈರ್ಯ ಮಾಡುವುದಾದಲ್ಲಿ, ಅವರಿಗೆ ಪೊಲೀಸರು ಹಾಗೂ ಪ್ರತ್ಯಕ್ಷದರ್ಶಿಗಳ ಮೇಲೆ ಪ್ರಭಾವ ಬೀರುವುದು ಕಷ್ಟವೇನೂ ಅಲ್ಲ ಎಂದು ಜಗದೀಶ ರೆಡ್ಡಿ ಅವರು ಅರ್ಜಿಯಲ್ಲಿ ಹೇಳಿದ್ದಾರೆ.

'ಉನ್ನತ ಹುದ್ದೆಗಳಲ್ಲಿ ಇರುವವರು ಸಂಯಮ ತೋರಬೇಕು' ಎಂದು ಹೇಳಿದ ಪೀಠವು, 'ನ್ಯಾಯಮೂರ್ತಿಗಳು ಬರುತ್ತಾರೆ, ಹೋಗುತ್ತಾರೆ... ಆದರೆ, ದುರದೃಷ್ಟವಶಾತ್ ರೇವಂತ್ ರೆಡ್ಡಿ ಅವರ ಸ್ವಾತಂತ್ರ್ಯಕ್ಕೆ ಧಕ್ಕೆ ಎದುರಾದಲ್ಲಿ ಈ ನ್ಯಾಯಾಲಯವೇ ಅವರನ್ನು ರಕ್ಷಿಸಬೇಕು' ಎಂದು ಹೇಳಿತು.

'ಆರೋಪಿ ಮನೆ ಧ್ವಂಸ ಎಷ್ಟು ಸರಿ?'

ಒಂದನೇ ಪುಟದಿಂದ...

'ಈ ನಿಲುವನ್ನು ನೀವು ಒಪ್ಪಿಕೊಳ್ಳುತ್ತೀರಿ ಎಂದಾದರೆ ನಾವು ಇದನ್ನು ದಾಖಲಿಸಿಕೊಂಡು, ಎಲ್ಲ ರಾಜ್ಯಗಳಿಗೆ ಅನ್ವಯವಾಗುವ ಮಾರ್ಗಸೂಚಿ ಹೊರಡಿಸುತ್ತೇವೆ' ಎಂದು ಪೀಠವು ತಿಳಿಸಿತು. ಈ ವಿಚಾರವಾಗಿ ಎಲ್ಲ ರಾಜ್ಯಗಳ ಜೊತೆ ಚರ್ಚಿಸಲಾಗುವುದು ಎಂದು ಮೆಹ್ತಾ ತಿಳಿಸಿದರು. ಕೆಲವು ವ್ಯಕ್ತಿಗಳು ಅಪರಾಧವೊಂದನ್ನು ಎಸಗಿದ ಆರೋಪ ಹೊತ್ತಿದ್ದಾರೆ ಎಂಬ ಒಂದೇ ಕಾರಣಕ್ಕೆ ಅವರ ಮನೆಗಳನ್ನು ಧ್ವಂಸಗೊಳಿಸಲಾಗಿದೆ ಎಂದು ಬಿಂಬಿಸಲು ಅರ್ಜಿದಾರರು (ಜಮೀಯತ್ ಉಲೇಮಾ ಎ ಹಿಂದ್ ಮತ್ತು ಇತರರು) ಯತ್ನಿಸಿದ್ದಾರೆ ಎಂದು ಮೆಹ್ತಾ ದೂರಿದರು. ಅಲ್ಲದೆ, ಧ್ವಂಸ ಕಾರ್ಯಾಚರಣೆ ನಡೆಸುವುದಕ್ಕೆ ಸಾಕಷ್ಟು ಮೊದಲೇ ಸಂಬಂಧಪಟ್ಟ ಅಧಿಕಾರಿಗಳು ನೋಟಿಸ್ ನೀಡಿದ್ದರು ಎಂಬುದನ್ನು ತಾವು ತೋರಿಸುವುದಾಗಿ ಹೇಳಿದರು. 'ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳಲು ಇರುವ ಅವಕಾಶ ಬಳಸಿಕೊಳ್ಳಲು ವ್ಯಕ್ತಿಗಳಿಗೆ ಸಾಧ್ಯವಾಗದಂತೆ ಕ್ರಮ ಕೈಗೊಳ್ಳಬೇಕಿದೆ' ಎಂದಿತು.

ಕಾಂಗ್ರೆಸ್ ನಾಯಕಿ ಉಚ್ಚಾಟನೆಗೆ ಬಿಜೆಪಿ ಟೀಕೆ

'ಮಹಿಳೆಯರ ಧ್ವನಿ ಅಡಗಿಸುವ ಕಾಂಗ್ರೆಸ್'

ನವದೆಹಲಿ (ಪಿಟಿಐ): 'ಕಾಂಗ್ರೆಸ್ ಪಕ್ಷದವರು ತಾವು ಮಹಿಳೆಯರ ಪರ ಇದ್ದೇವೆ ಎಂದು ಹೇಳುತ್ತಾರಾದರೂ, ವಾಸ್ತವದಲ್ಲಿ ಮಹಿಳೆಯರ ಧ್ವನಿ ಅಡಗಿಸುವ ಕೆಲಸ ಮಾಡುತ್ತಾರೆ' ಎಂದು ಬಿಜೆಪಿ ನಾಯಕ ರಾಜೀವ್ ಚಂದ್ರಶೇಖರ್ ಸೋಮವಾರ ಟೀಕಿಸಿದ್ದಾರೆ.

ಕೇರಳದಲ್ಲಿ ಕಾಂಗ್ರೆಸ್ ನಾಯಕಿಯನ್ನು ಪಕ್ಷದಿಂದ ಉಚ್ಚಾಟನೆ ಮಾಡಿರುವುದನ್ನು ಪ್ರಸ್ತಾಪಿಸಿದ ಅವರು, 'ಮಹಿಳೆಯೊಬ್ಬರು ಕೆಲಸದ ಸ್ಥಳದಲ್ಲಿ ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವ ಆರೋಪ ಮಾಡಿದರೆ ಆ ಬಗ್ಗೆ ತನಿಖೆ ನಡೆಸಿ, ನ್ಯಾಯ ಒದಗಿಸಿಕೊಡುವುದು ಸಂಬಂಧಪಟ್ಟ ಸಂಸ್ಥೆಯ ಕರ್ತವ್ಯ' ಎಂದು ಹೇಳಿದ್ದಾರೆ.

'ಆದರೆ ಕಾಂಗ್ರೆಸ್‌ಗೆ ಅದರಲ್ಲಿ ನಂಬಿಕೆಯಿಲ್ಲ. ಪಕ್ಷದಲ್ಲಿ ತಮಗೆ ಲೈಂಗಿಕ ಕಿರುಕುಳ ಎದುರಾಗಿದೆ ಎಂದು ದೂರಿರುವ ನಾಯಕಿಯನ್ನು ಪಕ್ಷದಿಂದಲೇ ಉಚ್ಚಾಟಿಸಿ ಧ್ವನಿ ಅಡಗಿಸಿದೆ' ಎಂದು ಟೀಕಿಸಿದ್ದಾರೆ.

ಕೇರಳ ಕಾಂಗ್ರೆಸ್‌ನ ನಾಯಕಿ ಸಿಮಿ ರೋಸ್‌ಬೆಲ್ ಜಾನ್ ಅವರು, 'ಕೇರಳ ಚಿತ್ರರಂಗದಲ್ಲಿ ನಡೆದಂಥ ಘಟನೆ ಕೇರಳ ಕಾಂಗ್ರೆಸ್‌ನಲ್ಲೂ ನಡೆಯುತ್ತಿದೆ. ಹಿರಿಯ ನಾಯಕರ ಜತೆ ಆತ್ಮೀಯವಾಗಿದ್ದರೆ ಮಾತ್ರ ಪಕ್ಷದಲ್ಲಿ ಒಳ್ಳೆಯ ಅವಕಾಶಗಳು ಸಿಗುತ್ತವೆ. ಮಹಿಳೆಯರು ಉನ್ನತ ಹುದ್ದೆಗೇರಲು ಶೋಷಣೆಯನ್ನು ಸಹಿಸಿಕೊಳ್ಳಬೇಕಾಗುತ್ತದೆ' ಎಂದು ಅರೋಪಿಸಿದ್ದರು. ಪಕ್ಷವು ಅವರನ್ನು ಉಚ್ಚಾಟಿಸಿತ್ತು.

ಸಿಬಿಐ ತನಿಖೆ ನಡೆಸುತ್ತಿರುವ ಪ್ರಕರಣಗಳ ಕುರಿತ ಸಿವಿಸಿ ವರದಿ

ಭ್ರಷ್ಟಾಚಾರ: 6,903 ಪ್ರಕರಣಗಳು ಬಾಕಿ

ನವದೆಹಲಿ (ಪಿಟಿಐ): ಸಿಬಿಐ ತನಿಖೆ ನಡೆಸುತ್ತಿರುವ 6,903 ಭ್ರಷ್ಟಾಚಾರ ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆಗೆ ಬಾಕಿ ಉಳಿದುಕೊಂಡಿವೆ ಎಂದು ಕೇಂದ್ರ ಜಾಗೃತ ಆಯೋಗದ (ಸಿವಿಸಿ) ವಾರ್ಷಿಕ ವರದಿ ತಿಳಿಸಿದೆ.

'2023ರ ಡಿಸೆಂಬರ್ 31ರ ವರೆಗಿನ ಅಂಕಿ–ಅಂಶದ ಪ್ರಕಾರ 361 ಪ್ರಕರಣಗಳು 20 ವರ್ಷಗಳಿಗಿಂತ ಹೆಚ್ಚಿನಿಂದ ಬಾಕಿಯಿವೆ. 6,903 ಪ್ರಕರಣಗಳಲ್ಲಿ ಒಟ್ಟು 2,461 ಪ್ರಕರಣಗಳು 10 ವರ್ಷಗಳಿಗಿಂತಲೂ ಅಧಿಕ ಸಮಯದಿಂದ ಬಾಕಿಯಿರುವುದು ಕಳವಳಕಾರಿ ಸಂಗತಿ' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಸಿಬಿಐ ಮುಂದೆ 658 ಪ್ರಕರಣಗಳು: 658 ಭ್ರಷ್ಟಾಚಾರ ಪ್ರಕರಣಗಳು ಇನ್ನೂ ಸಿಬಿಐ ಮುಂದೆ ತನಿಖೆಗೆ ಬಾಕಿಯಿವೆ. ಇವುಗಳಲ್ಲಿ 48 ಪ್ರಕರಣಗಳು ಐದು ವರ್ಷಗಳಿಗಿಂತಲೂ ಅಧಿಕ ಸಮಯದಿಂದ ಉಳಿದುಕೊಂಡಿವೆ ಎಂದು ವರದಿ ಹೇಳಿದೆ.

'ಒಂದು ವರ್ಷಕ್ಕಿಂತ ಕೆಳಗಿನ 286 ಪ್ರಕರಣಗಳು, 1ರಿಂದ 2 ವರ್ಷದೊಳಗಿನ 175 ಪ್ರಕರಣಗಳು, 2ರಿಂದ 3 ವರ್ಷದೊಳಗಿನ 75 ಪ್ರಕರಣಗಳು ಹಾಗೂ 3ರಿಂದ 5 ವರ್ಷದೊಳಗಿನ 74 ಪ್ರಕರಣಗಳು ಸಿಬಿಐ ಮುಂದೆ ತನಿಖೆಗೆ ಬಾಕಿಯಿವೆ' ಎಂದಿದೆ.

'ಪ್ರಕರಣ ದಾಖಲಾದ ಒಂದು ವರ್ಷದೊಳಗೆ ಸಿಬಿಐ ತನಿಖೆಯನ್ನು ಪೂರ್ಣಗೊಳಿಸುವ ನಿರೀಕ್ಷೆಯಿರುತ್ತದೆ. ಯಾವುದೇ ಪ್ರಕರಣದಲ್ಲಿ ತನಿಖೆ ನಡೆಸುವ ಅಗತ್ಯವಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು, ತನಿಖೆ ಪೂರ್ಣಗೊಳಿಸಿ ನ್ಯಾಯಾಲಯದಲ್ಲಿ ಚಾರ್ಜ್‌ಶೀಟ್ ಸಲ್ಲಿಸುತ್ತದೆ. ಕೆಲವು ಪ್ರಕರಣಗಳಲ್ಲಿ ತನಿಖೆಯನ್ನು ಪೂರ್ಣಗೊಳಿಸುವಲ್ಲಿ ವಿಳಂಬ ಉಂಟಾಗಿದೆ' ಎಂದು ಹೇಳಿದೆ.

'ಅತಿಯಾದ ಕೆಲಸ, ಮಾನವಶಕ್ತಿಯ ಕೊರತೆ ಮತ್ತು ಸಕ್ಷಮ ಪ್ರಾಧಿಕಾರಗಳು ಅನುಮತಿ ನೀಡುವಲ್ಲಿನ ವಿಳಂಬವು ತನಿಖೆ ತಡವಾಗಲು ಕೆಲವು ಕಾರಣಗಳು' ಎಂದಿದೆ.

ಸಿಬಿಐನಲ್ಲಿ 1,610 ಖಾಲಿ ಹುದ್ದೆಗಳು: ಸಿಬಿಐಗೆ ಮಂಜೂರಾಗಿರುವ ಒಟ್ಟು 7,295 ಹುದ್ದೆಗಳಲ್ಲಿ 1,610 ಹುದ್ದೆಗಳು ಖಾಲಿಯಿವೆ. ಇವುಗಳಲ್ಲಿ ಎಕ್ಸಿಕ್ಯೂಟಿವ್ ಶ್ರೇಣಿಯ 1,040, ಕಾನೂನು ಅಧಿಕಾರಿಗಳ 84 ಹಾಗೂ ತಾಂತ್ರಿಕ ವಿಭಾಗದ ಅಧಿಕಾರಿಗಳ 53 ಹುದ್ದೆಗಳು ಸೇರಿವೆ ಎಂದು ವರದಿ ವಿವರಿಸಿದೆ.

ವಿಚಾರಣೆಗೆ ಬಾಕಿಯಿರುವ ಪ್ರಕರಣಗಳು

361	20 ವರ್ಷಗಳಿಗಿಂತಲೂ ಹೆಚ್ಚಿನಿಂದ ಬಾಕಿಯಿರುವ ಪ್ರಕರಣಗಳು
2,100	10 ರಿಂದ 20 ವರ್ಷಗಳವರೆಗೆ ಬಾಕಿ
2,188	5ರಿಂದ 10 ವರ್ಷಗಳವರೆಗೆ ಬಾಕಿ
875	3ರಿಂದ 5 ವರ್ಷಗಳವರೆಗೆ ಬಾಕಿ
1,379	3 ವರ್ಷಕ್ಕಿಂತ ಕಡಿಮೆ ಅವಧಿಯಿಂದ ಬಾಕಿ

ಇಲಾಖಾ ತನಿಖೆ: 82 ಪ್ರಕರಣ ಬಾಕಿ

ಸಿಬಿಐ ಅಧಿಕಾರಿಗಳ ವಿರುದ್ಧದ ಇಲಾಖಾ ತನಿಖೆಗೆ ಸಂಬಂಧಿಸಿದಂತೆ 2023ರ ಡಿಸೆಂಬರ್ 31ರ ವರೆಗೆ ಒಟ್ಟು 82 ಪ್ರಕರಣಗಳು ಬಾಕಿಯಿವೆ ಎಂಬ ಅಂಶ ವರದಿಯಲ್ಲಿದೆ.

ಸಿಬಿಐನ 'ಗ್ರೂಪ್ ಎ' ಅಧಿಕಾರಿಗಳ ವಿರುದ್ಧದ 54 ಹಾಗೂ ಗ್ರೂಪ್ ಬಿ ಮತ್ತು ಗ್ರೂಪ್ ಸಿ ಅಧಿಕಾರಿಗಳ ವಿರುದ್ಧದ 28 ಪ್ರಕರಣಗಳ ಇಲಾಖಾ ತನಿಖೆಯು ವಿವಿಧ ಹಂತಗಳಲ್ಲಿ ಬಾಕಿ ಉಳಿದು ಕೊಂಡಿವೆ. 'ಗ್ರೂಪ್ ಎ' ಅಧಿಕಾರಿಗಳ ವಿರುದ್ಧದ 54 ಪ್ರಕರಣಗಳಲ್ಲಿ, 25 ಪ್ರಕರಣಗಳು ನಾಲ್ಕು ವರ್ಷಗಳಿಗಿಂತ ಅಧಿಕ ಸಮಯದಿಂದಲೂ ಪೂರ್ಣಗೊಂಡಿಲ್ಲ ಎಂದು ಮಾಹಿತಿ ನೀಡಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಸರ್ಪಕ್ಕೆ ಹಲ್ಲಿನಲ್ಲಿ, ಜೇನುನೊಣಕ್ಕೆ ತಲೆಯಲ್ಲಿ, ಚೇಳಿಗೆ ಬಾಲದ ಕೊಂಡಿಯಲ್ಲಿ ವಿಷವಿರುತ್ತದೆ. ಆದರೆ ದುರ್ಜನರ ಸರ್ವಾಂಗಗಳೂ ವಿಷಮಯವಾಗಿರುತ್ತವೆ.

-ಚಾಣಕ್ಯ

ಪ್ರತಿಮಾ ರಾಜಕಾರಣ: ಮಹಾರಾಷ್ಟ್ರದಲ್ಲಿ ಭಾವನೆಗಳೊಂದಿಗೆ ನಾಯಕರ ಆಟ

ಮಹಾರಾಷ್ಟ್ರದ ಮಾಲ್ವಣ್‌ನ ರಾಜ್‌ಕೋಟ್ ಕೋಟೆಯಲ್ಲಿ ಸ್ಥಾಪಿಸಲಾಗಿದ್ದ ಛತ್ರಪತಿ ಶಿವಾಜಿಯ 35 ಅಡಿ ಎತ್ತರದ ಪ್ರತಿಮೆ ಉರುಳಿ ಬಿದ್ದಿದೆ. ಮಹಾರಾಷ್ಟ್ರ ವಿಧಾನಸಭೆಗೆ ಚುನಾವಣೆ ಸನಿಹದಲ್ಲಿರುವ ಕಾರಣ ಇದು ಅಲ್ಲಿ ರಾಜಕೀಯ ಬಿರುಗಾಳಿ ಎಬ್ಬಿಸಿದೆ. ನೌಕಾಪಡೆ ದಿನಾಚರಣೆಯ ಭಾಗವಾಗಿ ಭಾರತೀಯ ನೌಕಾಪಡೆಯ ಖರ್ಚಿನಲ್ಲಿ ಈ ಪ್ರತಿಮೆಯನ್ನು ನಿರ್ಮಿಸಲಾಗಿತ್ತು. ಮಹಾರಾಷ್ಟ್ರ ಲೋಕೋಪಯೋಗಿ ಇಲಾಖೆಯ ಉಸ್ತುವಾರಿಯಲ್ಲಿ ಈ ಪ್ರತಿಮೆಯ ನಿರ್ಮಾಣ ಆಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ಡಿಸೆಂಬರ್ 4ರಂದು ಪ್ರತಿಮೆಯನ್ನು ಅನಾವರಣ ಮಾಡಿದ್ದರು. ಅನಾವರಣಗೊಂಡು ವರ್ಷ ತುಂಬುವ ಮೊದಲೇ ಶಿವಾಜಿ ಪ್ರತಿಮೆ ಕುಸಿದಿದೆ. ಆರಂಭದಲ್ಲಿ, ಈ ದುರ್ಘಟನೆಗೆ ಯಾರು ಕಾರಣ ಎಂಬುದರ ಕುರಿತಂತೆ ನೌಕಾಪಡೆ ಮತ್ತು ಮಹಾರಾಷ್ಟ್ರ ಸರ್ಕಾರ ಪರಸ್ಪರ ಬೊಟ್ಟು ಮಾಡಿಕೊಂಡಿದ್ದವು. ನಿರ್ವಹಣೆಯ ಹೊಣೆ ನೌಕಾಪಡೆಯದ್ದೇ ಆಗಿತ್ತು ಎಂದು ಲೋಕೋಪಯೋಗಿ ಇಲಾಖೆ ಹೇಳಿತ್ತು. ಪ್ರತಿಮೆಯ ನಿರ್ವಹಣೆಯ ಉಸ್ತುವಾರಿ ಸ್ಥಳೀಯಾಡಳಿತದ್ದು ಎಂದು ನೌಕಾಪಡೆ ಹೇಳಿತ್ತು. ಪ್ರತಿಮೆ ಶಿಥಿಲವಾಗಿದೆ; ನಟ್ಟು-ಬೋಲ್ಟ್‌ಗಳೆಲ್ಲ ತುಕ್ಕು ಹಿಡಿದಿವೆ ಎಂಬ ವಿವರಗಳುಳ್ಳ ಪತ್ರವನ್ನು ಲೋಕೋಪಯೋಗಿ ಇಲಾಖೆಯು ನೌಕಾಪಡೆಗೆ ಪ್ರತಿಮೆ ಉರುಳುವುದಕ್ಕೆ ಕೆಲವು ದಿನಗಳ ಮುಂಚೆ ಬರೆದಿತ್ತು. ಪ್ರತಿಮೆ ಇದ್ದ ಸ್ಥಳಕ್ಕೆ ಪ್ರತಿದಿನವೂ ಸಾವಿರಾರು ಜನರು ಭೇಟಿ ಕೊಡುತ್ತಾರೆ. ಹಾಗಿದ್ದರೂ ಅಷ್ಟೊಂದು ದೊಡ್ಡ ಪ್ರತಿಮೆ ಶಿಥಿಲವಾಗಿದೆ ಎಂಬುದು ತಿಳಿದ ಮೇಲೂ ಎರಡೂ ಕಡೆಯವರು ನಿರ್ಲಕ್ಷ್ಯ ಮಾಡಿರುವುದು ಅಕ್ಷಮ್ಯ. ಪ್ರತಿಮೆ ನಿರ್ಮಾಣದಲ್ಲಿ ಭ್ರಷ್ಟಾಚಾರ, ಸ್ವಜನಪಕ್ಷಪಾತ ನಡೆದಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ. ಪ್ರತಿಮೆ ನಿರ್ಮಿಸಿದ ಕಲಾವಿದ ಜಯದೇವ ಆಪ್ಟೆ ಅವರಿಗೆ ಇಷ್ಟೊಂದು ದೊಡ್ಡ ಪ್ರತಿಮೆ ನಿರ್ಮಿಸಿದ ಅನುಭವವೇ ಇಲ್ಲ. ಸಂಘ ಪರಿವಾರದ ಸಂಘಟನೆಗಳ ಜೊತೆ ಅವರಿಗೆ ಇರುವ ನಂಟಿನ ಕಾರಣಕ್ಕೆ ಪ್ರತಿಮೆ ನಿರ್ಮಾಣದ ಗುತ್ತಿಗೆ ನೀಡಲಾಗಿದೆ ಎಂದೂ ವಿರೋಧ ಪಕ್ಷಗಳು ಆರೋಪಿಸಿವೆ. ಈಗ, ಪ್ರತಿಮೆ ಕುಸಿದ ಕಾರಣದಿಂದ ಈ ಎಲ್ಲ ಆರೋಪಗಳಲ್ಲಿಯೂ ಹುರುಳು ಇದೆ ಎಂದೇ ಅನಿಸುತ್ತದೆ.

ಎರಡೂ ಮೈತ್ರಿಕೂಟಗಳು ಭಾವನಾತ್ಮಕತೆಯನ್ನು ಕೆದಕಿ ಚುನಾವಣೆ ಎದುರಿಸಲಿವೆ ಎಂಬುದರ ಸ್ಪಷ್ಟ ಕುರುಹುಗಳು ಗೋಚರಿಸುತ್ತಿವೆ

ಶಿವಾಜಿ ಎಂಬ ಹೆಸರು ಮಹಾರಾಷ್ಟ್ರದ ಮಟ್ಟಿಗೆ ಭಾವನಾತ್ಮಕವಾದುದು ಮತ್ತು ಬಹುದೊಡ್ಡ ಸಂಕೇತ. ವಿಧಾನಸಭೆ ಚುನಾವಣೆಯು ಹೊಸ್ತಿಲಲ್ಲಿಯೇ ಇರುವಾಗ ಯಾವ ಪಕ್ಷವೂ ಇಂತಹುದೊಂದು ವಿವಾದವನ್ನು ಕೈಬಿಡುವುದಿಲ್ಲ. ಪ್ರತಿಮೆ ನಿರ್ಮಾಣದಲ್ಲಿ ಅವ್ಯವಹಾರ ನಡೆದಿದೆ ಎಂಬುದಕ್ಕಿಂತ ಶಿವಾಜಿಗೆ ರಾಜ್ಯ ಸರ್ಕಾರವು ಅವಮಾನ ಮಾಡಿದೆ ಎಂದೇ ಬಿಂಬಿಸಲು ಉದ್ಧವ್ ಠಾಕ್ರೆ ನೇತೃತ್ವದ ವಿರೋಧ ಪಕ್ಷಗಳ ಮೈತ್ರಿಕೂಟ ಮಹಾ ವಿಕಾಸ ಆಘಾಡಿ (ಎಂವಿಎ) ಪ್ರಯತ್ನಿಸುತ್ತಿದೆ. ಅದರಲ್ಲಿ ಸ್ವಲ್ಪಮಟ್ಟಿನ ಯಶಸ್ಸು ಕೂಡ ಈ ಮೈತ್ರಿಕೂಟಕ್ಕೆ ದೊರೆತಿದೆ. ಲೋಕಸಭಾ ಚುನಾವಣೆಯಲ್ಲಿ ಮಹಾರಾಷ್ಟ್ರದಲ್ಲಿ ಆಡಳಿತಾರೂಢ ಮೈತ್ರಿಕೂಟಕ್ಕೆ ಭಾರಿ ಹಿನ್ನಡೆ ಆಗಿತ್ತು. ಹಾಗಾಗಿಯೇ ಪ್ರಧಾನಿ ನರೇಂದ್ರ ಮೋದಿ ಅವರು ಕೂಡ ಪ್ರತಿಮೆ ಕುಸಿದಿದ್ದಕ್ಕೆ ಬಹಿರಂಗವಾಗಿ ಕ್ಷಮೆ ಯಾಚಿಸಿ, ‘ಶಿವಾಜಿ ಮಹಾರಾಜ್ ಅಂದರೆ ನಮಗೆ ಒಬ್ಬ ರಾಜ ಮಾತ್ರ ಅಲ್ಲ, ದೇವರಿಗೆ ಸಮಾನ’ ಎಂದು ಆದ ಹಾನಿಯನ್ನು ಸರಿಪಡಿಸಿಕೊಳ್ಳುವ ಪ್ರಯತ್ನ ಮಾಡಿದರು. ಬಿಜೆಪಿ ರಾಜ್ಯದಾದ್ಯಂತ ಎಂವಿಎ ವಿರುದ್ಧ ಪ್ರತಿಭಟನೆಯನ್ನೂ ನಡೆಸಿತು. ಧರ್ಮ, ಜಾತಿ ನಡುವೆ ಬಿರುಕು ಮೂಡಿಸುವುದು, ಭಾವನಾತ್ಮಕತೆಯನ್ನು ಕೆಣಕಿ ಜನರು ಉನ್ಮಾದಗೊಳ್ಳುವಂತೆ ಮಾಡುವುದೇ ಈ ಕಾಲದ ರಾಜಕೀಯ ತಂತ್ರಗಾರಿಕೆ ಆಗಿಬಿಟ್ಟಿದೆ. ಬಿಜೆಪಿ ಹಿಂದಿನಿಂದಲೂ ಅದನ್ನು ಮಾಡುತ್ತಲೇ ಬಂದಿದೆ ಎಂಬುದು ಆ ಪಕ್ಷದ ಮೇಲೆ ಇರುವ ಬಹುದೊಡ್ಡ ಆರೋಪ. ಈ ಬಾರಿ ಅದೇ ತಂತ್ರವನ್ನು ಎಂವಿಎ ಬಿಜೆಪಿಯತ್ತಲೇ ತಿರುಗಿಸಿಬಿಟ್ಟಿದೆ. ಮಹಾರಾಷ್ಟ್ರದ ಆಡಳಿತಾರೂಢ ಮೈತ್ರಿಕೂಟ ಮಹಾಯುತಿಯಲ್ಲಿ ಬಿರುಕುಗಳೂ ಕಾಣಿಸಿಕೊಂಡಿವೆ. ಶಿವಸೇನಾದ ಮುಖಂಡ ಮತ್ತು ಸಚಿವ ತಾನಾಜಿ ಸಾವಂತ್ ಅವರ ಹೇಳಿಕೆಯೊಂದು ಎನ್‌ಸಿಪಿ ಮುಖಂಡರು ಕೆರಳುವಂತೆ ಮಾಡಿದೆ. ‘ಕಾಂಗ್ರೆಸ್ ಮತ್ತು ಎನ್‌ಸಿಪಿ ಜೊತೆ ನನಗೆ ಜೀವನಪರ್ಯಂತ ಹೊಂದಿಕೊಳ್ಳಲಾಗದು. ಸಚಿವ ಸಂಪುಟ ಸಭೆಯಲ್ಲಿ ಅವರ ಸಮೀಪ ಕೂರುತ್ತೇನೆ. ಆದರೆ ಹೊರಗೆ ಹೋದ ಮೇಲೆ ನನಗೆ ವಾಂತಿ ಬರುತ್ತದೆ’ ಎಂದು ಅವರು ಹೇಳಿದ್ದಾರೆ. ಹೀಗೆ, ಮಹಾಯುತಿಗೆ ಏಟಿನ ಮೇಲೆ ಏಟು ಬೀಳುತ್ತಲೇ ಇದೆ. ಹಾಗಾಗಿ, ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಅಭಿವೃದ್ಧಿ, ಜನಪರ ವಿಚಾರಗಳು ಮುನ್ನೆಲೆಗೆ ಬರುವ ಸಾಧ್ಯತೆ ಇಲ್ಲ. ಬದಲಿಗೆ ಎರಡೂ ಮೈತ್ರಿಕೂಟಗಳು ಭಾವನಾತ್ಮಕತೆಯನ್ನು ಕೆದಕಿ ಚುನಾವಣೆ ಎದುರಿಸಲಿವೆ ಎಂಬುದರ ಸ್ಪಷ್ಟ ಕುರುಹುಗಳು ಈಗಲೇ ನಮ್ಮ ಮುಂದೆ ಇವೆ.

ಸಂಘರ್ಷ ಅಂತ್ಯಕ್ಕೆ ಭಾರತದಿಂದ ನಡೆಯಬಹುದು ಪ್ರಾಮಾಣಿಕ ಪ್ರಯತ್ನ

ರಷ್ಯಾ–ಉಕ್ರೇನ್: ಸಂಧಾನ ಸುಲಭವೇ?



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಉಕ್ರೇನಿಗೆ ಭೇಟಿಯಿತ್ತಾಗ ಅದನ್ನು ಜಗತ್ತು ಕುತೂಹಲದಿಂದ ನೋಡಿತು. ಉಕ್ರೇನ್ ಮತ್ತು ರಷ್ಯಾವನ್ನು ಮಾತುಕತೆಯ ಮೇಜಿಗೆ ಭಾರತ ತರಬಲ್ಲದೇ ಎಂಬ ಪ್ರಶ್ನೆಯ ಸುತ್ತ ಚರ್ಚೆಗಳು ನಡೆದವು. ರಷ್ಯಾದ ಅಧ್ಯಕ್ಷ ಪುಟಿನ್ ಅವರ ಜೊತೆಗೆ ಉತ್ತಮ ಬಾಂಧವ್ಯ ಹೊಂದಿರುವ ಹಾಗೂ ದಿಗ್ಬಂಧನದ ಹೊರತಾಗಿಯೂ ರಷ್ಯಾದೊಂದಿಗೆ ವಾಣಿಜ್ಯಿಕ ಸಂಬಂಧವನ್ನು ಮುಂದುವರಿಸಿರುವ ಭಾರತದ ಪ್ರಧಾನಿ ಉಕ್ರೇನಿಗೆ ಭೇಟಿಯಿತ್ತು ಸಾಧಿಸುತ್ತಿರುವುದಾದರೂ ಏನು ಎಂಬ ಮೂದಲಿಕೆಯೂ ಕೇಳಿಬಂತು.

ಪ್ರಧಾನಿ ಮೋದಿ ಅವರ ಉಕ್ರೇನ್ ಭೇಟಿಯನ್ನು ಜುಲೈನಲ್ಲಿ ಅವರು ಕೈಗೊಂಡ ರಷ್ಯಾ ಭೇಟಿಯ ಮುಂದುವರಿದ ಭಾಗವಾಗಿಯೇ ನೋಡಬೇಕು. ಜುಲೈನಲ್ಲಿ ಪ್ರಧಾನಿ ಮೋದಿ ರಷ್ಯಾಕ್ಕೆ ಭೇಟಿಯಿತ್ತಾಗ, ‘ರಷ್ಯಾದ ಪರಮಮಿತ್ರ ರಾಷ್ಟ್ರ ಭಾರತ’ ಎಂಬ ಮಾತನ್ನು ಪುಟಿನ್ ಆಡಿದ್ದರು. ಮೋದಿ ಅವರು ಎಂದಿನ ತಮ್ಮ ಶೈಲಿಯಲ್ಲಿಯೇ ಪುಟಿನ್ ಅವರನ್ನು ಆಲಿಂಗಿಸಿಕೊಂಡಿದ್ದರು. ಈ ಬೆಳವಣಿಗೆಯನ್ನು ಅಮೆರಿಕ ಕೆಂಗಣ್ಣಿನಿಂದ ನೋಡಿತ್ತು. ಹಾಗಾದರೆ ಮೋದಿ ಅವರ ಉಕ್ರೇನ್ ಭೇಟಿ, ರಷ್ಯಾ ಭೇಟಿಯನ್ನು ಸರಿದೂಗಿಸುವ ಒಂದು ಪ್ರಯತ್ನವೇ ಅಥವಾ ಉಕ್ರೇನ್ ಮತ್ತು ರಷ್ಯಾ ನಡುವೆ ಸಂಧಾನದ ಕೊಂಡಿಯಾಗಲು ಭಾರತ ನಿಜಕ್ಕೂ ಬಯಸುತ್ತಿದೆಯೇ?

ಉಕ್ರೇನ್ ಮತ್ತು ರಷ್ಯಾ ನಡುವೆ ಸಂಘರ್ಷ ಆರಂಭವಾದ ಬಳಿಕ ಹಲವು ದೇಶಗಳು ಸಂಘರ್ಷವನ್ನು ಕೊನೆಗಾಣಿಸುವ ದಿಸೆಯಲ್ಲಿ ಪ್ರಯತ್ನಗಳನ್ನು ಮಾಡಿವೆ. ಮೊದಲಿಗೆ ರಷ್ಯಾ ಮತ್ತು ಉಕ್ರೇನ್ ಅಧ್ಯಕ್ಷರನ್ನು ಮಾತುಕತೆಯ ಮೇಜಿಗೆ ತರುವ ಪ್ರಯತ್ನವನ್ನು ಇಸ್ರೇಲ್ ಮಾಡಿತು. ನಂತರ ಶಾಂತಿ ಮಾತುಕತೆಗೆ ವೇದಿಕೆ ಒದಗಿಸುವ ಕೆಲಸಕ್ಕೆ ಟರ್ಕಿ ಮುಂದಾಯಿತು. ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರನ್ ಕೂಡ ಒಂದು ಹಂತದಲ್ಲಿ ಪುಟಿನ್ ಮತ್ತು ಝೆಲೆನ್‌ಸ್ಕಿ ಅವರೊಂದಿಗೆ ಮಾತುಕತೆ ನಡೆಸಿ ಸಮಸ್ಯೆಗೆ ಉತ್ತರ ಹುಡುಕಲು ನೋಡಿದರು. ಆದರೆ ಈ ಯಾವ ಪ್ರಯತ್ನಗಳೂ ಯಶ ಕಾಣಲಿಲ್ಲ.

2022ರ ಸೆಪ್ಟೆಂಬರ್‌ನಲ್ಲಿ ಉಜ್ಬೇಕಿಸ್ತಾನದಲ್ಲಿ ಪುಟಿನ್ ಅವರನ್ನು ನೇರವಾಗಿ ಭೇಟಿಯಾಗಿದ್ದ ಮೋದಿ ಅವರು, ‘ಇದು ಯುದ್ಧದ ಕಾಲವಲ್ಲ’ ಎಂಬ ಮಾತನ್ನು ಆಡಿದ್ದರು. ರಷ್ಯಾದ ನಡೆಯನ್ನು ಪರೋಕ್ಷವಾಗಿ ಖಂಡಿಸಿದ್ದರು. ಸಮಸ್ಯೆಯನ್ನು ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬೇಕು ಎಂಬ ಆಗ್ರಹ ಆ ಮಾತಿನಲ್ಲಿತ್ತು. ಪುಟಿನ್ ಆ ಮಾತಿಗೆ ಎದುರಾಡಲಿಲ್ಲ. ಆ ಬಳಿಕ ಚೀನಾ ಮತ್ತು ರಷ್ಯಾ ಸಖ್ಯದ ಕುರಿತು ಚರ್ಚೆಯಾಯಿತು. ಆಗ 12 ಅಂಶಗಳ ಪ್ರಕಟಣೆಯೊಂದನ್ನು ಹೊರಡಿಸಿದ ಚೀನಾ, ತಾನು ಶಾಂತಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಿದ್ಧ ಎಂದಿತು. ಆದರೆ ಚೀನಾದ ಪ್ರಸ್ತಾಪವನ್ನು ಉಕ್ರೇನ್ ಪುರಸ್ಕರಿಸಲಿಲ್ಲ.

ಆ ಬಳಿಕ ದಕ್ಷಿಣ ಜಗತ್ತಿನ ರಾಷ್ಟ್ರಗಳ ನಾಯಕರ ನಿಯೋಗವೊಂದು ಪುಟಿನ್ ಮತ್ತು ಝೆಲೆನ್‌ಸ್ಕಿ ಅವರನ್ನು ಭೇಟಿಯಾಗಿ ಪರಿಸ್ಥಿತಿ ತಿಳಿಗೊಳಿಸುವ ಪ್ರಯತ್ನ ಮಾಡಿತು. ಆದರೆ ಸ್ಪಂದನೆ ವ್ಯಕ್ತವಾಗಲಿಲ್ಲ. ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ವಿವಿಧ ಜಾಗತಿಕ ವೇದಿಕೆಗಳಲ್ಲಿ ಮಾತನಾಡಿ, 10 ಅಂಶಗಳ ಶಾಂತಿಯ ಪ್ರಸ್ತಾಪವನ್ನು ಮಾಡಿದರು. ಝೆಲೆನ್‌ಸ್ಕಿ ಮಂಡಿಸಿದ ಈ ಶಾಂತಿ ಪ್ರಸ್ತಾಪದಲ್ಲಿ ರಷ್ಯಾ ಒಪ್ಪಬಹುದಾದ ಕೆಲವು ಅಂಶಗಳಿದ್ದವು. ಧಾನ್ಯಗಳ ರಫ್ತು, ಯುದ್ಧ ಕೈದಿಗಳ ಹಸ್ತಾಂತರ, ವಿಕಿರಣ ಮತ್ತು ಪರಮಾಣು ಸುರಕ್ಷತೆ ಹಾಗೂ ಸೇನಾ ಹಿಂತೆಗೆತದ ವಿಷಯಗಳಲ್ಲಿ ರಷ್ಯಾ ಒಲ್ಲೆ ಎನ್ನಲು ಕಾರಣಗಳಿರಲಿಲ್ಲ. ಆದರೆ 1991ರ ಗಡಿರೇಖೆಗೆ ರಷ್ಯಾ ಬದ್ಧವಾಗಬೇಕು ಎನ್ನುವುದು ಕ್ರಿಮಿಯಾವನ್ನು ರಷ್ಯಾ ತೊರೆಯಬೇಕು ಎನ್ನುವುದರ ಬದಲಿ ಹೇಳಿಕೆಯಾಗಿತ್ತು. ಉಕ್ರೇನಿಗೆ ಇತರ ದೇಶಗಳು ಭದ್ರತೆಯ ಅಭಯ ನೀಡಬೇಕು ಎನ್ನುವುದು ಉಕ್ರೇನ್ ನ್ಯಾಟೊ ಭಾಗವಾಗಬೇಕು ಎಂಬುದರ ಸಮರ್ಥನೆಯಾಗಿತ್ತು. ಹಾಗಾಗಿ, ಶಾಂತಿ ಪ್ರಸ್ತಾಪವನ್ನು ರಷ್ಯಾ ತಿರಸ್ಕರಿಸಿತು.

ನಂತರ ಇಂಡೊನೇಷ್ಯಾ ಕಡೆಯಿಂದ ಮತ್ತೊಂದು ಪ್ರಸ್ತಾಪ ಬಂತು. ಪ್ರಸ್ತುತ ಯಾವ ಪ್ರದೇಶಗಳು ಯಾರ ಹಿಡಿತದಲ್ಲಿವೆಯೋ ಅಷ್ಟಕ್ಕೇ ಗಡಿ ಸೀಮಿತವಾಗಬೇಕು, ವೀಕ್ಷಕರ ಸಮ್ಮುಖದಲ್ಲಿ ಎರಡು ದೇಶಗಳ ನಡುವೆ ಸೇನಾರಹಿತ ವಲಯವನ್ನು ಗುರುತಿಸಬೇಕು, ವಿವಾದಿತ ಪ್ರದೇಶಗಳ ಜನರ ಅಭಿಪ್ರಾಯ ಸಂಗ್ರಹಿಸಿ, ಆ ಪ್ರದೇಶಗಳ ಒಡೆತನ ನಿರ್ಧರಿಸುವ ಕೆಲಸವನ್ನು ವಿಶ್ವಸಂಸ್ಥೆಗೆ ಬಿಡಬೇಕು ಎಂದು ತನ್ನ ಅಭಿಪ್ರಾಯವನ್ನು ಇಂಡೊನೇಷ್ಯಾ ಹೇಳಿತು. ಇದನ್ನು ರಷ್ಯಾ ಪರ ಇರುವ ಪ್ರಸ್ತಾಪ ಎಂದು ಉಕ್ರೇನ್ ತಿರಸ್ಕರಿಸಿತು.

ಯುದ್ಧ ಆರಂಭವಾದ ಬಳಿಕದ ಈ ಮೂವತ್ತು ತಿಂಗಳಲ್ಲಿ ನಡೆದ ಈ ಎಲ್ಲ ಬೆಳವಣಿಗೆಗಳನ್ನು ನೋಡಿದರೆ, ರಷ್ಯಾ ಮತ್ತು ಉಕ್ರೇನ್ ನಡುವೆ ಮಧ್ಯವರ್ತಿಯಾಗಿ ಸಂಧಾನಕ್ಕೆ ಕೂರುವುದು ಸುಲಭವಲ್ಲ ಎನ್ನುವುದಂತೂ ಸ್ಪಷ್ಟ. ಹೀಗಿದ್ದೂ ಭಾರತ ವ್ಯರ್ಥ ಪ್ರಯತ್ನವೊಂದನ್ನು ಮಾಡುತ್ತಿದೆಯೇ? ಯುದ್ಧ ಆರಂಭವಾದ ಬಳಿಕ ಹಲವು ಸಂದರ್ಭಗಳಲ್ಲಿ ಭಾರತದ ನಿಲುವಿನ ಕುರಿತು ಪ್ರಶ್ನೆ ಎದ್ದಿತ್ತು.

ಉಕ್ರೇನ್ ಯುದ್ಧದ ವಿಷಯದಲ್ಲಿ ಭಾರತ ಯಾರ ಪರ ಎಂಬ ಪ್ರಶ್ನೆಗೆ, ಭಾರತದ ವಿದೇಶಾಂಗ ಸಚಿವರು ‘ಭಾರತ ಭಾರತದ ಪರ’ ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದರು. ಯುರೋಪಿನ ಸಮಸ್ಯೆಯನ್ನು ಜಗತ್ತಿನ ಸಮಸ್ಯೆ ಎಂದು ಬಿಂಬಿಸುವ ಪರಿಪಾಟ ಇದೆ. ಉಕ್ರೇನ್- ರಷ್ಯಾ ನಡುವಿನ ಯುದ್ಧ ಯುರೋಪಿನ ಯುದ್ಧ. ಅದಕ್ಕೆ ಜಗತ್ತಿನ ಇತರ ರಾಷ್ಟ್ರಗಳು ಸ್ಪಂದಿಸಬೇಕು ಎಂದು ಬಯಸುವುದಾದರೆ, ಜಗತ್ತಿನ ಇತರ ಭಾಗದ ಸಮಸ್ಯೆಗಳನ್ನು, ಮುಖ್ಯವಾಗಿ ದಕ್ಷಿಣ ಜಗತ್ತಿನ ಸಮಸ್ಯೆ ಮತ್ತು ಬಿಕ್ಕಟ್ಟುಗಳನ್ನು ಆ ದೃಷ್ಟಿಯಿಂದಲೇ ಪಶ್ಚಿಮ ಜಗತ್ತು ನೋಡಬೇಕು ಎಂದು ಭಾರತದ ವಿದೇಶಾಂಗ ಸಚಿವ ಜೈಶಂಕರ್ ನೇರವಾಗಿಯೇ ಹೇಳಿದ್ದರು.

ಅಂತರರಾಷ್ಟ್ರೀಯ ಕಾನೂನುಗಳಿಗೆ ಬದ್ಧವಾಗಿ, ವಿಶ್ವಸಂಸ್ಥೆಯ ನಿಯಮಗಳ ಅಡಿಯಲ್ಲಿ ರಾಜತಾಂತ್ರಿಕ ಪ್ರಕ್ರಿಯೆಯ ಮೂಲಕ ಸಂಘರ್ಷಕ್ಕೆ ಉತ್ತರ ಕಂಡುಕೊಳ್ಳಬೇಕು ಎಂಬುದು ಭಾರತದ ಸ್ಪಷ್ಟ ನಿಲುವಾಗಿತ್ತು. ಸೌದಿ ಅರೇಬಿಯಾದಲ್ಲಿ ಮೊದಲ ಶಾಂತಿ ಶೃಂಗ ನಡೆದಾಗ, ರಷ್ಯಾವನ್ನು ಹೊರಗಿಟ್ಟು ನಡೆಸುವ ಯಾವುದೇ ಮಾತುಕತೆ ಫಲಪ್ರದವಾಗುವುದಿಲ್ಲ ಎಂದು ಭಾರತ ಸ್ಪಷ್ಟವಾಗಿ ಹೇಳಿತ್ತು.

ಇದೀಗ ಉಕ್ರೇನ್ ಭೇಟಿಯ ವೇಳೆ ಹೊರಡಿಸಲಾದ ಜಂಟಿ ಹೇಳಿಕೆಯಲ್ಲೂ ಭಾರತ ತನ್ನ ನಿಲುವನ್ನು ಸ್ಪಷ್ಟವಾಗಿ ಹೇಳಿದೆ. ‘ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮತ್ತು ಪ್ರಾಯೋಗಿಕ ದೃಷ್ಟಿಕೋನದ ಅವಶ್ಯಕತೆ ಇದೆ ಮತ್ತು ಶಾಂತಿ ಸ್ಥಾಪನೆಗೆ ಭಾರತ ಎಲ್ಲ ರೀತಿಯಿಂದಲೂ ಸಹಕರಿಸಲು ಸಿದ್ಧವಿದೆ’ ಎಂದಿದೆ.

ಉಕ್ರೇನ್ ಭೇಟಿಯ ಬಳಿಕ ಆ ಕುರಿತು ಅಮೆರಿಕದ ಅಧ್ಯಕ್ಷ ಬೈಡನ್ ಮತ್ತು ರಷ್ಯಾ ಅಧ್ಯಕ್ಷ ಪುಟಿನ್ ಅವರ ಜೊತೆಗೆ ಪ್ರಧಾನಿ ಮೋದಿ ಮಾತನಾಡಿರುವುದು ವರದಿಯಾಗಿದೆ. ಇದೇ ತಿಂಗಳು ವಿಶ್ವಸಂಸ್ಥೆಯ ಅಧಿವೇಶನದಲ್ಲಿ ಭಾಗವಹಿಸುವ ಮೋದಿ ಅವರು ಅಮೆರಿಕದ ಅಧ್ಯಕ್ಷರನ್ನು ಮತ್ತು ಐರೋಪ್ಯ ರಾಷ್ಟ್ರಗಳ ಇತರ ನಾಯಕರನ್ನು ಭೇಟಿಯಾಗಲಿದ್ದಾರೆ. ಅಕ್ಟೋಬರ್‌ನಲ್ಲಿ ನಡೆಯುವ ಬ್ರಿಕ್ಸ್ ಅಧಿವೇಶನದಲ್ಲಿ ಪುಟಿನ್ ಅವರನ್ನು ಭೇಟಿಯಾಗುವ ಸಂಭವವಿದೆ. ಹಾಗಾಗಿ, ರಷ್ಯಾ ಮತ್ತು ಉಕ್ರೇನ್ ನಡುವಿನ ಸಂಘರ್ಷವನ್ನು ಕೊನೆಗಾಣಿಸುವ ದಿಸೆಯಲ್ಲಿ ಒಂದು ಪ್ರಾಮಾಣಿಕ ಪ್ರಯತ್ನ ಭಾರತದ ನೇತೃತ್ವದಲ್ಲಿ ನಡೆಯಬಹುದು.

ಒಂದಂತೂ ನಿಜ, ರಷ್ಯಾ- ಉಕ್ರೇನ್ ಯುದ್ಧವನ್ನು ಸಾರ್ವಭೌಮತೆ ಮತ್ತು ಪ್ರಾದೇಶಿಕ ಸಮಗ್ರತೆಯ ಉಲ್ಲಂಘನೆಯ ಪ್ರಕರಣವಾಗಿ ಮಾತ್ರ ನೋಡಲು ಸಾಧ್ಯವಿಲ್ಲ. ರಾಷ್ಟ್ರೀಯ ಭದ್ರತೆ, ಭೌಗೋಳಿಕ ರಾಜಕೀಯ, ಬಾಹ್ಯ ಹಸ್ತಕ್ಷೇಪ, ಪಾರಂಪರಿಕ ಹಿನ್ನೆಲೆ ಮತ್ತು ಜನಾಂಗೀಯ ಸ್ವಾತಂತ್ರ್ಯದ ಮಗ್ಗುಲು ಆ ಸಂಘರ್ಷಕ್ಕೆ ಇದೆ. ಯಾವುದೇ ಪ್ರಾಮಾಣಿಕ ಪ್ರಯತ್ನ ಯಶ ಕಾಣಬೇಕಾದರೆ, ಪ್ರಾಯೋಗಿಕ ದೃಷ್ಟಿಕೋನ ಅಗತ್ಯ. ಮೋದಿ ಉಕ್ರೇನ್‌ನಿಂದ ನಿರ್ಗಮಿಸಿದ ಬಳಿಕ ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಅವರು ಪತ್ರಿಕಾಗೋಷ್ಠಿಯಲ್ಲಿ ಆಡಿರುವ ಮಾತನ್ನು ಗಮನಿಸಿದರೆ, ಪ್ರಾಯೋಗಿಕ ದೃಷ್ಟಿಕೋನದ ಅಭಾವ ಎದ್ದುಕಾಣುತ್ತದೆ. ಎರಡೂ ಕಡೆಯಿಂದ ಸ್ಪಂದನೆ ದೊರೆಯದಿದ್ದರೆ ಸಂಧಾನ ಹೇಗೆ ಸಾಧ್ಯ?

ಚುರುಮುರಿ

ಅತಿಥಿ ಸೇವೋಭವ

• ಡಿ.ಎಸ್.ಲಿಂಗರಾಜು

‘ಚಂಪಟ್ಟದ ಟಿಕೆಟ್ ಮ್ಯಾಚಲ್ಲಿ ಯೋಗಣ್ಣ, ಕುಮಾರಣ್ಣ ಇಬ್ಬರೂ ಔಟೇ ಆಯ್ತಿಲ್ಲವಂತೆ. ಇವರಿಬ್ಬರಲ್ಲಿ ಯಾರು ಯಾರ ಅತಿಥಿ ಅಂತ ಗೊತ್ತಾಯ್ತಿಲ್ಲ?’ ಯಂಟಪ್ಪಣ್ಣ ಹೇಳಿತು.

‘ನೋಡಣ್ಣ, ವ್ಯವಸ್ಥೆಯಲ್ಲಿ ಅತಿಥಿಗಳದ್ದೇ ಜಮಾನ. ಅವರು ‘ಗಿವ್’ ಅಂತ ಕೇಳಿದೇಟಿಗೆ ‘ಟೇಕ್’ ಅಂತ ಕೊಟ್ಟು ಸೇವೆ ಮಾಡೂದೇ ಆತಿಥ್ಯದ ಮೂಲ ಮಂತ್ರ!’ ಅಂತ ಒಂದು ಗುಳಿಗೆ ಹಾಕಿದೆ.

‘ಅದೇನ್ಲಾ ಹಂಗಂದ್ರೆ?’ ತುರೇಮಣೆ ಕೇಳಿದರು.

‘ಹೂ ಕನ್ರಿ ಸಾ. ಗಣ್ಯ ಕೈದಿಗಳೇ ನಮ್ಮ ವಿಶೇಷ ಅತಿಥಿಗಳು. ಅವರಿಗೆ ಒಂದು ವೇಯ್ಟ್ ಇರತದೆ. ಇವರು ಯಾವ ಮೋಡಲ್ಲಿ ಕಮೋಡು, ಬಿರಿಯಾನಿ, ಗಾಂಜಾ ಕೇಳಿದ್ರೂ ಇಲ್ಲ ಅನ್ನದೇ ಕೊಡಬಕು. ಧೂಪ, ದೀಪ, ನೈವೇದ್ಯ, ಹೂವು ಕೊಟ್ಟು ಅಕ್ಷತೆ ಇಕ್ಕಿ ಒಳಿಕ್ಕೆ ಕರಕಬಕು’ ಅಂತ ರೂಲುದೊಣ್ಣೆ ಎತ್ತಿದೆ.

‘ಹಂಗಾದ್ರೆ ಕಾಲೇಜುಗಳಲ್ಲಿ ಊಟ-ತಿಂಡಿ ಖರ್ಚಿಗೆ ಸಾಲ ಮಾಡಿಕ್ಯಂದು ಬದುಕ್ತಿರೋ ಅತಿಥಿ ಉಪನ್ಯಾಸಕರನ್ನ ಸಾಲಂಕೃತ ಅತಿಥಿಗಳು ಅಂದೀಯಾ? ಮೂಢರ ರಾಜ್ಯದೇಲಿ ಯಾರು ಅತಿಥಿಗಳು?’ ಅಂತ ತುರೇಮಣೆ ಈಸೀಸೇ ಚಾಟಿ ಬೀಸಿದರು.

‘ಅಲ್ಲ ಕನ್ರೋ ಸಿದ್ದಣ್ಣ ‘ಜಗತ್ತಲ್ಲಿ ಗಾಂಧಿ ತತ್ವ- ಗಾಂಧಿ ವಿಚಾರಧಾರೆ ಬೇರು ಬುಡಬಕು’ ಅಂದದೆ. ಯಾವ ಗಾಂಧಿ, ಯಾರ ಅತಿಥಿ ಅಂತ ಗೊತ್ತಾಯ್ತಾ ಇಲ್ಲ’ ಯಂಟಪ್ಪಣ್ಣ ಚಿಂತೆಗೆ ಬಿದ್ದಿತ್ತು.

‘ಇದು ನನ್ನ ವಿನಮ್ರ ತೀರ್ಮಾನ. ಅಸಂತುಷ್ಟ ಅತಿಥಿಗಳು ಯಾವುದೇ ಕಲ್ಪಿತ ಬದಲಾವಣೆಗಳಿಂದ ತಮ್ಮ ಸಂತೋಷವನ್ನು ಹೆಚ್ಚಿಸಿಕೊಳ್ಳಬಹುದು. ಆದರೂ ಅವರು ತೀವ್ರ ಅತೃಪ್ತರಾಗಿದ್ದಾರೆ’ ನನ್ನ ಮಾತಿಗೆ ಚಂದ್ರು ಬೆರಗಾಗಿ ಚಳಿ ಬಂದೋನ ಥರ ನಡುಗ್ತಿದ್ದ.

‘ಅದೇನು ಬದಲಾವಣೆ? ಯಾವುದು ಕಲ್ಪಿತ? ಯಾರು ಅತೃಪ್ತರು? ಇದ್ಯಾವ ಸೀಮೆ ಕನ್ನಡ?!’ ತುರೇಮಣೆಗೂ ಚಿಂತೆಯಾಯಿತು.

‘ಇದು ಕೆಪಿಎಸ್‌ಸಿ ಪರೀಕ್ಷೆಯ ಗುಟೇಶನ್ ಪುಲ್ ಸಾ. ಇಂಥಾ ಮೀಮುಗಳು, ಚೀಟುಗಳು ನನಗೆ ಬಲೇ ಇಷ್ಟ’ ಅಂತ ಗಿಲೀಟ್ ಮಾಡಿದೆ.

ದಿನದ ಟ್ವೀಟ್

ಮೆಚ್ಚುಗೆಯ ಮಾತಿಗಿದೆ ಮಹತ್ವ

ಪುರುಷ ಮತ್ತು ಮಹಿಳೆ ಇಬ್ಬರೂ ಪರಸ್ಪರ ಮೆಚ್ಚುಗೆಯ ಮಾತುಗಳನ್ನು ಆಡುವಂತಾದಾಗ ಸಂಬಂಧ ವೃದ್ಧಿಸುತ್ತದೆ. ಒಬ್ಬರಿಗೊಬ್ಬರು ಸ್ಪರ್ಧೆಗೆ ಬಿದ್ದರೆ ಸಂಬಂಧ ಹಾಳಾಗುವ ಸಂಭವವೇ ಹೆಚ್ಚು.

ಹರೀಶ ಕುಲಕರ್ಣಿ

ಕಿಡಿನುಡಿ

ಪ್ರಿಯ ಶರದ್ ಪವಾರ್, ರಾಹುಲ್ ಗಾಂಧಿ, ಉದ್ಧವ್ ಠಾಕ್ರೆ ಅವರೇ, ಈ ಬಗೆಯ ಪ್ರತಿಭಟನೆ (ಭಾವಚಿತ್ರಕ್ಕೆ ಚಪ್ಪಲಿಯಿಂದ ಹೊಡೆಯುವುದು) ತಪ್ಪು. ಮಹಾರಾಷ್ಟ್ರದ ಮುಂಬರುವ ಚುನಾವಣೆಯಲ್ಲಿ ನಿಮ್ಮ ಮೈತ್ರಿಕೂಟ ಗೆಲ್ಲುವುದು ನಿಶ್ಚಿತ. ಹಿಂದೊಮ್ಮೆ ಪ್ರಗತಿಪರವಾಗಿದ್ದ ಈ ರಾಜ್ಯದ ರಾಜಕೀಯ ಸಂಸ್ಕೃತಿಯನ್ನು ನೀವು ಕಲುಷಿತ ಮಾಡುತ್ತಿರುವುದೇಕೆ?



(ಆಡಳಿತಾರೂಢರ ಭಾವಚಿತ್ರಗಳಿದ್ದ ಬ್ಯಾನರ್‌ಗೆ ಚಪ್ಪಲಿಯಿಂದ ಹೊಡೆದು ಪ್ರತಿಭಟನೆ ನಡೆಸಿದ್ದಕ್ಕೆ ಪ್ರತಿಕ್ರಿಯೆ)

ಸುಧೀಂದ್ರ ಕುಲಕರ್ಣಿ, ಲೇಖಕ, ರಾಜಕೀಯ ವಿಶ್ಲೇಷಕ

25 ವರ್ಷಗಳ ಹಿಂದೆ

ಶುಕ್ರವಾರ, 3-9-1999

• **ಒರಿಸ್ಸಾ: ಇನ್ನೊಬ್ಬ ಕ್ರೈಸ್ತ ಧರ್ಮಗುರುವಿನ ಹತ್ಯೆ**

ಭುವನೇಶ್ವರ, ಸೆ. 2 (ಪಿಟಿಐ, ಯುಎನ್‌ಐ)- ಒರಿಸ್ಸಾದ ಮಯೂರ್‌ಭಂಜ್ ಜಿಲ್ಲೆಯ ಜಮಾಬನಿ ಹಳ್ಳಿಯಲ್ಲಿ ಇಂದು ಮುಂಜಾನೆ ರೋಮನ್ ಕ್ಯಾಥೊಲಿಕ್ ಧರ್ಮ ಗುರು ಒಬ್ಬರನ್ನು ಬರ್ಬರವಾಗಿ ಹತ್ಯೆ ಮಾಡಲಾಗಿದ್ದು, ಚರ್ಚ್‌ಗೆ ಬೆಂಕಿಯಿಡಲಾಗಿದೆ.

ಕಳೆದ ವಾರ ಇದೇ ಜಿಲ್ಲೆಯ ಪರ್ಯೆಬೇಡ ಹಳ್ಳಿಯಲ್ಲಿ ಮುಸ್ಲಿಂ ವ್ಯಾಪಾರಿಯೊಬ್ಬರನ್ನು ಕೊಂದ ಕಹಿ ಘಟನೆ ಇನ್ನೂ ಹಸಿರಾಗಿರುವಾಗಲೇ ಈ ಅಮಾನುಷ ಪ್ರಕರಣ ನಡೆದಿದೆ.

ಸ್ಥಳದಲ್ಲೇ ಸಾವು: ಕೇವಂಜಾರ್ ಜಿಲ್ಲೆಯ ಆನಂದಪುರದಲ್ಲಿರುವ ರೋಮನ್ ಕ್ಯಾಥೊಲಿಕ್ ಚರ್ಚ್‌ನ ಧರ್ಮಗುರು ಅರುಳ್ ದಾಸ್ ಅವರು ಜಮಾಬನಿ ಹಳ್ಳಿಯಲ್ಲಿ ತಂಗಿದ್ದರು. ಇಂದು ಮುಂಜಾನೆ ಎರಡು ಗಂಟೆ ಹೊತ್ತಿಗೆ 15ರಿಂದ 20ರಷ್ಟಿದ್ದ ಅಪರಿಚಿತ ದುಷ್ಕರ್ಮಿಗಳು ಬಿಲ್ಲು ಬಾಣಗಳೊಂದಿಗೆ ಬಂದು ದಾಸ್ ಅವರ ಮೇಲೆ ದೊಣ್ಣೆಗಳಿಂದ ತೀವ್ರವಾಗಿ ಹಲ್ಲೆ ನಡೆಸಿದರು. ದಾಸ್ ಅವರು ಜೀವಭಯದಿಂದ ತಪ್ಪಿಸಿಕೊಂಡು ಓಡಿದಾಗ ಅವರ ಮೇಲೆ ಹರಿತವಾದ ಬಾಣ ಬಿಡಲಾಯಿತು. ಅವರು ಘಟನಾ ಸ್ಥಳದಲ್ಲೇ ಮೃತಪಟ್ಟರು.

• **ಸಚಿವರ ರಾಜೀನಾಮೆಗೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ**

ನವದೆಹಲಿ, ಸೆ. 2 (ಯುಎನ್‌ಐ)- ಕರ್ನಾಟಕದ ಇಬ್ಬರು ರಾಜ್ಯ ಮಂತ್ರಿಗಳೂ ಸೇರಿದಂತೆ ಹದಿಮೂರು ಮಂದಿ ಶಾಸಕರಿಗೆ ಲೋಕಾಯುಕ್ತ ವರದಿಯ ಹಿನ್ನೆಲೆಯಲ್ಲಿ ರಾಜೀನಾಮೆ ನೀಡುವಂತೆ ನೀಡಿದ್ದ ನಿರ್ದೇಶನಕ್ಕೆ ಸುಪ್ರೀಂ ಕೋರ್ಟ್ ಇಂದು ತಡೆಯಾಜ್ಞೆಯನ್ನು ಹೊರಡಿಸಿದೆ.

ಅಧಿಕಾರ ಗ್ರಹಣ ಮಾಡುವ ಮೊದಲು ಈ ಶಾಸಕರು ತಮ್ಮ ಆಸ್ತಿ ವಿವರಗಳನ್ನು ಸಲ್ಲಿಸಲು ವಿಫಲರಾಗಿದ್ದ ಹಿನ್ನೆಲೆಯಲ್ಲಿ ರಾಜ್ಯ ಹೈಕೋರ್ಟ್ ರಾಜೀನಾಮೆ ನೀಡುವಂತೆ ಆದೇಶಿಸಿತ್ತು.

50 ವರ್ಷಗಳ ಹಿಂದೆ

ಮಂಗಳವಾರ, 3-9-1974

• **ಸಿಕ್ಕಿಂಗೆ ಸಂಸತ್ತಿನಲ್ಲಿ ಪ್ರಾತಿನಿಧ್ಯ ಸಂವಿಧಾನ ತಿದ್ದುಪಡಿ ಮಂಡನೆ**

ನವದೆಹಲಿ, ಸೆ. 2- ಸಿಕ್ಕಿಂಗೆ ಸಹ-ಸ್ಥಾನಮಾನ ಕಲ್ಪಿಸಿ ಸಂಸತ್ತಿನಲ್ಲಿ ಅದರ ಪ್ರಾತಿನಿಧ್ಯಕ್ಕೆ ಅವಕಾಶ ನೀಡುವ ಸಂವಿಧಾನ ತಿದ್ದುಪಡಿ ವಿಧೇಯಕವನ್ನು ಇಂದು ಲೋಕಸಭೆಯಲ್ಲಿ ಮಂಡಿಸಲಾಯಿತು.

‘ಪ್ರಜಾಪ್ರಭುತ್ವಕ್ಕೆ ಸಿಕ್ಕಿಂ ಜನತೆಯ ಒತ್ತಾಯಕ್ಕಿದು ಸಕ್ರಿಯವಾದ ಪ್ರತಿಕ್ರಿಯೆ’ ಎಂದು ಅದನ್ನು ಮಂಡಿಸಿದ ವಿದೇಶಾಂಗ ಸಚಿವ ಸ್ವರಣ್‌ಸಿಂಗ್ ಹೇಳಿದರು.

• **6 ರೂಪಾಯಿಗೆ ಒಂದು ಮಗು**

ರಾಯದುರ್ಗ, ಸೆ. 2- ಬಡತನದ ಬೇಗೆಯಿಂದಾಗಿ ಹೆತ್ತ ತಾಯಿಯೇ ತನ್ನ ಮಗುವನ್ನು ಕೇವಲ 6 ರೂ.ಗಳಿಗೆ ಮಾರಾಟ ಮಾಡಿದ ಪ್ರಕರಣ ರಾಶಿಬಡವಂಶ ಗ್ರಾಮದಿಂದ ವರದಿಯಾಗಿದೆ.

ಗ್ರಾಮದ ಕೂಲಿಯೊಬ್ಬನ ಪತ್ನಿ ಎಲಕ್ಕ ಎಂಬಾಕೆ ಇಂದು ತನ್ನ ಎರಡು ತಿಂಗಳ ಗಂಡುಮಗುವನ್ನು ವಡ್ಡೆ ತಿಮ್ಮಪ್ಪ ಎಂಬಾತನಿಗೆ 6 ರೂ.ಗಳಿಗೆ ಮಾರಾಟ ಮಾಡಿದಳೆಂದು ತಿಳಿದುಬಂದಿದೆ.

ಚರ್ಚೆ

ಬಿಕರಿಗಿರುವುದು ಪುಸ್ತಕ; ಕೇಕ್ ಅಲ್ಲ

ಕನ್ನಡದ ಲೇಖಕರು ಮತ್ತು ಪ್ರಕಾಶಕರು ಪುಸ್ತಕೋದ್ಯಮದ ಊರುಗೋಲಾಗಿ ನಿಲ್ಲಬೇಕಾದ ಜವಾಬ್ದಾರಿಯನ್ನು ಅರಿತುಕೊಳ್ಳಬೇಕಾಗಿದೆ

• ಸೃಷ್ಟಿ ನಾಗೇಶ್

ಕನ್ನಡ ಪುಸ್ತಕೋದ್ಯಮ ಎನ್ನುವುದು ಮೇಕೆಯ ಕಣ್ಣ ಮುಂದೆ ಕಟ್ಟಿದ ಗಜ್ಜರಿ (ಕ್ಯಾರೆಟ್) ಇದ್ದಂತೆ ಎನ್ನುವುದು ಈ ಉದ್ಯಮದಲ್ಲಿ ತೊಡಗಿಸಿಕೊಂಡ ಬಹುತೇಕರ ಅಭಿಪ್ರಾಯ. ಮುಂದೆ ಕ್ಯಾರೆಟ್ ಇದೆ ಎಂದುಕೊಂಡು ಅದನ್ನು ಹಿಡಿಯುವ ಸಲುವಾಗಿ ಹೆಜ್ಜೆ ಹಾಕುವ ಮೇಕೆಗೆ, ತಾನು ಹೆಜ್ಜೆ ಇಟ್ಟಂತೆ ತನಗೇ ಕಟ್ಟಿದ ಕ್ಯಾರೆಟ್ ಕೂಡ ಮುಂದಕ್ಕೆ ಚಲಿಸುತ್ತದೆ ಎಂಬುದರ ಅರಿವೇ ಇರುವುದಿಲ್ಲ. ಬರೆದ ಪುಸ್ತಕಗಳೆಲ್ಲ ಬಿಸಿ ಕೇಕ್‌ನಂತೆ ಖರ್ಚಾಗಿ ಬಿಡುತ್ತವೆ ಎಂಬ ಭ್ರಮೆಯನ್ನು ಉದ್ಯಮದ ಹೊರಗೆ ನಿಂತು ನೋಡುವವರಿಗೆ ಈ ವ್ಯವಹಾರ ಹುಟ್ಟಿಸುತ್ತದೆ. ವಾಸ್ತವದಲ್ಲಿ, ಹಾಕಿದ ಬಂಡವಾಳ ತಿರುಗಿ ಬಂದರೆ ಸಾಕು ಎಂಬಂತೆ ಇರುತ್ತದೆ. ಹಾಗೆ ಬಂದರೂ ಅದಕ್ಕೆ ಈ ಕಾಲಘಟ್ಟದಲ್ಲಿ ಕನಿಷ್ಠ ನಾಲ್ಕು ವರ್ಷಗಳಾದರೂ ಬೇಕಾಗುತ್ತದೆ. ಪುಸ್ತಕಕ್ಕೆ ಒಟ್ಟಾರೆಯಾಗಿ ಹಾಕುವ ಬಂಡವಾಳ ಬಿಡಿಬಿಡಿಯಾಗಿ ಸಿಗುವಂತೆ ಆಗಿದೆ.

ಸಾವಿರ ಪ್ರತಿಗಳನ್ನು ಅಚ್ಚು ಹಾಕಿಸಿ ಮುನ್ನೂರು ಪ್ರತಿಗಳನ್ನು ಗ್ರಂಥಾಲಯಕ್ಕೆ ನೀಡಿದ ನಂತರ ಉಳಿಯುವ ಪ್ರತಿಗಳಲ್ಲಿ ಇನ್ನೂರು- ಮುನ್ನೂರು ಪ್ರತಿಗಳು ಮಾರಾಟವಾದರೆ ಅದೇ ಹೆಚ್ಚು. ಇನ್ನು ಪುಸ್ತಕೋದ್ಯಮವನ್ನೇ ನಂಬಿದವರಾದರೆ, ಪ್ರತಿ ಜಿಲ್ಲೆಯ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಕೊಟ್ಟು, ಒಂದಿಷ್ಟು ಮಾರಾಟ ಮಾಡಿಕೊಳ್ಳಬಹುದು. ಅದುಬಿಟ್ಟರೆ ಒಂದೋ ಎರಡೋ ಪುಸ್ತಕಗಳನ್ನು ಪ್ರಕಟಿಸುವ ಲೇಖಕ, ಪ್ರಕಾಶಕರಿಗೆ ಆ ಹಾದಿಯೂ ಸುಲಭವಲ್ಲ.

ಇನ್ನು ಗ್ರಂಥಾಲಯಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡುವ ಮಾನದಂಡದ ಕುರಿತು ಹೇಳ ಹೊರಟರೆ ಅದು ಮುಗಿಯದ ಕಥೆ. ಹಲವಾರು ಪ್ರಕಾಶನಗಳ ಪುಸ್ತಕಗಳನ್ನು ಕೋಟ್ಯಂತರ ರೂಪಾಯಿ ನೀಡಿ ಗ್ರಂಥಾಲಯ ಇಲಾಖೆ ಕೊಂಡುಕೊಳ್ಳುತ್ತದೆ. ಆದರೆ ಪ್ರಭಾವಶಾಲಿ ಪ್ರಕಾಶಕರು ಹತ್ತು- ಹನ್ನೆರಡು ಪ್ರಕಾಶನಗಳ ಹೆಸರುಗಳ ಅಡಿಯಲ್ಲಿ ಪುಸ್ತಕಗಳನ್ನು ಕೊಂಡುಕೊಳ್ಳುವಂತೆ ಮಾಡಬಲ್ಲರು. ಅಂತಹ ಪ್ರಭಾವಶಾಲಿಗಳಲ್ಲದ ಪ್ರಕಾಶಕರಿಗೆ ಈ ಕೆಲಸ ಅಸಾಧ್ಯ. ಪ್ರತಿ ಪ್ರಕಾಶಕನೂ ಗ್ರಂಥಾಲಯ ಅವಲಂಬಿತನೆ ಎನ್ನುವುದು ಇಲ್ಲಿ ಗಮನಿಸಬೇಕಾದ ಅಂಶ.

ಪುಸ್ತಕ ಖರೀದಿಗಾಗಿಯೇ ಸರ್ಕಾರದ ಹಲವಾರು ಯೋಜನೆಗಳಿವೆ. ಸಮಾಜ ಕಲ್ಯಾಣ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆಗೆ ಸೇರಿದ ಈ ಎಲ್ಲಾ ಯೋಜನೆಗಳನ್ನು ಕೆಲವು ಪಟ್ಟಭದ್ರ ಪ್ರಕಾಶಕರು ತಮಗೆ ಬೇಕಾದಂತೆ ಬಳಸಿಕೊಳ್ಳುತ್ತಾರೆ. ಪ್ರಕಾಶಕರಿಗೆ ಬೆನ್ನೆಲುಬಾಗಿ ನಿಲ್ಲಬೇಕಾಗಿದ್ದ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಆ ಬಗ್ಗೆ ಲಕ್ಷ್ಯವೇ ಇದ್ದಂತಿಲ್ಲ.

ಕರ್ನಾಟಕದಲ್ಲಿ ಸುಮಾರು ಏಳು ಸಾವಿರಕ್ಕೂ ಹೆಚ್ಚು ಗ್ರಂಥಾಲಯಗಳಿವೆ. ಪ್ರತಿ ಗ್ರಂಥಾಲಯ ಒಂದೊಂದು ಪ್ರತಿಯಂತೆ ಖರೀದಿಸಿದರೂ ಏಳು ಸಾವಿರ ಪ್ರತಿಗಳು ಖರ್ಚಾಗಬೇಕು.

ದುರಂತವೆಂದರೆ, ಸರ್ಕಾರದ ಸಗಟು ಖರೀದಿಯಲ್ಲಿ ಇಲಾಖೆ ಮುನ್ನೂರು ಪ್ರತಿ ಖರೀದಿಸಿ ಲೇಖಕ ಮತ್ತು ಪ್ರಕಾಶಕರ ಮೂಗಿಗೆ ತುಪ್ಪ ಸವರುವ ನಾಟಕವಾಡುತ್ತಿದೆ (ಜನಪ್ರಿಯವಾದ ಈ ಯೋಜನೆಯನ್ನೇ ನಿಲ್ಲಿಸುವ ಹುನ್ನಾರ ಸಹ ನಡೆದಿದೆ).

ಈ ಯೋಜನೆಯಾದರೂ ಸಮರ್ಪಕವಾಗಿ ನಡೆಯುತ್ತದೆಯೇ ಎಂದರೆ, ಅದೂ ಇಲ್ಲ. ಏಕೆಂದರೆ 2020ರ ಪುಸ್ತಕಗಳೇ ಇನ್ನೂ ಗ್ರಂಥಾಲಯಗಳನ್ನು ಸೇರಿಲ್ಲ. ಸರ್ಕಾರದ ನಿಯಮಗಳ ಪ್ರಕಾರ, ಎರಡು ವರ್ಷಕ್ಕಿಂತ ಹಳೆಯ ಪುಸ್ತಕಗಳನ್ನು ಖರೀದಿಸುವಂತಿಲ್ಲ. ಸಕಾಲದ ನಿಯಮದಂತೆ ಪುಸ್ತಕ ಖರೀದಿಸಿದ ಅರವತ್ತು ದಿನಗಳ ಒಳಗೆ ಸಂಬಂಧಿಸಿದವರಿಗೆ ಹಣ ಪಾವತಿ ಮಾಡಬೇಕು. ಆದರೆ, ಈ ಕಾರ್ಯ ನಡೆಯುತ್ತಿಲ್ಲ.

ಕನ್ನಡದ ಓದುಗರು ಅತ್ಯುತ್ತಮವಾದ ಪುಸ್ತಕಗಳನ್ನು ಓದುತ್ತಾರೆ ಎಂಬುದು ನಿಜವಾದರೂ ಟಾಪ್ ಟೆನ್ ನೋಡಿ, ಆಯ್ಕೆ ಮಾಡಿಕೊಂಡು ಓದುತ್ತಾರೆ ಎಂಬುದು ಅಪ್ಪಟ ಸುಳ್ಳು. ಸಾವಿರ ಪ್ರತಿ ಹಾಕಿಸಿದ ಮೊದಲ ಮುದ್ರಣ ರಾತ್ರಿ ಬೆಳಗಾಗುವುದರಲ್ಲಿ ಖಾಲಿಯಾಗಿ ಮತ್ತೆ ಮರು ಮುದ್ರಣಕ್ಕೆ ಹೋಗುತ್ತದೆ ಎಂಬುದು ವ್ಯಾಪಾರದ ತಂತ್ರಗಾರಿಕೆ. ಇಂತಹ ಉತ್ಪ್ರೇಕ್ಷಿತ ಹೇಳಿಕೆಯನ್ನು ನಂಬಿಕೊಂಡು ಯಾರಾದರೂ ಪುಸ್ತಕೋದ್ಯಮ ಲಾಭದಾಯಕ ಎಂದು ನಂಬಿದರೆ ಬಹುಶಃ ಅದರಷ್ಟು ಮೂರ್ಖತನ ಇನ್ನೊಂದಿಲ್ಲ. ಇವೆಲ್ಲವೂ ಪುಸ್ತಕ ಚೆನ್ನಾಗಿದೆ ಎಂದು ಭ್ರಮೆ ಹುಟ್ಟಿಸಲು ದೊಡ್ಡವರು ಮಾಡುವ ವ್ಯಾಪಾರದ ಗಿಮಿಕ್‌ಗಳಷ್ಟೇ.

ಸಂಕಷ್ಟದ ತಿರುವು ಹಾದಿಯಲ್ಲಿ ನಿಂತಿರುವ ಪುಸ್ತಕೋದ್ಯಮಕ್ಕೆ ಕೆಲವು ಪ್ರಕಾಶಕರು ಮತ್ತು ಲೇಖಕರ ಹೇಳಿಕೆಗಳೇ ದೊಡ್ಡ ಹೊಡೆತ. ಇನ್ನೂರು, ಮುನ್ನೂರು ಪುಸ್ತಕಗಳನ್ನು ಪ್ರಕಟಿಸಿ, ಸ್ನೇಹಿತರಿಗೆ ಹಂಚಿ, ಮೊದಲ ಮುದ್ರಣ ಬೆಳಗಾಗುವಷ್ಟರಲ್ಲಿ ಖಾಲಿಯಾಗಿದೆ ಎಂದು ಹೇಳುವ ಬಹಳಷ್ಟು ಉದಾಹರಣೆಗಳು ಈಗಾಗಲೇ ನಮ್ಮ ಕಣ್ಣೆದುರಿಗೆ ಇವೆ.

ಇದರ ಹೊರತಾಗಿ ಪುಸ್ತಕೋದ್ಯಮದ ಊರುಗೋಲಾಗಿ ನಿಲ್ಲುವ ಜವಾಬ್ದಾರಿಯನ್ನು ಅರಿತುಕೊಳ್ಳಬೇಕಾದುದು ಕನ್ನಡದ ಲೇಖಕ ಮತ್ತು ಪ್ರಕಾಶಕರ ಇಂದಿನ ತುರ್ತು ಅಗತ್ಯ.

ವಾಚಕರ ವಾಣಿ

ಆಸ್ತಿ ದಂಧೆ: ರಾಜಕಾರಣಿಗಳ ನೆರವಿಗೆ ಪಡೆಯೇ ಇದೆ!

‘ರಾಜಕೀಯ ಜೀವನದಲ್ಲಿ 10 ರೂಪಾಯಿಯಷ್ಟೂ ಭ್ರಷ್ಟಾಚಾರ ಮಾಡಿಲ್ಲ, ಬೇರೆಯವರ ಹೆಸರಿನಲ್ಲಿ ಭೂಮಿ ತೆಗೆದುಕೊಂಡಿಲ್ಲ ಎಂದು ತಂದೆ-ತಾಯಿ ಮೇಲೆ ಪ್ರಮಾಣ ಮಾಡಿ’ ಎಂದು ಬಿಜೆಪಿ ಮುಖಂಡ ಮುರುಗೇಶ ನಿರಾಣಿ ಅವರು ಸಚಿವ ಎಂ.ಬಿ.ಪಾಟೀಲ ಅವರಿಗೆ ಸವಾಲು ಹಾಕಿರುವುದಾಗಿ ವರದಿಯಾಗಿದೆ. ಪ್ರಸ್ತುತ ರಾಜಕಾರಣವು ದುಡ್ಡು ಚೆಲ್ಲಿ ದುಡ್ಡು ಗೆಬರುವ ವೃತ್ತಿಯಾಗಿದೆ. ಸಮಾಜಸೇವೆ ಎನ್ನುವುದು ನೆಪ ಮಾತ್ರ. ಇತ್ತೀಚೆಗೆ ರಾಜಕಾರಣಿಗಳೂ ಒಳಗೊಂಡಂತೆ ಕೆಲ ದೊಡ್ಡದೊಡ್ಡ ಅಧಿಕಾರಿಗಳು ತಮ್ಮ ಕುಟುಂಬ ಸದಸ್ಯರ ಹೆಸರಿನಲ್ಲಿ ಆಸ್ತಿ ಮಾಡುತ್ತಿಲ್ಲ. ತಾನು ಕರೆದ ತಕ್ಷಣ ಏನು, ಎತ್ತ ಎಂದು ಕೇಳದೆ, ಎಲ್ಲಿ ಸಹಿ ಹಾಕು ಎಂದು ಹೇಳಲಾಗುತ್ತದೋ ಅಲ್ಲಿ ಸಹಿ ಹಾಕುವಂತಹ ಮನಃಸ್ಥಿತಿಯವರನ್ನು ಸಾಕಿಕೊಳ್ಳುವ, ಪೋಷಿಸುವ ಸಂಸ್ಕೃತಿ ರೂಪುಗೊಂಡಿದೆ. ಅಂತಹವರ ಹೆಸರಿನಲ್ಲಿ ಆಸ್ತಿ ನೋಂದಣಿ ಮಾಡಲಾಗುತ್ತದೆ.

ರಾಜಕಾರಣಿಗಳಿಗೆ ಜಮೀನು, ಕಟ್ಟಡಗಳ ಬಗ್ಗೆ ಮಾಹಿತಿ ನೀಡಲು ಮತ್ತು ಅವುಗಳನ್ನು ಖರೀದಿಸಿ, ಬೇರೊಬ್ಬರ ಹೆಸರಿನಲ್ಲಿ ನೋಂದಣಿ ಮಾಡಿಸಲು ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಒಂದು ಪಡೆಯೇ ಸೃಷ್ಟಿಯಾಗಿದೆ. ಪರಸ್ಪರ ಆರೋಪ- ಪ್ರತ್ಯಾರೋಪ ಮಾಡುವಾಗ ದೇವರ ಮೇಲೆ ಆಣೆ ಮಾಡುವಂತೆ ಸವಾಲು ಎಸೆಯಲಾಗುತ್ತಿತ್ತು. ಈಗ ಅದು ಹೋಗಿ ತಂದೆ-ತಾಯಿ ಮೇಲೆ ಆಣೆ- ಪ್ರಮಾಣ ಮಾಡುವಂತೆ ಕೇಳಲಾಗುತ್ತಿದೆ. ಆದರೆ ರಾಜಕಾರಣಿಗಳ ಆಸ್ತಿ ಕಬಳಿಕೆಯ ತಂತ್ರಗಳು ಆಣೆ- ಪ್ರಮಾಣದ ಪರಿಧಿ ಮೀರಿ ಬಹಳ ಮುಂದಕ್ಕೆ ಹೋಗಿವೆ.

ತಿಮ್ಮೇಶ ಮುಸ್ಟೂರು, ಜಗಳೂರು

ಮುಖ್ಯಮಂತ್ರಿ ಆಗುವ ಹಂಬಲವೇಕೆ?

‘ಹೈಕಮಾಂಡ್ ಒಪ್ಪಿದರೆ ಹಾಗೂ ಸಿದ್ದರಾಮಯ್ಯ ಅನುಮತಿ ಕೊಟ್ಟರೆ ನಾನು ಮುಖ್ಯಮಂತ್ರಿ ಆಗುತ್ತೇನೆ. ನಾನು ಸಿದ್ದರಾಮಯ್ಯ ಅವರಿಗಿಂತ ಎರಡು ವರ್ಷ ದೊಡ್ಡವನು. ಸಚಿವ ಆಗಿ ಆಗಿ ದಣಿದಿದ್ದೇನೆ. ಇನ್ನು ಮುಖ್ಯಮಂತ್ರಿ ಆಗಬೇಕಷ್ಟೆ. ಎಲ್ಲರಂತೆ ನನಗೂ ಆಸೆ ಇದೆ’ ಎಂದು ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ ಹೇಳಿದ್ದಾರೆ. ಮುಖ್ಯಮಂತ್ರಿ ಆಗಲು ಹೈಕಮಾಂಡ್ ಮಾತ್ರ ಒಪ್ಪಿದರೆ ಸಾಲದು, ಬಹುಮುಖ್ಯವಾಗಿ ಶಾಸಕರ ಬೆಂಬಲ ಬೇಕು. ಜೊತೆಗೆ ಸಿದ್ದರಾಮಯ್ಯ ಅನುಮತಿ ನೀಡುತ್ತಾರೆ ಎಂಬುದು ಭ್ರಮೆ. ಇವೆಲ್ಲಾ ತಿಳಿಯದಷ್ಟು ಅಮಾಯಕರೇನಲ್ಲ ದೇಶಪಾಂಡೆಯವರು. ಬಂದರೆ ಬೆಟ್ಟ ಹೋದರೆ ಹಗ್ಗ ಎಂಬಂತೆ ಹಾಗೇ ಸುಮ್ಮನೆ ಒಂದು ದಾಳ ಉರುಳಿಸಿದ್ದಾರೆ ಅಷ್ಟೆ.

ಅಷ್ಟಕ್ಕೂ ಸಚಿವರಾಗಿ ಕೆಲಸ ಮಾಡಿ ದಣಿದಿರುವ ಅವರಿಗೆ ಮುಖ್ಯಮಂತ್ರಿ ಆಗುವ ಹಂಬಲವೇಕೊ? ಯುವಕರಿಗೆ ಜಾಗ ಬಿಟ್ಟು ಮನೆಯಲ್ಲೇ ಇದ್ದು ವಿಶ್ರಾಂತಿ ತೆಗೆದುಕೊಂಡು ಹಿರಿಯ ರಾಜಕಾರಣಿಗಳಿಗೆ ಸ್ಫೂರ್ತಿಯಾಗಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಜೆನರಿಕ್ ಔಷಧಿಯಷ್ಟೇ ಸಿಗಲಿ

ಪ್ರಧಾನಮಂತ್ರಿ ಜನೌಷಧಿ ಕೇಂದ್ರಗಳಲ್ಲಿ ನಡೆಯುತ್ತಿರುವ ಅಡ್ಡ ವ್ಯಾಪಾರದ ಬಗ್ಗೆ ಬೆಳಕು ಚೆಲ್ಲಿರುವ ಲಕ್ಷ್ಮೀಕಾಂತ್ ಕೊಟ್ಟಾರಚೌಕಿ ಅವರು (ವಾ.ವಾ., ಸೆ. 2), ಒಂದೇ ಬಗೆಯ ಔಷಧಿಗಳಿಗೆ ಎಲ್ಲ ಜನೌಷಧಿ ಕೇಂದ್ರಗಳಲ್ಲೂ ಏಕರೂಪದ ಬೆಲೆ ನಿಗದಿ ಮಾಡಬೇಕು ಎಂದಿದ್ದಾರೆ. ಕಂಪನಿಗಳ ಬ್ರ್ಯಾಂಡೆಡ್ ಔಷಧಿಗಳಿಗೆ ಹೋಲಿಸಿದಲ್ಲಿ ಸರ್ಕಾರದ ಜೆನರಿಕ್ ಔಷಧಿಗಳ ಮಾರಾಟದಿಂದ ಸಿಗುವ ಲಾಭದ ಪ್ರಮಾಣ ತೀರಾ ಕಡಿಮೆ.

ಕೆಲವು ಔಷಧಿಗಳ ವಿಷಯದಲ್ಲಿ, ಐವತ್ತು ಜನೌಷಧಿ ಮಾತ್ರೆಗಳ ಮಾರಾಟದಿಂದ ದೊರೆಯುವ ಲಾಭವು ಇತರ ಬ್ರ್ಯಾಂಡೆಡ್ ಕಂಪನಿಗಳ ಬರೀ ಹತ್ತು ಮಾತ್ರೆಗಳನ್ನು ಮಾರುವುದರಿಂದ ದೊರೆಯುತ್ತದೆ. ಆದ್ದರಿಂದ ಜೆನರಿಕ್ ಔಷಧಿಗಳ ಜೊತೆಗೆ ಬ್ರ್ಯಾಂಡೆಡ್ ಕಂಪನಿಗಳ ಔಷಧಿಗಳನ್ನೂ ಮಾರಾಟ ಮಾಡಿ ಅಧಿಕ ಲಾಭ ಮಾಡಿಕೊಳ್ಳುವ ದಂಧೆ ಕೆಲವು ಜನೌಷಧಿ ಕೇಂದ್ರಗಳಲ್ಲಿ ನಡೆಯುತ್ತಿದೆ. ಇದರಿಂದ ಗ್ರಾಹಕರಿಗೆ ಆರ್ಥಿಕ ನಷ್ಟವುಂಟಾಗುತ್ತಿದೆ. ಆದ್ದರಿಂದ ಜನೌಷಧಿ ಕೇಂದ್ರಗಳಲ್ಲಿ ಜೆನರಿಕ್ ಔಷಧಿಗಳನ್ನು ಮಾತ್ರ ಮಾರಾಟ ಮಾಡಬೇಕೆಂಬ ನಿಯಮವನ್ನು ರೂಪಿಸಬೇಕಾಗಿದೆ.

ಜಿ.ನಾಗೇಂದ್ರ ಕಾವೂರು, ಸಂಡೂರು

ಹೀನ ಕೃತ್ಯಗಳಲ್ಲಿ ಬೇಕು ತ್ವರಿತ ನ್ಯಾಯ

ಅತ್ಯಾಚಾರದಂತಹ ವಿಷಯಗಳಲ್ಲಿ ನ್ಯಾಯದಾನದಲ್ಲಿನ ವಿಳಂಬ ಕುರಿತು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರೇ ಬೇಸರ ವ್ಯಕ್ತಪಡಿಸಿರುವುದು ಸಕಾಲಿಕ. ಸಾಮಾನ್ಯ ಜನರ ಗೋಳನ್ನಂತೂ ಕೇಳುವವರೇ ಇಲ್ಲ. ಇಂತಹ ಪರಿಸ್ಥಿತಿಯು ಸಂತ್ರಸ್ತರಲ್ಲಿ ಆತ್ಮವಿಶ್ವಾಸ ಕುಸಿಯುವಂತೆ ಮಾಡುತ್ತದೆ. ಅತ್ಯಾಚಾರದಂತಹ ಹೀನ ಕೃತ್ಯಗಳಲ್ಲಿ ನ್ಯಾಯವು ತ್ವರಿತವಾಗಿ ಸಿಗುವಂತಾಗಲಿ.

ಅನಿಲಕುಮಾರ ಮುಗಳಿ, ಧಾರವಾಡ

ಗ್ರಾಹಕರಿಗೆ ಭಾರವಾಗುತ್ತಿವೆಯೇ ಬ್ಯಾಂಕುಗಳು?

ಗ್ರಾಹಕರು ತಮ್ಮ ಹಣಕಾಸು ವ್ಯವಹಾರಕ್ಕೆಂದು ಬ್ಯಾಂಕುಗಳಿಗೆ ಹೋದರೆ ಗಂಟೆಗಟ್ಟಲೆ ಅಲ್ಲೇ ಕಳೆಯಬೇಕಾದ ಸ್ಥಿತಿ ಇದೆ. ₹ 10,000ದ ಒಳಗಿನ ಹಣವನ್ನು ಎಟಿಎಂಗಳಲ್ಲಿ ತೆಗೆದುಕೊಳ್ಳುವಂತೆ ಹೇಳುತ್ತಾರೆ. ₹ 20,000ಕ್ಕಿಂತ ಹೆಚ್ಚಿನ ಹಣ ತೆಗೆಯಲು ಕೆಲವು ಬ್ಯಾಂಕ್‌ಗಳವರು ಚೆಕ್ ಕೊಡಿ ಎನ್ನುತ್ತಾರೆ. ಚೆಕ್ ಇಲ್ಲದವರ ಗೋಳು ಹೇಳತೀರದು.

ಬ್ಯಾಲೆನ್ಸ್ ಕಡಿಮೆ ಇರುವುದು ಗೊತ್ತಾಗದೆ ಎಟಿಎಂನಲ್ಲಿ ಹಣ ಪಡೆಯಲು ಹೋದರೆ, ಇನ್‌ಸಫಿಷಿಯೆಂಟ್ ಬ್ಯಾಲೆನ್ಸ್ ಎಂಬ ಕಾರಣಕ್ಕೆ ₹ 23.60 (ಇದರಲ್ಲಿ ₹ 3.60 ಜಿಎಸ್‌ಟಿ) ಕಡಿತಗೊಳಿಸಲಾಗುತ್ತದೆ. ನಾವು ವ್ಯವಹರಿಸುವ ಬ್ಯಾಂಕುಗಳ ಎಟಿಎಂಗಳಲ್ಲಿ ಹಣ ಇಲ್ಲದಿದ್ದರೆ ಬೇರೆ ಬ್ಯಾಂಕ್ ಎಟಿಎಂ ಬಳಸಿದರೆ ಅದರಲ್ಲೂ ನಿಗದಿತ ವಹಿವಾಟು ಮಿತಿ ಮೀರಿದ್ದಾಗ ಮತ್ತೆ ಗ್ರಾಹಕನ ಹಣ ಕಡಿತಗೊಳಿಸಲಾಗುತ್ತದೆ. ಇಂತಹ ಸ್ಥಿತಿಯಿಂದಾಗಿ, ಬ್ಯಾಂಕುಗಳು ಗ್ರಾಹಕರಿಗೆ ಭಾರ ಆಗುತ್ತಿವೆಯೇನೊ ಎಂಬ ಭಾವನೆ ಮೂಡುತ್ತದೆ.

ಅಶೋಕ ಚನ್ನಳ್ಳಿ, ಹಿರೇಕೆರೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಬುಲ್ಡೋಜರ್ ನ್ಯಾಯ’

‘ದಂಡನೆ’ಯೋ ‘ರಾಜಕೀಯ ದಂಡ’ವೋ?

ಪ್ರಜಾವಾಣಿ ವಾರ್ತೆ

ಕೆಲವು ವರ್ಷಗಳಿಂದ ದೇಶದಲ್ಲಿ ತೀವ್ರ ಚರ್ಚೆಯಲ್ಲಿದ್ದ ‘ಬುಲ್ಡೋಜರ್ ನ್ಯಾಯ’ದ ಬಗ್ಗೆ ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ. ಅನಧಿಕೃತವಾಗಿ ಹಾಗೂ ಒತ್ತುವರಿ ಮಾಡಿ ನಿರ್ಮಿಸಲಾಗಿದ್ದ ಕಟ್ಟಡಗಳ ಮೇಲೆ ಮಾತ್ರ ಬುಲ್ಡೋಜರ್‌ಗಳನ್ನು ಹರಿಸಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ಸಮಜಾಯಿಷಿ ನೀಡಿದೆ. ಇದು ನಿಜವೇ ಆದರೆ, ಈ ಬಗ್ಗೆ ಒಂದು ಮಾರ್ಗಸೂಚಿ ರೂಪಿಸೋಣ ಎಂದಿದೆ ಕೋರ್ಟ್. ಈ ಮೂಲಕ ಬುಲ್ಡೋಜರ್ ಕುರಿತ ವಾದ–ವಿವಾದವು ಈಗ ನ್ಯಾಯಾಲಯದ ಅಂಗಳ ತಲುಪಿದೆ. ಸುಪ್ರೀಂ ಕೋರ್ಟ್‌ನ ಪ್ರಶ್ನೆ, ಅಸಮಾಧಾನಗಳ ಹಿಂದೆ ‘ಬುಲ್ಡೋಜರ್ ನ್ಯಾಯ’ದ ಹೆಸರಿನಲ್ಲಿ ದೇಶದಲ್ಲಿ ನಡೆದ ನೂರಾರು ಧ್ವಂಸ ಪ್ರಕರಣಗಳು ಹಾಗೂ ಅದರ ವಿರುದ್ಧ ವ್ಯಕ್ತವಾದ ಸಾಮಾಜಿಕ ಕಾರ್ಯಕರ್ತರ ಪ್ರತಿರೋಧವಿದೆ.

ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದಕ್ಕೂ ‘ಬುಲ್ಡೋಜರ್ ನ್ಯಾಯ’ ಜಾರಿಯಾಗುವುದಕ್ಕೂ ನೇರ ಸಂಬಂಧವಿದೆ ಎಂದು ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಸಂಸ್ಥೆಯ ಅಧ್ಯಯನ ಹೇಳುತ್ತದೆ. ಕಟ್ಟಡಗಳ ಮೇಲೆ ಬುಲ್ಡೋಜರ್ ಹರಿಸುವುದನ್ನು ಒಂದು ದಂಡನೆಯ ಕ್ರಮವಾಗಿ ಮೊದಲು ಬಳಸಿದವರು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ. ಕ್ರಮೇಣ ಅವರು ಇದನ್ನು ಒಂದು ‘ರಾಜಕೀಯ ದಂಡ’ವಾಗಿ ಪರಿವರ್ತಿಸಿದರು ಎನ್ನುವ ವಿಶ್ಲೇಷಣೆ ಇದೆ. ನಂತರ, ಈ ಪ್ರವೃತ್ತಿ ಬಿಜೆಪಿ ಆಡಳಿತವಿರುವ ಇತರ ರಾಜ್ಯಗಳಿಗೂ ಹಬ್ಬಿತು. ‘ಬುಲ್ಡೋಜರ್ ನ್ಯಾಯ’ದ ಬಗ್ಗೆ ಅಧ್ಯಯನ ಮಾಡಿರುವ ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಸಂಸ್ಥೆಯು, ಈ ಸಂಬಂಧ ಎರಡು ವರದಿಗಳನ್ನು ಪ್ರಕಟಿಸಿದೆ.

ಬಿಜೆಪಿ ಆಡಳಿತವಿರುವ ಉತ್ತರ ಪ್ರದೇಶ, ಅಸ್ಸಾಂ, ಗುಜರಾತ್, ಮಧ್ಯಪ್ರದೇಶ ಹಾಗೂ ದೆಹಲಿ ಮಹಾನಗರ ಪಾಲಿಕೆಯಲ್ಲಿ ಬುಲ್ಡೋಜರ್ ಹರಿಸಿ ‘ಆರೋಪಿ’ಗಳ ಮನೆ, ಅಂಗಡಿ ಮುಂತಾದ ಹತ್ತಾರು ಕಟ್ಟಡಗಳನ್ನು ಧ್ವಂಸ ಮಾಡಲಾಯಿತು. ಅವುಗಳಲ್ಲಿ ಹೆಚ್ಚಿನವು ಮುಸ್ಲಿಮರ ಮನೆಗಳು. ಇದೇ ವಿಚಾರ ವಿವಾದಕ್ಕೆ ಕಾರಣವಾಗಿರುವುದು. ‘ಹಿಂದೂ ರಾಷ್ಟ್ರೀಯವಾದಿ ಪಕ್ಷವಾದ ಬಿಜೆಪಿ ಮುಸ್ಲಿಮರನ್ನು ಗುರಿಯಾಗಿಸಿಕೊಂಡೇ ಬುಲ್ಡೋಜರ್ ಕಾರ್ಯಾಚರಣೆ ನಡೆಸುತ್ತಿದೆ’ ಎನ್ನುವ ಆರೋಪವಿದೆ.

2022ರ ಏಪ್ರಿಲ್ ಮತ್ತು ಜೂನ್ ನಡುವೆ ಈ ಐದು ರಾಜ್ಯಗಳಲ್ಲಿ ಮುಸ್ಲಿಮರಿಗೆ ಸೇರಿದ 128 ಕಟ್ಟಡಗಳನ್ನು ನೆಲಸಮ ಮಾಡಲಾಗಿದ್ದು, ಅದರಿಂದ ಮಹಿಳೆಯರು, ಮಕ್ಕಳು ಸೇರಿದಂತೆ 617 ಮಂದಿ ಬದುಕಿನ ಆಸರೆ ಕಳೆದುಕೊಂಡಿದ್ದಾರೆ ಎಂದು ಅಮ್ನೆಸ್ಟಿ ಇಂಟರ್‌ನ್ಯಾಷನಲ್ ವರದಿ ತಿಳಿಸಿದೆ. ಇದು ಕ್ರೂರ ಮತ್ತು ಭಯಾನಕ ಕ್ರಮ ಎಂದು ಸಂಸ್ಥೆ ಹೇಳಿದೆ.

ಬುಲ್ಡೋಜರ್ ಕಾರ್ಯಾಚರಣೆಯ ಮೂಲಕ ನಿರ್ದಿಷ್ಟ ವ್ಯಕ್ತಿಗಳ ಕಟ್ಟಡಗಳನ್ನು ಧ್ವಂಸ ಮಾಡುವಾಗ, ಸಂಬಂಧಪಟ್ಟ ಸರ್ಕಾರ/ಸರ್ಕಾರಿ ಸಂಸ್ಥೆ ಹೇಳುತ್ತಿದ್ದದ್ದು, ಇದು ಅಕ್ರಮ ನಿರ್ಮಾಣದ ವಿರುದ್ಧದ ಕ್ರಮ ಎಂದೇ. ಆದರೆ, ಹಾಗೆ ನೆಲಸಮ ಕಾರ್ಯ ಕೈಗೊಳ್ಳುವ ಮುನ್ನ ಸಂಬಂಧಪಟ್ಟವರಿಗೆ ನೋಟಿಸ್ ಜಾರಿ ಮಾಡುತ್ತಿರಲಿಲ್ಲ. ಕನಿಷ್ಠ ಮಾಹಿತಿಯನ್ನೂ ನೀಡದೇ, ಕಾನೂನು ಪಾಲಿಸದೇ ಏಕಾಏಕಿ ಧ್ವಂಸ ಕಾರ್ಯಾಚರಣೆ ನಡೆಸಲಾಗಿದೆ ಎನ್ನುವುದು ಈ ಕಾರ್ಯಾಚರಣೆಯ ವಿರುದ್ಧದ ಪ್ರಬಲ ವಾದ. ಇದು ಕಾನೂನಿನ ಉಲ್ಲಂಘನೆ ಮಾತ್ರವಲ್ಲದೇ ಮಾನವ ಹಕ್ಕುಗಳ ಉಲ್ಲಂಘನೆ ಎನ್ನುವ ಟೀಕೆಯು ವ್ಯಕ್ತವಾಗಿದೆ.

‘ಬುಲ್ಡೋಜರ್ ನ್ಯಾಯ’ ಎನ್ನುವುದು ಸಂವಿಧಾನದ ವ್ಯಂಗ್ಯವಾಗಿದ್ದು, ಮುಸ್ಲಿಮರ ವಿರುದ್ಧದ ಈ ದಮನಕಾರಿ ಪ್ರವೃತ್ತಿಯನ್ನು ಕೊನೆಗೊಳಿಸಬೇಕು’ ಎಂದು 12 ಮಂದಿ ಕಾನೂನು ತಜ್ಞರ ತಂಡವೊಂದು 2022ರ ಜೂನ್‌ನಲ್ಲಿ ಸುಪ್ರೀಂ ಕೋರ್ಟ್‌ಗೆ ಪತ್ರ ಬರೆದಿತ್ತು. ಆರೋಪಿಗಳ ಮನೆಗಳನ್ನು ಧ್ವಂಸ ಮಾಡುವ ಕ್ರಮವನ್ನು ಪ್ರಶ್ನಿಸಿ ಸ್ವಯಂ ದೂರು ದಾಖಲಿಸಿಕೊಂಡು 2022ರ ಮೇನಲ್ಲಿ ವಿಚಾರಣೆ ನಡೆಸಿದ್ದ ಗುವಾಹಟಿ ಹೈಕೋರ್ಟ್, ಅಸ್ಸಾಂ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತ್ತು.

ಇಷ್ಟಾದರೂ ಯೋಗಿ ಆದಿತ್ಯನಾಥ, ಪ್ರಧಾನಿ ಮೋದಿ ಸೇರಿದಂತೆ ಬಿಜೆಪಿ ಪ್ರಮುಖ ನಾಯಕರು ‘ಬುಲ್ಡೋಜರ್ ನ್ಯಾಯ’ವನ್ನು ಸಮರ್ಥಿಸಿಕೊಂಡಿದ್ದಾರೆ. ಯೋಗಿ ಅವರ ಚುನಾವಣಾ ಪ್ರಚಾರ ಸಭೆಗಳಲ್ಲಿ ಬುಲ್ಡೋಜರ್‌ಗಳನ್ನು ಬಳಸಲಾಗುತ್ತಿತ್ತು.

ಕಾನೂನು ಉಲ್ಲಂಘನೆ ಮಾಡುವ ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು, ಸರಿ. ಆದರೆ, ಯಾರು ತಪ್ಪಿತಸ್ಥರು, ಅವರು ಏನು ತಪ್ಪು ಮಾಡಿದ್ದಾರೆ, ಅದಕ್ಕೆ ಶಿಕ್ಷೆ ಏನು ಎನ್ನುವುದನ್ನು ತೀರ್ಮಾನ ಮಾಡಬೇಕಿರುವುದು ನ್ಯಾಯಾಲಯವೇ ವಿನಾ ಸರ್ಕಾರ ಅಲ್ಲ; ಸರ್ಕಾರ ತನ್ನ ವಿರುದ್ಧ ಇರುವವರನ್ನು, ನಿರ್ದಿಷ್ಟ ಕೋಮಿನ ಜನರನ್ನು, ಭಿನ್ನಮತವನ್ನು ದಮನ ಮಾಡಲು ‘ಬುಲ್ಡೋಜರ್ ನ್ಯಾಯ’ ನೆಪವಾಗಿದ್ದು, ಇದು ಕಾನೂನಿಗೆ ಹೊರತಾದ ಕ್ರಮ ಎನ್ನುವುದು ಅದನ್ನು ವಿರೋಧಿಸುವವರ ವಾದ.

ರಾಜ್ಯದಲ್ಲೂ ಬಂದಿತ್ತು ಒತ್ತಡ

ಉತ್ತರ ಪ್ರದೇಶದ ಮಾದರಿಯಲ್ಲಿ ಕರ್ನಾಟಕದಲ್ಲೂ ‘ಬುಲ್ಡೋಜರ್ ನ್ಯಾಯ’ ಜಾರಿಗೆ ತರಲು ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ತೀವ್ರ ಒತ್ತಡ ಬಂದಿತ್ತು. ಹಿಂಸಾಚಾರ, ಮಹಿಳೆಯರ ಮೇಲೆ ದೌರ್ಜನ್ಯ ನಡೆಸಿದ ಆರೋಪಿಗಳ ಆಸ್ತಿಯನ್ನು ಮುಟ್ಟುಗೋಲು ಅಥವಾ ಧ್ವಂಸಗೊಳಿಸುವ ಮೂಲಕ ಅವರಿಗೆ ಶಿಕ್ಷೆ ವಿಧಿಸಬೇಕು ಎಂಬ ಒತ್ತಾಯವನ್ನು ಬಿಜೆಪಿಯ ಶಾಸಕರೇ ಮಾಡಿದ್ದರು. ‘ಬುಲ್ಡೋಜರ್ ಅಸ್ತ್ರ ರಾಜ್ಯದಲ್ಲಿ ಪ್ರಯೋಗಿಸುವುದಿಲ್ಲ’ ಎಂದು ಅಂದಿನ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಹೇಳಿಕೆ ನೀಡಿದ್ದರು.

ಆಧಾರ: ಪಿಟಿಐ, ಬಿಬಿಸಿ, ಅಮ್ನೆಸ್ಟಿ ಇಂಟರ್‌ನ್ಯಾಷನಲ್, ಟೈಮ್ ನಿಯತಕಾಲಿಕ

ಪ್ರಮುಖ ಪ್ರಕರಣಗಳು

- **ಏಪ್ರಿಲ್, 2022:** ಮಧ್ಯಪ್ರದೇಶದ ಖರ್‌ಗೌನ್‌ನಲ್ಲಿ ರಾಮನವಮಿ ಅಂಗವಾಗಿ ನಡೆದ ಮೆರವಣಿಗೆ ಸಂದರ್ಭದಲ್ಲಿ ಸಂಭವಿಸಿದ ಕಲ್ಲು ತೂರಾಟ ಮತ್ತು ಕೋಮುಗಲಭೆಗೆ ಸಂಬಂಧಿಸಿದಂತೆ ಬಂಧನಕ್ಕೆ ಒಳಗಾದ ಮುಸ್ಲಿಮರಿಗೆ ಸೇರಿದ ಮನೆಗಳು ಸೇರಿ 40ಕ್ಕೂ ಹೆಚ್ಚು ಕಟ್ಟಡಗಳನ್ನು ಸರ್ಕಾರ ನೆಲಸಮ ಮಾಡಿತ್ತು
- **ಏಪ್ರಿಲ್, 2022:** ದೆಹಲಿಯ ಜಹಾಂಗೀರ್‌ಪುರಿಯಲ್ಲಿ ಹನುಮ ಜಯಂತಿ ರ್‍ಯಾಲಿ ವೇಳೆ ಕೋಮು ಹಿಂಸಾಚಾರ ನಡೆದಿತ್ತು. ಬಿಜೆಪಿ ನೇತೃತ್ವದ ಉತ್ತರ ದೆಹಲಿ ಮಹಾನಗರ ಪಾಲಿಕೆ ಆಡಳಿತವು ಮಸೀದಿಯೊಂದರ ಗೋಡೆ ಮತ್ತು ಗೇಟು ಸೇರಿದಂತೆ ಹಲವು ಕಟ್ಟಡಗಳನ್ನು ತೆರವುಗೊಳಿಸಿತ್ತು.
- **ಮೇ, 2022:** ಅಸ್ಸಾಂನ ನಗಾಂವ್‌ನಲ್ಲಿ ಸಫೀಕುಲ್ಲಾ ಇಸ್ಲಾಂ ಎಂಬುವವರು ಪೊಲೀಸ್ ವಶದಲ್ಲಿದ್ದಾಗ ಮೃತಪಟ್ಟಿದ್ದಕ್ಕೆ ಆಕ್ರೋಶಗೊಂಡಿದ್ದ ಉದ್ರಿಕ್ತರು ಠಾಣೆಗೆ ಬೆಂಕಿ ಹಾಕಿದ್ದರು. ಮರುದಿನವೇ ಜಿಲ್ಲಾಡಳಿತ ಐವರು ಆರೋಪಿಗಳ ಮನೆ ನೆಲಸಮಗೊಳಿಸಿತ್ತು. ಸರ್ಕಾರದ ಕ್ರಮವನ್ನು ಕೋರ್ಟ್ ತಪ್ಪು ಎಂದು ಹೇಳಿತ್ತು. ಈ ವರ್ಷದ ಮೇನಲ್ಲಿ ಅಸ್ಸಾಂ ಸರ್ಕಾರ 5 ಕುಟುಂಬಗಳಿಗೆ ತಲಾ ₹30 ಲಕ್ಷ ಪರಿಹಾರ ನೀಡಿದೆ
- **ಜೂನ್, 2022:** ಬಿಜೆಪಿ ವಕ್ತಾರೆಯಾಗಿದ್ದ ನೂಪುರ್ ಶರ್ಮಾ ಅವರು ಪ್ರವಾದಿ ಮಹಮ್ಮದ್ ಬಗ್ಗೆ ನೀಡಿದ ಹೇಳಿಕೆ ವಿವಾದದ ಸ್ವರೂಪ ಪಡೆದಿತ್ತು. ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ಇದರ ವಿರುದ್ಧ ನಡೆದ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿತ್ತು. ಬಂಧನಕ್ಕೆ ಒಳಗಾಗಿದ್ದ ಪ್ರಮುಖ ಆರೋಪಿ, ರಾಜಕೀಯ ಮುಖಂಡ ಜಾವೇದ್ ಅಹಮದ್ ಅವರ ಮನೆಯನ್ನು ಬುಲ್ಡೋಜರ್ ಮೂಲಕ ನೆಲಸಮಗೊಳಿಸಲಾಗಿತ್ತು.
- **ಮಾರ್ಚ್ 2023:** ಬಂಧನದಲ್ಲಿದ್ದ ಉತ್ತರ ಪ್ರದೇಶದ ಗ್ಯಾಂಗ್‌ಸ್ಟರ್‌ಗಳಾಗಿದ್ದ ಮುಕ್ತಾರ್ ಅನ್ಸಾರಿ ಮತ್ತು ಅತೀಕ್ ಅಹಮದ್ ಅವರಿಗೆ ಸೇರಿದ ಮತ್ತು ಅವರ ಆಪ್ತರು, ಸಹಚರರ ಮನೆ, ಕಟ್ಟಡಗಳನ್ನು ಧ್ವಂಸಗೊಳಿಸಲಾಗಿತ್ತು
- **ಜುಲೈ, 2023:** ಹರಿಯಾಣದ ನೂಹ್‌ನಲ್ಲಿ ಜುಲೈ 31ರಂದು ವಿಶ್ವ ಹಿಂದೂ ಪರಿಷತ್ ಹಮ್ಮಿಕೊಂಡಿದ್ದ ಬ್ರಜ್ ಮಂಡಲ್ ಜಲಾಭಿಷೇಕ ಜಾತ್ರೆ ಸಂದರ್ಭದಲ್ಲಿ ಹಿಂದೂ ಮತ್ತು ಮುಸ್ಲಿಮರ ನಡುವೆ ನಡೆದ ಹಿಂಸಾಚಾರದಲ್ಲಿ ಆರು ಮಂದಿ ಮೃತಪಟ್ಟು, ಹಲವರು ಗಾಯಗೊಂಡಿದ್ದರು. ಪ್ರಕರಣದಲ್ಲಿ ಬಂಧಿತರಾದ ಆರೋಪಿಗಳಿಗೆ ಸೇರಿದ ಕಟ್ಟಡಗಳನ್ನು ನೆಲಸಮಗೊಳಿಸಿತ್ತು.

‘ಬುಲ್ಡೋಜರ್ ಬಾಬಾ’, ‘ಬುಲ್ಡೋಜರ್ ಮಾಮಾ’

ರಾಜಸ್ಥಾನದಲ್ಲಿ ಕಳೆದ ವರ್ಷ ನಡೆದ ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ಬಿಜೆಪಿಯು ಬುಲ್ಡೋಜರ್‌ಗಳನ್ನು ಬಳಸಿತ್ತು –ಪಿಟಿಐ ಚಿತ್ರ

‘ಬುಲ್ಡೋಜರ್ ನ್ಯಾಯ’ ಎಂದು ಕರೆಯಲಾಗುತ್ತಿರುವ ಈ ಕಾರ್ಯಾಚರಣೆ ಮೊದಲು ಶುರುವಾಗಿದ್ದು ಉತ್ತರ ಪ್ರದೇಶದಲ್ಲಿ. 2017ರಲ್ಲಿ ಯೋಗಿ ಆದಿತ್ಯನಾಥ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಗ್ಯಾಂಗ್‌ಸ್ಟರ್‌ಗಳು, ಕೋಮುಗಲಭೆ, ಹಿಂಸಾಚಾರ ಪ್ರಕರಣಗಳು, ಅತ್ಯಾಚಾರ, ಲೈಂಗಿಕ ದೌರ್ಜನ್ಯ ಪ್ರಕರಣಗಳ ಆರೋಪಿಗಳ ಆಸ್ತಿಗಳನ್ನು ಬುಲ್ಡೋಜರ್ ಮೂಲಕ ನೆಲಸಮಗೊಳಿಸುವ ಪ್ರವೃತ್ತಿ ಅಲ್ಲಿ ಆರಂಭವಾಯಿತು. ಈ ಕಾರ್ಯಾಚರಣೆಯು ಅವರಿಗೆ ‘ಬುಲ್ಡೋಜರ್ ಬಾಬಾ’ ಎಂಬ ಹೆಸರನ್ನೇ ತಂದಿತ್ತಿದೆ. ಪ್ರಧಾನಿ ಮೋದಿ ಕೂಡ ಚುನಾವಣಾ ರ್‍ಯಾಲಿಗಳಲ್ಲಿ ಇದನ್ನು ಸಮರ್ಥಿಸಿಕೊಂಡಿದ್ದರು.

2020ರಲ್ಲಿ ಕಾನ್ಪುರದ ಬಿಕ್ರು ಗ್ರಾಮದಲ್ಲಿರುವ ಗ್ಯಾಂಗ್‌ಸ್ಟರ್ ವಿಕಾಸ್ ದುಬೆಗೆ ಸೇರಿದ ಮನೆಯನ್ನು ನೆಲಸಮ ಮಾಡಿದ್ದು ರಾಷ್ಟ್ರ ಮಟ್ಟದಲ್ಲಿ ದೊಡ್ಡ ಸುದ್ದಿಯಾಗಿತ್ತು. ಎಂಟು ಮಂದಿ ಪೊಲೀಸ್ ಸಿಬ್ಬಂದಿಯ ಹತ್ಯೆ ಪ್ರಕರಣದಲ್ಲಿ ವಿಕಾಸ್ ದುಬೆ ಪ್ರಮುಖ ಆರೋಪಿಯಾಗಿದ್ದ.

ಉತ್ತರ ಪ್ರದೇಶವನ್ನು ಮಾದರಿಯಾಗಿಟ್ಟುಕೊಂಡು 2022ರಲ್ಲಿ ನೆರೆಯ ಮಧ್ಯಪ್ರದೇಶದಲ್ಲಿ ಆಡಳಿತದಲ್ಲಿದ್ದ ಶಿವರಾಜ್‌ಸಿಂಗ್ ಚೌಹಾಣ್ ನೇತೃತ್ವದ ಬಿಜೆಪಿ ಸರ್ಕಾರ ಅಲ್ಲೂ ಬುಲ್ಡೋಜರ್ ಕಾರ್ಯಾಚರಣೆಗೆ ಇಳಿಯಿತು. ಈ ಕಾರ್ಯಾಚರಣೆಯು ಚೌಹಾಣ್ ಅವರಿಗೆ ‘ಬುಲ್ಡೋಜರ್ ಮಾಮಾ’ ಎಂಬ ಹೆಸರನ್ನು ತಂದುಕೊಟ್ಟಿತು. ಚೌಹಾಣ್ ಅವರು ಇದೇ ವಿಚಾರವನ್ನು ಮುಂದಿಟ್ಟುಕೊಂಡು 2023ರ ಮಧ್ಯಪ್ರವೇಶ ವಿಧಾನಸಭಾ ಚುನಾವಣೆ ಎದುರಿಸಿದ್ದರು.

2022ರಲ್ಲೇ ಇದು ಬಿಜೆಪಿ ಆಡಳಿತದ ಹರಿಯಾಣ, ಅಸ್ಸಾಂಗೆ ವ್ಯಾಪಿಸಿತು. ಬಿಜೆಪಿ ಅಧಿಕಾರದಲ್ಲಿರುವ ಗುಜರಾತ್, ಉತ್ತರಾಖಂಡ, ರಾಜಸ್ಥಾನದಲ್ಲೂ ಬುಲ್ಡೋಜರ್‌ಗಳು ಸದ್ದು ಮಾಡತೊಡಗಿವೆ. ಬಿಜೆಪಿ ಆಡಳಿತವಿರುವ ದೆಹಲಿ ಮಹಾನಗರ ಪಾಲಿಕೆಯಲ್ಲೂ ಇದನ್ನು ಅನುಷ್ಠಾನಕ್ಕೆ ತರಲಾಗಿದೆ.

ತಿದ್ದುಪಡಿ

‘ಪ್ರಜಾವಾಣಿ’ಯ ಸೋಮವಾರದ ಸಂಚಿಕೆಯ ‘ಆಳ ಅಗಲ’ ಪುಟದಲ್ಲಿನ ‘ಬಸವಳಿಯುತ್ತಿರುವ ಭಾರತೀಯರು’ ಲೇಖನದ ಪಟ್ಟಿಯಲ್ಲಿ ಭಾರತದಲ್ಲಿ ವೇತನ ಸಹಿತ ಹೆರಿಗೆ ರಜೆ 12 ವಾರ ಎಂದು ತಪ್ಪಾಗಿದ್ದು, ಇದು 26 ವಾರ ಎಂದಾಗಬೇಕಿತ್ತು.

ಸಿನಿ ಬಿಟ್ಸ್

‘ಮ್ಯಾಕ್ಸ್’ ಸಿನಿಮಾದಲ್ಲಿ ಸುದೀಪ್

ಸೆ. 7ಕ್ಕೆ ‘ಮ್ಯಾಕ್ಸ್’ ರಿಲೀಸ್ ದಿನಾಂಕ ಘೋಷಣೆ

ನಟ ಸುದೀಪ್ ಸೋಮವಾರ (ಸೆ.2) 51ನೇ ವರ್ಷಕ್ಕೆ ಕಾಲಿಟ್ಟಿದ್ದು, ಇದೇ ಸಂದರ್ಭದಲ್ಲಿ ಅವರ ನಟನೆಯ ಹೊಸ ಸಿನಿಮಾ ‘ಮ್ಯಾಕ್ಸ್’ನ ಟೈಟಲ್ ಟ್ರ್ಯಾಕ್ ‘ಮ್ಯಾಕ್ಸಿಮಮ್ ಮಾಸ್’ ಬಿಡುಗಡೆಯಾಗಿದೆ.

ವಿಜಯ್ ಕಾರ್ತಿಕೇಯ ನಿರ್ದೇಶನದ ಈ ಸಿನಿಮಾದ ರಿಲೀಸ್ ದಿನಾಂಕ ಗಣೇಶ ಚತುರ್ಥಿಯಂದು ಘೋಷಣೆಯಾಗಲಿದೆ.

ಬೆಂಗಳೂರಿನ ತಮ್ಮ ನಿವಾಸದ ಮುಂಭಾಗ ಹಾಗೂ ಜಯನಗರದಲ್ಲಿರುವ ಎಂಇಎಸ್ ಮೈದಾನದಲ್ಲಿ ಅಭಿಮಾನಿಗಳ ಸಮ್ಮುಖದಲ್ಲಿ ಸುದೀಪ್ ಜನ್ಮದಿನವನ್ನು ಆಚರಿಸಿಕೊಂಡರು. ‘ಅಭಿಮಾನಿಗಳು ನಮ್ಮ ಪ್ರತಿಬಿಂಬ. ಹೋದಲೆಲ್ಲ ತಲೆಎತ್ತಿಕೊಂಡು ಓಡಾಡಲು ಅಭಿಮಾನಿಗಳೇ ಕಾರಣ. ಯಾವತ್ತೂ ನಾವು ಸಂಪಾದನೆ ಮಾಡಿರುವ ಹೆಸರಿಗೆ ಕಳಂಕ ತರುವ ಕೆಲಸ ಇವರು ಮಾಡಿಲ್ಲ, ಮಾಡೋದೂ ಇಲ್ಲ. ವ್ಯಕ್ತಿತ್ವದಲ್ಲಿ ನಾವು ದೊಡ್ಡವರಾಗಬೇಕಾದರೆ ಕೇವಲ ಸಿನಿಮಾ ಮಾತ್ರ ಸಾಲುವುದಿಲ್ಲ. ನಮ್ಮ ಅಕ್ಕಪಕ್ಕ ಇರುವ ಸ್ನೇಹಿತರು, ಕುಟುಂಬ, ಮಾಧ್ಯಮ ಮಿತ್ರರು ಚೆನ್ನಾಗಿದ್ದಾರೆ. ಹೀಗಾಗಿ ನಾನೂ ಚೆನ್ನಾಗಿದ್ದೇನೆ. ನನ್ನ ಅಭಿಮಾನಿಗಳಲ್ಲಿ ಒಳ್ಳೆತನ ಇದೆ. ಅದಕ್ಕೇ ನಾವು ಇಷ್ಟು ಒಳ್ಳೆಯವರು’ ಎಂದರು ಸುದೀಪ್.

‘ಮ್ಯಾಕ್ಸಿಮಮ್ ಮಾಸ್’ ಹಾಡಿಗೆ ನಿರ್ದೇಶಕ ಅನೂಪ್ ಭಂಡಾರಿ ಸಾಹಿತ್ಯ ರಚಿಸಿದ್ದು, ಚೇತನ್ ಗಂಧರ್ವ ಮತ್ತು ಎಂ.ಸಿ. ಬಿಜ್ಜು ಧ್ವನಿಯಾಗಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ ಸಂಯೋಜನೆ ಮಾಡಿದ್ದಾರೆ. ‘ಮ್ಯಾಕ್ಸ್’ ಚಿತ್ರದಲ್ಲಿ ವರಲಕ್ಷ್ಮೀ ಶರತ್ ಕುಮಾರ್, ಸಂಯುಕ್ತ ಹೊರನಾಡು, ಪ್ರಮೋದ್ ಶೆಟ್ಟಿ ಮುಂತಾದವರು ನಟಿಸಿದ್ದಾರೆ.

ಸುದೀಪ್ ಜನ್ಮದಿನದಂದೇ ಅನೂಪ್ ಭಂಡಾರಿ ನಿರ್ದೇಶನದ ಹೊಸ ಸಿನಿಮಾದ ಟೈಟಲ್ ಪೋಸ್ಟರ್ ಬಿಡುಗಡೆಯಾಗಿದೆ. ‘ಬಿಲ್ಲಾ ರಂಗ ಬಾಷಾ’ ಸಿನಿಮಾವನ್ನು ‘ತೆಲುಗಿನ ಹಿಟ್ ಸಿನಿಮಾ ‘ಹನುಮಾನ್’ ನಿರ್ಮಾಣ ಮಾಡಿದ್ದ ಪ್ರೈಂ ಶೋ ಎಂಟರ್‌ಟೇನ್ಮೆಂಟ್ ಸಂಸ್ಥೆಯೇ ನಿರ್ಮಾಣ ಮಾಡಲಿದೆ. ಸದ್ಯದಲ್ಲೇ ಈ ಸಿನಿಮಾ ಸೆಟ್ಟೇರಲಿದೆ.

ರಜನಿಕಾಂತ್ ಸಿನಿಮಾದಲ್ಲಿ ಉಪೇಂದ್ರ

‘ಕೈಥಿ’, ‘ಮಾಸ್ಟರ್’, ‘ವಿಕ್ರಮ್’, ‘ಲಿಯೋ’–ಹೀಗೆ ಸಾಲು ಸಾಲು ಹಿಟ್ ಸಿನಿಮಾಗಳನ್ನು ನೀಡಿದ ಕಾಲಿವುಡ್ ನಿರ್ದೇಶಕ ಲೋಕೇಶ್ ಕನಕರಾಜ್ ನಿರ್ದೇಶನದ ಹೊಸ ಸಿನಿಮಾ ‘ಕೂಲಿ’ಯಲ್ಲಿ ನಟ ಉಪೇಂದ್ರ ‘ಕಲೀಶ’ ಎಂಬ ಪಾತ್ರದಲ್ಲಿ ನಟಿಸಲಿದ್ದಾರೆ.

ಸನ್ ಪಿಕ್ಚರ್ಸ್ ನಿರ್ಮಾಣ ಮಾಡುತ್ತಿರುವ ಈ ಸಿನಿಮಾದಲ್ಲಿ ನಟ ರಜನಿಕಾಂತ್ ನಾಯಕರಾಗಿ ನಟಿಸುತ್ತಿದ್ದಾರೆ. ಇದು ರಜನಿಕಾಂತ್ ನಟನೆಯ 171ನೇ ಸಿನಿಮಾ. ಚಿತ್ರದ ಕಥೆಯೂ ಲೋಕೇಶ್ ಅವರದ್ದು. ಸತ್ಯರಾಜ್, ನಾಗಾರ್ಜುನ, ಶೃತಿಹಾಸನ್, ಮಲಯಾಳದ ಖ್ಯಾತ ನಟ ಸೌಬೀನ್ ಚಿತ್ರದಲ್ಲಿ ಪ್ರಮುಖ ಪಾತ್ರಗಳನ್ನು ನಿಭಾಯಿಸಲಿದ್ದಾರೆ. ‘ನನ್ನ ಗುರು, ನನ್ನ ಸೂಪರ್‌ಸ್ಟಾರ್ ರಜನಿ ಸರ್ ಜೊತೆ ಕೂಲಿ ಚಿತ್ರದಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದೇನೆ’ ಎಂದು ‘ಎಕ್ಸ್’ನಲ್ಲಿ ಉಪೇಂದ್ರ ಬರೆದುಕೊಂಡಿದ್ದಾರೆ. ಚಿತ್ರಕ್ಕೆ ಅನಿರುದ್ಧ್ ರವಿಚಂದರ್ ಸಂಗೀತ ನಿರ್ದೇಶನವಿದೆ.

ಸದ್ಯ ಕನ್ನಡದಲ್ಲಿ ತಮ್ಮದೇ ನಿರ್ದೇಶನದ ‘ಯುಐ’ ಸಿನಿಮಾ ಬಿಡುಗಡೆಗೆ ಸಿದ್ಧತೆ ನಡೆಸುತ್ತಿದ್ದಾರೆ ಉಪೇಂದ್ರ. ಅಕ್ಟೋಬರ್‌ನಲ್ಲಿ ಸಿನಿಮಾ ತೆರೆಕಾಣಲಿದ್ದು, ಚಿತ್ರತಂಡ ಬಿಡುಗಡೆ ದಿನಾಂಕವನ್ನು ಇನ್ನಷ್ಟೇ ಘೋಷಿಸಬೇಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಮೂವರು ಹುಡುಗರು ರೈಲು ಹಳಿಯ ಮೇಲೆ ನಟ್ ಮತ್ತು ಬೋಲ್ಟ್‌ಗಳನ್ನು ಕೀಳುತ್ತಿರುವ ವಿಡಿಯೊ ಅನ್ನು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹಂಚಿಕೊಳ್ಳಲಾಗುತ್ತಿದೆ. ಇದು ಭಾರತದ ವಿಡಿಯೊ ಆಗಿದ್ದು, ಮುಸ್ಲಿಂ ಬಾಲಕರು ರೈಲು ಹಳಿಯನ್ನು ಹಾಳು ಮಾಡುತ್ತಿದ್ದಾರೆ ಎಂದು ಪ್ರತಿಪಾದನೆ ಮಾಡಲಾಗುತ್ತಿದೆ. ಇದೇ ವಿಡಿಯೊ ಅನ್ನು ಕೋಮು ಭಾವನೆಗಳನ್ನು ಕೆರಳಿಸುವ ರೀತಿ ಹಲವರು ಹಂಚಿಕೊಳ್ಳುತ್ತಿದ್ದಾರೆ. ನಿರ್ದಿಷ್ಟ ಕೋಮಿನ ಜನ ರೈಲು ಅಪಘಾತಗಳಿಗೆ ಕಾರಣರಾಗುತ್ತಿದ್ದಾರೆ ಎಂದು ಪ್ರಚಾರ ಮಾಡಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.



ವಿಡಿಯೊ ಅನ್ನು ಗೂಗಲ್‌ನಲ್ಲಿ ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಫೇಸ್‌ಬುಕ್ ಮತ್ತು ಯುಟ್ಯೂಬ್‌ನಲ್ಲಿ ಇದೇ ವಿಡಿಯೊ ಅನ್ನು ಹಿಂದೆ ಹಲವರು ಹಂಚಿಕೊಂಡಿರುವುದು ಕಂಡುಬಂತು. ಇದೇ ವಿಡಿಯೊ 2023ರ ಡಿಸೆಂಬರ್ 6ರಂದು ‘ಕರಾಚಿ ಎಕ್ಸ್‌ಪೋಸರ್’ ಎನ್ನುವ ಮಾಧ್ಯಮದ ಫೇಸ್‌ಬುಕ್ ಖಾತೆಯಲ್ಲೂ ಅಪ್‌ಲೋಡ್ ಆಗಿದೆ. ‘ಕರಾಚಿಯ ಬೋಟ್ ಬೇಸಿನ್ ಚೌಕಿಯಲ್ಲಿ ಕೆಲವು ಬಾಲಕರು ರೈಲು ಹಳಿಯ ಮೇಲಿನ ನಟ್ಟು, ಬೋಲ್ಟುಗಳನ್ನು ಕಿತ್ತು ಮಾರುತ್ತಿದ್ದಾರೆ, ಇದು ಕಾನೂನುವಿರೋಧಿ ಕೃತ್ಯವಾಗಿದೆ’ ಎಂದು ಅದರಲ್ಲಿ ಉಲ್ಲೇಖಿಸಲಾಗಿದೆ. 2023ರ ಪಾಕಿಸ್ತಾನದ ವಿಡಿಯೊ ಅನ್ನು ಭಾರತದ ವಿಡಿಯೊ ಎಂದು ಹಂಚಿಕೊಳ್ಳುತ್ತಿರುವ ಕೆಲವರು, ಇದಕ್ಕೆ ಕೋಮು ಬಣ್ಣ ಬಳಿಯುತ್ತಿದ್ದಾರೆ. ಈ ಬಗ್ಗೆ ಬೂಮ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ

ದೇವರು ಎಲ್ಲಿದ್ದಾನೆ?

ನುಡಿ ಬೆಳಗು 14

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ರವೀಂದ್ರನಾಥ ಟ್ಯಾಗೋರ್ ಒಂದು ಕಡೆ ಹೇಳ್ತಾರೆ. 'ದೇವರು ಎಲ್ಲಿದ್ದಾನೆ? ದೇವರನ್ನು ಕಗ್ಗತ್ತಲೆಯ ಗರ್ಭದಲ್ಲಿ ಹುಡುಕಬೇಡ. ನಿನ್ನ ಕಣ್ ತೆರೆದು ನೋಡು. ದೇವರು ಗರ್ಭಗುಡಿಯಲ್ಲಿ ಇಲ್ಲ. ಬಿಸಿಲು, ಮಳೆ ಲೆಕ್ಕಿಸದೆ ದುಡಿಯುವ ರೈತನ ನೇಗಿಲೊಳಗೆ ದೇವರಿದ್ದಾನೆ. ಕಷ್ಟಪಟ್ಟು ಕಲ್ಲು ಕಟೆದು ಮಂದಿರ ಮಹಲು ನಿರ್ಮಿಸುವ ಕಲ್ಲುಕುಟುಕನ ಉಳಿಯೊಳಗೆ ದೇವರಿದ್ದಾನೆ’ ಎಂದು ಅವರು ಹೇಳ್ತಾರೆ. ಅದು ದೇವರ ನಿವಾಸ. ಸಮಾಜವನ್ನು ಮೇಲೆತ್ತುವ ಕಾಯಕವೇ ದೇವಪೂಜೆ. ದೀನದಲಿತರಿಗೆ, ಬಡವಬಲ್ಲಿದರಿಗೆ ಅನ್ನ, ಅಕ್ಷರ, ಅರಿವು, ಆಶ್ರಯ, ಅಧ್ಯಾತ್ಮ ದಾಸೋಹ ನಡೆಸುವುದೇ ದೇವ ಪೂಜೆ.

ಒಮ್ಮೆ ಬಸವಣ್ಣನವರಿಗೆ ಯಾರೋ ಕೇಳಿದರಂತೆ. ‘ನೀವು ಕೆಳಗಿದ್ದವರಿಗೆ ಸೇವೆ ಮಾಡಿ ಅಂತೀರಿ. ನಮ್ಮ ನಂಬಿಕೆ ಪ್ರಕಾರ ದೇವರು ಮೇಲಿದ್ದಾನೆ. ಕೆಳಗಿರುವ ಜನರ ಸೇವೆ ಮಾಡಿದರೆ ಮೇಲಿರುವ ದೇವರಿಗೆ ಹ್ಯಾಂಗ ಪ್ರೀತಿ ಬರ್ತದೆ ಹೇಳಿ’ ಎಂದು. ಅದಕ್ಕೆ ಬಸವಣ್ಣ, ‘ಒಂದು ತೆಂಗಿನ ಗಿಡಕ್ಕೆ ಬೇರಿಗೆ ನೀರು ಹಾಕಿದರೆ ತೆಂಗಿನ ಕಾಯಿಯಲ್ಲಿ ಸಿಹಿ ನೀರು ಬರುತ್ತದೆ. ಕಾಯಿಯ ಒಳಗೆ ಯಾರಾದರೂ ಸಿಹಿ ನೀರು ತುಂಬಿಸ್ತಾರೇನು? ಹಾಂಗ ಇದು. ಬೇರಿಗೆ ನೀರು ಹಾಕಿದರೆ ಕಾಯಿಗೆ ಹ್ಯಾಂಗ ಮುಟ್ಟತೈತೋ ಹಾಂಗೆ. ‘ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರನೆರೆದರೆ ಮೇಲೆ ಪಲ್ಲವಿಸಿತ್ತು ನೋಡಾ’ ಅಂತಾರೆ ಅವರು.

ಕುಣಕೇರಿ ಅಂತ ಒಂದು ಊರದ. ಆ ಊರಲ್ಲಿ ಒಂದು ಎಕರೆ ಜಮೀನಿಗೆ ಒಂದು ಕೋಟಿ ರೂಪಾಯಿ ಬೆಲೆ ಇದೆ. ಆ ಊರಿಗೆ ಒಂದು ಸರ್ಕಾರಿ ಶಾಲೆ ಬಂತು. ಆ ಶಾಲೆಗೆ ಎರಡು ಎಕರೆ ಜಮೀನು ಬೇಕಾಗಿತ್ತು. ಊರಿನ ಶ್ರೀಮಂತರು ಯಾರೂ ಶಾಲೆಗೆ ಜಾಗ ಕೊಡಲು ಮುಂದೆ ಬರಲಿಲ್ಲ. ಆ ಊರಲ್ಲಿ ಹುಚ್ಚಮ್ಮ ಅಂತ ಒಬ್ಬ ಹೆಣ್ಮಗಳು ಇದ್ದಳು. ಆಕಿಗೆ ಮಕ್ಕಳಿರಲಿಲ್ಲ. ಗಂಡ ಸತ್ತಿದ್ದ. ಜಮೀನು ಸಿಗದಿದ್ದರೆ ಶಾಲೆ ಇರಲ್ಲ. ಶಾಲೆ ಇರಲ್ಲ ಅಂದರ ಮಕ್ಕಳು ಓದಲ್ಲ ಅಂತೇಳಿ ಅವಳು ತನ್ನ ಎರಡು ಎಕರೆ ಜಮೀನನ್ನು ಶಾಲೆಗೆ ಪುಕ್ಕಟೆಯಾಗಿ ನೀಡಿದಳು. ಈಗ ಆಕಿ ಆ ಶಾಲೆಯಲ್ಲಿಯೇ ಅಡುಗೆ ಮಾಡಕೋತಾ ಇದಾಳೆ. ಇದು ದೇವರು ಮೆಚ್ಚುವ ಕೆಲಸ. ದೇವರು ಎಲ್ಲಿದ್ದಾನ ಎಂದರ ಆಕಿ ಮನದೊಳಗ, ಹೃದಯದೊಳಗ ಇದ್ದಾನ.

ನೂರು ಎಕರೆ ಹೊಲ ಇದ್ದರೂ ಅಲ್ಲಿ ಏನೂ ಬೆಳೆಯೋದಿಲ್ಲ ಅಂತೀವಿ. ಒಬ್ಬ ಮನುಷ್ಯ ಇನ್ನೊಬ್ಬರ ಹೊಲದಲ್ಲಿ ದುಡೀತಿದ್ದ. ಮಾಲಕರು ಅವನಿಗೆ ಎರಡು ಎಕರೆ ಹೊಲ ಕೊಟ್ಟರು. ಗುಡ್ಡದ ಮೇಲಿನ ಹೊಲ ಕೊಟ್ಟಿದ್ದರು. ಅಲ್ಲಿ ನೀರು ಇರಲಿಲ್ಲ. ಅದಕ್ಕೆ ಅವ ಸುರಂಗ ತೆಗೆದ. ಒಂದು ಸುರಂಗ ಅಲ್ಲ, 8–10 ಸುರಂಗ, ನೂರಾರು ಅಡಿ ಸುರಂಗ ತೆಗೆದ. ಅಲ್ಲಿ ನೀರು ಬಂತು. ಅದನ್ನು ಗುಡ್ಡಕ್ಕೆ ಹತ್ತಿಸಿದ. ಆ ಎರಡು ಇಂಚು ನೀರಲ್ಲಿ ಕೃಷಿ ಮಾಡಿದ. ಶ್ರೇಷ್ಠ ಕೃಷಿಕ ಅನಿಸಿಕೊಂಡ. ಅವನಿಗೆ ಭಾರತ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತು. ಅವನೇ ಮಹಾಲಿಂಗ ನಾಯಕ. ದೇವರು ಎಲ್ಲಿದ್ದಾನೆಂದರೆ ರೈತನ ಶ್ರಮದೊಳಗೆ ಇದ್ದಾನೆ. ದೇವರು ಎಷ್ಟೆಲ್ಲಾ ಕೊಟ್ಟಿದ್ದಾನೆ. ಅದನ್ನು ಅನುಭವಿಸುವ ಮನಸ್ಸು ಇಲ್ಲದಿದ್ದರೆ ಏನು ಕೊಟ್ಟರೂ ಅಷ್ಟೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಸೆಪ್ಟೆಂಬರ್ 3, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಅಮಾವಾಸ್ಯೆ ಗಂ. 7-26 ನಕ್ಷತ್ರ: ಪೂರ್ವಫಲ್ಗುನಿ ಗಂ. 27-11 ಯೋಗ: ಸಿದ್ಧ ಗಂ. 19-05 ಕರಣ: ನಾಗ ಗಂ. 7-26, ಸಿಂಹ ಮಾಸದ 17 ನೇ ದಿನ, ಮಳೆನಕ್ಷತ್ರ: ಪೂರ್ವಫಲ್ಗುಣಿ 2.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-23 ಸೂರ್ಯಾಸ್ತ : 06-37
ಮುಸ್ಲಿಂ ದಿನಾಂಕ : 29 ಸಫರ್
ದಿನ ವಿಶೇಷ : ಜೈನ್ ಹಬ್ಬ, ಕೈಲ್ ಮುಹೂರ್ತ (ಕೊಡಗು), ಅದೃಷ್ಟ ಸಂಖ್ಯೆ : 10, 5

ಮೇಷ: ದೊಡ್ಡ ದೊಡ್ಡ ಕಂಪನಿಗಳಲ್ಲಿ ಕೆಲಸ ಹೊಂದಬೇಕೆಂಬ ಆಸೆ ಹೊಂದಿರುವವರು ಸಣ್ಣ ಕಂಪನಿಗಳಲ್ಲಿ ಉದ್ಯೋಗ ಅನುಭವವನ್ನು ಹೊಂದಿದ ನಂತರ ಅಂಥ ಪ್ರಯತ್ನ ಮಾಡುವುದು ಸೂಕ್ತ.

ವೃಷಭ: ಪ್ರದರ್ಶನ ಮಾರಾಟಗಳಿಂದ ಕುಶಲಕರ್ಮಿಗಳು ಅಧಿಕ ಆದಾಯ ಎದುರು ನೋಡಬಹುದು. ರಾಜರಾಜೇಶ್ವರಿಯನ್ನು ಪ್ರಾರ್ಥಿಸಿ ಅಭೀಷ್ಟಗಳನ್ನು ನೆರವೇರಿಸಿಕೊಳ್ಳಿ.

ಮಿಥುನ: ಮನೆ ಜಾಗದ, ಪಿತ್ರಾರ್ಜಿತ ಆಸ್ತಿಯ ಹಂಚಿಕೆಯ ವಿಷಯದಲ್ಲಿ ಕೆಲವು ಬದಲಾವಣೆ ಮಾಡಿಕೊಳ್ಳಬೇಕಾಗುವ ಪರಿಸ್ಥಿತಿ ಬರುವುದು. ಅಪರಿಚಿತರ ಹತ್ತಿರ ಯಾವುದೇ ಗೌಪ್ಯತೆ ಹಂಚಿಕೊಳ್ಳಬೇಡಿ.

ಕರ್ಕಾಟಕ: ಕಾರಣಾಂತರದಿಂದ ಸಿಕ್ಕಂಥ ಬಿಡುವಿನ ಸಮಯವನ್ನು ಸದುಪಯೋಗ ಪಡಿಸಿಕೊಳ್ಳುವಿರಿ. ಜೀವನದ ಹಾದಿ ಬದಲಾಗುವುದನ್ನು ಕಾಣುವಿರಿ. ಆಲೋಚನೆಯಂತೆ ನೂತನ ಮನೆ ಕೊಳ್ಳಲು ಹಣದ ವ್ಯವಸ್ಥೆಯಾಗುವುದು.

ಸಿಂಹ: ಬೆಲೆಬಾಳುವ ವಸ್ತುವಿನ ಖರೀದಿಯಿಂದ ತಾಯಿ ಅಥವಾ ಹಿರಿಯರು ಮುನಿಸಿಕೊಳ್ಳುವರು. ದಾಯಾದಿ ಕಲಹಗಳನ್ನು ಬಿಟ್ಟು ರಾಜಿ ಮಾಡಿ ಕೊಳ್ಳುವ ಮನೋಭಾವಕ್ಕೆ ಬಂದಾರು. ಪರ್ವತಾರೋಹಣ ಮಾಡುವ ಸಾಧ್ಯತೆ ಇದೆ.

ಕನ್ಯಾ: ಇದ್ದಕ್ಕಿದ್ದ ಹಾಗೆ ನಿಮ್ಮ ಮೇಲೆ ಪ್ರೀತಿಯನ್ನು ತೋರಿಸಲು ಶುರು ಮಾಡಿದ ನಂತರ ಬುದ್ಧಿಯು ಕಪಟ ಎಂಬುದನ್ನು ಅರಿಯಬೇಕು. ಪ್ರವಾಸದಿಂದ ಅನಿರೀಕ್ಷಿತವಾದ ಲಾಭದ ಅನುಭವ ಉಂಟಾಗುವುದು.

ತುಲಾ: ವೃದ್ಧರಿಗೆ ಬಿಡುವಿಲ್ಲದ ಅಭ್ಯಾಸದ ಜೊತೆಗೆ ಉನ್ನತ ಜವಾಬ್ದಾರಿ ಸ್ಥಾನಕ್ಕೆ ವರ್ಗಾವಣೆಯಾಗುವುದು. ಜೀವನದ ವಿಶೇಷ ದಿನದ ಪ್ರಯುಕ್ತವಾಗಿ ವೃದ್ಧರ ಸೇವೆ ಮಾಡಿ. ಭೂ ವ್ಯವಹಾರದಲ್ಲಿ ಉತ್ತಮ ಲಾಭವಿದೆ.

ವೃಶ್ಚಿಕ: ಲೇವಾದೇವಿ ವ್ಯವಹಾರ ನಡೆಸುವವರಿಗೆ ನಷ್ಟ ಸಂಭವಿಸಿ ಹಿನ್ನಡೆ ಕಾಣುವಂತಾಗಲಿದೆ. ನಂಬಿಕೆ ಇಟ್ಟು ಮಾಡಿದಂಥ ಉಪಕಾರವನ್ನು ಮರೆಯಬೇಡಿ.

ಧನು: ಗೃಹೋಪಯೋಗಿ ವಸ್ತುಗಳನ್ನು ಕೊಳ್ಳುವ ಬಗ್ಗೆ ಪತ್ನಿ ಮತ್ತು ಮಕ್ಕಳೊಂದಿಗೆ ಚರ್ಚಿಸುವಿರಿ. ರಾಜಕೀಯವಾಗಿ ಪ್ರಬಲಗೊಳ್ಳುವ ಅವಕಾಶಗಳು ಈ ದಿನದಂದು ಹೆಚ್ಚಲಿದೆ. ಧಾರ್ಮಿಕ ಕಾರ್ಯಕ್ಕೆ ಹಣವ್ಯಯವಾಗುವುದು.

ಮಕರ: ಆಶಾವಾದ ಮತ್ತು ಧನಾತ್ಮಕ ವರ್ತನೆ, ಅಭಿವೃದ್ಧಿಯ ಹೆಜ್ಜೆಗಳು ಸುತ್ತಮುತ್ತಲಿನ ಜನರ ಕಣ್ಣನ್ನು ಕೆಂಪಾಗಿಸುತ್ತವೆ. ರಿಯಾಯಿತಿಯ ವಸ್ತ್ರ ಖರೀದಿಯಿಂದ ಹೆಚ್ಚು ಹಣವನ್ನು ಉಳಿತಾಯ ಮಾಡುವಿರಿ.

ಕುಂಭ: ಆರ್ಥಿಕ ಸ್ಥಿತಿಯಲ್ಲಿ ಯಾವುದೇ ತಾಪತ್ರಯಗಳಿಲ್ಲದೆ ವ್ಯಾಪಾರ ಅಭಿವೃದ್ಧಿಯಾಗಲಿದೆ. ಬಟ್ಟೆ ವ್ಯಾಪಾರಿಗಳು ರಿಯಾಯಿತಿ ಮಾರಾಟಗಳಿಂದ ಹೆಚ್ಚಿನ ಲಾಭವನ್ನು ಹೊಂದುವಿರಿ.

ಮೀನ: ವ್ಯಾಪಾರದ ಬಂಡವಾಳ ಹೆಚ್ಚಿಸಿಕೊಳ್ಳುವ ಬಗ್ಗೆ ಯೋಚಿಸಬಹುದು. ಮನೆಯ ಬದಿಯ ಜವಾಬ್ದಾರಿಗಳು ಅಣ್ಣನ ಅನಾರೋಗ್ಯದಿಂದ ಹೆಚ್ಚಾಗುವುದು. ನೌಕರರಿಗೆ ಆರ್ಥಿಕವಾಗಿ ಅನುಕೂಲವಾಗುವುದು.

ಪದಬಂಧ 5792

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆತುರದಿಂದ ಓಡುತ್ತಿರುವ ಕುದುರೆ (3)
3.ರೇಖಾಗಣಿತದಲ್ಲಿ ವರ್ತುಲವನ್ನು ಸಮವಾಗಿ ವಿಭಾಗಿಸುವ ರೇಖೆ (2)
5.ಹತ್ತಿರದಲ್ಲೇ ಕಾಣಿಸಿದ ಅರಳೆ! (2)
6.ಅನುಕರಣೆಗೆ ಯೋಗ್ಯವಾದುದು (3)
7.ಹಲಗೆ ಹತ್ತಿರ ಉಳುವ ಸಾಧನವಿದೆ! (2)
8.ರಾಜ್ಯದ 31ನೇ ಜಿಲ್ಲೆಯಾಗಿ ಉದಯಿಸಿದ ನಗರ (6)
10.ಅನೇಕ ಸುಂದರ ಜಲಪಾತಗಳಿರುವ ಕರಾವಳಿ ಜಿಲ್ಲೆ (6)
14.ಕಾದಾಡುವ ಜಾಗದಲ್ಲಿರುವ ಅರಣ್ಯ (2)
15.ಅವಸರ ಅಥವಾ ಕುತೂಹಲ (3)
16.ದಾರದ ಉಂಡೆ (2)
17.ಗೋಧಿ ಅಕ್ಕಿ ಮುಂತಾದ ಧಾನ್ಯಗಳ ಸಣ್ಣನುಚ್ಚು (2)
18.ಆಣೆಯಿಟ್ಟು ಹೇಳಿದ ಬೆಲೆ! (3)

ಮೇಲಿಂದ ಕೆಳಕ್ಕೆ
1.ಕಳುವಿನಿಂದ ಬದುಕುವ ವ್ಯಕ್ತಿ (4)
2.ಹಂಚಿಕೆಯಿಲ್ಲಿ ತಿರುವುಮುರುವಾಗಿದೆಯಲ್ಲಾ! (4)
4.ನೆಮ್ಮದಿಗೊಂದು ಪರ್ಯಾಯ ಪದ (4)
5.ವಿಷ್ಣು ಶಿವ ಹೆಸರಿನ ಈ ತಾಲೂಕು ತುಂಗಭದ್ರಾ ನದಿ ದಡದಲ್ಲಿದೆ (4)
9.ಯಮನ ಹತ್ತಿರವಿರುವ ಜೋಡಿ! (3)
10.ಶರಣೆ ಅಕ್ಕಮಹಾದೇವಿಯ ಹುಟ್ಟೂರು (4)
11.ಬೆಲೆ ಬಾಳುವ ಮಣಿಗಳನ್ನು ಅಡಗಿಸಿಕೊಂಡಿರುವ ಸಮುದ್ರ (4)
12.ಪೇಢೆಗೆ ಹೆಸರುವಾಸಿಯಾದ ನಗರವು ಉಲ್ಟಾ ಆಗಿದೆ (4)
13.ಕೊಬ್ಬರಿ ಮುಂತಾದವುಗಳನ್ನು ಹೆರೆಯುವ ಸಾಧನ (4)



5791ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ಗಿಡುಗ 4.ಕೇಸರ 6.ಸತತ 8.ಮೂಕಿ 9.ಕಸ 11.ಸಹಗಮನ 12.ಕರ 14.ಹಾರ 15.ತಕಲಿ 17.ನಿಕರ 18.ಲಾಲಸೆ

ಮೇಲಿಂದ ಕೆಳಕ್ಕೆ: 1.ಅಗಸ 2.ಸಂಕೇತ 3.ಗಿರಾಕಿ 5.ರಥಿಕ 7.ತಲೆಗಡಿಕ 8.ಮೂಷಿಕ 10.ಸವಾರ 13.ರಜನಿ 14.ಹಾವಸೆ 15.ತರಗು 16.ಲಿಲಾವು

ಸುಡೊಕು 6177

7		4		5			9	
	2		1		9	6		5
		5		3			1	
					4	1		9
9		1	5	8			4	
4				1		3		7
			3		7			1
	6					7	3	
				2				4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6176 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ಷೇರುಪೇಟೆ ವಹಿವಾಟು 194



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,235
ಇಂದಿನ ಅಂತ್ಯ	25,278
▲	43
ದಿನದ ಗರಿಷ್ಠ	25,333

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹232
ಆರ್‌ಎಸ್‌ಎಸ್-5	₹226
ಗುಡ್ ಲಾಟ್	₹211

(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹510
12 ಕ್ಕೆ	₹70
ಮೈಸೂರು	
100ಕ್ಕೆ	₹512

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹345-547
ದ್ವಿತಳಿ (ಬಿ.ವಿ)	₹366-691

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1560 (1560)
ಸೋಯಾ (ರಿಫೈನ್ಡ್)	₹985 (985)
ಸೂರ್ಯಕಾಂತಿ (ರಿಫೈನ್ಡ್)	₹990 (1000)
ಪಾಮೋಲಿನ್	₹975 (973)

ಮೂರು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿದ ಸೂಚ್ಯಂಕ: ಎಸ್ ಆ್ಯಂಡ್ ಪಿ ಗ್ಲೋಬಲ್ ವರದಿ

ತಯಾರಿಕಾ ವಲಯ: ಬೆಳವಣಿಗೆ ಇಳಿಕೆ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಬೆಳವಣಿಗೆಯು ಆಗಸ್ಟ್‌ನಲ್ಲಿ ಮೂರು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆಯಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆ ವರದಿ ತಿಳಿಸಿದೆ.

ಸೋಮವಾರ ಬಿಡುಗಡೆಯಾಗಿರುವ ಎಚ್‌ಎಸ್‌ಬಿಸಿ ಇಂಡಿಯಾದ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕದ (ಪಿಎಂಐ) ವರದಿ ಪ್ರಕಾರ, ಜುಲೈನಲ್ಲಿ 58.1ರಷ್ಟಿದ್ದ ಸೂಚ್ಯಂಕವು ಆಗಸ್ಟ್‌ನಲ್ಲಿ 57.5ಕ್ಕೆ ಇಳಿದಿದೆ. ಆದರೆ ದೀರ್ಘಾವಧಿಯ ಸರಾಸರಿ 54ಕ್ಕಿಂತ ಹೆಚ್ಚಾಗಿದೆ. ಇದು ಕಾರ್ಯಾಚರಣೆಯಲ್ಲಿನ ಗಣನೀಯ ಸುಧಾರಣೆಯನ್ನು ಸೂಚಿಸುತ್ತದೆ ಎಂದು ತಿಳಿಸಿದೆ.

ತಯಾರಿಕೆ ಮತ್ತು ಮಾರಾಟವು ಜನವರಿಯಿಂದ ನಿಧಾನಗತಿಯ ದರದಲ್ಲಿ ಏರಿಕೆಯಾಗಿದೆ. ಆದರೆ ಸ್ಪರ್ಧೆಯ ಒತ್ತಡಗಳು ಮತ್ತು ಹಣದುಬ್ಬರ ಕಳವಳ ವ್ಯಾಪಾರದ ವಿಶ್ವಾಸವನ್ನು ಕುಂದಿಸಿವೆ ಎಂದು ಸಮೀಕ್ಷೆ ತಿಳಿಸಿದೆ.

ಪಿಎಂಐ ಸೂಚ್ಯಂಕವು 50ಕ್ಕಿಂತ ಮೇಲಿದ್ದರೆ ಸಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ನಕಾರಾತ್ಮಕ ಎಂದು ಅರ್ಥೈಸಲಾಗುತ್ತದೆ.

'ದೇಶದ ತಯಾರಿಕಾ ವಲಯದ ಚಟುವಟಿಕೆ ಆಗಸ್ಟ್‌ನಲ್ಲಿ ಮಂದಗತಿಯಲ್ಲಿ ವಿಸ್ತರಣೆಯಾಗಿದೆ. ತೀವ್ರ ಸ್ಪರ್ಧೆಯೇ ಇಳಿಕೆಗೆ ಕಾರಣ' ಎಂದು ಎಚ್‌ಎಸ್‌ಬಿಸಿಯ ಭಾರತದ ಮುಖ್ಯ ಅರ್ಥಶಾಸ್ತ್ರಜ್ಞ ಪ್ರಂಜುಲ್ ಭಂಡಾರಿ ತಿಳಿಸಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ಹೊಸ ವ್ಯಾಪಾರವು ಕ್ಷಿಪ್ರಗತಿಯಲ್ಲಿ ಏರಿಕೆಯಾಯಿತು. ಆದರೆ, ಬೆಳವಣಿಗೆಯು 7 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿದಿದೆ ಎಂದು ಸಮೀಕ್ಷೆ ಹೇಳಿದೆ. ಜನವರಿ ಆರಂಭದಿಂದ ಹೊಸ ರಫ್ತು ಬೇಡಿಕೆಗಳು ನಿಧಾನವಾಗಿ ಏರಿಕೆಯಾಗಿವೆ. ಬೆಲೆಯಲ್ಲಿನ ಹೆಚ್ಚಳದಿಂದ ತಯಾರಕರು ಅಲ್ಪ ಪ್ರಮಾಣದ ಲಾಭ ಪಡೆದರು ಎಂದು ತಿಳಿಸಿದೆ.

ತಯಾರಿಕಾ ವೆಚ್ಚದ ಏರಿಕೆಯು ನಿಧಾನಗೊಂಡಿತು. ದಾಸ್ತಾನು ಹೆಚ್ಚಿಸಿಕೊಳ್ಳಲು ತಯಾರಕರು ಕಚ್ಚಾ ವಸ್ತುಗಳ ಖರೀದಿ ಪ್ರಮಾಣವನ್ನು ಹೆಚ್ಚಿಸಿಕೊಂಡರು ಎಂದು ಹೇಳಿದ್ದಾರೆ.

ಕೆಲವು ಕಂಪನಿಗಳು ಉದ್ಯೋಗಿಗಳ ಪ್ರಮಾಣವನ್ನು ಕಡಿತಗೊಳಿಸಿದ್ದರಿಂದ ಉದ್ಯೋಗ ಸೃಷ್ಟಿಯು ಇಳಿಕೆಯಾಗಿದೆ. ಆದರೂ, ಒಟ್ಟಾರೆ ಉದ್ಯೋಗ ಬೆಳವಣಿಗೆ ದರವು ದೃಢವಾಗಿದೆ ಎಂದು ಸಮೀಕ್ಷೆ ತಿಳಿಸಿದೆ.

ಸುಮಾರು 400 ತಯಾರಕರಿಗೆ ಕಳುಹಿಸಲಾದ ಪ್ರಶ್ನಾವಳಿಗಳಲ್ಲಿ ನಮೂದಾಗಿರುವ ಪ್ರತಿಕ್ರಿಯೆ ಆಧರಿಸಿ ಈ ವರದಿ ಸಿದ್ಧಪಡಿಸಲಾಗಿದೆ.

2024-25ರ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆ 15 ತಿಂಗಳ ಕನಿಷ್ಠ ಮಟ್ಟಕ್ಕೆ ದಾಖಲಾಗಿದ್ದು, ಶೇ 6.7ರಷ್ಟಾಗಿದೆ. ಕೃಷಿ ಮತ್ತು ಸೇವಾ ವಲಯದಲ್ಲಿನ ಚಟುವಟಿಕೆ ಕಡಿಮೆಯಾಗಿದ್ದರಿಂದ ಪ್ರಗತಿ ಇಳಿಕೆಯಾಗಿದೆ ಎಂದು ಸರ್ಕಾರ ಶುಕ್ರವಾರ ತಿಳಿಸಿತ್ತು.

ತಯಾರಿಕಾ ವಲಯದ ಸೂಚ್ಯಂಕ



ಕಲ್ಲಿದ್ದಲು ಉತ್ಪಾದನೆ ಏರಿಕೆ

ನವದೆಹಲಿ (ಪಿಟಿಐ): 2024-25ರ ಹಣಕಾಸು ವರ್ಷದ ಏಪ್ರಿಲ್‌ನಿಂದ ಆಗಸ್ಟ್‌ವರೆಗೆ ದೇಶದ ಕಲ್ಲಿದ್ದಲು ಉತ್ಪಾದನೆ ಪ್ರಮಾಣ ಶೇ 6ರಷ್ಟು ಏರಿಕೆಯಾಗಿದ್ದು, 38.40 ಕೋಟಿ ಟನ್‌ಗೆ ತಲುಪಿದೆ.

2023-24ರ ಹಣಕಾಸು ವರ್ಷದ ಇದೇ ಅವಧಿಯಲ್ಲಿ 36 ಕೋಟಿ ಟನ್ ಕಲ್ಲಿದ್ದಲು ಉತ್ಪಾದನೆ ಆಗಿತ್ತು ಎಂದು ಕಲ್ಲಿದ್ದಲು ಸಚಿವಾಲಯ ತಿಳಿಸಿದೆ.

ಸಿಐಎಲ್ ಉತ್ಪಾದನೆ ಇಳಿಕೆ: ಸರ್ಕಾರಿ ಸ್ವಾಮ್ಯದ ಭಾರತೀಯ ಕಲ್ಲಿದ್ದಲು ನಿಗಮ (ಸಿಐಎಲ್) ಆಗಸ್ಟ್ ತಿಂಗಳಲ್ಲಿ 4.61 ಕೋಟಿ ಟನ್ ಕಲ್ಲಿದ್ದಲು ಉತ್ಪಾದನೆ ಮಾಡಿದೆ. 2023ರ ಆಗಸ್ಟ್‌ನಲ್ಲಿ 5.23 ಕೋಟಿ ಟನ್ ಕಲ್ಲಿದ್ದಲು ಉತ್ಪಾದನೆಯಾಗಿತ್ತು. ಈ ಉತ್ಪಾದನೆಗೆ ಹೋಲಿಸಿದರೆ ಶೇ 12ರಷ್ಟು ಇಳಿಕೆಯಾಗಿದೆ ಎಂದು ನಿಗಮವು ಷೇರುಪೇಟೆಗೆ ಸೋಮವಾರ ತಿಳಿಸಿದೆ.

ಏಪ್ರಿಲ್‌ನಿಂದ ಆಗಸ್ಟ್ ಅವಧಿಯಲ್ಲಿ 29 ಕೋಟಿ ಟನ್ ಕಲ್ಲಿದ್ದಲು ಉತ್ಪಾದಿಸಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 28 ಕೋಟಿ ಟನ್ ಉತ್ಪಾದನೆಯಾಗಿದೆ.

ದೇಶೀಯ ಕಲ್ಲಿದ್ದಲು ಉತ್ಪಾದನೆಯಲ್ಲಿ ಸಿಐಎಲ್ ಪಾಲು ಶೇ 80ಕ್ಕೂ ಹೆಚ್ಚಿದೆ. 2023-24ರ ಪೂರ್ಣ ಹಣಕಾಸು ವರ್ಷದಲ್ಲಿ 77.36 ಕೋಟಿ ಟನ್ ಕಲ್ಲಿದ್ದಲು ಉತ್ಪಾದನೆಯಾಗಿತ್ತು. 2022-23ರ ಇದೇ ಅವಧಿಯಲ್ಲಿ 70.32 ಕೋಟಿ ಟನ್‌ನಷ್ಟಾಗಿತ್ತು ಎಂದು ತಿಳಿಸಿದೆ.

ಬೆಳ್ಳಿ ದರ ಕೆ.ಜಿಗೆ ₹1,700 ಇಳಿಕೆ

ನವದೆಹಲಿ (ಪಿಟಿಐ): ದೇಶೀಯ ಆಭರಣ ತಯಾರಕರು ಮತ್ತು ಮಾರಾಟಗಾರರಿಂದ ಬೇಡಿಕೆ ಕಡಿಮೆಯಾಗಿದ್ದರಿಂದ ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಸೋಮವಾರ ಇಳಿಕೆಯಾಗಿದೆ.

10 ಗ್ರಾಂ ಚಿನ್ನದ ದರವು ₹250 ಕಡಿಮೆಯಾಗಿ ₹74,100ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹1,700 ಕಡಿಮೆಯಾಗಿ ₹85,500ಕ್ಕೆ ಇಳಿದಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ಹೇಳಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,531 ಡಾಲರ್ (ಅಂದಾಜು ₹2.12 ಲಕ್ಷ) ಮತ್ತು 29 ಡಾಲರ್‌ನಂತೆ (ಅಂದಾಜು ₹2,432) ಮಾರಾಟವಾಗಿದೆ.

'ಎಥೆನಾಲ್ ಬಳಸುವ ವಾಹನ ಮೇಲಿನ ಜಿಎಸ್‌ಟಿ ತಗ್ಗಿಸಿ'

ನವದೆಹಲಿ (ಪಿಟಿಐ): ಎಥೆನಾಲ್ ಬಳಸುವ ವಾಹನಗಳ ಮೇಲಿನ ಜಿಎಸ್‌ಟಿಯನ್ನು ಶೇ 12ಕ್ಕೆ ಇಳಿಸುವ ಕುರಿತು ಜಿಎಸ್‌ಟಿ ಮಂಡಳಿಯಲ್ಲಿ ರಾಜ್ಯಗಳ ಹಣಕಾಸು ಸಚಿವರು ಚರ್ಚಿಸಬೇಕಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ನಿತಿನ್ ಗಡ್ಕರಿ

ಪಳೆಯುಳಿಕೆ ಇಂಧನದ ಆಮದು ಕಡಿಮೆ ಮಾಡುವ ಮತ್ತು ಜೈವಿಕ ಇಂಧನ ಬಳಕೆಯನ್ನು ಉತ್ತೇಜಿಸುವ ಅವಶ್ಯವಿದೆ ಎಂದು ಸೋಮವಾರ ನಡೆದ ಜೈವಿಕ-ಇಂಧನ ಮತ್ತು ಟೆಕ್ ಎಕ್ಸ್‌ಪೋ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಮಗೆ ವಿವಿಧ ರಾಜ್ಯಗಳ ಹಣಕಾಸು ಸಚಿವರಿಂದ ಬೆಂಬಲ ಬೇಕಿದೆ. ನಾವು ಎಲ್ಲಾ ಹಣಕಾಸು ಸಚಿವರಿಗೆ ಮನವರಿಕೆ ಮಾಡಲು ಪ್ರಯತ್ನಿಸುತ್ತೇವೆ ಎಂದು ಕೇಂದ್ರ ಹಣಕಾಸು ಸಚಿವರು ನನಗೆ ಭರವಸೆ ನೀಡಿದ್ದಾರೆ ಎಂದರು.

ಎಥೆನಾಲ್ ಬಳಸುವ ಕಾರುಗಳು ಮತ್ತು ಸ್ಕೂಟರ್ ಮೇಲೆ ಜಿಎಸ್‌ಟಿಯನ್ನು ಕಡಿತಗೊಳಿಸುವ ಪ್ರಸ್ತಾವವನ್ನು ಜಿಎಸ್‌ಟಿ ಮಂಡಳಿಯ ಸಭೆಯಲ್ಲಿ ಮಾಡುವಂತೆ ಈಗಾಗಲೇ ಮಹಾರಾಷ್ಟ್ರದ ಹಣಕಾಸು ಸಚಿವರು ಮತ್ತು ಉತ್ತರಪ್ರದೇಶದ ಮುಖ್ಯಮಂತ್ರಿ ಜೊತೆ ಪ್ರತ್ಯೇಕವಾಗಿ ಮಾತನಾಡಿದ್ದೇನೆ. ಇದರ ಯಶಸ್ಸಿಗೆ ಎಲ್ಲ ರಾಜ್ಯಗಳ ಸಹಕಾರ ಅಗತ್ಯ ಎಂದರು.

ಭಾರತವು ಪ್ರತಿ ವರ್ಷ ₹22 ಲಕ್ಷ ಕೋಟಿ ಮೌಲ್ಯದ ಪಳೆಯುಳಿಕೆ ಇಂಧನವನ್ನು ಆಮದು ಮಾಡಿಕೊಳ್ಳುತ್ತಿದೆ. ಇದು ವಾಯುಮಾಲಿನ್ಯಕ್ಕೆ ಸಂಬಂಧಿಸಿದ ಸಮಸ್ಯೆ ಮಾತ್ರವಲ್ಲದೆ ಆರ್ಥಿಕ ಸಮಸ್ಯೆಯೂ ಆಗಿದೆ. ಆದ್ದರಿಂದ, ತೈಲ ಆಮದು ಪ್ರಮಾಣ ಕಡಿಮೆ ಮಾಡಬೇಕು ಮತ್ತು ಜೈವಿಕ ಇಂಧನ ಬಳಕೆಗೆ ಉತ್ತೇಜನ ನೀಡಬೇಕು ಎಂದರು.

ಈ ವಾಹನಗಳಲ್ಲಿ ಪೆಟ್ರೋಲ್‌ಗೆ ಎಥೆನಾಲ್ ಅಥವಾ ಮಿಥೆನಾಲ್ ಮಿಶ್ರಣ ಮಾಡಿ, ಇಂಧನವಾಗಿ ಬಳಸಲಾಗುತ್ತದೆ. ಪ್ರಸ್ತುತ ಹೈಬ್ರಿಡ್ ವಾಹನಗಳು ಸೇರಿ ಇಂಟರ್‌ನಲ್ ಕಂಬಷನ್ ಎಂಜಿನ್ (ಆಂತರಿಕ ದಹನಕಾರಿ ಎಂಜಿನ್) ವಾಹನಗಳ ಮೇಲೆ ಶೇ 28ರಷ್ಟು ಜಿಎಸ್‌ಟಿ ವಿಧಿಸುತ್ತಿದ್ದರೆ, ವಿದ್ಯುತ್ ಚಾಲಿತ ವಾಹನಗಳ ಮೇಲೆ ಶೇ 5ರಷ್ಟು ಜಿಎಸ್‌ಟಿ ಇದೆ.

ಸುದ್ದಿ 2 ನಿಮಿಷ

ಬಜಾಜ್ ಆಟೊ ಮಾರಾಟ ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ಪ್ರಮುಖ ವಾಹನ ತಯಾರಿಕಾ ಕಂಪನಿ ಬಜಾಜ್ ಆಟೊ, ವಾಹನಗಳ ಸಗಟು ಮಾರಾಟ ಆಗಸ್ಟ್‌ನಲ್ಲಿ ಶೇ 16ರಷ್ಟು ಏರಿಕೆಯಾಗಿದ್ದು, 3.97 ಲಕ್ಷ ವಾಹನಗಳು ಮಾರಾಟವಾಗಿವೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ 3.41 ಲಕ್ಷ ವಾಹನಗಳು ಮಾರಾಟವಾಗಿದ್ದವು ಎಂದು ಕಂಪನಿ ಸೋಮವಾರ ತಿಳಿಸಿದೆ.

ದೇಶೀಯ ಮಾರಾಟದಲ್ಲಿ ಶೇ 24ರಷ್ಟು ಏರಿಕೆಯಾಗಿದ್ದು, 2.53 ಲಕ್ಷ ವಾಹನಗಳು ಮಾರಾಟವಾಗಿವೆ. ರಫ್ತು ಪ್ರಮಾಣ ಶೇ 5ರಷ್ಟು ಹೆಚ್ಚಳವಾಗಿದ್ದು, 1.43 ಲಕ್ಷ ವಾಹನಗಳು ಮಾರಾಟವಾಗಿವೆ ಎಂದು ತಿಳಿಸಿದೆ.

ಮಹೀಂದ್ರ ಮಾರಾಟ ಏರಿಕೆ: ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ 76,555 ವಾಹನಗಳು ಮಾರಾಟವಾಗಿದ್ದು, ಶೇ 9ರಷ್ಟು ಏರಿಕೆಯಾಗಿದೆ.

ದೇಶೀಯ ವಾಹನಗಳ ಮಾರಾಟದಲ್ಲಿ ಶೇ 16ರಷ್ಟು ಹೆಚ್ಚಳವಾಗಿದ್ದು, 43,277 ವಾಹನಗಳು ಮಾರಾಟವಾಗಿವೆ. ರಫ್ತು ಪ್ರಮಾಣ ಶೇ 26ರಷ್ಟು ಏರಿಕೆಯಾಗಿದ್ದು, 3,060 ವಾಹನಗಳು ರಫ್ತಾಗಿವೆ. 21,917 ಟ್ರ್ಯಾಕ್ಟರ್ ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 21,676 ಮಾರಾಟವಾಗಿದ್ದವು.

ತಡೆರಹಿತ ಸಂಚಾರಕ್ಕಾಗಿ ಜಿಐಎಸ್ ಆಧಾರಿತ ಸಾಫ್ಟ್‌ವೇರ್

ನವದೆಹಲಿ (ಪಿಟಿಐ): ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) ರಾಷ್ಟ್ರೀಯ ಹೆದ್ದಾರಿಗಳಲ್ಲಿ ತಡೆರಹಿತ ಸಂಚಾರಕ್ಕಾಗಿ ಜಿಐಎಸ್ ಆಧಾರಿತ ಸಾಫ್ಟ್‌ವೇರ್‌ನೊಂದಿಗೆ ಸುಮಾರು 100 ಟೋಲ್ ಪ್ಲಾಜಾಗಳಲ್ಲಿ ನಿಗಾ ವ್ಯವಸ್ಥೆ ಜಾರಿಗೆ ತರಲಿದೆ ಎಂದು ಎನ್‌ಎಚ್‌ಎಐ ಸೋಮವಾರ ತಿಳಿಸಿದೆ.

ಟೋಲ್ ಕೇಂದ್ರಗಳಲ್ಲಿ ವಾಹನಗಳ ಸಾಲು ನಿಗದಿತ ಮಿತಿಗಿಂತ ಹೆಚ್ಚಿದ್ದಾಗ ನೇರ ನಿಗಾ ವ್ಯವಸ್ಥೆಯು ದಟ್ಟಣೆ ಮತ್ತು ಲೇನ್ ಮಾಹಿತಿಯನ್ನು ನೀಡುತ್ತದೆ. ಈ ಸೇವೆಯನ್ನು ಹಂತ ಹಂತವಾಗಿ ಹೆಚ್ಚಿನ ಟೋಲ್ ಕೇಂದ್ರಗಳಿಗೆ ವಿಸ್ತರಿಸಲಾಗುವುದು ಎಂದು ಹೇಳಿದೆ.

ಟೋಲ್ ಕೇಂದ್ರದ ಹೆಸರು ಮತ್ತು ಸ್ಥಳವನ್ನು ಒದಗಿಸುವುದರ ಜೊತೆಗೆ, ಟೋಲ್ ಕೇಂದ್ರದಲ್ಲಿ ಎಷ್ಟು ಉದ್ದದ ಸಾಲು ಇದೆ, ಕಾಯುವ ಸಮಯ ಮತ್ತು ವಾಹನದ ವೇಗಕ್ಕೆ ಸಂಬಂಧಿಸಿದ ವಿವರಗಳನ್ನು ಸಾಫ್ಟ್‌ವೇರ್ ನೀಡುತ್ತದೆ ಎಂದು ತಿಳಿಸಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-40000
ಹಳತು	40000-47500
ಚಿತ್ರದುರ್ಗ	
ಅಪಿ	46519-46959
ಬೆಟ್ಟೆ	33029-33499
ಕೆಂಪುಗೋಟು	27009-27410
ರಾಶಿ	46030-46469
ಕುಮಟ	
ಚಿಪ್ಪು	23509-27009
ಕೋಕ	6599-24019
ಫ್ಯಾಕ್ಟರಿ	8019-16411
ಹಳೆಚಾಲಿ	37019-39499
ಹೊಸಚಾಲಿ	32269-35199
ಸಾಗರ	
ಬಿಳಿಗೋಟು	14099-24899
ಚಾಲಿ	23599-32799
ಕೋಕ	10199-23099
ಕೆಂಪುಗೋಟು	20786-30199
ರಾಶಿ	29899-48170
ಸಿಪ್ಪೆಗೋಟು	10299-16670
ಶಿವಮೊಗ್ಗ	
ರಾಶಿ	30538-49099
ಸರಕು	58399-71509
ಬೆಟ್ಟೆ	45199-54919
ಗೊರಬಲು	21009-33569
ಸಿದ್ದಾಪುರ	
ಬಿಳಿಗೋಟು	24000-28500
ಚಾಲಿ	31099-34500
ಕೋಕ	22899-28699
ಕೆಂಪುಗೋಟು	18899-18899
ರಾಶಿ	40189-45399
ತಟ್ಟಿಬೆಟ್ಟೆ	27099-30889
ಶಿರಸಿ	
ಬೆಟ್ಟೆ	30102-40521
ಬಿಳಿಗೋಟು	20309-29999
ಚಾಲಿ	32892-36555
ಕೆಂಪುಗೋಟು	12369-18199
ರಾಶಿ	41018-46899
ಯಲ್ಲಾಪುರ	
ಅಪಿ	55777-56799
ಬಿಳಿಗೋಟು	16899-25600
ಚಾಲಿ	30099-36099
ಕೋಕ	4899-16899
ಕೆಂಪುಗೋಟು	16899-25600
ರಾಶಿ	40009-54399
ತಟ್ಟಿಬೆಟ್ಟೆ	26214-38690

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com or
Scan QR code to access booking form

5ನೇ ವರ್ಷದ ಪುಣ್ಯಸ್ಮರಣೆ
ಎಂ. ನಾಗರತ್ನ ಬಿ.ಇ.
ಕಾರ್ಯಪಾಲಕ ಅಭಿಯಂತರರು, (KPCL)
ಭಗವಂತನು ನಿಮ್ಮ ಆತ್ಮಕ್ಕೆ ಶಾಂತಿ ನೀಡಲಿ
ನಿಮ್ಮನ್ನು ಸದಾ ಸ್ಮರಿಸುವವರು
ಪತಿ ಶ್ರೀ ಎಂ. ದಾಸಯ್ಯ, ವಕೀಲರು
ಮಕ್ಕಳಾದ ವರ್ಷಿತ್ ದಾಸ್, KPCL
ಮೇಘನಾ ದಾಸ್ M.Tech
ಹಾಗೂ ಕುಟುಂಬವರ್ಗದವರು

ಚಿರಸ್ಮರಣೆ
ಶ್ರೀ ಎ. ರಾಮಣ್ಣ
ಸಂಹಿತಾ ರಾಮಚಂದ್ರ, ಅನ್ವಿತಾ ರಾಮಚಂದ್ರ

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC,PUC,Degree, ITI ನವರು.18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035277967

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663563555 6364468422

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/- ರಿಂದ 20,000/- ESI,PF ಸೌಲಭ್ಯವಿರುತ್ತದೆ. ಬೆಂಗಳೂರು-76. ಸಂಪರ್ಕಿಸಿ: 9008835841, 9900859248

ಪ್ರವಾಸ

Travel

ಗೌರಿ ಗಣೇಶ ಹಬ್ಬದ ವಿಶೇಷ ರಿಯಾಯಿತಿ 13 ದಿನಗಳ ಯುರೋಪ್ 6 ದಿನಗಳ ಬಾಲಿ. 11 ದಿನಗಳ ವಿಯೆಟ್ನಾಂ ಕಾಂಬೋಡಿಯಾ 7/11 ದಿನಗಳ ಸಿಂಗಪುರ್, ಮಲೇಶಿಯ ಥೈಲ್ಯಾಂಡ್. 6 ದಿನಗಳ ದುಬೈ ಓಮನ್ ಅಬುಧಾಬಿ ಶಾರ್ಜಾ. ಭಟ್ ಟ್ರಾವೆಲ್ಸ್ 9844037295 9844166555

04.11.24 ರಿಂದ ಖಜುರಾಹೊ,ಚಿತ್ರಕೂಟ್, ಪ್ರಯಾಗರಾಜ್, ಅಯೋಧ್ಯ,ಲುಂಬಿನಿ ಮುಕ್ತಿನಾಥ್, ಮನೋಕಾಮನ ಕಟ್ಮಂಡು, ಜನಕಪುರ, ದೇವಘಡ್, ಗಯಾ ವಾರಣಾಸಿ. 8105522123, 9480253807

ದಸರಾ ರಜೆಯಲ್ಲಿ ರಿಯಾಯಿತಿ ದರದಲ್ಲಿ ವಿದೇಶ ಪ್ರವಾಸ. 7/11 ದಿನಗಳ ಸಿಂಗಾಪುರ್, ಮಲೇಶಿಯಾ, ಥೈಲ್ಯಾಂಡ್. 6ದಿನಗಳ ಶ್ರೀಲಂಕಾ ಪ್ರವಾಸ. 6 ದಿನಗಳ ದುಬೈ ಅಬುದಾಬಿ ಪ್ರವಾಸ. 6 ದಿನಗಳ ಬಾಲಿ. 18 ದಿನಗಳ ಯುಕೆ ಮತ್ತು ಯುರೋಪ್. ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. 9900080793, 9900080796, 080-26617178

16.09.2024 12ದಿನಗಳು ದೆಹಲಿ,ಬದ್ರಿನಾಥ್ ಕೇದಾರನಾಥ ಗಂಗೋತ್ರಿ,ಯಮುನೋತ್ರಿ (ಕೆಲವೇ ಸೀಟುಗಳುವೆ) 42000/ `03.10.2024 6ದಿನಗಳು`ಕಾಶಿ, ಅಯೋಧ್ಯಾ`ಗಯಾ, ಅಲಹಾಬಾದ್`32,000/ ಸೆಪ್ಟೆಂಬರ್`ಅಕ್ಟೋಬರ್`ನಲ್ಲಿ ಅಂಡಮಾನ್`ಹವಳದ್ವೀಪ. ''ಶ್ರೀಸಾಯಿ`ರಾಘವೇಂದ್ರ ಟ್ರಾವೆಲ್ಸ್'' 9739847429/ 9845560219

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 6/12 ದಿನಗಳು. 05.11.2024 ಶಿರಡಿ ಪಂಡರಾಪುರ ಅಜಂತ ಎಲ್ಲೋರ ಇತ್ಯಾದಿ.19.11.2024 ಅಹೋಬಲ ನವನರಸಿಂಹ ಮಂತ್ರಾಲಯ ಶ್ರೀಶೈಲ ಇತ್ಯಾದಿ. 03.12.2024 ಸೋಮನಾಥ ನಾಗೇಶ್ವರ ದ್ವಾರಕ ಉಜ್ಜಯಿನಿ ಮಹಾಕಾಳೇಶ್ವರ ಓಂಕಾರೇಶ್ವರ್ ಇತ್ಯಾದಿ. 9448390735, 9449721678

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036
*Conditions apply

ಶೇ 97.96ರಷ್ಟು ನೋಟು ವಾಪಸ್

ಮುಂಬೈ (ಪಿಟಿಐ): ₹2 ಸಾವಿರ ಮುಖಬೆಲೆಯ ಶೇ 97.96ರಷ್ಟು ನೋಟುಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿವೆ. ಜನರ ಬಳಿ ₹7,261 ಕೋಟಿ ಮೌಲ್ಯದ ನೋಟುಗಳಷ್ಟೇ ಇವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸೋಮವಾರ ತಿಳಿಸಿದೆ.

₹2 ಸಾವಿರ ಮುಖಬೆಲೆಯ ಒಟ್ಟು ₹3.56 ಲಕ್ಷ ಕೋಟಿ ಮೌಲ್ಯದ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯುವುದಾಗಿ 2023ರ ಮೇ 19ರಂದು ಆರ್‌ಬಿಐ ಘೋಷಿಸಿತ್ತು.

ಬ್ಯಾಂಕ್‌ಗಳಲ್ಲಿ ಠೇವಣಿ ಇಡುವ ಹಾಗೂ ಬೇರೆ ಮುಖಬೆಲೆಯ ನೋಟುಗಳೊಂದಿಗೆ ಬದಲಾಯಿಸಿಕೊಳ್ಳುವುದಕ್ಕೆ ಆರ್‌ಬಿಐನ 19 ಪ್ರಾದೇಶಿಕ ಕಚೇರಿಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.

ಮುಂಬೈ ಧಾರಣೆ

ಶೇಂಗಾ
02-09-2024

ಜಾವಾ 70/80(ಹೊಸ)	11700-11800
ಜಾವಾ 80/90(ಹೊಸ)	11100-11200
ದಪ್ಪ ಮಧ್ಯಪ್ರದೇಶ(ಹೊಸ)	9500-9600
ದಪ್ಪ ಗುಜರಾತ್(ಹೊಸ)	10300-10400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1570 (1570)
ಒಂದು ವಾರದ ಡೆಲಿವರಿ	1565 (1565)
ಪಾಮ್ ವಾರದ ಡೆಲಿವರಿ	973 (971)
ಸೂರ್ಯಕಾಂತಿ ಎಣ್ಣೆ ಕಚ್ಚಾ	925 (935)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹71,150 (71,350)
ಬೆಳ್ಳಿ ಕೆ.ಜಿ ₹82,700 (84,000)
ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ವಿಮಾನಯಾನ ಸೇರಿದಂತೆ ಹಲವು ಸೇವೆಗಳಲ್ಲಿ ವ್ಯತ್ಯಯ

ಇಸ್ರೇಲ್‌ನಲ್ಲಿ ಸಾರ್ವತ್ರಿಕ ಮುಷ್ಕರ

ಜೆರುಸಲೇಂ (ಎಪಿ): ಗಾಜಾದಲ್ಲಿರುವ ಒತ್ತೆಯಾಳುಗಳನ್ನು ಮರಳಿ ಕರೆತರಲು ವಿಫಲವಾಗಿರುವ ಸರ್ಕಾರದ ವಿರುದ್ಧ ಇಸ್ರೇಲ್‌ನಲ್ಲಿ ನಡೆದ ಸಾರ್ವತ್ರಿಕ ಮುಷ್ಕರದ ಪರಿಣಾಮ ಪ್ರಮುಖ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸೇರಿದಂತೆ ಹಲವು ಪ್ರದೇಶಗಳು ಸೋಮವಾರ ಸ್ತಬ್ದವಾಗಿದ್ದವು.

ಆದರೆ ಕೆಲ ಪ್ರದೇಶಗಳಲ್ಲಿ ಮುಷ್ಕರಕ್ಕೆ ಯಾವುದೇ ಬೆಂಬಲ ವ್ಯಕ್ತವಾಗದಿರುವುದು ಅಲ್ಲಿನ ರಾಜಕೀಯ ಭಿನ್ನಾಭಿಪ್ರಾಯಕ್ಕೆ ಸಾಕ್ಷಿಯಾಗಿತ್ತು.

ಇಸ್ರೇಲ್‌ನ ಬಹುದೊಡ್ಡ ವ್ಯಾಪಾರ ಒಕ್ಕೂಟ 'ಹಿಸ್ತದ್ರತ್' ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿತ್ತು. ಬ್ಯಾಂಕ್, ಆರೋಗ್ಯ ಸೇವೆ ಮತ್ತು ದೇಶದ ಪ್ರಮುಖ ವಿಮಾನ ನಿಲ್ದಾಣ ಸೇರಿದಂತೆ ಮುಖ್ಯ ಆರ್ಥಿಕ ವಲಯಗಳಲ್ಲಿ ವ್ಯತ್ಯಯ ಉಂಟುಮಾಡುವ ಗುರಿಯನ್ನು ಹೊಂದಿತ್ತು.

ಗಾಜಾದಲ್ಲಿ ಆರು ಜನ ಒತ್ತೆಯಾಳುಗಳು ಮೃತಪಟ್ಟ ಬೆನ್ನಲ್ಲೆ ಇಸ್ರೇಲ್‌ನ ಸಾವಿರಾರು ಜನ ಭಾನುವಾರ ಬೀದಿಗಿಳಿದು ಆಕ್ರೋಶ ವ್ಯಕ್ತಪಡಿಸಿದ್ದರು. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ವಿರುದ್ಧ ಕಿಡಿಕಾರಿದ ಮೃತರ ಕುಟುಂಬಸ್ಥರು ಮತ್ತು ಸಾರ್ವಜನಿಕರು, 'ಸುಮಾರು 11 ತಿಂಗಳಿನಿಂದ ನಡೆಯುತ್ತಿರುವ ಯುದ್ಧವನ್ನು ಕೊನೆಗೊಳಿಸುವ ಬಗ್ಗೆ ಹಮಾಸ್‌ನೊಂದಿಗೆ ಒಪ್ಪಂದ ಮಾಡಿಕೊಂಡಿದ್ದರೆ ಅವರನ್ನು ಬದುಕಿಸಬಹುದಿತ್ತು' ಎಂದರು.

ಸೇನೆಯ ಮೂಲಕ ಹಮಾಸ್ ಮೇಲೆ ಒತ್ತಡ ಹೇರುವ ನೆತನ್ಯಾಹು ಅವರ ಕಾರ್ಯತಂತ್ರವನ್ನು ಹಲವರು ಬೆಂಬಲಿಸಿದ್ದಾರೆ. 'ಇದರಿಂದಾಗಿ ಹಮಾಸ್ ಬಂಡುಕೋರರು ಇಸ್ರೇಲ್ ಬೇಡಿಕೆಗಳನ್ನು ಒಪ್ಪಿಕೊಳ್ಳುತ್ತಾರೆ. ನಮ್ಮವರ ರಕ್ಷಣೆಯಾಗುವುದರ ಜೊತೆಗೆ ಬಂಡುಕೋರರ ಶಮನವಾಗುತ್ತದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಗಾಜಾದಲ್ಲಿರುವ ಒತ್ತೆಯಾಳುಗಳನ್ನು ಮರಳಿ ಕರೆತರಲು ವಿಫಲವಾಗಿರುವ ಸರ್ಕಾರದ ವಿರುದ್ಧ ಇಸ್ರೇಲ್‌ನಲ್ಲಿ ಸೋಮವಾರ ಸಾರ್ವತ್ರಿಕ ಮುಷ್ಕರ ನಡೆಯಿತು — ಎಎಫ್‌ಪಿ ಚಿತ್ರ

ಹುಥಿ ಬಂಡುಕೋರರಿಂದ ಶಂಕಿತ ದಾಳಿ

ದುಬೈ: 'ಕೆಂಪು ಸಮುದ್ರದಲ್ಲಿ ಸೋಮವಾರ ಹಡಗೊಂದರ ಮೇಲೆ ದಾಳಿ ನಡೆದಿದ್ದು, ಯೆಮೆನ್‌ನ ಹುಥಿ ಬಂಡುಕೋರರು ಈ ಕೃತ್ಯ ಎಸಗಿರುವ ಶಂಕೆ ಇದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ. 'ಎರಡು ವೈಮಾನಿಕ ಸಾಧನಗಳು ಹಡಗಿನ ಮೇಲೆ ದಾಳಿ ನಡೆಸಿದ್ದು, ಹಡಗಿನ ಬಳಿ ಇನ್ನೊಂದು ಸ್ಫೋಟಕ ಪತ್ತೆಯಾಗಿದೆ. ಹಡಗಿನಲ್ಲಿದ್ದವರಿಗೆ ಯಾವುದೇ ಹಾನಿಯಾಗಿಲ್ಲ. ಪ್ರಯಾಣ ಮುಂದುವರಿದಿದೆ' ಎಂದು ಬ್ರಿಟನ್ ಸಾಗರ ವ್ಯಾಪಾರ ಕೇಂದ್ರ ತಿಳಿಸಿದೆ. ಹುಥಿ ಬಂಡುಕೋರರು ದಾಳಿಯ ಬಗ್ಗೆ ಪ್ರತಿಕ್ರಿಯಿಸಿಲ್ಲ. ಆದರೆ, ಇತ್ತೀಚೆಗೆ ಬಂಡುಕೋರರು ಇಸ್ರೇಲ್, ಅಮೆರಿಕ ಮತ್ತು ಬ್ರಿಟನ್‌ಗೆ ಸಂಬಂಧಿಸಿದ ಹಡಗುಗಳ ಮೇಲೆ ಪದೇ ಪದೇ ದಾಳಿ ನಡೆಸುತ್ತಿದ್ದಾರೆ.

ಮುಷ್ಕರ ರಾಜಕೀಯ ಪ್ರೇರಿತ ಎಂದ ಕೋರ್ಟ್

ಟೆಲ್ ಅವಿವ್ (ಎಪಿ): ಗಾಜಾ ಒತ್ತೆಯಾಳುಗಳ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ಸರ್ಕಾರದ ಪರ ನಿಂತಿರುವ ಇಸ್ರೇಲ್‌ನ ಕಾರ್ಮಿಕ ನ್ಯಾಯಾಲಯವು ಸರ್ಕಾರದ ವಿರುದ್ಧ ನಡೆಸುತ್ತಿರುವ ಮುಷ್ಕರ ಅಂತ್ಯಗೊಳಿಸುವಂತೆ ಆದೇಶಿಸಿದ್ದು, ಮುಷ್ಕರ ರಾಜಕೀಯ ಪ್ರೇರಿತವಾಗಿದೆ ಎಂದಿದೆ.

ಬಾಂಗ್ಲಾ: ತುರ್ತು ಕೆಲಸಕ್ಕೆ ಭಾರತೀಯ ವೀಸಾ

ಢಾಕಾ(ಪಿಟಿಐ): ಅಗತ್ಯವಿರುವವರಿಗೆ ತುರ್ತು ವೈದ್ಯಕೀಯ ಹಾಗೂ ವಿದ್ಯಾರ್ಥಿ ವೀಸಾಗಳನ್ನು ಸೀಮಿತ ಸಂಖ್ಯೆಯಲ್ಲಿ ನೀಡಲು ಬಾಂಗ್ಲಾದ ಪ್ರಮುಖ ನಗರಗಳಲ್ಲಿರುವ ಭಾರತೀಯ ವೀಸಾ ಕೇಂದ್ರಗಳು ಮುಂದಾಗಿವೆ.

ಢಾಕಾ, ಚಟ್ಟೋಗ್ರಾಮ, ರಾಜಶಾಹಿ, ಸಿಲ್ಹೆಟ್ ಮತ್ತು ಖುಲ್ನಾದಲ್ಲಿ ಈ ಸೇವೆ ಆರಂಭವಾಗಿದೆ.

'ಬಾಂಗ್ಲಾದ ವಿದ್ಯಾರ್ಥಿಗಳು ಹಾಗೂ ಕಾರ್ಮಿಕರು ವಿದೇಶಕ್ಕೆ ಪ್ರಯಾಣಿಸಲೇಬೇಕಾದಂತಹ ತುರ್ತು ಸಂದರ್ಭಗಳಲ್ಲಿ ಸೀಮಿತ ಸಂಖ್ಯೆಯಲ್ಲಿನ ವೀಸಾಗಳನ್ನು ಹೆಚ್ಚುವರಿಯಾಗಿ ಈ ಐದು ಕೇಂದ್ರಗಳು ಒದಗಿಸಲಿವೆ. ಇದಕ್ಕಾಗಿಯೇ ಭಾರತದ ರಾಯಭಾರ ಕಚೇರಿಯಿಂದ ವೀಸಾ ವಿತರಿಸುವ ಅನುಮತಿಯನ್ನು ಪಡೆಯಲಾಗಿದೆ' ಎಂದು ಬಾಂಗ್ಲಾದೇಶದಲ್ಲಿರುವ ಭಾರತೀಯ ವೀಸಾ ಅರ್ಜಿ ಕೇಂದ್ರ (ಐವಿಎಸಿ) ಹೇಳಿಕೆಯಲ್ಲಿ ತಿಳಿಸಿದೆ.

'ಐವಿಎಸಿ ತನ್ನ ಸಾಮಾನ್ಯ ಕಾರ್ಯಾಚರಣೆಗಳನ್ನು ಪುನರಾರಂಭಿಸುವವರೆಗೆ ಈ ಸೇವೆಗಳು ಸೀಮಿತವಾಗಿರಲಿವೆ' ಎಂದಿದೆ.

ವಿನಿಮಯ ದರ

$	ಡಾಲರ್	83.91
£	ಪೌಂಡ್	110.23
€	ಯುರೊ	92.90
¥	ಯೆನ್ (100ಕ್ಕೆ)	57

ಮಾತುಕತೆ ಪುನರಾರಂಭಕ್ಕೆ ಸಿದ್ಧ: ಬಾಂಗ್ಲಾ

ಢಾಕಾ (ಪಿಟಿಐ): ತೀಸ್ತಾ ನದಿ ನೀರು ಹಂಚಿಕೆ ಒಪ್ಪಂದಕ್ಕೆ ಸಂಬಂಧಿಸಿದಂತೆ ಭಾರತದ ಜತೆ ಮಾತುಕತೆ ಪುನರಾರಂಭಿಸಲು ಬಾಂಗ್ಲಾದೇಶ ಬಯಸಿದೆ ಎಂದು ಮಧ್ಯಂತರ ಸರ್ಕಾರದ ಜಲಸಂಪನ್ಮೂಲ ಸಲಹೆಗಾರರಾದ ಸಯೀದಾ ರಿಜ್ವಾನಾ ಹಸನ್ ಸೋಮವಾರ ಹೇಳಿದ್ದಾರೆ.

ತೀಸ್ತಾ ಒಪ್ಪಂದ ಮತ್ತು ನೀರು ಹಂಚಿಕೆಗೆ ಸಂಬಂಧಿಸಿದ ಇತರ ವಿವಾದಗಳನ್ನು ಮಾತುಕತೆಯ ಮೂಲಕ ಸೌಹಾರ್ದಯುತವಾಗಿ ಪರಿಹರಿಸಲಾಗುವುದು ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು. ಈ ವಿವಾದಗಳು ಮಾತುಕತೆಯ ಮೂಲಕ ಬಗೆಹರಿಯದಿದ್ದರೆ, ಬಾಂಗ್ಲಾದೇಶವು ಅಂತರರಾಷ್ಟ್ರೀಯ ಕಾನೂನುಗಳ ಮೊರೆ ಹೋಗಬಹುದು ಎಂದರು.

'ತೀಸ್ತಾ ನದಿ ನೀರು ಹಂಚಿಕೆ ವಿಷಯದ ಬಗ್ಗೆ ನಾನು ಬಾಂಗ್ಲಾದಲ್ಲಿರುವ ಸಂಬಂಧಪಟ್ಟ ಎಲ್ಲ ಭಾಗೀದಾರರೊಂದಿಗೆ ಚರ್ಚಿಸಿದ್ದೇನೆ. ಈ ಕುರಿತ ಒಪ್ಪಂದ ಅಂತಿಮಗೊಳಿಸಲು ಮಾತುಕತೆ ಪುನರಾರಂಭಿಸಬೇಕೆಂಬ ತೀರ್ಮಾನಕ್ಕೆ ಬಂದಿದ್ದೇವೆ. ಗಂಗಾನದಿ ನೀರು ಹಂಚಿಕೆ ಕುರಿತ ಒಪ್ಪಂದದ ಅವಧಿ ಇನ್ನೆರಡು ವರ್ಷಗಳಲ್ಲಿ ಪೂರ್ಣಗೊಳ್ಳಲಿದ್ದು, ಆ ಬಗ್ಗೆಯೂ ನಾವು ಮಾತುಕತೆ ಆರಂಭಿಸಬೇಕಿದೆ' ಎಂದು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದರು.

'ಎರಡೂ ದೇಶಗಳ ಸಮ್ಮತಿಯ ಮೇರೆಗೆ ತೀಸ್ತಾ ನದಿ ನೀರು ಹಂಚಿಕೆ ಒಪ್ಪಂದ ಕರಡು ಸಿದ್ಧಪಡಿಸಲಾಗಿದೆ. ಆದರೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ವಿರೋಧ ವ್ಯಕ್ತಪಡಿಸಿದ್ದರಿಂದ ಒಪ್ಪಂದವನ್ನು ಅಂತಿಮಗೊಳಿಸಿ, ಸಹಿ ಹಾಕಲು ಸಾಧ್ಯವಾಗಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದ್ದರಿಂದ ಮಾತುಕತೆ ಎಲ್ಲಿ ನಿಂತಿದೆಯೋ, ಅಲ್ಲಿಂದ ಪುನರಾರಂಭಿಸಲು ಭಾರತವನ್ನು ಒತ್ತಾಯಿಸುತ್ತೇವೆ' ಎಂದಿದ್ದಾರೆ.

17 ಮಾಜಿ ಸಚಿವರಿಗೆ ನಿರ್ಬಂಧ

ಢಾಕಾ (ಪಿಟಿಐ): ಭ್ರಷ್ಟಾಚಾರ ಆರೋಪದ ಹಿನ್ನೆಲೆಯಲ್ಲಿ ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಕ್ ಹಸೀನಾ ಅವರ ಸರ್ಕಾರದ ಅವಧಿಯಲ್ಲಿ ಇದ್ದ 9 ಸಂಸದರು, 17 ಮಾಜಿ ಸಚಿವರು ದೇಶದಿಂದ ಹೊರಹೋಗದಂತೆ ನ್ಯಾಯಾಲಯವೊಂದು ನಿರ್ಬಂಧ ಹೇರಿದೆ.

ಇವರೆಲ್ಲ ಭ್ರಷ್ಟಾಚಾರದಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಿ ದೇಶದ ಭ್ರಷ್ಟಾಚಾರ ನಿಗ್ರಹ ಆಯೋಗ ಅರ್ಜಿ ಸಲ್ಲಿಸಿರುವುದರಿಂದ ನ್ಯಾಯಾಲಯವು ಈ ಕ್ರಮ ಕೈಗೊಂಡಿದೆ. ಮಾಜಿ ವಿದೇಶಾಂಗ ಸಚಿವ ಮೊಹಮ್ಮದ್ ಹಸನ್ ಮಹ್ಮುದ್ ಅವರೂ ಈ 17 ಜನರ ಪಟ್ಟಿಯಲ್ಲಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚಕ ಪ್ರಕಟಣೆಗಳನ್ನು ಬಯಸುವುದಾದರೆ, ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
www.homepages.deccanherald.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಭಾರತಕ್ಕೆ ಒಂದೇ ದಿನ ಎಂಟು ಪದಕ • ಬ್ಯಾಡ್ಮಿಂಟನ್‌ನಲ್ಲಿ ಕನ್ನಡಿಗ ಸುಹಾಸ್‌ಗೆ ಸತತ ಎರಡನೇ ಬೆಳ್ಳಿ • ನಿಷಾದ್, ಯೋಗೇಶ್, ತುಳಸಿಮತಿ ಅಮೋಘ ಸಾಧನೆ

ಪ್ಯಾರಾಲಿಂಪಿಕ್ಸ್: ಸುಮಿತ್, ನಿತೇಶ್‌ಗೆ ಸ್ವರ್ಣ

ಪ್ಯಾರಿಸ್ (ಪಿಟಿಐ): ಭಾರತದ ನಿತೇಶ್ ಕುಮಾರ್ ಅವರು ಮೂರು ಗೇಮ್‌ಗಳ ಸೆಣಸಾಟದಲ್ಲಿ ಬ್ರಿಟನ್‌ನ ಡೇನಿಯಲ್ ಬೆಥೆಲ್ ಅವರನ್ನು ಸೋಲಿಸಿ ಪ್ಯಾರಾಲಿಂಪಿಕ್ಸ್ ಪುರುಷರ ಸಿಂಗಲ್ಸ್ ಎಸ್‌ಎಲ್3 ಬ್ಯಾಡ್ಮಿಂಟನ್ ನಲ್ಲಿ ಸೋಮವಾರ ಚಿನ್ನ ಗೆದ್ದುಕೊಂಡರು. ಜಾವೆಲಿನ್ ಥ್ರೋ ತಾರೆ ಸುಮಿತ್ ಅಂಟಿಲ್ ಅವರು ದಾಖಲೆಯೊಂದಿಗೆ ಚಿನ್ನ ಉಳಿಸಿಕೊಂಡರು. ಇದರ ಜೊತೆಗೆ ಭಾರತದ ಸ್ಪರ್ಧಿಗಳು ಆರನೇ ದಿನ ಎಂಟು ಪದಕಗಳನ್ನು ಬಾಚಿಕೊಂಡು ಬೆಳಕಿನ ನಗರಿಯಲ್ಲಿ ಮಿಂಚಿದರು.

ಭಾನುವಾರ ತಡರಾತ್ರಿ (ಭಾರತದ ಕಾಲಮಾನ) ನಿಷಾದ್ ಕುಮಾರ್ ಹೈಜಂಪ್ ಟಿ27 ವಿಭಾಗದಲ್ಲಿ ಸತತ ಎರಡನೇ ಬೆಳ್ಳಿ ಗೆದ್ದಿದ್ದರು. ಸೋಮವಾರ ಎರಡು ಚಿನ್ನ, ಮೂರು ಬೆಳ್ಳಿ, ಎರಡು ಕಂಚಿನ ಪದಕ ಭಾರತದ ಕ್ರೀಡಾಪಟುಗಳ ಪಾಲಾಯಿತು. ಇವು ಗಳಲ್ಲಿ ನಾಲ್ಕು ಬ್ಯಾಡ್ಮಿಂಟನ್‌ನಲ್ಲೇ ಬಂದವು.

ಹರಿಯಾಣದ 29 ವರ್ಷ ವಯಸ್ಸಿನ ನಿತೇಶ್ ಅಮೋಘವಾಗಿ ಹೋರಾಡಿ 21–14, 18–21, 23–21 ರಿಂದ ಬೆಥೆಲ್ ಅವರನ್ನು 1 ಗಂಟೆ 20 ನಿಮಿಷಗಳ ಸೆಣಸಾಟದಲ್ಲಿ ಹಿಮ್ಮೆಟ್ಟಿಸಿದರು. ಬ್ರಿಟನ್‌ನ ಸ್ಪರ್ಧಿ, ಟೋಕಿಯೊ ಕ್ರೀಡೆಗಳಲ್ಲೂ ಬೆಳ್ಳಿ ವಿಜೇತರಾಗಿದ್ದರು. ತೀವ್ರ ಪ್ರಮಾಣದ ಕಾಲಿನ ಊನಕ್ಕೆ ಒಳಗಾದ ಆಟಗಾರರು ಎಸ್‌ಎಲ್3 ವಿಭಾಗ ದಲ್ಲಿ ಸ್ಪರ್ಧಿಸಲು ಅರ್ಹರಾಗಿದ್ದಾರೆ.

ಸುಮಿತ್ ಅಂಟಿಲ್
ಪಿಟಿಐ ಚಿತ್ರ

2019ರಲ್ಲಿ ವಿಶಾಖಪಟ್ಟಣದಲ್ಲಿ ನಡೆದ ರೈಲು ಅಪಘಾತದಲ್ಲಿ ನಿತೇಶ್ ಅವರ ಕಾಲು ಜಜ್ಜಿಹೋಗಿತ್ತು. ಆದರೆ ಇದರಿಂದ ಅವರ ಮನೋಬಲ ಕುಗ್ಗಲಿಲ್ಲ. ಅವರಿಗೆ ಆಗ 15 ವರ್ಷ. ಈ ನಿಟ್ಟಿನಲ್ಲಿ ಮಂಡಿಯ ಐಐಟಿ ಪದವೀಧರನ ಚಿನ್ನದ ಪಯಣದ ಹಿಂದಿನ ಪರಿಶ್ರಮ ಸಾಮಾನ್ಯದ್ದಾಗಿರಲಿಲ್ಲ.

ಸ್ಫೂರ್ತಿಯ ಸೆಲೆ: ನೌಕಾಪಡೆ ಅಧಿಕಾರಿಯ ಪುತ್ರನಾಗಿರುವ ನಿತೇಶ್ ಕೂಡ ತಂದೆಯ ಹಾದಿಯಲ್ಲೇ ಸಾಗುವ ಕನಸು ಕಂಡಿದ್ದರು. ಆದರೆ ಅಪಘಾತ ಅವರ ಕನಸನ್ನು ಭಗ್ನಗೊಳಿಸಿತು. ಪುಣೆಯ ಕೃತಕ ಅಂಗಜೋಡಣಾ ಕೇಂದ್ರಕ್ಕೆ ಭೇಟಿ ನೀಡಿದ್ದ ವೇಳೆ, ಗಾಯಗೊಂಡ ಸೈನಿಕರ ಅಂಗಜೋಡಣೆಯ ನಂತರ ಸವಾಲುಗಳಿಗೆ ಸಜ್ಜಾಗುತ್ತಿದ್ದ ಪರಿ ನೋಡಿದ್ದು ಅವರಲ್ಲೂ ಸ್ಫೂರ್ತಿ ಮೂಡಿಸಿತು.

ಇನ್ನೊಂದೆಡೆ, ಕನ್ನಡಿಗ, ಉತ್ತರ ಪ್ರದೇಶ ಕೇಡರ್‌ನ ಐಎಎಸ್ ಅಧಿಕಾರಿ ಸುಹಾಸ್ ಎಲ್. ಯತಿರಾಜ್ ಅವರೂ ಬ್ಯಾಡ್ಮಿಂಟನ್ ಸಿಂಗಲ್ಸ್‌ನಲ್ಲಿ ಸತತ ಎರಡನೇ ಸಲ ಎಸ್‌ಎಲ್4 ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದುಕೊಂಡರು.

ಸೋಮವಾರ ನಡೆದ ಏಕಪಕ್ಷೀಯ ಫೈನಲ್‌ನಲ್ಲಿ 41 ವರ್ಷದ ಸುಹಾಸ್ 9–21, 13–21 ರಲ್ಲಿ ನೇರಗೇಮ್‌ಗಳಿಂದ ಫ್ರಾನ್ಸ್‌ನ ಲುಕಸ್ ಮಝುರ್ ಅವರಿಗೆ ಮಣಿದರು. ಮೂರು ವರ್ಷ ಹಿಂದೆ ಟೋಕಿಯೊದಲ್ಲೂ ಇದೇ ಫಲಿತಾಂಶ ಪುನರಾವರ್ತನೆಯಾಗಿತ್ತು. ಸುಹಾಸ್ ಅವರಿಗೆ ಹುಟ್ಟಿನಿಂದಲೇ ಎಡಪಾದದ ನ್ಯೂನತೆ ಇತ್ತು. ಸುಹಾಸ್, ಹಾಸನ ಜಿಲ್ಲೆಯ ಅರಸೀಕೆರೆಯವರು.

ಪ್ಯಾರಾಲಿಂಪಿಕ್ಸ್ ಪದಕ ಪಟ್ಟಿ

ಸ್ಥಾನ	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಚೀನಾ	42	29	14	85
2	ಬ್ರಿಟನ್	29	14	10	53
3	ಅಮೆರಿಕ	13	18	10	41
4	ಬ್ರೆಜಿಲ್	11	7	17	35
14	ಭಾರತ	3	5	6	14

ಸುಹಾಸ್ ಯತಿರಾಜ್

ನಿತೇಶ್ ಕುಮಾರ್

ಚಿನ್ನ ಉಳಿಸಿಕೊಂಡ ಸುಮಿತ್ ಅಂಟಿಲ್

ಪ್ಯಾರಿಸ್ (ಪಿಟಿಐ): ಭಾರತದ ಜಾವೆಲಿನ್ ಥ್ರೋ ತಾರೆ ಸುಮಿತ್ ಅಂಟಿಲ್ ಸೋಮವಾರ ತಡರಾತ್ರಿ ನಡೆದ ಎಫ್‌64 ವಿಭಾಗದ ಸ್ಪರ್ಧೆಯಲ್ಲಿ ಈಟಿಯನ್ನು 70.59 ಮೀಟರ್ ದೂರ ಎಸೆದು ಪಾರಾಲಿಂಪಿಕ್ಸ್ ದಾಖಲೆಯೊಂದಿಗೆ 'ಚಾಂಪಿಯನ್ ಪಟ್ಟ'ವನ್ನು ಉಳಿಸಿಕೊಂಡರು.

ಹರಿಯಾಣದ ಸೋನಿಪತ್‌ನ 26 ವರ್ಷ ವಯಸ್ಸಿನ ಅಂಟಿಲ್ ಅವರು ಟೋಕಿಯೊದಲ್ಲಿ ಸ್ಥಾಪಿಸಿದ್ದ 68.55 ಮೀಟರ್‌ಗಳ ಪ್ಯಾರಾಲಿಂಪಿಕ್ ದಾಖಲೆಯನ್ನು ಉತ್ತಮಗೊಳಿಸಿದರು. ಈ ವಿಭಾಗದಲ್ಲಿ ವಿಶ್ವ ದಾಖಲೆ ಕೂಡ ಅವರ ಹೆಸರಿನಲ್ಲಿದೆ. ಹಾಂಗ್‌ಝೌ ಏಷ್ಯನ್ ಕೂಟದಲ್ಲಿ ಅವರು 73.29 ಮೀಟರ್ ಸಾಧನೆ ಮಾಡಿದ್ದರು.

ಪ್ಯಾರಾಲಿಂಪಿಕ್ಸ್‌ನಲ್ಲಿ ಸತತ ಎರಡನೇ ಚಿನ್ನ ಗೆದ್ದ ಭಾರತದ ಎರಡನೇ ಕ್ರೀಡಾಪಟು ಎಂಬ ಹೆಗ್ಗಳಿಕೆಗೆ ಪಾತ್ರವಾದರು. ಈ ಮೊದಲು ಶೂಟರ್ ಅವನಿ ಲೇಖರಾ ಸತತ ಚಿನ್ನದ ಸಾಧನೆ ಮಾಡಿದ್ದಾರೆ. 2015ರಲ್ಲಿ ಸಂಭವಿಸಿದ ರಸ್ತೆ ಅಪಘಾತಲ್ಲಿ ಅಂಟಿಲ್ ಅವರು ಒಂದು ಕಾಲನ್ನು ಕಳೆದುಕೊಂಡಿದ್ದರು.

ನಿಷಾದ್

ಎರಡನೇ ಕೂಟದಲ್ಲೂ ನಿಷಾದ್‌ಗೆ ಬೆಳ್ಳಿ

ನಿಷಾದ್ ಪುರುಷರ ಟಿ47 ವಿಭಾಗದ ಹೈಜಂಪ್‌ನಲ್ಲಿ ಸತತ ಎರಡನೇ ಬಾರಿ ಬೆಳ್ಳಿ ಪದಕ ಗೆದ್ದುಕೊಂಡರು. ಭಾನುವಾರ ತಡರಾತ್ರಿ ನಡೆದ ಸ್ಪರ್ಧೆಯಲ್ಲಿ 24 ವರ್ಷ ವಯಸ್ಸಿನ ನಿಷಾದ್ 2.04 ಮೀ. ಎತ್ತರ ಜಿಗಿದರು.

ಟೋಕಿಯೊದಲ್ಲೂ ರಜತ ಗೆದ್ದಾಗ 2.06 ಮೀ. ಜಿಗಿದಿದ್ದರು. 2.12 ಮೀ. ಎತ್ತರ ಹಾರಿದ ಅಮೆರಿಕದ ರೊಡೆರಿಕ್ ಟೌನ್ಸೆಂಡ್ ಅವರಿಗೆ ಚಿನ್ನ ದಕ್ಕಿತು.

ಆರ್ಚರಿ: ಶೀತಲ್– ರಾಕೇಶ್ ಜೋಡಿಗೆ ಕಂಚು

ಭಾರತದ ಬಿಲ್ಗಾರರಾದ ಶೀತಲ್ ದೇವಿ ಮತ್ತು ರಾಕೇಶ್ ಕುಮಾರ್ ಅವರು ಸೋಮವಾರ ಪ್ಯಾರಾಲಿಂಪಿಕ್ಸ್ ಮಿಶ್ರ ತಂಡ ಕಾಂಪೌಂಡ್ ಆರ್ಚರಿ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದರು. ಭಾರತದ ಜೋಡಿಯು156-155 ಅಂತರದಲ್ಲಿ ಇಟಲಿಯ ಎಲಿಯೊನೊರಾ ಸರ್ತಿ ಮತ್ತು ಮ್ಯಾಟಿಯೊ ಬೊನಾಸಿನಾ ಅವರನ್ನು ಮಣಿಸಿ ಈ ಸಾಧನೆ ಮಾಡಿತು.

ಪದಕ ವಿಜೇತರು	ಸ್ಪರ್ಧಿಸಿದ ವಿಭಾಗ	ಪದಕ
ನಿತೇಶ್ ಕುಮಾರ್	ಪುರುಷರ ಬ್ಯಾಡ್ಮಿಂಟನ್ ಸಿಂಗಲ್ಸ್, ಎಸ್‌ಎಲ್3	ಚಿನ್ನ
ಸುಮಿತ್ ಅಂಟಿಲ್	ಪುರುಷರ ಜಾವೆಲಿನ್ ಥ್ರೋ (ಎಫ್ 64)	ಚಿನ್ನ
ಸುಹಾಸ್ ಯತಿರಾಜ್	ಪುರುಷರ ಬ್ಯಾಡ್ಮಿಂಟನ್ ಸಿಂಗಲ್ಸ್ (ಎಸ್‌ಎಲ್4)	ಬೆಳ್ಳಿ
ನಿಷಾದ್ ಕುಮಾರ್	ಪುರುಷರ ಹೈಜಂಪ್, ಟಿ47	ಬೆಳ್ಳಿ
ಯೋಗೇಶ್ ಕಥುನಿಯಾ	ಪುರುಷರ ಡಿಸ್ಕಸ್ ಥ್ರೊ, ಎಫ್56	ಬೆಳ್ಳಿ
ತುಳಸಿಮತಿ ಮುರುಗೇಶನ್	ಮಹಿಳೆಯರ ಬ್ಯಾಡ್ಮಿಂಟನ್ ಸಿಂಗಲ್ಸ್, ಎಸ್‌ಯು5	ಬೆಳ್ಳಿ
ಮನಿಷಾ ರಾಮದಾಸ್	ಮಹಿಳೆಯರ ಬ್ಯಾಡ್ಮಿಂಟನ್ ಸಿಂಗಲ್ಸ್, ಎಸ್‌ಯು5	ಕಂಚು
ಶೀತಲ್ ದೇವಿ/ರಾಕೇಶ್	ಕಾಂಪೌಂಡ್ ಆರ್ಚರಿ ಮಿಶ್ರ ತಂಡ	ಕಂಚು

ಯೋಗೇಶ್‌ಗೆ ಮತ್ತೆ ಬೆಳ್ಳಿ

ಪ್ಯಾರಿಸ್: ಹರಿಯಾಣದ ಬಹಾದ್ದೂರ್‌ಗಢದ ಯೋಗೇಶ್ ಕಥುನಿಯಾ ಅವರು ಸತತ ಎರಡನೇ ಪ್ಯಾರಾಲಿಂಪಿಕ್ಸ್‌ನಲ್ಲೂ ಬೆಳ್ಳಿ ಗೆದ್ದು ಸಂಭ್ರಮಿಸಿದರು. ಸೋಮವಾರ ನಡೆದ ಪುರುಷರ ಡಿಸ್ಕಸ್ ಥ್ರೊ ಎಫ್56 ಸ್ಪರ್ಧೆಯಲ್ಲಿ ಅವರು 42.22 ಮೀ. ಎಸೆದು ಜೀವನಶ್ರೇಷ್ಠ ಪ್ರದರ್ಶನ ನೀಡಿದರು.

ಬ್ರೆಜಿಲ್‌ನ ಕ್ಲಾಡಿನ ಬ್ಯಾಟಿಸ್ಟಾ ಡೊಸ್ ಸ್ಯಾಂಟೊಸ್ ಅವರು ಡಿಸ್ಕ್ ಅನ್ನು 46.86 ಮೀ. ದೂರಕ್ಕೆಸೆದು ಪ್ಯಾರಾಲಿಂಪಿಕ್ಸ್ ದಾಖಲೆಯೊಡನೆ ಚಿನ್ನ ಗೆದ್ದರು. ಒಂಬತ್ತನೇ ವಯಸ್ಸಿನಲ್ಲಿ ಯೋಗೇಶ್ ಅವರಿಗೆ ಜಿಬಿಎಸ್ ಎಂಬ ನರಸಂಬಂಧಿ ಕಾಯಿಲೆ ಬಾಧಿಸಿ ಕಾಲಿನ ನ್ಯೂನತೆ ಎದುರಾಯಿತು. ಇದರಿಂದ ಅವರು ಗಾಲಿಕುರ್ಚಿ ಅವಲಂಬಿಸಬೇಕಾಯಿತು. ಯೋಗೇಶ್ ಅವರ ತಂದೆ ಗ್ಯಾನ್‌ಚಂದ್ ಕಥುನಿಯಾ ಭಾರತೀಯ ಸೇನೆಯಲ್ಲಿ ಸೈನಿಕರಾಗಿದ್ದಾರೆ.



ತುಳಸಿಮತಿಗೆ ಬೆಳ್ಳಿ, ಮನಿಷಾಗೆ ಕಂಚು

ತುಳಸಿಮತಿ ಮರುಗೇಶನ್ ಮಹಿಳೆಯರ ಬ್ಯಾಡ್ಮಿಂಟನ್ ಸಿಂಗಲ್ಸ್ ಎಸ್‌ಯು5 ವಿಭಾಗದಲ್ಲಿ ಬೆಳ್ಳಿ ಗೆದ್ದರು. 22 ವರ್ಷ ವಯಸ್ಸಿನ ಅಗ್ರ ಶ್ರೇಯಾಂಕದ ಆಟಗಾರ್ತಿ ಫೈನಲ್‌ನಲ್ಲಿ 17–21, 10–21ರಲ್ಲಿ ಹಾಲಿ ಚಾಂಪಿಯನ್ ಯಾಂಗ್ ಕ್ವಿಷಿಯಾ ಎದುರು ಸೋಲನುಭವಿಸಿದರು. ಇದು ತುಳಸಿಮತಿಗೆ ಮೊದಲ ಪದಕ.

ಎರಡನೇ ಶ್ರೇಯಾಂಕದ ಮನಿಷಾ ರಾಮದಾಸ್ ಕಂಚಿನ ಪದಕದ ಪ್ಲೇ ಆಫ್ ಪಂದ್ಯದಲ್ಲಿ ಮೂರನೇ ಶ್ರೇಯಾಂಕದ ಕ್ಯಾಥ್ರಿನ್ ರೊಸೆನ್‌ಗ್ರೆನ್ (ಡೆನ್ಮಾರ್ಕ್) ಅವರನ್ನು ಮಣಿಸಿದರು. ಎಡ ಅಥವಾ ಬಲ ತೋಳಿನ ಊನ ಹೊಂದಿರುವ ಸ್ಪರ್ಧಿಗಳಿಗೆ ಎಸ್‌ಯು5 ವಿಭಾಗ ಮೀಸಲಾಗಿದೆ.



ಏಳು ತಿಂಗಳ ಗರ್ಭಿಣಿ ಜೋಡಿ ಗ್ರಿನ್‌ಹ್ಯಾಮ್–ಎಕ್ಸ್ ಚಿತ್ರ

ಕಂಚು ಗೆದ್ದ ಏಳು ತಿಂಗಳ ಗರ್ಭಿಣಿ!

ಪ್ಯಾರಿಸ್ (ರಾಯಿಟರ್ಸ್): ಬ್ರಿಟನ್‌ನ ಏಳು ತಿಂಗಳ ಗರ್ಭಿಣಿ ಜೋಡಿ ಗ್ರೀನ್‌ಹ್ಯಾಮ್ ಅವರು ಮಹಿಳೆಯರ ಆರ್ಚರಿ ವೈಯಕ್ತಿಕ ಕಾಂಪೌಂಡ್ ಸ್ಪರ್ಧೆಯಲ್ಲಿ ಕಂಚು ಗೆದ್ದು ದಾಖಲೆ ಬರೆದಿದ್ದಾರೆ.

ಪ್ಯಾರಾಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಮೊದಲ ಗರ್ಭಿಣಿ ಅಥ್ಲೀಟ್ ಎಂಬ ಹೆಗ್ಗಳಿಕೆಗೆ 31 ವರ್ಷ ವಯಸ್ಸಿನ ಗ್ರೀನ್‌ಹ್ಯಾಮ್ ಪಾತ್ರವಾಗಿದ್ದಾರೆ ಎಂದು ಪ್ಯಾರಾಲಿಂಪಿಕ್ಸ್‌ನ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ತಿಳಿಸಲಾಗಿದೆ.

ಕಂಚಿನ ಪದಕದ ಸ್ಪರ್ಧೆಯಲ್ಲಿ ಗ್ರೀನ್‌ಹ್ಯಾಮ್ 142-141ರಿಂದ ಟೋಕಿಯೊ ಪ್ಯಾರಾಲಿಂಪಿಕ್ಸ್ ಚಿನ್ನದ ಪದಕ ವಿಜೇತೆ, ಸ್ವದೇಶದ ಸ್ನೇಹಿತೆಯೂ ಆಗಿರುವ ಫೋಬೆ ಪ್ಯಾಟರ್ಸನ್ ಪೈನ್ ಅವರನ್ನು ಸೋಲಿಸಿದರು.

ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್: ರೈಲ್ವೇಸ್ ಸಮಗ್ರ ಚಾಂಪಿಯನ್

ಪಿ.ಟಿ.ಉಷಾ ದಾಖಲೆ ಮುರಿದ ವಿದ್ಯಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಕೂಟದಲ್ಲಿ 400 ಮೀ. ಹರ್ಡಲ್ಸ್ ಓಟವನ್ನು 57 ಸೆ.ಗಳ ಒಳಗೆ ಕ್ರಮಿಸಿದಲ್ಲಿ ಐದು ದಿನಗಳ ಹೆಚ್ಚುವರಿ ರಜೆ ನೀಡುವುದಾಗಿ ತಮಿಳುನಾಡಿನ ಆರ್. ವಿದ್ಯಾ ರಾಮರಾಜ್ ಅವರಿಗೆ ಕೋಚ್ ನೇಪಾಲ್ ಸಿಂಗ್ ಭರವಸೆ ನೀಡಿದ್ದರು. ಇದನ್ನೇ ಪ್ರೇರಣೆಯಾಗಿಸಿಕೊಂಡ ವಿದ್ಯಾ ಸೋಮವಾರ ಈ ಚಾಂಪಿಯನ್‌ಷಿಪ್‌ನಲ್ಲಿ 57 ಸೆ.ಗಳ ಒಳಗೆ ದೂರ ಕ್ರಮಿಸಿದರಲ್ಲದೇ, ದಂತಕಥೆ ಪಿ.ಟಿ.ಉಷಾ ಹೆಸರಿನಲ್ಲಿದ್ದ ದಾಖಲೆಯನ್ನೂ ಮುರಿದು ಗಮನಸೆಳೆದರು.

ಕೊಯಮತ್ತೂರಿನ ವಿದ್ಯಾ ಅವರು ಕಂಠೀರವ ಕ್ರೀಡಾಂಗಣದಲ್ಲಿ 56.23 ಸೆ.ಗಳಲ್ಲಿ ಗುರಿ ತಲುಪಿ, 1985ರಲ್ಲಿ ತಿರುವನಂತಪುರದಲ್ಲಿ ಉಷಾ ಸ್ಥಾಪಿಸಿದ್ದ 56.80 ಸೆಕೆಂಡುಗಳ ದಾಖಲೆ ಮುರಿದರು.

ರೈಲ್ವೇಸ್‌ನ ಸಿಂಚಲ್ (57.60ಸೆ.) ಮತ್ತು ಕರ್ನಾಟಕದ ಪ್ರಜ್ಞಾ (57.90ಸೆ.) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಪಡೆದರು.

'ಈ ದಾಖಲೆ ಮುರಿಯಲು ಕಳೆದ ಎರಡು ವರ್ಷಗಳಿಂದ ಇನ್ನಿಲ್ಲದ ಪ್ರಯತ್ನ ನಡೆಸಿದ್ದೆ. ಅಂತಿಮವಾಗಿ ಈಡೇರಿದ್ದರಿಂದ ಸಂತಸವಾಗಿದೆ, ಅದೂ ಋತುವಿನ ಕೊನೆಯ ಕೂಟದಲ್ಲಿ' ಎಂದು ವಿದ್ಯಾ ಸಂಭ್ರಮದಿಂದ ಪ್ರತಿಕ್ರಿಯಿಸಿದರು.

400 ಮೀ. ಹರ್ಡಲ್ಸ್ ಸ್ಪರ್ಧೆಯಲ್ಲಿ ಕೂಟ ದಾಖಲೆ ಬರೆದ ವಿದ್ಯಾ ರಾಮರಾಜ್ –ಪ್ರಜಾವಾಣಿ ಚಿತ್ರ/ ಎಸ್‌.ಕೆ.ದಿನೇಶ್

ಪುರುಷರ 200 ಮೀ. ಓಟದಲ್ಲಿ 20.66 ಸೆಕೆಂಡ್‌ಗಳಲ್ಲಿ ಗುರಿ ತಲುಪಿದ ವೇಗದ ಓಟಗಾರ ನಿತಿನ್ ಅವರು ಕೊನೆಯ ದಿನ ಕೂಟ ದಾಖಲೆ ಸ್ಥಾಪಿಸಿದರು. ಕಳೆದ ವರ್ಷ ಬೆಂಗಳೂರಿನಲ್ಲಿ ಅನಿಮೇಶ್ ಕುಜೂರ್ ಸ್ಥಾಪಿಸಿದ್ದ 20.74 ಸೆಕೆಂಡುಗಳ ದಾಖಲೆಯನ್ನು ತಮಿಳುನಾಡಿನ ಓಟಗಾರ ಮುರಿದರು.

ಮಹಿಳೆಯರ ಲಾಂಗ್‌ಜಂಪ್ ಸ್ಪರ್ಧೆಯು ಮತ್ತೊಂದು ಪೈಪೋಟಿಗೆ ಸಾಕ್ಷಿಯಾಯಿತು. ಸರ್ವಿಸಸ್ ಕ್ರೀಡಾ ನಿಯಂತ್ರಣ ಮಂಡಳಿಯ (ಎಸ್‌ಎಸ್‌ಸಿಬಿ) ಆನ್ಸಿ ಸೋಜನ್ ಅವರು 6.71 ಮೀ. ದೂರಕ್ಕೆ ಜಿಗಿದು ಚಿನ್ನದ ಪದಕದೊಡನೆ ಮಿಂಚಿದರು.

ರೈಲ್ವೇಸ್‌ನ ಕಾರ್ತಿಕಾ ಕೋದಂಡಪಾಣಿ (6.29 ಮೀ) ಮತ್ತು ಭವಾನಿ ಯಾದವ್ ಭಾಗವತ್ (6.25 ಮೀ) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

ರೈಲ್ವೇಸ್‌ಗೆ ಸಮಗ್ರ ಪ್ರಶಸ್ತಿ: ತಮಿಳುನಾಡಿನ ನಿತಿನ್ 1118 ಅಂಕಗಳೊಂದಿಗೆ ಮತ್ತು ಎಸ್‌ಎಸ್‌ಸಿಬಿಯ ಆ್ಯನ್ಸಿ ಸೋಜನ್ ಅವರು 1153 ಅಂಕಗಳೊಂದಿಗೆ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಅತ್ಯುತ್ತಮ ಅಥ್ಲೀಟ್ ಪ್ರಶಸ್ತಿ ಪಡೆದರು.

ಸರ್ವಿಸಸ್ ತಂಡ 137 ಪಾಯಿಂಟ್ಸ್ ಗಳಿಸಿ ಪುರುಷರ ವಿಭಾಗದಲ್ಲಿ ಚಾಂಪಿಯನ್ ಆದರೆ, 201 ಅಂಕ ಕಲೆಹಾಕಿದ ರೈಲ್ವೇಸ್‌ನ ತಂಡ ಮಹಿಳೆಯರ ವಿಭಾದಲ್ಲಿ ಚಾಂಪಿಯನ್ ಆಯಿತು. 318 ಅಂಕ ಕಲೆಹಾಕಿದ ರೈಲ್ವೇಸ್ ತಂಡ ಸಮಗ್ರ ಚಾಂಪಿಯನ್ ಆಗಿ ಹೊರಹೊಮ್ಮಿತು.

ಅಂತಿಮ ದಿನದ ಫಲಿತಾಂಶಗಳು (ಮೊದಲ ಸ್ಥಾನ ಪಡೆದವರು): **ಪುರುಷರು:** 200 ಮೀ: ನಿತಿನ್ (ತಮಿಳುನಾಡು), ಕಾಲ: 20.66 ಸೆ.; 800 ಮೀ ಓಟ: ಮೊಹಮ್ಮದ್ ಪಿ. (ಎಸ್‌ಎಸ್‌ಸಿಬಿ), ಕಾಲ: 1ನಿ 48.10 ಸೆ.; 10000 ಮೀ: ಅಭಿಷೇಕ್ (ರೈಲ್ವೇಸ್), ಕಾಲ: 29ನಿ.48.18ಸೆ.

400 ಮೀ ಹರ್ಡಲ್ಸ್: ಅಮನ್ (ಹರಿಯಾಣ), ಕಾಲ: 50.52 ಸೆ.; 3000 ಮೀ ಸ್ಟೀಪಲ್‌ಚೇಸ್: ಸಿದ್ದಾಂತ್ ಪೂಜಾರಿ (ಮಹಾರಾಷ್ಟ್ರ), ಕಾಲ: 8ನಿ.46.05 ಸೆ.; 4x400ಮೀ ರಿಲೇ: ಎಸ್‌ಎಸ್‌ಸಿಬಿ, ಕಾಲ: 3ನಿ 07.11 ಸೆ.; ಟ್ರಿಪಲ್ ಜಂಪ್: ಮೊಹಮ್ಮದ್ ಎಸ್. ಎನ್. (ತಮಿಳುನಾಡು), ದೂರ: 16.28 ಮೀ.; ಜಾವೆಲಿನ್ ಥ್ರೊ: ವಿಕ್ರಾಂತ್ ಮಲಿಕ್ (ಹರಿಯಾಣ), ದೂರ: 80.02 ಮೀ.

ಮಹಿಳೆಯರು: 200 ಮೀ: ನಿತ್ಯಾ ಗಂಧೆ (ರೈಲ್ವೇಸ್)–1, ಕಾಲ: 23.51 ಸೆ.; 800ಮೀ: ಚಂದಾ (ರೈಲ್ವೇಸ್), ಕಾಲ: 2ನಿ 01.16 ಸೆ.; 400 ಮೀ.ಹರ್ಡಲ್ಸ್: ಆರ್.ವಿದ್ಯಾ ರಾಮರಾಜ್ (ರೈಲ್ವೇಸ್), ಕಾಲ: 56.23 ಸೆ., ನೂತನ ದಾಖಲೆ, ಹಳೆಯದು: ಪಿ.ಟಿ.ಉಷಾ, 56.80 ಸೆ.; 3000 ಮೀ ಸ್ಟೀಪಲ್‌ಚೇಸ್: ರೆಬಿ ಪಾಲ್ (ರೈಲ್ವೇಸ್), ಕಾಲ: 10ನಿ 21.28 ಸೆ.; 10000ಮೀ: ಸೀಮಾ (ಹಿಮಾಚಲ ಪ್ರದೇಶ), ಕಾಲ: 33ನಿ 56.86 ಸೆ.; 4x400ಮೀ. ರಿಲೇ: ರೈಲ್ವೇಸ್, ಕಾಲ: 3ನಿ 39.01ಸೆ–1. ಲಾಂಗ್ ಜಂಪ್: ಆನ್ಸಿ ಸೋಜನ್ (ಸರ್ವಿಸಸ್), ದೂರ: 6.71 ಮೀ; ಹ್ಯಾಮರ್ ಥ್ರೋ: ಹರ್ಷಿತಾ ಸೆಹ್ರಾವತ್ (ದೆಹಲಿ), ದೂರ: 61.04ಮೀ; ಹೆಪ್ಟಾಥ್ಲಾನ್: ಅಗಸರ ನಂದಿನಿ (ತೆಲಂಗಾಣ), ಪಾಯಿಂಟ್ಸ್: 5526.

ಚೆಸ್: ಶಿವಾಯ್ ಸಿಂಗ್, ಅರಣ್ಯಾಗೆ ಮುನ್ನಡೆ

ಪ್ರಜಾವಾಣಿ ವಾರ್ತೆ

ಮೈಸೂರು: ಅಗ್ರ ಶ್ರೇಯಾಂಕಿತ ಶಿವಾಯ್ ಸಿಂಗ್, 37ನೇ ರಾಷ್ಟ್ರೀಯ ಏಳು ವರ್ಷದೊಳಗಿನವರ ಚೆಸ್ ಚಾಂಪಿಯನ್‌ಷಿಪ್‌ನ ಮುಕ್ತ ವಿಭಾಗದಲ್ಲಿ ಮೂರನೇ ಸುತ್ತಿನ ಅಂತ್ಯಕ್ಕೆ ಮುನ್ನಡೆ ಕಾಯ್ದುಕೊಂಡಿದ್ದಾನೆ.

ಉತ್ತರ ಪ್ರದೇಶದ ಈ ಆಟಗಾರ ಮೂರನೇ ಸುತ್ತಿನ ಪಂದ್ಯದಲ್ಲಿ ಆಂಧ್ರಪ್ರದೇಶದ ಎಸ್. ಆಶಿಶ್‌ನನ್ನು ಮಣಿಸಿ ಒಟ್ಟಾರೆ 3 ಅಂಕ ಕಲೆಹಾಕಿದ. ಈ ಮೂಲಕ ಟೂರ್ನಿಯ ಇತರ 22 ಆಟಗಾರರೊಂದಿಗೆ ಅಗ್ರಸ್ಥಾನ ಹಂಚಿಕೊಂಡಿದ್ದಾನೆ.

ಬಾಲಕಿಯರ ವಿಭಾಗದ ಮೂರನೇ ಸುತ್ತಿನಲ್ಲಿ ಅಗ್ರ ಶ್ರೇಯಾಂಕಿತೆ ಅರಣ್ಯಾ, ಕೇರಳದ ಆರ್. ರಿತ್ವಿಕಾಳನ್ನು ಮಣಿಸಿದಳು. ಅವರನ್ನೂ ಒಳಗೊಂಡಂತೆ 17 ಆಟಗಾರ್ತಿಯರು ತಲಾ 3 ಅಂಕಗಳೊಂದಿಗೆ ಜಂಟಿ ಅಗ್ರ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಮೂರನೇ ಸುತ್ತಿನ ಪ್ರಮುಖ ಫಲಿತಾಂಶ: ಮುಕ್ತ ವಿಭಾಗ: ಅಯಾಂಶ್ ಸಿಂಗ್‌ಗೆ (ಉತ್ತರ ಪ್ರದೇಶ) ಆರಿವ್ ವೊಹ್ರಾ (ದೆಹಲಿ) ವಿರುದ್ಧ ಜಯ; ದೇವನಾರಾಯಣನ್‌ಗೆ (ಕೇರಳ), ಅಭಿರಾಮ್ ಮಂಗಿಪುಡಿ (ಆಂಧ್ರಪ್ರದೇಶ) ಎದುರು; ನಮಿತ್ ಗೋಯಲ್‌ಗೆ (ಪಂಜಾಬ್) ಆದಿತ್ಯ ಬೋಸ್ (ಪಶ್ಚಿಮ ಬಂಗಾಳ) ಎದುರು; ಯುವನ್ ಸೈನಿಗೆ (ದೆಹಲಿ) ಅದವ್ಯ ರಾಜ್ (ಅಸ್ಸಾಂ) ಎದುರು ಜಯ.

ಬಾಲಕಿಯರ ವಿಭಾಗ: ಆಶ್ರಿತಾಗೆ (ಆಂಧ್ರಪ್ರದೇಶ) ಅರ್ಪಿತಾಂಕ್ಷಿ ಭಟ್ಟಾಚಾರ್ಯ (ಪಶ್ಚಿಮ ಬಂಗಾಳ) ವಿರುದ್ಧ; ಅಂಶಿತಾ ಪುವ್ವಲಗೆ (ತೆಲಂಗಾಣ), ಎಸ್. ಆಶ್ರಿತಾ (ತಮಿಳುನಾಡು) ವಿರುದ್ಧ; ಸೈಆಸ್ಫಾ ಸಿಂಗ್‌ಗೆ (ಪಶ್ಚಿಮ ಬಂಗಾಳ) ಆದ್ಯಾ ಇಶಾನ (ತಮಿಳುನಾಡು) ಎದುರು; ಅದಿನಾ ಮೊಹಂತಿಗೆ (ಪ.ಬಂಗಾಳ) ಸನಾ ವಿಜೇಶ್ (ಕೇರಳ) ಎದುರು ಜಯ.

ಬ್ಯಾಡ್ಮಿಂಟನ್ ತಾರೆ ಸೈನಾ ನೆಹ್ವಾಲ್ ನಿವೃತ್ತಿ ಸುಳಿವು

ನವದೆಹಲಿ (ಪಿಟಿಐ): ಭಾರತದ ಅನುಭವಿ ಬ್ಯಾಡ್ಮಿಂಟನ್ ಆಟಗಾರ್ತಿ, ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಸೈನಾ ನೆಹ್ವಾಲ್ ಅವರು ತಾವು ಸಂಧಿವಾತದಿಂದ ಬಳಲುತ್ತಿರುವುದಾಗಿ ಬಹಿರಂಗಪಡಿಸಿದ್ದಾರೆ.

ಈ ಸಮಸ್ಯೆಯಿಂದ ತಮಗೆ ಎಂದಿನಂತೆ ತರಬೇತಿಗೆ ಸಮಯ ನೀಡುವುದು ಅಸಾಧ್ಯವಾಗಲಿದೆ. ಹೀಗಾಗಿ ವರ್ಷಾಂತ್ಯದೊಳಗಾಗಿ ತಮ್ಮ ಕ್ರೀಡಾ ಭವಿಷ್ಯದ ಕುರಿತು ನಿರ್ಧಾರಕ್ಕೆ ಬರುವುದಾಗಿ 34 ವರ್ಷದ ಆಟಗಾರ್ತಿ ಹೇಳಿದ್ದಾರೆ. 2012ರ ಲಂಡನ್ ಕೂಟದಲ್ಲಿ ಕಂಚಿನ ಪದಕದೊಂದಿಗೆ ಒಲಿಂಪಿಕ್ಸ್ ಪದಕ ಗೆದ್ದ ಭಾರತದ ಮೊದಲ ಬ್ಯಾಡ್ಮಿಂಟನ್ ತಾರೆ ಎನಿಸಿರುವ ಸೈನಾ, ಗಾಯದ ಸಮಸ್ಯೆ ಎದುರಾಗುವ ಮೊದಲು ಮೂರು ಒಲಿಂಪಿಕ್ಸ್‌ಗಳಲ್ಲಿ ಭಾಗವಹಿಸಿದ್ದರು.

ಸೈನಾ ನೆಹ್ವಾಲ್

2010 ಮತ್ತು 2018ರ ಕಾಮನ್‌ವೆಲ್ತ್ ಕೂಟದಲ್ಲಿ ಚಿನ್ನದ ಪದಕ ವಿಜೇತೆಯಾಗಿರುವ ಸೈನಾ, ತಮ್ಮ ಕ್ರೀಡಾಜೀವನ ಅಂತಿಮ ಹಂತದಲ್ಲಿದೆ ಎಂಬುದನ್ನು ಕಡೆಗಣಿಸಲಾಗದು ಎಂದಿದ್ದಾರೆ.

'ಮೊಣಗಂಟಿನ ಸ್ಥಿತಿ ಉತ್ತಮವಾಗಿಲ್ಲ. ನನಗೆ ಸಂಧಿವಾತವಿದೆ. ಕಾರ್ಟಿಲೆಜ್ (ಮೃದ್ವಸ್ಥಿ) ಸುಸ್ಥಿತಿಯಲ್ಲಿಲ್ಲ. ಎಂಟು-ಒಂಬತ್ತು ಗಂಟೆ ಅಭ್ಯಾಸಕ್ಕೆ ನೀಡುವುದು ಕಷ್ಟ' ಎಂದು ಅವರು, ಗಗನ್ ನಾರಂಗ್ ನಡೆಸಿಕೊಟ್ಟ 'ಹೌಸ್ ಆಫ್ ಗ್ಲೋರಿ' ಪಾಡ್‌ಕಾಸ್ಟ್‌ನಲ್ಲಿ ಬಹಿರಂಗಪಡಿಸಿದರು.

ಒಂದು ವರ್ಷದಿಂದ ಅವರು ಆಡುತ್ತಿಲ್ಲ. ಕಳೆದ ವರ್ಷ ಅವರು ಸಿಂಗಪುರ ಓಪನ್‌ನಲ್ಲಿ ಕೊನೆಯ ಬಾರಿ ಕಣಕ್ಕಿಳಿದಿದ್ದು, ಮೊದಲ ಸುತ್ತಿನಲ್ಲೇ ನಿರ್ಗಮಿಸಿದ್ದರು. ಪದ್ಮಶ್ರೀ ಪುರಸ್ಕೃತರಾಗಿರುವ ಅವರು ಬಿಜೆಪಿ ಸದಸ್ಯೆ ಆಗಿದ್ದಾರೆ.

'ನಾನು ಯಶಸ್ಸಿನ ಓಟ ಹೆಮ್ಮೆಯಿಂದ ಹಿಂತಿರುಗಿ ನೋಡುತ್ತೇನೆ. ನಾನು ಸಾಕಷ್ಟು ಶ್ರಮ ಹಾಕಿದ್ದೇನೆ. ಮೂರು ಒಲಿಂಪಿಕ್ಸ್‌ಗಳಲ್ಲಿ ಭಾಗವಹಿಸಿದ್ದೇನೆ. ಎಲ್ಲದರಲ್ಲೂ ನೂರಕ್ಕೆ ನೂರರಷ್ಟು ಆಟ ಹಾಕಿದ್ದೇನೆ. ನನಗೆ ಆ ಬಗ್ಗೆ ಹೆಮ್ಮೆಯಿದೆ' ಎಂದಿದ್ದಾರೆ.

₹14,235 ಕೋಟಿ ಮೊತ್ತದ ಯೋಜನೆಗಳಿಗೆ ಒಪ್ಪಿಗೆ

ರೈತರ ಆದಾಯ ಹೆಚ್ಚಳಕ್ಕೆ 7 ಯೋಜನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರೈತರ ಜೀವನ ಮಟ್ಟ ಸುಧಾರಿಸಲು ಮತ್ತು ಅವರ ಆದಾಯ ಹೆಚ್ಚಿಸಲು ಒಟ್ಟು ₹14,235 ಕೋಟಿಯ ಏಳು ಯೋಜನೆಗಳಿಗೆ ಕೇಂದ್ರ ಸಚಿವ ಸಂಪುಟ ಸೋಮವಾರ ಅನುಮೋದನೆ ನೀಡಿದೆ.

ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೇಂದ್ರ ವಾರ್ತಾ ಹಾಗೂ ಪ್ರಸಾರ ಸಚಿವ ಅಶ್ವಿನಿ ವೈಷ್ಣವ್, 'ಈ ಕಾರ್ಯಕ್ರಮಗಳು ರೈತರ ಆದಾಯ ಹೆಚ್ಚಿಸಲಿವೆ. ಕೃಷಿ ಸಂಶೋಧನೆ, ಶಿಕ್ಷಣ, ನೈಸರ್ಗಿಕ ಸಂಪನ್ಮೂಲ ನಿರ್ವಹಣೆ, ಕೃಷಿ ವಲಯದಲ್ಲಿ ಡಿಜಿಟಲೀಕರಣ, ತೋಟಗಾರಿಕೆ ಕ್ಷೇತ್ರಗಳ ಬೆಳವಣಿಗೆಗೆ ಈ ಯೋಜನೆಗಳು ಒತ್ತು ನೀಡಲಿವೆ' ಎಂದು ಹೇಳಿದರು.

ಏಳು ಯೋಜನೆಗಳು:

- **ಡಿಜಿಟಲ್ ಕೃಷಿ ಮಿಷನ್:** ರೈತರ ಜೀವನಮಟ್ಟ ಸುಧಾರಿಸುವ ಉದ್ದೇಶದ ಡಿಜಿಟಲ್ ಕೃಷಿ ಮಿಷನ್‌ಗೆ ₹2,817 ಕೋಟಿ ನಿಗದಿಪಡಿಸಲಾಗಿದೆ.
- **ಆಹಾರ ಮತ್ತು ಪೌಷ್ಟಿಕಾಂಶದ ಭದ್ರತೆಗಾಗಿ ಬೆಳೆ ವಿಜ್ಞಾನ:** ಒಟ್ಟು ₹3,979 ಕೋಟಿ ವೆಚ್ಚದ ಈ ಉಪಕ್ರಮವು ಹವಾಮಾನ ಸ್ಥಿತಿಸ್ಥಾಪಕತ್ವಕ್ಕೆ ರೈತರನ್ನು ಪೂರಕವಾಗಿ ಸಿದ್ಧಪಡಿಸುತ್ತದೆ ಮತ್ತು 2047ರ ವೇಳೆಗೆ ಆಹಾರ ಭದ್ರತೆ ಒದಗಿಸುತ್ತದೆ.
- **ಕೃಷಿ ಶಿಕ್ಷಣ, ನಿರ್ವಹಣೆ ಮತ್ತು ಸಮಾಜ ವಿಜ್ಞಾನಗಳನ್ನು ಬಲಪಡಿಸುವುದು:** ಒಟ್ಟು ₹2,291 ಕೋಟಿ ವೆಚ್ಚದ ಈ ಉಪಕ್ರಮವು ಕೃಷಿ ವಿದ್ಯಾರ್ಥಿಗಳು ಮತ್ತು ಸಂಶೋಧಕರನ್ನು ಪ್ರಸ್ತುತ ಸವಾಲುಗಳಿಗೆ ಸಿದ್ಧಪಡಿಸುತ್ತದೆ.
- ಜಾನುವಾರುಗಳ ಆರೋಗ್ಯ ನಿರ್ವಹಣೆ ಹಾಗೂ ಪಶುವೈದ್ಯಕೀಯ ಶಿಕ್ಷಣ ಸೇರಿದಂತೆ ಕ್ಷೇತ್ರದ ಸಮಗ್ರ ಸುಧಾರಣೆಯ ಆಶಯ ಹೊಂದಿರುವ ಯೋಜನೆಗೆ ₹1,702 ಕೋಟಿ ಮೀಸಲಿಡಲಾಗಿದೆ.
- **ತೋಟಗಾರಿಕೆಯ ಸುಸ್ಥಿರ ಅಭಿವೃದ್ಧಿ:** ಒಟ್ಟು ₹860 ಕೋಟಿ ವೆಚ್ಚದ ಈ ಯೋಜನೆಯು ತೋಟಗಾರಿಕೆ ಸಸ್ಯಗಳಿಂದ ರೈತರ ಆದಾಯ ಹೆಚ್ಚಿಸುವ ಗುರಿ ಹೊಂದಿದೆ.
- ₹1,202 ಕೋಟಿ ವೆಚ್ಚದಲ್ಲಿ ಕೃಷಿ ವಿಜ್ಞಾನ ಕೇಂದ್ರಗಳ ಬಲವರ್ಧನೆ
- ₹1,115 ಕೋಟಿ ವೆಚ್ಚದಲ್ಲಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆಗೆ ಯೋಜನೆ ರೂಪಿಸಲಾಗಿದೆ.

309 ಕಿ.ಮೀ. ರೈಲು ಮಾರ್ಗಕ್ಕೆ ಒಪ್ಪಿಗೆ

ಮುಂಬೈ–ಇಂದೋರ್ ನಡುವಿನ 309 ಕಿ.ಮೀ ಉದ್ದದ ಹೊಸ ರೈಲು ಮಾರ್ಗದ ಯೋಜನೆಗೆ ಕೇಂದ್ರ ಸಂಪುಟ ಅನುಮೋದನೆ ನೀಡಿದೆ.

ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದ ನಡುವೆ ನೇರ ಸಂಪರ್ಕವಿಲ್ಲದ ಪ್ರದೇಶಗಳನ್ನು, ಮಹಾರಾಷ್ಟ್ರದ 2 ಜಿಲ್ಲೆಗಳು ಮತ್ತು ಮಧ್ಯಪ್ರದೇಶದ 4 ಜಿಲ್ಲೆಗಳ ಮೂಲಕ ಮಾರ್ಗ ಹಾದುಹೋಗುತ್ತದೆ. ಯೋಜನೆಯ ಒಟ್ಟು ವೆಚ್ಚ ₹18,036 ಕೋಟಿ ಮತ್ತು 2028-29ರ ವೇಳೆಗೆ ಪೂರ್ಣಗೊಳ್ಳಲಿದೆ.

ಈ ಯೋಜನೆಯ ಕಾಮಗಾರಿಯ ಸಂದರ್ಭದಲ್ಲಿ ಸುಮಾರು 102 ಲಕ್ಷ ಮಾನವ ದಿನಗಳ ನೇರ ಉದ್ಯೋಗ ಸೃಷ್ಟಿಯಾಗಲಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

ಮತ್ತೊಂದು ಸೆಮಿಕಂಡಕ್ಟರ್ ಘಟಕ

ಗುಜರಾತ್‌ನ ಸನಂದ್‌ನಲ್ಲಿ ಮತ್ತೊಂದು ಸೆಮಿಕಂಡಕ್ಟರ್ (ಅರೆವಾಹಕ) ಘಟಕ ಸ್ಥಾಪಿಸುವ ಕೇನ್ಸ್ ಸೆಮಿಕಾನ್ ಪ್ರೈವೇಟ್ ಲಿಮಿಟೆಡ್‌ನ ಪ್ರಸ್ತಾವನೆಗೆ ಸಂಪುಟ ಅನುಮೋದನೆ ನೀಡಿದೆ.

ಪ್ರಸ್ತಾವಿತ ಘಟಕವನ್ನು ₹3,300 ಕೋಟಿ ಹೂಡಿಕೆಯೊಂದಿಗೆ ಸ್ಥಾಪಿಸಲಾಗುವುದು. ಈ ಘಟಕವು ದಿನವೊಂದಕ್ಕೆ 60 ಲಕ್ಷ ಚಿಪ್ಸ್ ತಯಾರಿಸಲಿದೆ ಎಂದು ಸಚಿವರು ತಿಳಿಸಿದರು.

ನೆಟ್‌ಫ್ಲಿಕ್ಸ್ ಮುಖ್ಯಸ್ಥರಿಗೆ ಸಮನ್ಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಒಟಿಟಿ ಪ್ಲಾಟ್‌ಫಾರ್ಮ್ 'ನೆಟ್‌ಫ್ಲಿಕ್ಸ್'ನಲ್ಲಿ ಪ್ರಸಾರವಾಗುತ್ತಿರುವ 'ಐಸಿ–814– ದಿ ಕಂದಹಾರ್ ಹೈಜಾಕ್' ವೆಬ್‌ಸರಣಿಯಲ್ಲಿ ಅಪಹರಣಕಾರರನ್ನು ಬಿಂಬಿಸಿದ ರೀತಿಗೆ ಆಕ್ಷೇಪ ವ್ಯಕ್ತಪಡಿಸಿ ವಾರ್ತಾ ಹಾಗೂ ಪ್ರಸಾರ ಸಚಿವಾಲಯವು(ಐ.ಬಿ) ಕಾರ್ಯಕ್ರಮ ಮುಖ್ಯಸ್ಥರಿಗೆ ಸಮನ್ಸ್ ನೀಡಿದೆ.

ಮೂಲಗಳ ಪ್ರಕಾರ, 'ಕೆಲವೊಂದು ವಿವಾದಾತ್ಮಕ ವಿಷಯಗಳ ಕುರಿತಂತೆ ವಿವರಣೆ ನೀಡುವಂತೆ ಕೋರಿ ನೆಟ್‌ಫ್ಲಿಕ್ಸ್‌ನ ಅಧಿಕಾರಿಗಳಿಗೆ ಸಚಿವಾಲಯವು ಸೂಚನೆ ನೀಡಿದೆ' ಎಂದು ತಿಳಿದುಬಂದಿದೆ.

ಕಾಠ್ಮಂಡುವಿನಿಂದ ದೆಹಲಿಗೆ ಹೊರಟಿದ್ದ ಇಂಡಿಯನ್ ಏರ್‌ಲೈನ್ಸ್ ವಿಮಾನವನ್ನು ಅಪಹರಣಕಾರರು 'ಮಾನವೀಯ' ದೃಷ್ಟಿಯಿಂದ ಅಪಹರಿಸಿದ್ದರು ಎಂಬುದಾಗಿ ವೆಬ್‌ಸರಣಿಯಲ್ಲಿ ಬಿಂಬಿಸಲಾಗಿದೆ ಎಂದು ಆರೋಪಿಸಲಾಗಿದೆ.

'ವಿಮಾನ ಅಪಹರಿಸಿದವರೆಲ್ಲರೂ ಭಯೋತ್ಪಾದಕರಾಗಿದ್ದರು. ಹೀಗಿದ್ದರೂ, ವೆಬ್‌ಸರಣಿಯಲ್ಲಿ ಅಪಹರಣಕಾರರು 'ಮುಸಲ್ಮಾನರು' ಎಂಬ ಗುರುತನ್ನು ಮರೆಮಾಚಲಾಗಿದೆ. ಚಲನಚಿತ್ರ ನಿರ್ಮಾಪಕ ಅನುಭವ್ ಸಿನ್ಹಾ ಅವರು ಕಲಾವಿದರ ಪಾತ್ರಗಳಲ್ಲಿ ಮುಸ್ಲಿಮೇತರ ಹೆಸರುಗಳನ್ನು ಹೆಚ್ಚಿಸಿ ಆ ಮೂಲಕ ಅವರ ಅಪರಾಧ ಕೃತ್ಯವನ್ನು ಮರೆಮಾಚಿದ್ದಾರೆ' ಎಂದು ಬಿಜೆಪಿಯ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ 'ಎಕ್ಸ್' ಮೂಲಕ ಪ್ರಶ್ನಿಸಿದ್ದಾರೆ.

'ದಶಕದ ಬಳಿಕವೂ ಐಸಿ–814 ವಿಮಾನವನ್ನು ಹಿಂದೂಗಳೇ ಅಪಹರಿಸಿದ್ದರು ಎಂದು ಜನರು ಭಾವಿಸುತ್ತಾರೆ. ಪಾಕಿಸ್ತಾನದ ಮುಸ್ಲಿಂ ಭಯೋತ್ಪಾದಕರು ನಡೆಸಿದ ಎಲ್ಲ ಕೃತ್ಯಗಳನ್ನು ಎಡಪಂಥೀಯ ನಿಲುವುಗಳು ಸಂಪೂರ್ಣವಾಗಿ ಮುಚ್ಚಿಹಾಕಿವೆ' ಎಂದು ಕಿಡಿಕಾರಿದ್ದಾರೆ.

'ದೀರ್ಘಾವಧಿಯಲ್ಲಿ ಭಾರತದ ಭದ್ರತೆಯನ್ನು ದುರ್ಬಲಗೊಳಿಸಲಿದ್ದು, ಧಾರ್ಮಿಕ ಅಪರಾಧ ಕೃತ್ಯಗಳನ್ನು ಬೇರೆಡೆಗೆ ವರ್ಗಾಯಿಸುವ ಸಾಧ್ಯತೆಯಿದೆ' ಎಂದಿದ್ದಾರೆ.

ಒಮರ್ ಅಬ್ದುಲ್ಲಾ ಕಿಡಿ: ಬಿಜೆಪಿಯ ನಿಲುವಿಗೆ ಕಿಡಿಕಾರಿರುವ ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, 'ಕಾಶ್ಮೀರ್ ಫೈಲ್ಸ್' ಸಿನಿಮಾದಲ್ಲಿ ಸುಳ್ಳನ್ನೇ ಸತ್ಯವೆಂದು ಬಿಂಬಿಸಿದವರು, 'ಐಸಿ–814 ಕಂದಹಾರ್' ನೆಟ್‌ಫ್ಲಿಕ್ಸ್ ಸರಣಿಯಲ್ಲಿ ನಡೆದ ಘಟನೆಗಳನ್ನು ಬಿಂಬಿಸಿರುವ ಕುರಿತು ತೀವ್ರ ಕಳಕಳಿ ವ್ಯಕ್ತಪಡಿಸುತ್ತಿದ್ದಾರೆ. ಅವರೆಲ್ಲರೂ, ಈಗ ಏಕಾಏಕಿ ಸೂಕ್ಷ್ಮತೆ ಹಾಗೂ ಸತ್ಯಾಸತ್ಯತೆ ಬಯಸುತ್ತಿದ್ದಾರೆ' ಎಂದಿದ್ದಾರೆ.

ವೆಬ್ ಸರಣಿಯಲ್ಲಿ ವಿಜಯ್ ವರ್ಮಾ, ಪಂಕಜ್ ಕುಮಾರ್, ದಿಯಾ ಮಿರ್ಜಾ, ನಾಸೀರುದ್ದೀನ್ ಶಾ, ಅರವಿಂದ್ ಸ್ವಾಮಿ ಪ್ರಮುಖ ಭೂಮಿಕೆಯಲ್ಲಿ ನಟಿಸಿದ್ದಾರೆ.

ಭೂಕುಸಿತ: ಇಬ್ಬರು ಮಹಿಳೆಯರ ಸಾವು

ಕತ್ರಾ/ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕತ್ರಾದಲ್ಲಿರುವ ಶ್ರೀಮಾತಾ ವೈಷ್ಣೋ ದೇವಿ ದೇವಾಲಯದ ನೂತನ ಚಾರಣ ಮಾರ್ಗದಲ್ಲಿ ಸೋಮವಾರ ಸಂಭವಿಸಿದ ಭೂಕುಸಿತದಿಂದ ಇಬ್ಬರು ಮಹಿಳೆಯರು ಮೃತಪಟ್ಟಿದ್ದಾರೆ.

ಮೃತಪಟ್ಟ ಮಹಿಳೆಯರನ್ನು ಪಂಜಾಬ್‌ನ ಗುರುದಾಸಪುರದ ಸಪ್ನಾ(27) ಹಾಗೂ ಉತ್ತರ ಪ್ರದೇಶದ ಕಾನ್ಪುರದ ನೇಹಾ(23) ಎಂದು ಗುರುತಿಸಲಾಗಿದೆ. ಕಾನ್ಪುರದ 5 ವರ್ಷದ ಬಾಲಕಿಯೊಬ್ಬಳು ಗಾಯಗೊಂಡಿದ್ದು, ಶ್ರೀಮಾತಾ ವೈಷ್ಣೋ ದೇವಿ ನಾರಾಯಣ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ನೂತನವಾಗಿ ನಿರ್ಮಿಸಲಾಗಿದ್ದ 'ಹಿಮಕೋಟಿ' ಮಾರ್ಗವನ್ನು ಭೂಕುಸಿತದ ಬಳಿಕ ಮುಚ್ಚಲಾಗಿದೆ. ಸಾಂಪ್ರದಾಯಿಕವಾದ 'ಸಾಂಝಿ ಛತ್' ಮಾರ್ಗದಲ್ಲಿ ಸಂಚರಿಸಲು ಭಕ್ತರಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ರಿಯಾಸಿ ಜಿಲ್ಲಾಧಿಕಾರಿ ವಿಶೇಷ್ ಪೌಲ್ ಮಹಾಜನ್ ತಿಳಿಸಿದ್ದಾರೆ.

ಈ ಪ್ರದೇಶದಲ್ಲಿ ಇತ್ತೀಚೆಗೆ ಭಾರಿ ಮಳೆಯಾಗುತ್ತಿರುವುದು ಭೂಕುಸಿತಕ್ಕೆ ಕಾರಣವಾಗಿರಬಹುದೆಂದು ಹೇಳಿದ್ದಾರೆ.

ಐಪಿಎಸ್ ಅಧಿಕಾರಿಗಳ ವಿರುದ್ಧ ಉನ್ನತ ಮಟ್ಟದ ತನಿಖೆ: ವಿಜಯನ್

ಕೊಟಯಂ (ಕೇರಳ) (ಪಿಟಿಐ): ಕೇರಳದ ಕಾನೂನು ಮತ್ತು ಸುವ್ಯವಸ್ಥೆ ಎಡಿಜಿಪಿ ಎಂ.ಆರ್. ಅಜಿತ್ ಕುಮಾರ್ ಸೇರಿದಂತೆ ಕೆಲ ಹಿರಿಯ ಐಪಿಎಸ್ ಅಧಿಕಾರಿಗಳ ವಿರುದ್ಧ ಕೇಳಿ ಬಂದಿರುವ ಆರೋಪಗಳಿಗೆ ಸಂಬಂಧಿಸಿದಂತೆ ಉನ್ನತ ಮಟ್ಟದ ತನಿಖೆ ನಡೆಸುವುದಾಗಿ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪ್ರಕಟಿಸಿದರು.

ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ಪಿ. ಶಶಿ ಮತ್ತು ಎಡಿಜಿಪಿ (ಕಾನೂನು ಮತ್ತು ಸುವ್ಯವಸ್ಥೆ) ಅವರು ಜವಾಬ್ದಾರಿಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ ಎಂದು ಆಡಳಿತಾರೂಢ ಎಲ್‌ಡಿಎಫ್ ಶಾಸಕ ಪಿ.ವಿ. ಅನ್ವರ್ ಅವರು ಭಾನುವಾರ ಗಂಭೀರ ಆರೋಪ ಮಾಡಿದ್ದರು. ಅದರ ಬೆನ್ನಲ್ಲೇ ವಿರೋಧ ಪಕ್ಷಗಳು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದವು.

'ಹಿರಿಯ ಅಧಿಕಾರಿಗಳ ವಿರುದ್ಧ ಬಂದಿರುವ ಆರೋಪಗಳ ಬಗ್ಗೆ ಉನ್ನತ ಮಟ್ಟದ ಅಧಿಕಾರಿಯಿಂದ ತನಿಖೆ ನಡೆಸಲಾಗುವುದು' ಎಂದು ಸಿ.ಎಂ ಪಿಣರಾಯಿ ವಿಜಯನ್ ಸೋಮವಾರ ಪೊಲೀಸ್ ಇಲಾಖೆಯ ಕಾರ್ಯಕ್ರಮದಲ್ಲಿ ಘೋಷಿಸಿದರು. ಈ ವೇಳೆ ಎಡಿಜಿಪಿ ಅಜಿತ್ ಕುಮಾರ್ ಅವರು ಸಹ ವೇದಿಕೆಯಲ್ಲಿ ಉಪಸ್ಥಿತರಿದ್ದರು.

'ಪೊಲೀಸ್ ಇಲಾಖೆಯಲ್ಲಿನ ಅಶಿಸ್ತನ್ನು ಸಹಿಸಲಾಗದು. ಪೊಲೀಸ್ ಅಧಿಕಾರಿಗಳ ವಿರುದ್ಧದ ಆರೋಪಗಳನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ನಿಷ್ಪಕ್ಷಪಾತ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು' ಎಂದರು.

'ಕೆಲ ಅಧಿಕಾರಿಗಳಿಂದ ಇಡೀ ಪೊಲೀಸ್ ಇಲಾಖೆಗೆ ಅಪಕೀರ್ತಿ ಬರುತ್ತಿದೆ. ಎಂಟು ವರ್ಷಗಳಲ್ಲಿ ಈ ರೀತಿಯ ವರ್ತನೆ ತೋರಿದ 108 ಅಧಿಕಾರಿಗಳನ್ನು ಸರ್ಕಾರ ತೆಗೆದು ಹಾಕಿದೆ. ಈ ರೀತಿ ಕಠಿಣ ಕ್ರಮ ತೆಗೆದುಕೊಳ್ಳುವುದನ್ನು ಸರ್ಕಾರ ಮುಂದುವರಿಸಲಿದೆ' ಎಂದರು.

ಉನ್ನತ ಮಟ್ಟದ ತನಿಖೆ ಕುರಿತು ಮುಖ್ಯಮಂತ್ರಿ ಘೋಷಿಸಿದ ಬೆನ್ನಲ್ಲೇ ಮಲಪ್ಪುರಂನಲ್ಲಿ ಸುದ್ದಿಗೋಷ್ಠಿ ನಡೆಸಿದ ಶಾಸಕ ಅನ್ವರ್, ಎಡಿಜಿಪಿ ಅಜಿತ್ ಕುಮಾರ್ ವಿರುದ್ಧ ಇನ್ನಷ್ಟು ಆರೋಪಗಳನ್ನು ಮಾಡಿದರು.

'ಈ ಹಿರಿಯ ಅಧಿಕಾರಿಯು ರಾಜಧಾನಿಯಲ್ಲಿನ ಕವಡಿಯಾರ್ ಅರಮನೆ ಬಳಿ ಐಷಾರಾಮಿ ಬಂಗಲೆ ನಿರ್ಮಿಸುತ್ತಿದ್ದಾರೆ. ಪ್ರತಿಷ್ಠಿತ ಪ್ರದೇಶದಲ್ಲಿ ನಿವೇಶನ ಖರೀದಿಸಿ, ಐಷಾರಾಮಿ ಬಂಗಲೆ ನಿರ್ಮಿಸುತ್ತಿರುವ ಈ ಅಧಿಕಾರಿಯ ಹಣದ ಮೂಲ ಯಾವುದು' ಎಂದು ಅವರ ಪ್ರಶ್ನಿಸಿದರು.

'ಅಜಿತ್ ಕುಮಾರ್ ಅವರು ಅಕ್ರಮ ಚಿನ್ನ ಸಾಗಾಣಿಕೆ ಸೇರಿ ಗಂಭೀರ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆ' ಎಂದು ಅವರು ಆರೋಪಿಸಿದರು.

ಅಮೆರಿಕ ಓಪನ್ ಟೆನಿಸ್: ನಿರ್ಗಮಿತ ಸ್ಟಾರ್‌ಗಳ ಪಟ್ಟಿಗೆ ಸೇರಿದ ಹಾಲಿ ಚಾಂಪಿಯನ್

ಕೊಕೊ ಗಾಫ್‌ಗೆ ನವಾರೊ ಆಘಾತ

ನ್ಯೂಯಾರ್ಕ್ (ಎಪಿ): ಹಾಲಿ ಚಾಂಪಿಯನ್ ಕೊಕೊ ಗಾಫ್ ಅವರು ಈ ಬಾರಿಯ ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ನಿರ್ಗಮಿಸಿದ ಸೂಪರ್ ಸ್ಟಾರ್‌ಗಳ ಪಟ್ಟಿಯಲ್ಲಿ ಸೇರಿಕೊಂಡರು. ಹಲವು ತಪ್ಪುಗಳನ್ನು ಮಾಡಿದ ಅಮೆರಿಕದ ಆಟಗಾರ್ತಿ, ಸ್ವದೇಶದ ಎಮ್ಮಾ ನವಾರೊ ಅವರಿಗೆ ಮಣಿದರು. ಇನ್ನೊಂದೆಡೆ ಚೀನಾದ ಝೆಂಗ್ ಕ್ವಿನ್ವೆನ್ ಅವರು ಸೋಮವಾರ ಬೆಳಗಿನ ಜಾವ 2.15 ನಿಮಿಷಕ್ಕೆ ಪಂದ್ಯ ಮುಗಿಸಿದ್ದು ದಾಖಲೆಯಾಯಿತು.

ಸೂಪರ್‌ಸ್ಟಾರ್‌ಗಳಾದ ಕಾರ್ಲೋಸ್ ಅಲ್ಕರಾಜ್ ಮತ್ತು ನೊವಾಕ್ ಜೊಕೊವಿಚ್ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಈ ಮೊದಲೇ ಹೊರಬಿದಿದ್ದಾರೆ.

ಗಾಫ್ ನಿರ್ಗಮನ ಅಮೆರಿಕಕ್ಕೆ ನಿರಾಸೆ ಮೂಡಿಸಿದೆ. ಆದರೆ ಫ್ರಾನ್ಸಿಸ್ ಟಿಯಾಫೊ ಮತ್ತು ಟೇಲರ್ ಫ್ರಿಟ್ಜ್ ಪುರುಷರ ಸಿಂಗಲ್ಸ್ ಎಂಟರ ಘಟ್ಟ ತಲುಪಿರುವುದು ಅಮೆರಿಕದ ಆಟಗಾರನೊಬ್ಬ ಹೊಸ ಗ್ರ್ಯಾನ್‌ಸ್ಲಾಮ್ ಚಾಂಪಿಯನ್ ಆಗುವ ಆಶಾಕಿರಣ ಮೂಡಿಸಿದೆ. 2003ರಲ್ಲಿ ಆ್ಯಂಡಿ ರಾಡಿಕ್ ಅವರು ಪ್ರಶಸ್ತಿ ಗೆದ್ದ ನಂತರ ಪುರುಷರ ವಿಭಾಗದಲ್ಲಿ ಅಮೆರಿಕದ ಆಟಗಾರರು ಪ್ರಶಸ್ತಿ ಗೆದ್ದಿಲ್ಲ.

23 ವರ್ಷ ವಯಸ್ಸಿನ ನವಾರೊ ನಾಲ್ಕನೇ ಸುತ್ತಿನ ಪಂದ್ಯದಲ್ಲಿ 6–3, 4–6, 6–3 ರಿಂದ ಮೂರನೇ ಶ್ರೇಯಾಂಕದ ಗಾಫ್ ಅವರ ಸವಾಲನ್ನಡಗಿದರು. 20 ವರ್ಷ ವಯಸ್ಸಿನ ಗಾಫ್ ಈ ಪಂದ್ಯದಲ್ಲಿ 19 ಡಬಲ್‌ಫಾಲ್ಟ್‌ಗಳನ್ನು ಮಾಡಿದರು. ಅವರ ಕೈಯಾರೆ 60 ತಪ್ಪುಗಳಾದವು. ವಿಜಯದ ಹೊಡೆತಗಳು ಬರೇ 14. ನವಾರೊ ಅವರ ಕ್ವಾರ್ಟರ್‌ಫೈನಲ್ ಎದುರಾಳಿ ಸ್ಪೇನ್‌ನ ಪೌಲಾ ಬಡೋಸಾ.

2014 ರಲ್ಲಿ ಸೆರೇನಾ ವಿಲಿಯಮ್ಸ್ ನಂತರ ಅಮೆರಿಕದ ಯಾವುದೇ ಆಟಗಾರ್ತಿ ಫ್ಲಷಿಂಗ್ ಮಿಡೊದಲ್ಲಿ ಪ್ರಶಸ್ತಿ ಉಳಿಸಿಕೊಂಡಿಲ್ಲ.

‘ನನ್ನ ಸರ್ವ್‌ಗಳು ಉತ್ತಮವಾಗಿರಬೇಕಿತ್ತು. ನಾನು ಉತ್ತಮವಾಗಿ ಸರ್ವ್‌ಗಳನ್ನು ಮಾಡಿದಲ್ಲಿ ಕಥೆಯೇ ಬೇರೆಯಾಗುತಿತ್ತೇನೊ’ ಎಂದು ಪ್ರತಿಕ್ರಿಯಿಸಿದರು. ಜುಲೈನಲ್ಲಿ ನಡೆದ ವಿಂಬಲ್ಡನ್‌ನಲ್ಲೂ, ನವಾರೊ ಅವರು ಗಾಫ್ ಮೇಲೆ ಜಯಗಳಿಸಿದ್ದರು. ಭಾನುವಾರದ ಪಂದ್ಯದಲ್ಲೂ ಅವರು ಹಿಡಿತ ಸಾಧಿಸಿದರು.

ಝೆಂಗ್ ದಾಖಲೆ: ಚೀನಾದ ಝೆಂಗ್ ಕ್ವಿನ್ವೆನ್ ಅವರು ನಾಲ್ಕನೇ ಸುತ್ತಿನಲ್ಲಿ ಡೊನ್ನಾ ವೆಕಿಕ್ ಅವರನ್ನು ಸೋಲಿಸುವ ಹಾದಿಯಲ್ಲಿ ಅತಿ ತಡವಾಗಿ ಮಹಿಳಾ ಸಿಂಗಲ್ಸ್ ಪಂದ್ಯ ಮುಗಿಸಿದ ದಾಖಲೆಗೆ ಪಾತ್ರರಾದರು. ಈ ಫಲಿತಾಂಶ ತಿಂಗಳ ಹಿಂದೆ ನಡೆದ ಒಲಿಂಪಿಕ್ಸ್ ಟೆನಿಸ್ ಫೈನಲ್‌ನ ಪುನರಾವರ್ತನೆಯಾಗಿತ್ತು.

ಗೆದ್ದ ಖುಷಿಯಲ್ಲಿ ಅಮೆರಿಕದ ಎಮ್ಮಾ ನವಾರೊ –ಎಎಫ್‌ಪಿ ಚಿತ್ರ



ನಿರಾಸೆಯಲ್ಲಿ ಕೊಕೊ ಗಾಫ್ –ಎಎಫ್‌ಪಿ ಚಿತ್ರ

ಏಳನೇ ಶ್ರೇಯಾಂಕದ ಝೆಂಗ್ 7–6 (7–2), 4–6, 6–2 ರಿಂದ 24ನೇ ಕ್ರಮಾಂಕದ ಕ್ರೊವೇಷ್ಯಾ ಆಟಗಾರ್ತಿಯನ್ನು ಸೋಲಿಸಿದರು. ಪಂದ್ಯ 2 ಗಂಟೆ 50 ನಿಮಿಷ ನಡೆಯಿತು. ಪಂದ್ಯ ಮುಗಿಯುವಾಗ ತಡರಾತ್ರಿ 2.15 ಆಗಿತ್ತು. ಆಗ 24000 ಪ್ರೇಕ್ಷಕರ ಸಾಮರ್ಥ್ಯದ ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ಕೆಲವೇ ನೂರಾರು ಮಂದಿಯಷ್ಟೇ ಉಳಿದಿದ್ದರು.

ಮರಿಯಾ ಸಕ್ಕರಿ 2021ರ ಆವೃತ್ತಿಯಲ್ಲಿ ಬಿಯಾಂಕ ಆಂಡ್ರುಸ್ಕು ಅವರನ್ನು ಸೋಲಿಸಿದಾಗ ರಾತ್ರಿ 2.13 ನಿಮಿಷ ಆಗಿದ್ದು ಈ ಹಿಂದಿನ ದಾಖಲೆಯಾಗಿತ್ತು. ಶಕ್ತಿಶಾಲಿ ಹೊಡೆತಗಳನ್ನಾಡುವ 21 ವರ್ಷ ವಯಸ್ಸಿನ ಝೆಂಗ್ ಅವರ ಮುಂದಿನ ಎದುರಾಳಿ, ವಿಶ್ವದ ಎರಡನೇ ಕ್ರಮಾಂಕದ ಅರಿನಾ ಸಬಲೆಂಕಾ. ಕಳೆದ ವರ್ಷದ ಎಂಟರ ಘಟ್ಟದ ಪಂದ್ಯದಲ್ಲಿ ಸಬಲೆಂಕಾ, ಝೆಂಗ್ ಅವರನ್ನು ಸೋಲಿಸಿದ್ದರು. ಈ ವರ್ಷದ ಜನವರಿಯಲ್ಲಿ ನಡೆದ ಆಸ್ಟ್ರೇಲಿಯನ್ ಓಪನ್ ಫೈನಲ್‌ನಲ್ಲೂ ಇವರಿಬ್ಬರು ಎದುರಾಗಿ ಸಬಲೆಂಕಾ ವಿಜೇತೆಯಾಗಿದ್ದರು.

ಅಮೆರಿಕ ಓಪನ್‌ನಲ್ಲಿ ಎರಡು ಬಾರಿ ಎಂಟರ ಘಟ್ಟ ತಲುಪಿದ ಚೀನಾದ ಎರಡನೇ ಆಟಗಾರ್ತಿ ಎಂಬ ಗೌರವ ಝೆಂಗ್ ಅವರದಾಯಿತು. ಈ ಹಿಂದೆ 2009 ಮತ್ತು 2013ರಲ್ಲಿ ಲೀ ನಾ ಎಂಟರ ಘಟ್ಟ ಪ್ರವೇಶಿಸಿದ್ದರು.

ಸಬಲೆಂಕಾ 6–2, 6–4 ರಿಂದ ಬೆಲ್ಜಿಯಮ್‌ನ ಎಲಿಸ್ ಮೆರ್ಟೆನ್ಸ್ ವಿರುದ್ಧ ಜಯಗಳಿಸಿದರು.

ಟಿಯಾಫೊ ಮುನ್ನಡೆ

ವಿಶ್ವದ 20ನೇ ಕ್ರಮಾಂಕದ ಫ್ರಾನ್ಸಿಸ್ ಟಿಯಾಫೊ ಅವರು 2000 ನಂತರ, ಕಡೇಪಕ್ಷ ಮೂರು ಬಾರಿ ಅಮೆರಿಕ ಓಪನ್ ಎಂಟರ ಘಟ್ಟ ತಲುಪಿದ ಅಮೆರಿಕದ ನಾಲ್ಕನೇ ಆಟಗಾರ ಎನಿಸಿದರು. ಮಾಜಿ ಚಾಂಪಿಯನ್ನರಾದ ಆಂಡ್ರೆ ಅಗಾಸ್ಸಿ, ಆ್ಯಂಡಿ ರಾಡಿಕ್ ಮತ್ತು ಪೀಟ್ ಸಾಂಪ್ರಸ್ ಅವರು ಇತರ ಮೂವರು.

ಟಿಯಾಫೊ ನಾಲ್ಕನೇ ಸುತ್ತಿನಲ್ಲಿ 6–4, 7–6 (7–3), 2–6, 6–3 ರಿಂದ ‘ದೈತ್ಯಸಂಹಾರಿ’ ಅಲೆಕ್ಸೈ ಪಾಪಿರಿನ್ ಮೇಲೆ ಜಯಗಳಿಸಿದರು. ಆಸ್ಟ್ರೇಲಿಯಾದ ಪಾಪಿರಿನ್ ಈ ಹಿಂದಿನ ಸುತ್ತಿನಲ್ಲಿ ನೊವಾಕ್ ಜೊಕೊವಿಚ್ ಅವರ ನಿರ್ಗಮನಕ್ಕೆ ಕಾರಣರಾಗಿದ್ದರು. ಟಿಯಾಫೊ ಎಂಟರ ಘಟ್ಟದಲ್ಲಿ ಬಲ್ಗೇರಿಯಾದ ಅನುಭವಿ ಗ್ರಿಗೊರ್ ಡಿಮಿಟ್ರೊವ್ ಅವರನ್ನು ಎದುರಿಸಲಿದ್ದಾರೆ.

ಒಂಬತ್ತನೇ ಶ್ರೇಯಾಂಕದ ಡಿಮಿಟ್ರೊವ್ 6–3, 7–6 (7–3), 1–6, 3–6, 6–3 ರಿಂದ ಆರನೇ ಶ್ರೇಯಾಂಕದ ಆ್ಯಂಡ್ರಿ ರುಬ್ಲೇವ್ ಅವರನ್ನು ಸೋಲಿಸಿ ಎಂಟರ ಘಟ್ಟ ತಲುಪಿದರು. 2019ರ ನಂತರ ಅವರು ಇಲ್ಲಿ ಈ ಹಂತಕ್ಕೇರಿದ್ದಾರೆ. ಆ ವರ್ಷ, ಕೊನೆಯದಾಗಿ ಇಲ್ಲಿ ಕಣಕ್ಕಿಳಿದಿದ್ದ ರೋಜರ್ ಫೆಡರರ್ ಅವರನ್ನು ಡಿಮಿಟ್ರೊವ್ ಸೋಲಿಸಿದ್ದರು.

ಅಲೆಕ್ಸಾಂಡರ್ ಜ್ವರೇವ್ 3–6, 6–1, 6–2, 6–2 ರಿಂದ ಅಮೆರಿಕದ ಬ್ರಾಂಡನ್ ನಕಾಶಿಮಾ ಅವರನ್ನು ಸೋಲಿಸಿ ಇಲ್ಲಿ ನಾಲ್ಕನೇ ಬಾರಿ ಕ್ವಾರ್ಟರ್ಸ್ ತಲುಪಿದರು. ಅವರ ಮುಂದಿನ ಎದುರಾಳಿ ಅಮೆರಿಕದ ಇನ್ನೊಬ್ಬ ಆಟಗಾರ ಟೇಲರ್ ಫ್ರಿಟ್ಜ್.

12ನೇ ಶ್ರೇಯಾಂಕದ ಫ್ರಿಟ್ಜ್ 3–6 6–4, 6–3, 6–2 ರಿಂದ 2022ರ ರನ್ನರ್ ಅಪ್ ಹಾಗೂ ಎಂಟನೇ ಶ್ರೇಯಾಂಕದ ಕ್ಯಾಸ್ಪರ್ ರುಡ್ ಮೇಲೆ ಜಯಗಳಿಸಿದರು.

ಬೋಪಣ್ಣ- ಎಬ್ಡೆನ್ ಜೋಡಿಗೆ ಆಘಾತ

ನ್ಯೂಯಾರ್ಕ್ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ಅವರ ಆಸ್ಟ್ರೇಲಿಯಾದ ಜೊತೆಗಾರ ಮ್ಯಾಥ್ಯೂ ಎಬ್ಡೆನ್ ಅವರು ಪುರುಷರ ಡಬಲ್ಸ್‌ನ ಮೂರನೇ ಸುತ್ತಿನಲ್ಲಿ ಹೊರಬಿದ್ದರು.

ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ಎರಡನೇ ಶ್ರೇಯಾಂಕದ ಬೋಪಣ್ಣ-ಎಬ್ಡೆನ್ ಜೋಡಿಗೆ 1-6, 5-7ರಿಂದ 16ನೇ ಶ್ರೇಯಾಂಕದ ಅರ್ಜೆಂಟೀನಾದ ಮ್ಯಾಕ್ಸಿಮೊ ಗೊನ್ಸಾಲೆಜ್ ಮತ್ತು ಆಂಡ್ರೆಸ್ ಮೊಲ್ಟೆನಿ ಜೋಡಿಯು ಆಘಾತ ನೀಡಿತು.

ಬೋಪಣ್ಣ ಸೋಲುವುದರೊಂದಿಗೆ ಡಬಲ್ಸ್‌ನಲ್ಲಿ ಭಾರತ ಆಟಗಾರರ ಸವಾಲು ಅಂತ್ಯಗೊಂಡಿದೆ.

ಟೆನಿಸ್ ಟೂರ್ನಿ: ಎರಡನೇ ಸುತ್ತಿಗೆ ಅನ್ವಿ, ತನುಷ್

ಬೆಂಗಳೂರು: ಅನ್ವಿ ಪುನಗಂಟಿ ಸೋಮವಾರ ಇಲ್ಲಿ ನಡೆಯುತ್ತಿರುವ ಕೆಎಸ್‌ಎಲ್‌ಟಿಎ-ಐಟಿಎಫ್ ಜೆ30 ಟೂರ್ನಿಯ ಬಾಲಕಿಯರ ಸಿಂಗಲ್ಸ್‌ನ ಆರಂಭಿಕ ಸುತ್ತಿನಲ್ಲಿ 7-6 (4), 6-4 ಸೆಟ್‌ಗಳಿಂದ ಎರಡನೇ ಶ್ರೇಯಾಂಕದ ಕಶ್ವಿ ಸುನಿಲ್ ಅವರಿಗೆ ಆಘಾತ ನೀಡಿದರು.

ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ತನುಷ್ ಘಿಲ್ದ್ಯಾಲ್ 6-3, 6-2ರಲ್ಲಿ ಅರ್ಜುನ್ ಓಜಾ ಅವರನ್ನು ಮಣಿಸಿದರೆ, ವಿಶಾಲ್ ವಾಸುದೇವ್ ಎಂ. 7-6(6), 6-2ರಲ್ಲಿ ಹರ್ ಅಬಿರ್ ಸೆಖೋನ್ ಅವರನ್ನು ಮಣಿಸಿದರು. ಮೂರನೇ ಶ್ರೇಯಾಂಕದ ಅಧಿರಾಜ್ ಠಾಕೂರ್ ಅವರು 6-4, 6-0 ರಲ್ಲಿ ತೇಜಸ್ ಅಹುಜಾ ವಿರುದ್ಧ ಗೆದ್ದರು. ಪ್ರಬೀರ್ ಮುಖೇಶ್ ಚಾವ್ಡಾ 6-2, 6-2 ರಲ್ಲಿ ಶ್ರೀವಂತ್ ರೆಡ್ಡಿ ಮುಮ್ಮಡಿ ವಿರುದ್ಧ ಜಯ ಸಾಧಿಸಿದರು.

ಐದನೇ ಶ್ರೇಯಾಂಕದ ಓಜಸ್ ಮೆಹ್ಲಾವತ್ ಅವರು 6-2, 4-6, 6-4ರಲ್ಲಿ ಶ್ರೀಕರ್ ಡೋನಿ ಅವರನ್ನು, ಅಕ್ಷತ್ ಧುಲ್ ಅವರು 6-4, 6-0 ರಿಂದ ಕಬೀರ್ ಚೋಥಾನಿ ಅವರನ್ನು ಸೋಲಿಸಿದರು. ಅಮಿತ್ ಮೂಂಡ್ ಅವರು 6-2, 6-2 ರಿಂದ ಅಹಿಲ್ ಅಯಾಜ್ ವಿರುದ್ಧ ಜಯ ಗಳಿಸಿದರು.

ಬಾಲಕಿಯರ ಸಿಂಗಲ್ಸ್‌ನಲ್ಲಿ ಅಗ್ರ ಶ್ರೇಯಾಂಕದ ಶ್ರೀನಿಧಿ ಬಾಲಾಜಿ 6-1, 6-3ರಲ್ಲಿ ಶಾನ್ವಿತಾ ರೆಡ್ಡಿ ನೂಕಾಲಾ ವಿರುದ್ಧ ಮತ್ತು ಅಲೀನಾ ಫರೀದ್ 6-1, 6-1ರಲ್ಲಿ ಗುರ್ಲೀನ್ ಕೌರ್ ಖನುಜಾ ವಿರುದ್ಧ ಗೆದ್ದರು. ಅನನ್ಯಾ ಚೌಬೆ ಅವರು 6-2, 6-1ರಿಂದ ವೆನ್ನೆಲಾ ರೆಡ್ಡಿ ಗಾರುಗುಪಾಟಿ ಎದುರು ಜಯಗಳಿಸಿದರು. ಅಸ್ಮಿ ಅಡ್ಕರ್ ಅವರು 6-1, 6-0 ಸೆಟ್‌ಗಳಿಂದ ಪಾಲ್ ಉಪಾಧ್ಯಾಯ ಅವರನ್ನು ಸೋಲಿಸಿದರು.

ಡೇವಿಸ್ ಕಪ್ ತಂಡದಿಂದ ಹಿಂದೆಸರಿದ ನಗಾಲ್

ನವದೆಹಲಿ (ಪಿಟಿಐ): ಭಾರತದ ಅಗ್ರ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಇದೇ ತಿಂಗಳ 14 ಮತ್ತು 15ರಂದು ಸ್ವೀಡನ್ ವಿರುದ್ಧ ನಡೆಯುವ ಡೇವಿಸ್ ಕಪ್ ಪಂದ್ಯದಲ್ಲಿ ಆಡಲಿರುವ ಭಾರತ ತಂಡದಿಂದ ಹಿಂದೆಸರಿದಿದ್ದಾರೆ. ಬೆನ್ನುನೋವಿನ ಕಾರಣ ನೀಡಿದ್ದಾರೆ.

ಅಮೆರಿಕ ಓಪನ್ ಚಾಂಪಿಯನ್‌ಷಿಪ್‌ನಲ್ಲಿ ಅವರು ಇತ್ತೀಚೆಗೆ ಮೊದಲ ಸುತ್ತಿನ ಪಂದ್ಯದಲ್ಲಿ ಡಚ್ ಆಟಗಾರ ತಲೋನ್ ಗ್ರಿಕ್‌ಸ್ಪೂರ್ ಎದುರು ಸೋತಿದ್ದರು.

ಡೇವಿಸ್ ಕಪ್ ಸ್ಟಾಕ್‌ಹೋಮ್‌ನ ಒಳಾಂಗಣ ಹಾರ್ಡ್‌ಕೋರ್ಟ್‌ನಲ್ಲಿ ನಡೆಯಲಿದೆ. ನಗಾಲ್ ಹಿಂದೆಸರಿದಿರುವ ಕಾರಣ ಮೀಸಲು ಆಟಗಾರ ಆರ್ಯನ್ ಶಾ ಅವರನ್ನು ತಂಡಕ್ಕೆ ಸೇರ್ಪಡೆ ಮಾಡಲಾಗಿದೆ. ಮಾನಸ್ ಧಾಮ್ನೆ ಅವರನ್ನು ಸ್ಟ್ಯಾಂಡ್‌ಬೈ ಆಟಗಾರರಾಗಿದ್ದಾರೆ.

‘ನಾನು ಸ್ವೀಡನ್ ಎದುರು ಪಂದ್ಯದಲ್ಲಿ ದೇಶವನ್ನು ಪ್ರತಿನಿಧಿಸಲು ಎದುರುನೋಡುತ್ತಿದ್ದೆ. ಆದರೆ ಕೆಲವಾರಗಳಿಂದ ಕಾಡುತ್ತಿದ್ದ ಬೆನ್ನುನೋವಿನ ಕಾರಣ ಮುಂದಿನ ಎರಡು ವಾರ ವಿಶ್ರಾಂತಿ ಪಡೆಯಲು ವೈದ್ಯರು ಸಲಹೆ ನೀಡಿದ್ದಾರೆ. ಇದೇ ಕಾರಣದಿಂದ ನಾನು ಅಮೆರಿಕ ಓಪನ್ ಡಬಲ್ಸ್‌ನಲ್ಲೂ ಭಾಗವಹಿಸಿರಲಿಲ್ಲ’ ಎಂದು ನಗಾಲ್ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.

ದುಲೀಪ್ ಟ್ರೋಫಿ: ಮೊದಲ ಪಂದ್ಯದಿಂದ ಹೊರಗುಳಿದ ಸೂರ್ಯ

ಮುಂಬೈ (ಪಿಟಿಐ): ಭಾರತ ತಂಡದ ಬ್ಯಾಟರ್ ಸೂರ್ಯಕುಮಾರ್ ಯಾದವ್ ಅವರ ಕೈಗೆ ಕಳೆದ ವಾರ ಗಾಯವಾದ ಕಾರಣ ಸೆ.5ರಂದು ಆರಂಭವಾಗುವ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೊದಲ ಸುತ್ತಿನ ಪಂದ್ಯದಿಂದ ಹೊರಗುಳಿದಿದ್ದಾರೆ.

ಟಿಎನ್‌ಸಿಎ ಇಲೆವೆನ್ ವಿರುದ್ಧ ಕೊಯಮತ್ತೂರಿನಲ್ಲಿ ಇತ್ತೀಚೆಗೆ ನಡೆದ ಬುಚ್ಚಿಬಾಬು ಆಹ್ವಾನ ಟೂರ್ನಿಯಲ್ಲಿ ಮುಂಬೈ ಪರ ಆಡಿದ್ದ ಸೂರ್ಯಕುಮಾರ್ ಅವರು ಗಾಯದ ಕಾರಣ ಕೊನೆಯ ದಿನ ಬ್ಯಾಟಿಂಗ್ ಮಾಡಿರಲಿಲ್ಲ.

ದುಲೀಪ್ ಟ್ರೋಫಿಗೆ ಸೂರ್ಯ ಅಲಭ್ಯತೆಯನ್ನು ಬಿಸಿಸಿಐ ಮೂಲಗಳು ಖಚಿತಪಡಿಸಿವೆ. ಭಾರತ ‘ಸಿ’ ಪರ ಸೂರ್ಯ ಅವರು ಅನಂತಪುರದಲ್ಲಿ ಸೆ. 5ರಿಂದ 8ರ ವರೆಗೆ ಮೊದಲ ಸುತ್ತಿನ ಹಣಾಹಣಿಯಲ್ಲಿ ಭಾರತ ‘ಡಿ’ ವಿರುದ್ಧ ಆಡಬೇಕಾಗಿತ್ತು.